

ಅಮೃತಾ ಪ್ರೀತಂ ಅವರ
ಆಯ್ದ ಕಥೆಗಳು
ಕನ್ನಡಕ್ಕೆ: ಡಾ.ಆರ್.ಲಕ್ಷ್ಮೀನಾರಾಯಣ

ಪ್ರೀತಿಯಿಂದ

ಡಾ. ರಂಗನಾಥ [illegible] ಅವರಿಗೆ

[illegible]

[illegible]

ಅಮೃತಾ ಪ್ರೀತಂ ಅವರ
ಆಯ್ದ ಕಥೆಗಳು

ಕನ್ನಡಕ್ಕೆ

ಡಾ. ಆರ್. ಲಕ್ಷ್ಮೀನಾರಾಯಣ

ಭಾವಯಿತ್ರೀ ಪ್ರಕಾಶನ
ನಂ 12, ಶ್ರೀನಿಕೇತನ
ಎರಡನೇ ಕ್ರಾಸ್, ಶಿವಾನಂದನಗರ
ಮೂಡಲಪಾಳ್ಯ, ಬೆಂಗಳೂರು–72

AMRITA PRITAM AVARA AAYDA KATHEGALU : A Collection of Selected Stories of Amrita Pritam, Translated by Dr. R. Lakshminarayana

First Edition : 2011
Pages : viii+118=126
Price : **₹ 100/-**
Paper used : 70 gsm NS Maplitho Paper
Copies : 1000
Cover Design : Arunkumar G.

ಮೊದಲ ಮುದ್ರಣ : ೨೦೧೧
ಪುಟಗಳು : 8 + ೧೧೮=೧೨೬
ಬೆಲೆ : ₹ ೧೦೦/–
ಕಾಗದದ ಗುಣಮಟ್ಟ : ೭೦ ಜಿಎಸ್ಎಂ. ಎನ್ಎಸ್. ಮ್ಯಾಪ್‌ಲಿಥೋ ಕಾಗದ
ಹಕ್ಕುಗಳು : ಪ್ರಕಾಶಕರದು
ಆಕಾರ : ೧/೮ ಡೆಮಿ (ಅಷ್ಟದಳ)
ಪ್ರತಿಗಳು : ೧೦೦೦
ಮುಖಪುಟ ವಿನ್ಯಾಸ : ಅರುಣ್‌ಕುಮಾರ್ ಜಿ.

ಪ್ರಕಾಶಕರು
ಭಾವಯಿತ್ರೀ ಪ್ರಕಾಶನ
ನಂ. ೧೨, ಶ್ರೀನಿಕೇತನ
೨ನೇ ಅಡ್ಡರಸ್ತೆ, ಶಿವಾನಂದನಗರ
ಮೂಡಲಪಾಳ್ಯ
ಬೆಂಗಳೂರು–೫೬೦ ೦೭೨

ಅಕ್ಷರ ಜೋಡಣೆ ಮತ್ತು ಮುದ್ರಣ
ಇಳಾ ಮುದ್ರಣ
ನಂ. ೩೬, ೪೦ ಅಡಿ ರಸ್ತೆ
ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು – ೫೬೦ ೦೨೬
ದೂರವಾಣಿ : ೨೬೭೫೭೧೫೯

ನನ್ನ ಮಕ್ಕಳು
ಪ್ರತಿಭಾ
ಮತ್ತು
ಪೂರ್ಣಿಮಾರಿಗೆ
ಪ್ರೀತಿಯಿಂದ

AMRITA PRITAM AVARA AAYDA KATHEGALU : A Collection of Selected Stories of Amrita Pritam, Translated by Dr. B. Lakshminarayana

First Edition : [illegible]
Pages : [illegible]
Price : [illegible]
Paper used : 70 gsm NS Maplitho Paper
Copies : 1000
Cover Design : [illegible]

[illegible]

ಅಮೃತಾ ಪ್ರೀತಂ

ಏಳು ದಶಕಗಳ ಕಾಲ ಪಂಜಾಬಿ ಭಾಷಾ ಸಾಹಿತ್ಯಗಳನ್ನು ತಮ್ಮ ಅಮರ ಕೃತಿಗಳಿಂದ ಶ್ರೀಮಂತಗೊಳಿಸಿದ ಅಮೃತಾ ಪ್ರೀತಂ (ಜನನ : 1919, ಮರಣ : 2005) ಕವಯಿತ್ರಿ, ಕಾದಂಬರಿಗಾರ್ತಿ, ಪ್ರಬಂಧಕಾರ್ತಿ ಮತ್ತು ಪತ್ರಕರ್ತೆ ಕೂಡ ಆಗಿದ್ದರು. ಇಪ್ಪತ್ತೆಂಟು ಕಾದಂಬರಿಗಳು, ಹದಿನೆಂಟು ಕವನ ಸಂಗ್ರಹಗಳು ಹಾಗೂ ಐದು ಕಥಾ ಸಂಕಲನಗಳೂ ಸೇರಿದಂತೆ ಒಟ್ಟು ಎಪ್ಪತ್ತೈದು ಕೃತಿಗಳನ್ನು ರಚಿಸುವ ಮೂಲಕ ಪಂಜಾಬಿ ಸಾಹಿತ್ಯದಲ್ಲಿ ಬಹು ದೊಡ್ಡ ಹೆಸರು ಮಾಡಿದವರು. ಭಾರತದ ಬಹುತೇಕ ಎಲ್ಲ ಭಾಷೆಗಳಿಗೆ ಅವರ ಕೃತಿಗಳು ಅನುವಾದವಾಗಿರುವುದಷ್ಟೇ ಅಲ್ಲದೆ, ಇಂಗ್ಲಿಷ್, ಫ್ರೆಂಚ್, ರಷ್ಯನ್, ಪೋಲಿಶ್, ಬಲ್ಗೇರಿಯನ್ ಮುಂತಾದ ವಿದೇಶಿ ಭಾಷೆಗಳಿಗೂ ಅನುವಾದವಾಗಿ ಅಂತಾರಾಷ್ಟ್ರೀಯ ಪ್ರಸಿದ್ಧಿಯನ್ನು ಅವರಿಗೆ ತಂದುಕೊಟ್ಟಿದೆ. ಸಾಹಿತ್ಯ ಅಕಾಡೆಮಿ ಪ್ರಶಸ್ತಿ ('ಸುನಹಡೆ' ಕವನ ಸಂಕಲನಕ್ಕೆ), ಪದ್ಮಶ್ರೀ ಪ್ರಶಸ್ತಿ, ಎರಡೆರಡು ವಿಶ್ವ ವಿದ್ಯಾಲಯಗಳ ಡಿ.ಲಿಟ್ ಪ್ರಶಸ್ತಿಗಳಲ್ಲದೆ, 'ಕಾಗಜ್ ಕೆ ಕ್ಯಾನವಾಸ್' ಎಂಬ ತಮ್ಮ ಕೃತಿಗೆ ಅತ್ಯುನ್ನತ ಸಾಹಿತ್ಯಕ ಪ್ರಶಸ್ತಿಯಾದ ಭಾರತೀಯ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದವರು (1981). ಪಂಜಾಬಿ ಭಾಷೆಗೆ ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ಗಳಿಸಿಕೊಟ್ಟ ಗರಿಮೆಯೂ ಅವರದೇ. ಅವರ ಕೆಲವು ಕಾದಂಬರಿಗಳು ಚಲನಚಿತ್ರಗಳಾಗಿವೆ.

ಅಮೃತಾ ಪ್ರೀತಂ ಅವರ ಕೃತಿಗಳಲ್ಲಿ ಸಮಾಜ ಮತ್ತು ಕುಟುಂಬದ ಶೋಷಣೆಗೆ ಸಿಕ್ಕಿ ನಲುಗಿದ ನಾರಿಯ ಚಿತ್ರಣವಿರುತ್ತದೆ. ಸಾಮಾನ್ಯ ಗಂಡು ಹೆಣ್ಣಿನ ಸಮಸ್ಯೆಗಳು, ನೋವು, ನಲಿವು, ಆಸೆ ಆಕಾಂಕ್ಷೆಗಳು ಹತಾಶೆ, ಅವಮಾನಗಳು ಅವರ ಕಥೆ, ಕಾದಂಬರಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಮುಖ್ಯವಾಗಿ ಅಮೃತಾರ ಕೃತಿಗಳು ಶೋಧನೆಗೆ ತೊಡಗುವುದು ಮನುಷ್ಯ ಸಂಬಂಧಗಳನ್ನು ಕುರಿತಂತೆ. ಮಹಿಳಾ ವಿಮೋಚನೆ ಕುರಿತಂತೆ ವ್ಯಾಮೋಹಿತರೆಂಬಂತೆ ಬರೆಯುವ ಈ ಲೇಖಕಿ, ಗಂಡು, ಹೆಣ್ಣು ಸಮಾನತೆಯ

ನೆಲೆಯಲ್ಲಿ ಗುರುತಿಸಿಕೊಳ್ಳಬೇಕೆಂದು ಪ್ರತಿಪಾದಿಸುವವರು. ಇದರ ಜೊತೆಗೆ ದೇಶ ವಿಭಜನೆಯ ದುರಂತಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ, ಪ್ರೀತಿ ಪ್ರೇಮಗಳಿಗಾಗಿ ತುಡಿಯುವ ಲೇಖಕಿಯಾಗಿ ಕಂಡುಬರುತ್ತಾರೆ. ಅವರು ಮೂಲತಃ ಕವಯಿತ್ರಿಯಾದ್ದರಿಂದ ಗದ್ಯ ಬರಹಗಳಲ್ಲೂ ಕಾವ್ಯದ ಆರ್ದ್ರತೆ ಇರುತ್ತದೆ. ಪುರಾಣ, ಇತಿಹಾಸಗಳನ್ನು ರೂಪಕಗಳಾಗಿ ಬಳಸುವ ಅಪೂರ್ವ ಕಲೆ ಅವರಿಗೆ ಸಿದ್ಧಿಸಿದೆ. ಬದುಕಿನಲ್ಲೂ, ಬರಹದಲ್ಲೂ ಅಪಾರ ದಿಟ್ಟತನ ಮೆರೆದ ಅಪೂರ್ವ ಲೇಖಕಿ.

ನನ್ನ ನುಡಿ

ಪಂಜಾಬಿ ಭಾಷೆಗೆ ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ದೊರಕಿಸಿಕೊಟ್ಟ ಅಮೃತಾ ಪ್ರೀತಂ ಅವರ ಆಯ್ದ ಹದಿಮೂರು ಕಥೆಗಳ ಸಂಕಲನ ಪ್ರಸ್ತುತ ಕೃತಿ. ಕೆಲವು ವರ್ಷಗಳ ಹಿಂದೆ ಅವರ ಹಲವಾರು ಕವನಗಳನ್ನು ಓದಿ ಅವುಗಳ ಸ್ವಾರಸ್ಯಕ್ಕೆ ಮಾರುಹೋಗಿ ಅವನ್ನು ಕನ್ನಡಕ್ಕೆ ಅನುವಾದಿಸುವ ಸಂದರ್ಭದಲ್ಲಿ ಅಮೃತಾರ ಸಾಹಿತ್ಯದತ್ತ ನಾನು ಆಕರ್ಷಿತನಾದೆ. ನನ್ನ ಅನುವಾದಿತ ಕವನಗಳ ಸಂಕಲನ 'ಅನುರೂಪ'ದಲ್ಲಿ ಕೆಲವು ಕವನಗಳನ್ನು ನೀಡಲು ಸಾಧ್ಯವಾಗಿತ್ತು. ಅವರ ಕೆಲವು ಸುಂದರವಾದ ಕಥೆಗಳನ್ನು ಕೂಡ ಆಗಾಗ್ಗೆ ಅನುವಾದಿಸಿದೆ. ಅವು ಶೂದ್ರ, ಸುಧಾ, ಅನಿಕೇತನ, ಮಯೂರ ಮುಂತಾದ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿದ್ದವು. ಇದೀಗ ಅವುಗಳ ಜೊತೆಗೆ ಇನ್ನು ಕೆಲವನ್ನು ಸೇರಿಸಿ ಒಟ್ಟು ಹದಿಮೂರು ಕಥೆಗಳ ಈ ಸಂಕಲನವನ್ನು ತರಲು ಸಾಧ್ಯವಾದದ್ದು ನನಗೆ ಅತೀವ ಸಂತಸವನ್ನು ತಂದಿದೆ. ಕನ್ನಡ ಓದುಗರಿಗೂ ಇವು ಹಿಡಿಸಿದರೆ ನನ್ನ ಶ್ರಮ ಸಾರ್ಥಕ.

ಇವುಗಳನ್ನು ಕನ್ನಡಕ್ಕೆ ಅನುವಾದಿಸಲು ಅನುಮತಿಯನ್ನು ನೀಡಬೇಕೆಂದು ಕೇಳಿದಾಗ, ಕೂಡಲೇ ಒಪ್ಪಿಗೆ ನೀಡಿದ ಅಮೃತಾ ಪ್ರೀತಂ ಅವರ ಪುತ್ರ ಶ್ರೀ ನವರಾಜ್ ಅವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ. ಇದಕ್ಕೊಂದು ಬೆನ್ನುಡಿ ಬರೆದು ಕೊಡಬೇಕೆಂದು ಕೇಳಿದ ಕೂಡಲೇ ಒಪ್ಪಿ ತಮ್ಮ ಬಿಡುವಿಲ್ಲದ ಕಾರ್ಯಭಾರದ ನಡುವೆಯೂ ಬಿಡುವು ಮಾಡಿಕೊಂಡು ಬೆನ್ನುಡಿಯ ಬೆಂಬಲವನ್ನಿತ್ತಿರುವ ಪ್ರಸಿದ್ಧ ಹಿಂದಿ-ಕನ್ನಡ ಲೇಖಕಿ ಪ್ರೊ. ಬಿ.ವೈ. ಲಲಿತಾಂಬ ಅವರಿಗೆ ನಾನು ಅತ್ಯಂತ ಋಣಿ. ಇದರ ಪ್ರಕಟಣೆಯ ಬಗ್ಗೆ ಆಗಾಗ್ಗೆ ಆಸ್ಥೆಯಿಂದ ವಿಚಾರಿಸುತ್ತಾ ಸ್ನೇಹದ ಒತ್ತಾಸೆ ನೀಡಿರುವ ಮಿತ್ರರಾದ ಡಾ. ಸಿ.ಪಿ. ನಾಗರಾಜ್ ಹಾಗೂ ಟಿ.ಎಸ್. ದಕ್ಷಿಣಾಮೂರ್ತಿ ಅವರುಗಳಿಗೆ ನನ್ನ ಕೃತಜ್ಞತೆಗಳು.

ಅತ್ಯಲ್ಪ ಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಇಳಾ ಮುದ್ರಣದ ಶ್ರೀ ಗುರುಮೂರ್ತಿ ಮತ್ತು ಅವರ ಸಹೋದ್ಯೋಗಿಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಅಂದವಾದ ಮುಖಪುಟ ರಚಿಸಿಕೊಟ್ಟ ಶ್ರೀ ಅರುಣ್‌ಕುಮಾರ್ ಅವರಿಗೆ ನಾನು ಕೃತಜ್ಞ.

ಆರ್. ಲಕ್ಷ್ಮೀನಾರಾಯಣ

ಪರಿವಿಡಿ

1.	ಗಿಡಮೂಲಿಕೆ	1
2.	ಮೂರನೇ ಹೆಣ್ಣು	10
3.	ನದಿ ಹರಿಯುತಿತ್ತು ಎಂದಿನಂತೆ	16
4.	ಒಂದು ನಿಟ್ಟುಸಿರು	21
5.	ಮಲ್ಲಿಕಾ	30
6.	ಎರಡು ಕಿಟಕಿಗಳು	44
7.	ಆ ಮನುಷ್ಯ	58
8.	ಆ ಇನ್ನೊಬ್ಬರು	71
9.	ಅಪರಿಚಿತ	78
10.	ರಂಧ್ರಗಳು	85
11.	ಋಣ	91
12.	ಜನವರಿ ಇಪ್ಪತ್ತೈದು, ಇಪ್ಪತ್ತಾರು ಮತ್ತು ಇಪ್ಪತ್ತೇಳು	104
13.	ಧನ್ನೋ	113

ಗಿಡಮೂಲಿಕೆ

ಅಂಗೂರಿ, ನಮ್ಮ ನೆರೆಮನೆಯವರ ಹಳೆಯ ನೌಕರ, ಪ್ರಭಾತಿ ಎಂಬುವನ ಕೈ ಹಿಡಿದ ಪಕ್ಕಾ 'ಹೊಸ' ಹೆಂಡತಿ. 'ಹೊಸ' ಏಕೆಂದರೆ, ಅವಳು ತನ್ನ ಗಂಡನಿಗೆ ಎರಡನೇ ಹೆಂಡತಿ. ಅವನಂತೂ ಈಗಾಗಲೇ ದಾಂಪತ್ಯದ ಸವಿ ಕಂಡಿದ್ದವನಾದ್ದರಿಂದ 'ಹೊಸ' ಎಂದು ಹೇಳುವಂತಿಲ್ಲ. ಅವಳು ಇನ್ನೊಂದು ಕಾರಣಕ್ಕೂ ಹೊಸಬಳು. ಅದೇಂದರೆ ಅವರಿಬ್ಬರ ಮದುವೆಗೂ ಅನಂತರದ ನಿಷೇಕಕ್ಕೂ ನಡುವೆ ಐದು ವರ್ಷಗಳಷ್ಟು ಅಂತರವಿತ್ತು. ಅದೂ ಅಲ್ಲದೆ ಅವಳು ಗಂಡನ ಮನೆಗೆ ಬಂದು ಇನ್ನೂ ಒಂದು ವರ್ಷ ಕೂಡ ಆಗಿಲ್ಲ.

ಐದಾರು ವರ್ಷಗಳ ಹಿಂದೆ, ತನ್ನ ಹೆಂಡತಿಯ ಶವಸಂಸ್ಕಾರ ಮಾಡಲು ಪ್ರಭಾತಿ ತನ್ನ ಹಳ್ಳಿಯ ಮನೆಗೆ ಹೋಗಿದ್ದ. ಆ ದಿನ ಶವಸಂಸ್ಕಾರದ ನಂತರ, ಅಂಗೂರಿಯ ಅಪ್ಪ ಪ್ರಭಾತಿಯ ಮನೆಗೆ ಬಂದು ಅವನ ಒದ್ದೆ ಟವಲ್ಲನ್ನು ಹಿಂಡಿದ್ದನು. ಯಾವ ಗಂಡನ ಚೌಕವೂ (ಟವಲ್ಲು) ತನ್ನ ಹೆಂಡತಿಯ ಸಾವಿಗಾಗಿ ಸುರಿಸುವ ಕಣ್ಣೀರಿನಿಂದ ಒದ್ದೆಯಾಗದಿದ್ದರೂ, ಶವ ಸಂಸ್ಕಾರದ ದಿನ ಅಥವಾ ನಾಲ್ಕನೇ ದಿನ ಸ್ನಾನ ಮಾಡಿ ಮೈ ಒರೆಸಿಕೊಂಡದ್ದರಿಂದಂತೂ ಒದ್ದೆಯಾಗೇ ಇರುತ್ತೆ. ಆದರೆ ಹಳ್ಳಿಯಲ್ಲಿ ಈ ಟವಲ್ಲನ್ನು ಹಿಂಡುವ ಪದ್ಧತಿಯಂತೂ ಇತ್ತು. ಮದುವೆಯ ವಯಸ್ಸಿನ ಮಗಳನ್ನು ಹೊಂದಿದ್ದ ತಂದೆ, ಈ ಒದ್ದೆ ಟವಲನ್ನು ಹಿಂಡುವ ಒಂದು ಸರಳ ಕೃತ್ಯ. – "ಸತ್ತ ನಿನ್ನ ಹೆಂಡತಿಯ ಸ್ಥಾನವನ್ನು ತುಂಬಲು ನಿನಗೆ ನನ್ನ ಮಗಳನ್ನು ಕೊಡುತ್ತೇನೆ, ಇನ್ನು ನೀನು ಅಳಬೇಕಾಗಿಲ್ಲ. ಕಣ್ಣೀರಿನಿಂದ ಒದ್ದೆಯಾದ ನಿನ್ನ ಚೌಕವನ್ನು ಕೂಡ ಪೂರ್ತಿ ಹಿಂಡಿ ಒಣಗಿಸಿದ್ದೇನೆ." ಎಂಬುದನ್ನು ಸೂಚಿಸುವ ಕ್ರಮವಾಗಿತ್ತು.

ಅಂಗೂರಿ ಪ್ರಭಾತಿಯನ್ನು ಮದುವೆಯಾದದ್ದು ಹೀಗೆ. ಆದರೆ ಅವರ ನಿಷೇಕವನ್ನು ಎರಡು ಕಾರಣಗಳಿಗಾಗಿ ಐದು ವರ್ಷ ಮುಂದೂಡಲಾಗಿತ್ತು. ಅವಳ ಎಳೆಯ ವಯಸ್ಸು ಮತ್ತು ಅವಳ ತಾಯಿಗೆ ಲಕ್ವ ಹೊಡೆದು ಹಾಸಿಗೆ ಹಿಡಿದಿದ್ದು ಇವೇ ಆ ಎರಡು

ಕಾರಣಗಳು. ಅಂತೂ ಕೊನೆಗೊಮ್ಮೆ ಐದು ವರ್ಷದ ನಂತರ, ಹೆಂಡತಿಯನ್ನು ಕರೆದುಕೊಂಡು ಬರಲು ಹಳ್ಳಿಗೆ ಹೋಗುವ ಮುಂಚೆ, ತನ್ನ ಯಜಮಾನನ ಕಡೆಯಿಂದ ರಜೆ ತೆಗೆದುಕೊಳ್ಳಲು ಹೋದಾಗಲೇ, ತನ್ನ ಹೆಂಡತಿಯನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಸಂಸಾರ ನಡೆಸುವುದಾಗಿಯೂ, ಹಾಗಲ್ಲದೆ ಹೋದರೆ ತಾನೂ ಹಳ್ಳಿಯಿಂದ ವಾಪಸ್ ಬರುವುದೇ ಇಲ್ಲವೆಂದೂ ಹೇಳಿದ್ದನು. ಪ್ರಭಾತಿಯ ದಣಿ, ಪ್ರಭಾತಿಯ ಜೊತೆಗೆ ತಾನು ಇನ್ನೊಂದು ಬಾಯಿಗೆ ಆಹಾರ ಒದಗಿಸಲು ಸಾಧ್ಯವಿಲ್ಲವೆಂದು ಮುಂಚೆಯೇ ತಕರಾರು ತೆಗೆದಿದ್ದನು. ಕೊನೆಗೆ ಪ್ರಭಾತಿ, ತನ್ನ ಹೆಂಡತಿ ಕೊಠಡಿಯ ಹಿಂಭಾಗದ ಕಚ್ಚಾ ಜಾಗವನ್ನು ಸಾರಿಸಿಕೊಂಡು ಅಲ್ಲಿ ತನ್ನ ಅನ್ನ ತಾನೇ ಬೇಯಿಸಿಕೊಂಡು ತಿನ್ನುತ್ತಾಳೆಂದು ಹೇಳಿದ ಮೇಲೆ ಅವನ ದಣಿ ಒಪ್ಪಿದ್ದನು. ಅಂತೂ ಅಂಗೂರಿ ನಗರಕ್ಕೆ ಬಂದಿದ್ದಳು.

ಮೊದಮೊದಲು ಅಂಗೂರಿ ಮುಖಕ್ಕೆ ಪರದೆ ಹಾಕಿಕೊಳ್ಳುತ್ತಿದ್ದಳು. ಗಂಡಸರ ಎದುರಿನಲ್ಲಿ ಹಾಗಿರಲಿ, ಹೆಂಗಸರೆದುರು ಕೂಡ ಪರದೆ ಸರಿಸುತ್ತಿರಲಿಲ್ಲ. ಆದರೆ ಬರುಬರುತ್ತಾ ಅದು ತುಂಡಾಗುತ್ತ ಬಂದು, ಕೊನೆಗೆ ಮುಂಗೂದಲನ್ನು ಮುಚ್ಚುವಷ್ಟಕ್ಕೆ ಸೀಮಿತಗೊಂಡಿತ್ತು. ಕಾಲಿಗೆ ಬೆಳ್ಳಿಯ ಕಾಲಂದಿಗೆ ಧರಿಸಿ ಝುಣಕ್ ಝುಣಕ್ ಎಂದು ಶಬ್ದ ಮಾಡುತ್ತ ಅಂಗೂರಿ ಜನರ ಕಿವಿ ಮತ್ತು ಕಣ್ಣುಗಳೆರಡಕ್ಕೂ ಹಬ್ಬವಾಗಿದ್ದಳು. ಅವಳ ಕಾಲಂದುಗೆಯ ಗೆಜ್ಜೆಯ ದನಿಯಲ್ಲಿ ಒಂದು ಮಾಯಕದ ನಗೆ ಇರುತ್ತಿತ್ತು. ನಗೆಯಲ್ಲಿ ಇಂಪಾದ ಗೆಜ್ಜೆಯ ದನಿ ಇರುತ್ತಿತ್ತು. ದಿನದ ಬಹುವೇಳೆ ತನ್ನ ಕೋಣೆಯಲ್ಲೇ ಕಳೆದರೂ, ಮನೆಯಿಂದ ಹೊರಕ್ಕೆ ಹೊರಟಳೆಂದರೆ, ಒಂದು ಬಗೆಯ ಕಾಂತಿ ಅವಳ ಹೆಜ್ಜೆಯೊಂದಿಗೆ ಹೆಜ್ಜೆ ಹಾಕಿ ಸಾಗುತ್ತಿತ್ತು. ಅಂಗೂರಿಯೊಂದಿಗೆ ಒಡವೆಗಳ ವಿಷಯಕ್ಕೆ ನನ್ನ ಜೊತೆ ಮಾತುಕತೆ ಹೀಗಿರುತ್ತಿತ್ತು.

"ಅಂಗೂರಿ ನೀನು ಕಾಲಿಗೆ ಹಾಕಿಕೊಂಡಿರುವುದೇನು?

"ಅದು ಕಾಲಂದಿಗೆ"

"ನಿನ್ನ ಕಾಲು ಬೆರಳಿಗೆ ಏನದು ಹಾಕಿಕೊಂಡಿರುವುದು?"

"ಅದು ಕಾಲುಂಗುರ"

"ಮತ್ತೆ ತೋಳುಗಳಿಗೆ"

"ತೋಳ ಬಂದಿ"

"ಮತ್ತೆ ಹಣೆಯ ಮೇಲೆ ಹಾಕಿಕೊಂಡಿದ್ದೀಯಲ್ಲ ಅದೇನು"?

"ಓ ಅದಾ – ಬೈತಲೆ ಬಟ್ಟು ಅಂತ ಹೇಳ್ತಾರೆ ಅದಕ್ಕೆ?"

"ಇವತ್ತು ಸೊಂಟಕ್ಕೇನೂ ಹಾಕಿಕೊಂಡಿಲ್ಲವಲ್ಲ ಯಾಕೆ ಅಂಗೂರಿ?"

"ಅಯ್ಯೋ ಅದು ತೀರಾ ಭಾರ ಅನ್ನಿಸುತ್ತೆ. ನಾಳೆ ಹಾಕಿಕೊಳ್ಳುತ್ತೀನಿ. ಇವತ್ತಂತೂ ನಾನು ನೆಕ್ಲೇಸ್ ಕೂಡಾ ಹಾಕಿಕೊಂಡಿಲ್ಲ. ಅದರದ್ದು ಕೊಂಡಿ ಮುರಿದು ಹೋಗಿದೆ. ನಾಳೆ ಪಟ್ಟಣಕ್ಕೆ ಹೋಗಿ ಹೊಸದಾಗಿ ಕೊಂಡಿ ಹಾಕಿಸ್ತೀನಿ ಹಾಗೇ ಒಂದು ನತ್ತು ತಗೊಳ್ತೀನಿ. ನನ್ನ ಹತ್ತಿರ ದೊಡ್ಡದೊಂದು ಮೂಗಬಟ್ಟು ಇತ್ತು. ಆದರೆ ನಮ್ಮ ಅತ್ತೆ ಅದನ್ನು ಕೊಡಲಿಲ್ಲ"

ಹೀಗೆ ಅಂಗೂರಿ ತನ್ನ ಬೆಳ್ಳಿ ಒಡವೆಗಳನ್ನು ಒಂದು ಬಗೆಯ ಬಿನ್ನಾಣದಿಂದ ಧರಿಸುತ್ತಿದ್ದಳು. ಹಾಗೂ ಒಂದು ಬಗೆಯ ವಯ್ಯಾರದಿಂದ ಅವುಗಳನ್ನು ತೋರಿಸುತ್ತಿದ್ದಳು.

ಋತುಮಾನದ ಬದಲಾವಣೆಯೊಂದಿಗೆ ಹವೆ ಕೂಡಾ ಬಿಸಿಯಾಯಿತು. ಅಂಗೂರಿಗೂ ತನ್ನ ಚಿಕ್ಕ ಕೋಣೆಯಲ್ಲಿ ಉಸಿರು ಕಟ್ಟಿದಂತೆ ಅನ್ನಿಸಿರಬೇಕು. ಅದಕ್ಕೆ ಈಗ ಅವಳು ಬಹಳಷ್ಟು ಬಾರಿ ಹೊರಗೆ ನಮ್ಮ ಮನೆಯ ಎದುರಿನಲ್ಲಿ ಬಂದು ಕುಳಿತುಕೊಳ್ಳುತ್ತಿದ್ದಳು. ನಮ್ಮ ಮನೆಯ ಮುಂದೆ ದೊಡ್ಡ ದೊಡ್ಡ ಬೇವಿನ ಮರಗಳಿವೆ. ಆ ಮರಗಳ ಸಮೀಪದಲ್ಲಿ ಎತ್ತರವಾದೊಂದು ಜಾಗದಲ್ಲಿ ಒಂದು ಹಳೆಯ ಬಾವಿ ಇದೆ. ಈ ಮೊಹಲ್ಲಾದ ಯಾರೊಬ್ಬರೂ ಅದರಿಂದ ನೀರು ಸೇದುತ್ತಿರಲಿಲ್ಲ. ಈ ಮೊಹಲ್ಲಾದ ಕೊನೆಯಲ್ಲೊಂದು ರಸ್ತೆ ಕಾಮಗಾರಿ ನಡೆಯುತ್ತಿತ್ತು. ಆ ಕೆಲಸಗಾರರು ಆಗೀಗ ಅದನ್ನು ಬಳಸುತ್ತಿದ್ದರು. ಅದರಿಂದಾಚೆ ಸುತ್ತಮುತ್ತ ನೀರು ಚೆಲ್ಲಿರುತ್ತಾದ್ದರಿಂದ ಆ ಇಡೀ ಪರಿಸರ ತಂಪಾಗಿತ್ತು. ನಾನು ಒಂದು ದಿನ ಬೇವಿನ ಮರದ ಕೆಳಗೆ ಕುಳಿತು ಒಂದು ಪುಸ್ತಕ ಓದುತ್ತಿದ್ದೆ. ಅಲ್ಲಿಗೆ ಬಂದ ಅಂಗೂರಿ–

"ಅದೇನಮ್ಮ ನೀವು ಓದುತ್ತಿರೋದು?" ಎಂದು ಕೇಳಿದಳು.

"ನೀನು ಓದುತ್ತೀಯಾ?"

"ನನಗೆ ಓದಕ್ಕೆ ಬರಲ್ಲ"

"ಕಲಿತುಕೊಂಡುಬಿಡು"

"ಓಹ್ ! ಬೇಡ"

"ಯಾಕೆ ಬೇಡ"

"ಹೆಂಗಸರು ಓದಿದರೆ ಪಾಪ ಬರುತ್ತೆ"

"ಹೆಂಗಸಿಗೆ ಪಾಪ ಬರುತ್ತೆ. ಗಂಡಸಿಗೆ ಬರುವುದಿಲ್ಲವೇ?"

"ಇಲ್ಲ ಗಂಡಸಿಗೆ ಪಾಪ ಬರಲ್ಲ"

"ಇದನ್ನು ಯಾರು ಹೇಳಿದರು ನಿನಗೆ?"

"ನನಗೆ ಗೊತ್ತು ಅಷ್ಟೆ"

"ಹಾಗಾದರೆ ನಾನು ಓದುತ್ತೀನಿ. ನನಗೆ ಪಾಪ ಬರುತ್ತಲ್ಲವಾ?"

"ಪಟ್ಟಣದ ಹೆಂಗಸರು ಓದಿದರೆ ಪಾಪ ಬರಲ್ಲ. ಹಳ್ಳಿಯ ಹೆಂಗಸರು ಓದಿದರೆ ಪಾಪ ಬರತ್ತೆ?"

ಈ ಮಾತಿಗೆ ನಾವಿಬ್ಬರೂ ನಕ್ಕೆವು– ಅಂಗೂರಿ ಏನೆಲ್ಲ ಕೇಳಿದ್ದಳೋ ಕಲಿತಿದ್ದಳೋ ಅದರ ಬಗ್ಗೆ ಅವಳಿಗೆ ಕಿಂಚಿತ್ತೂ ಸಂದೇಹವಿರಲಿಲ್ಲ. ಹಾಗಾಗಿ ನಾನು ಅವಳಿಗೇನೂ ಹೇಳಲಿಲ್ಲ. ತನ್ನದೇ ಆದ ಜಗತ್ತಿನಲ್ಲಿ ಅವಳು ನಗುತ್ತಾ ನಲಿಯುತ್ತಾ ಸುಖವಾಗಿರಲು ಸಾಧ್ಯವಾದರೆ ಅದು ಅವಳ ಮಟ್ಟಿಗೆ ಸರಿಯಾಗೇ ಇತ್ತು. ನಾನು ಸುಮ್ಮನೆ ಅಂಗೂರಿಯನ್ನು ಒಂದೇ ಸಮನೇ ದಿಟ್ಟಿಸಿ ನೋಡತೊಡಗಿದೆ. ಗಾಢವಾದ ಶ್ಯಾಮಲ ವರ್ಣದೊಂದಿಗೆ ಅವಳ ಶರೀರದ ಮಾಂಸ ಹೆಣೆದುಕೊಂಡು ಬಿಟ್ಟಿತು. ಹೆಣ್ಣಿನ ಶರೀರವೆಂದರೆ ನಾದಿದ ಹಿಟ್ಟಿನಂತೆ ಎಂದು ಹೇಳುತ್ತಾರೆ. ಕೆಲ ಹೆಂಗಸರು ನಾದಿದ್ದು ಕಡಮೆಯಾದ ಹಿಟ್ಟಿನಂತೆ

ಶಿಥಿಲವಾಗಿರುವಂಥವರು. ಇನ್ನು ಕೆಲವರು ಅತಿಯಾಗಿ ನಾದಿದ ಹಿಟ್ಟಿನಂತೆ, ಕೈಗೆ ಹತ್ತಿಕೊಳ್ಳುವಷ್ಟು ಅತಿಯಾದ ನಮ್ಯತೆ ಉಳ್ಳವರು – ಎಲ್ಲೋ ಕೆಲವರ ಶರೀರದ ಮಾಂಸ ಹದವಾಗಿ ನಾದಿದ ಬನಿಯಾದ ಹಿಟ್ಟಿನಂತಿರುತ್ತದೆ. ಅಂಥ ಹಿಟ್ಟು ರೊಟ್ಟಿಗೂ ಸೈ, ಪೂರಿಗೂ ಸೈ. ಅಂಗೂರಿಯ ಶರೀರ ಇಂಥ ಅಪರೂಪದ ವರ್ಗಕ್ಕೆ ಸೇರಿದಂಥದ್ದು. ಅಂಗೂರಿಯ ಮುಖ, ಕೈಕಾಲುಗಳು ತುಂಬಿದ ವಕ್ಷಸ್ಥಲ ಇವನ್ನೆಲ್ಲ ನೋಡುತ್ತಲೇ ಇದ್ದೆ. ಅವೆಲ್ಲವೂ ಹದವಾಗಿ ನಾದಿದ ಮೈದಾ ಹಿಟ್ಟಿನಂತಿದ್ದವು. ಇದರೊಂದಿಗೆ ನನ್ನ ಮನ ಇವಳ ಗಂಡನೆನಿಸಿದ ಕುಳ್ಳನೆಯ, ಮಣ್ಣಿನ ಬಟ್ಟಲಿನ ಹಾಗೆ ಇಳಿಬಿದ್ದ ಮುಖದ, ಪ್ರಭಾತಿಯನ್ನು ನೆನೆಯಿತು. ನನಗೆ ಅನಿಸಿದ್ದೆಂದರೆ ಪ್ರಭಾತಿ ಇಂಥ ಹದವಾದ ಹಿಟ್ಟನ್ನು ಬೇಯಿಸಿಕೊಂಡು, ಸವಿಯುವ ಅಧಿಕಾರವಿಲ್ಲವನು ಎಂದು. ಅವನನ್ನು ಅಂಗೂರಿಯೊಂದಿಗೆ ಹೋಲಿಸಿ ನೋಡಿದಾಗ ನನಗೊಂದು ವಿಲಕ್ಷಣ ಉಪಮೆ ಹೊಳೆಯಿತು. ಪ್ರಭಾತಿ ಏನಿದ್ದರೂ ಹದವಾಗಿ ನಾದಿದ ಹಿಟ್ಟಿನಂತಿರುವ ಅಂಗೂರಿಯನ್ನು ಮರೆಮಾಡಿರುವ ವಸ್ತ್ರದ ಹಾಗೆ; ಅವನಂತೂ ಅವಳನ್ನು ಭೋಗಿಸುವವನಲ್ಲ ಎನಿಸಿತು. ಇದನ್ನು ನೆನೆದು ನನಗೇ ನಗು ಬಂತು. ಅಂಗೂರಿಗೆ ನನ್ನ ಈ ನಗುವಿನ ಕಾರಣ ಗೊತ್ತಾಗಿಬಿಡಬಹುದೆಂಬ ಭಯದಿಂದ ಅದನ್ನು ತಡೆದೆ. ಹಾಗಾಗಿ ಅವಳ ಹಳ್ಳಿಗೆ ಸಂಬಂಧಿಸಿದ ಇನ್ನಿತರೆ ಸಣ್ಣ ಪುಟ್ಟ ವಿಚಾರಗಳನ್ನು ಕೇಳತೊಡಗಿದೆ.

ಅವಳ ಅಪ್ಪ, ಅಮ್ಮ, ಅಕ್ಕ ತಂಗಿ, ಅಣ್ಣ ತಮ್ಮಂದಿರು ಮತ್ತು ರೈತಾಪಿ ಜನರ ವಿಷಯ ಮಾತಾಡುತ್ತ ಅವಳನ್ನು, ಅವಳ ಊರಿನಲ್ಲಿ ಮದುವೆಗಳು ಯಾವ ರೀತಿಯಲ್ಲಿ ಆಗುತ್ತವೆ ಎಂದು ಕೇಳಿದೆ.

'ಹುಡುಗಿ ಐದಾರು ವರ್ಷದ ಬಾಲೆ ಆಗಿದ್ದಾಗ, ಯಾರದ್ದಾದರೂ ಪಾದ ಪೂಜೆ ಮಾಡುತಾಳೆ?"

"ಪಾದಪೂಜೆ ಹೇಗೆ ಮಾಡ್ತಾಳೆ?"

"ಹುಡುಗಿಯ ಅಪ್ಪ ಹೋಗುತ್ತಾನೆ. ಹೂವುಗಳು ತುಂಬಿದ ಒಂದು ತಟ್ಟೆ ತೆಗೆದುಕೊಂಡು ಹೋಗಿರುತ್ತಾನೆ. ಜೊತೆಯಲ್ಲಿ ಹಣವನ್ನು ಒಯ್ದಿರುತ್ತಾನೆ. ಅದೆಲ್ಲವನ್ನೂ ಹುಡುಗನ ಮುಂದೆ ಇಟ್ಟುಬಿಡುತ್ತಾನೆ"

"ಇದು ಒಂದು ರೀತಿಯಲ್ಲಿ ತಂದೆ ಪಾದಪೂಜೆ ಮಾಡಿದ ಹಾಗೆ ಆಗುತ್ತೆ. ಹುಡುಗಿ ಪೂಜೆ ಮಾಡಿದ ಹಾಗೆ ಹೇಗೆ ಆಯಿತು.?

"ಹುಡುಗಿಯ ಪರವಾಗಿ ಅವನು ಪೂಜೆ ಮಾಡುತ್ತಾನೆ"

"ಆದರೆ ಹುಡುಗಿ ಅವನನ್ನು ಯಾವತ್ತೂ ನೋಡಿಯೂ ಇರುವುದಿಲ್ಲವೆ ?"

"ನಿಜ ಹುಡುಗಿಯರು ನೋಡುವುದಿಲ್ಲ"

"ಹುಡುಗಿಯರು ತಮ್ಮ ಗಂಡನಾಗುವವನನ್ನು ನೋಡಿರುವುದಿಲ್ಲವೇ?"

'ಇಲ್ಲ'

"ಯಾವ ಹುಡುಗಿಯೂ ನೋಡಿರುವುದಿಲ್ಲವೆ ?"

"ಇಲ್ಲ..." ಎಂದು ಅರ್ಧಕ್ಕೇ ನಿಲ್ಲಿಸಿದಳು. ಸ್ವಲ್ಪ ಹೊತ್ತು ಯೋಚನೆ ಮಾಡಿದ ಮೇಲೆ–

"ಯಾರು ಒಬ್ಬರನೊಬ್ಬರು ಪ್ರೀತಿಸುತ್ತಾರೋ ಅವರು ನೋಡಿರುತ್ತಾರೆ" ಎಂದಳು,

"ನಿಮ್ಮೂರಿನಲ್ಲಿ ಹುಡುಗಿಯರು ಪ್ರೇಮಿಸುವುದು ಉಂಟೆ ?"

"ಎಲ್ಲೋ ಒಬ್ಬೊಬ್ಬರು"

"ಯಾರು ಪ್ರೇಮಿಸುತ್ತಾರೋ ಅವರು ಪಾಪ ಮಾಡಿದ ಹಾಗೆ ಆಗಲ್ಲವೇನು?" ಹೆಣ್ಣು ಓದಿದರೆ ಪಾಪ ಮಾಡಿದ ಹಾಗಾಗುತ್ತೆ ಎಂಬ ಅವಳ ಮಾತು ನೆನಪಿಗೆ ಒಂದು ಆ ಲೆಕ್ಕದಲ್ಲಿ ಪ್ರೇಮಿಸುವುದರಿಂದಲೂ ಪಾಪ ಬರುತ್ತದೆ ಅಲ್ಲವೇ ಎನಿಸಿತು.

"ಪಾಪ ಬರುತ್ತದೆ, ಬಳ ದೊಡ್ಡ ಪಾಪಬರುತ್ತದೆ"

"ಪಾಪ ಬರುವುದಾದರೆ ಅವರು ಪ್ರೇಮ ಯಾಕೆ ಮಾಡುತ್ತಾರೇ"

"ವಿಷಯ ಏನಪ್ಪಾ ಅಂದರೆ ಯಾರಾದರೂ ಮನುಷ್ಯ ಹುಡುಗಿಗೆ ಏನನ್ನಾದರೂ ತಿನ್ನಿಸಿದರೆ ಅವಳು. ಪ್ರೇಮಿಸುವುದಕ್ಕೆ ಶುರುಮಾಡುತ್ತಾಳೆ."

"ಯಾರಾದರೂ ಅವಳಿಗೆ ಏನನ್ನು ತಿನ್ನಿಸುತ್ತಾನೆ ?"

"ಒಂದು ಗಿಡ ಮೂಲಿಕೆ ಇರುತ್ತೆ. ಅದನ್ನೇ ಎಲೆ ಅಡಿಕೆಯಲ್ಲಿ ಸೇರಿಸಿ ಇಲ್ಲವೆ. ಮಿಠಾಯಿಯಲ್ಲಿ ಸೇರಿಸಿ ತಿನ್ನಿಸಿಬಿಡುತ್ತಾನೆ. ಆಗ ಅವಳು ಅವನನ್ನು ಪ್ರೇಮಿಸತೊಡಗುತ್ತಾಳೆ. ಆಗ ಅವಳಿಗೆ ಅವನೇ ತುಂಬ ಚೆನ್ನಾಗಿ ಹಿಡಿಸ್ತಾನೆ. ಪ್ರಪಂಚದ ಬೇರೆ ಯಾವುದೂ ಅವಳಿಗೆ ಹಿಡಿಸುವುದಿಲ್ಲ."

"ನಿಜವೇ ?"

"ನಿಜ ನನಗೆ ಗೊತ್ತಿದೆ. ನಾನು ನನ್ನ ಕಣ್ಣಾರೆ ನೋಡಿದ್ದೀನಿ."

"ಯಾರನ್ನು ನೋಡಿದ್ದೆ ನೀನು?"

"ನನಗೊಬ್ಬ ಗೆಳತಿ ಇದ್ದಳು, ಗೆಳತಿ ನನಗಿಂತ ದೊಡ್ಡವಳು"

"ಆಮೇಲೆ ಏನಾಯಿತು ಅವಳಿಗೆ?"

"ಆಮೇಲಿನ್ನೇನು? ಅವಳಿಗೆ ಅವನದ್ದೇ ಹುಚ್ಚು ಹಿಡಿದು ಅವನ ಜೊತೆ ಪಟ್ಟಣಕ್ಕೆ ಓಡಿಹೋದಳು"

"ಅವಳಿಗೆ ಅವನು ಮದ್ದು ತಿನ್ನಿಸಿದ್ದ ಅಂತ ನಿನಗೆ ಹೇಗೆ ಗೊತ್ತು?"

"ಬರ್ಫಿಯಲ್ಲಿ ಸೇರಿಸಿ ಅವಳಿಗೆ ತಿನ್ನಿಸಿದ್ದ. ಇಲ್ಲದೆ ಇದ್ದರೆ ತನ್ನ ಅಪ್ಪ ಅಮ್ಮನನ್ನು ಬಿಟ್ಟು ಯಾತಕ್ಕೆ ಹೋಗುತ್ತಿದ್ದಳು? ಅವನು ಅವಳಿಗೆ ಬಟ್ಟೆ ಬರೆ ನಕಲಿ ಒಡವೆ, ವಸ್ತು, ಮುತ್ತಿನ ಸರ ಎಲ್ಲ ತಂದುಕೊಡುತ್ತಿದ್ದ"

"ಇವಂತೂ ಸಾಮಾನುಗಳಾದವು ! ಆದರೆ ಅವನು ಗಿಡಮೂಲಿಕೆ ಮದ್ದು ತಿನ್ನಿಸಿದ್ದ ಅಂತ ನಿನಗೆ ಹೇಗೆ ಗೊತ್ತು?

"ಇಲ್ಲದೆ ಇದ್ದರೆ ಅವಳು ಅವನನ್ನು ಯಾತಕ್ಕಾದರೂ ಪ್ರೀತಿಸುತ್ತಿದ್ದಳು.?"

"ಪ್ರೇಮ ಹಾಗೇನೂ ಆಗೋಕೆ ಸಾಧ್ಯ"

"ಇಲ್ಲ ಹಾಗೇನೇ ಆಗೋದೆ ಇಲ್ಲ. ಯಾರನ್ನು ಅವರ ಅಪ್ಪ ಅಮ್ಮ ಕೆಟ್ಟವನು ಅಂತ ತಿಳಿದಿದ್ದರೋ ಅವನೊಂದಿಗೆ ಪ್ರೇಮ ಹೇಗೆ ಆಗೋದಕ್ಕೆ ಸಾಧ್ಯ?"

"ನೀನು ಆ ಗಿಡಮೂಲಿಕೆಯ ಮದ್ದು ನೋಡಿದ್ದೀಯಾ?"

"ನಾನು ನೋಡಿಲ್ಲ. ಅದನ್ನು ಬಹಳ ದೂರದಿಂದ ತರುತ್ತಾರೆ. ಯಾರಿಗೂ ಕಾಣದ ಹಾಗೆ ಮಿಠಾಯಿಯಲ್ಲಿ ಸೇರಿಸಿ. ಅಥವಾ ಎಲೆ ಅಡಿಕೆಯಲ್ಲಿ ಸೇರಿಸಿ ಕೊಟ್ಟು ಬಿಡುತ್ತಾರೆ. ಯಾರ ಕೈಯಿಂದಲೂ ಮಿಠಾಯಿ ಈಸಿಕೊಂಡು ತಿನ್ನಕೂಡದು ನೀನು ಅಂತ ನಮ್ಮ ಅಮ್ಮ ಮುಂಚೇನೇ ಹೇಳಿಬಿಟ್ಟಿದ್ದಳು."

"ನೀನು ಯಾರ ಕೈಯಿಂದಲೂ ಮಿಠಾಯಿ ಈಸಿಕೊಂಡು ತಿನ್ನದೆ ಬಹಳ ಒಳ್ಳೆಯ ಕೆಲಸ ಮಾಡಿದೆ. ಆದರೆ ಆ ನಿನ್ನ ಸ್ನೇಹಿತೆ ಅದು ಹ್ಯಾಗೆ ತಿಂದಳು?"

"ಅವಳು ತಾನು ಮಾಡಿದ್ದನ್ನು ಅವಳು ಅನುಭವಿಸುತ್ತಾಳೆ"

ಅವಳು ಮಾಡಿದ್ದನ್ನು ಅವಳು ಅನುಭವಿಸುತ್ತಾಳೆ ಅಂತ ಹೇಳುವುದೇನೋ ಅಂಗೂರಿ ಹೇಳಿಬಿಟ್ಟಳು. ಮರುಕ್ಷಣದಲ್ಲೇ ಬಹುಶಃ ಅವಳಿಗೆ ತನ್ನ ಗೆಳತಿಯ ಸ್ನೇಹ ನೆನಪಿಗೆ ಬಂದಿರಬಹುದು. ಅಥವಾ ಅವಳ ಬಗ್ಗೆ ಕರುಣೆ ಉಕ್ಕಿತೇನೋ; ದುಃಖಿತಳಾಗಿ ಹೇಳಿದಳು; "ಪಾಪದವಳು ಹುಚ್ಚಳಾಗಿ ಬಿಟ್ಟಳು. ತಲೆಕೂಡ ಬಾಚಿ ಕೊಳ್ಳುತ್ತಿರಲಿಲ್ಲ. ರಾತ್ರಿಯೆಲ್ಲಾ ಎದ್ದೆದ್ದು ಹಾಡು ಹೇಳುತ್ತಾ ಇರುತ್ತಿದ್ದಳು"

"ಏನು ಹಾಡು ಹೇಳುತ್ತಿದ್ದಳು?"

"ಏನು ಹಾಡುತ್ತಿದ್ದಳು ಅಂತ ನನಗೆ ಗೊತ್ತಿಲ್ಲ. ಮದ್ದು ತಿಂದವರೆಲ್ಲಾ ಹಾಗೆ ಬಹಳ ಹಾಡ್ತಾರೆ. ಅಳೋದು ತುಂಬ ಜಾಸ್ತಿ"

ಮಾತು ಈಗ ಹಾಡುವುದರಿಂದ ಅಳುವಿನ ವಿಷಯಕ್ಕೆ ಬಂದಿತ್ತು. ಅದರಿಂದಾಗಿ ನಾನು ಅಂಗೂರಿಯನ್ನು ಬೇರೆ ಏನೂ ಪ್ರಶ್ನೆ ಕೇಳಲಿಲ್ಲ.

ಹೆಚ್ಚು ದಿನವೇನೂ ಆಗಿರಲಿಲ್ಲ. ಒಂದು ದಿನ ಅಂಗೂರಿ, ಬೇವಿನ ಮರದ ಕೆಳಗಡೆ ನಿಂತಿದ್ದ ನನ್ನ ಪಕ್ಕ ಸದ್ದಿಲ್ಲದೆ ಬಂದು ನಿಂತಳು. ಮುಂಚೆ ಅಂಗೂರಿ ನನ್ನ ಹತ್ತಿರ ಬರುತ್ತಿದ್ದಾಗ, ಬಳೆಗಳ ಗಲ್‌ಗಲ್ ಸದ್ದು ಮಾಡುತ್ತ ಬರುತ್ತಿದ್ದುದರಿಂದ ಇಪ್ಪತ್ತು ಗಜ ದೂರದಿಂದಲೇ ಅವಳು ಬರುತ್ತಿದ್ದ ಸದ್ದು ಕೇಳಿಸುತ್ತಿತ್ತು. ಆದರೆ ಇಂದು ಅವಳ ಕಾಲಂದುಗೆ ಅದೆಲ್ಲೋ ಕಳೆದುಹೋಗಿದ್ದವು. ನಾನು ಪುಸ್ತಕದಿಂದ ತಲೆ ಎತ್ತಿ ಕೇಳಿದೆ –

"ಏನು ಸಮಾಚಾರ ಅಂಗೂರಿ?"

ಅಂಗೂರಿ ಮೊದಲು ಬಹಳ ಹೊತ್ತಿನವರೆಗೂ ನನ್ನ ಕಡೆ ನೋಡುತ್ತಿದ್ದಳು. ಆಮೇಲೆ ಮೆಲ್ಲಗೆ ಹೇಳಿದಳು. "ಅಮ್ಮಾ ನನಗೆ ಓದುವುದು, ಬರೆಯುವುದು ಕಲಿಸಿಕೊಡಿ,"

"ಏನಾಯಿತು ಅಂಗೂರಿ?"

"ನನಗೆ ಹೆಸರು ಬರೆಯುವುದು ಹೇಳಿಕೊಡಿ"

"ಯಾರಿಗಾದರೂ ಪತ್ರ ಬರೀತಿಯೇನು?"

ಅಂಗೂರಿ ಉತ್ತರ ಕೊಡಲಿಲ್ಲ. ನೆಟ್ಟ ನೋಟದಿಂದ ನನ್ನತ್ತ ನೋಡತೊಡಗಿದಳು.

"ಓದುವುದರಿಂದ ಪಾಪ ಬರಲ್ಲವೇನು?" ನಾನು ಮತ್ತೆ ಕೇಳಿದೆ.

ಆಗಲೂ ಅಂಗೂರಿ ಏನೂ ಉತ್ತರಕೊಡಲಿಲ್ಲ. ಒಂದೇ ಸಮನೆ ಆಕಾಶದತ್ತ ನೋಡತೊಡಗಿದಳು.

ಇದು ಮಧ್ಯಾಹ್ನ ನಡೆದ ಸಂಗತಿ. ಅಂಗೂರಿಯು ಬೇವಿನಮರದ ಕೆಳಗೆ ಕೂತಿದ್ದ

ಹಾಗೆಯೇ ಅವಳನ್ನು ಅಲ್ಲೇ ಬಿಟ್ಟು ನಾನು ಒಳಗಡೆಗೆ ಬಂದಿದ್ದೆ. ಸಾಯಂಕಾಲ ನಾನು ಹೊರಕ್ಕೆ ಬಂದಾಗ, ನೋಡಿದರೆ ಅಂಗೂರಿ ಬೇವಿನ ಮರದ ಕೆಳಗೆ ಕುಳಿತೇ ಇದ್ದಳು. ತುಂಬ ಮುದುಡಿಕೊಂಡು ಬಿಟ್ಟಿದ್ದಳು. ಬಹುಶಃ ಸಾಯಂಕಾಲದ ಥಂಡಿ ಹವೆಯ ಕಾರಣದಿಂದಿರಬೇಕು." ದೇಹದಲ್ಲಿ ಕಿಂಚಿತ್ ನಡುಕ ಶುರುವಾಗಿತ್ತು.

ನಾನು ಅಂಗೂರಿಯ ಬೆನ್ನ ಹಿಂದೆ ಇದ್ದೆ. ಅಂಗೂರಿಯ ತುಟಿಗಳ ಮೇಲೆ ಗೀತವೊಂದು ಸುಳಿದಾಡುತ್ತಿತ್ತು. ಅದು ಹೆಚ್ಚು ಕಡಿಮೆ ಬಿಕ್ಕುತ್ತಿದ್ದಂತಿತ್ತು. ದುಃಖಿತ ಸ್ವರದಲ್ಲಿ ತನಗೆ ತಾನೇ ಏನೋ ಹಾಡಿಕೊಳ್ಳುತ್ತಿದ್ದಳು. ನನ್ನ ಹೆಜ್ಜೆಯ ಸಪ್ಪಳ ಕೇಳಿ ಹಿಂತಿರುಗಿನೋಡಿ ತಾನು ಹಾಡುತ್ತಿದ್ದುದನ್ನು ತುಟಿಗಳಲ್ಲಿಯೇ ಅಡಗಿಸಿಕೊಂಡಳು.

"ನೀನು ತುಂಬಾ ಚೆನ್ನಾಗಿ ಹಾಡ್ತೀಯ ಅಂಗೂರಿ" ನಾನು ಹೇಳಿದೆ. ಅವಳು ಕಣ್ಣೀರನ್ನು ಕಷ್ಟದಿಂದ ತಡೆದುಕೊಂಡು ತುಟಿಯ ಮೇಲೊಂದು ನಿರ್ಜೀವ ಮುಗುಳ್ನಗೆ ತಂದುಕೊಳ್ಳಲು ಅತ್ಯಂತ ಪ್ರಯಾಸಪಡುತ್ತಿದ್ದುದು ಕಣ್ಣಿಗೆ ಕಾಣುತ್ತಿತ್ತು.

"ನನಗೆ ಹಾಡೋದಕ್ಕೆ ಬರಲ್ಲ"

"ಬರತ್ತೆ..........."

"ಇದು........."

"ನಿನ್ನ ಸ್ನೇಹಿತೆ ಹಾಡುತ್ತ ಇದ್ದ ಹಾಡೇನು?"

"ಅವಳ ಬಾಯಿಂದ ಕೇಳಿದ್ದೆ ನಾನು"

"ನನಗೂ ಆ ಹಾಡನ್ನು ಹಾಡಿ ತೋರಿಸು?"

"ಓಹ್! ಅದು – ಹಳೆ ವರ್ಷ ಹೋಗಿ ಹೊಸ ವರ್ಷ ಬರುತ್ತಲ್ಲ. ಆ ಬದಲಾವಣೆಗೆ ಸಂಬಂಧಿಸಿದ್ದು. ನಾಲ್ಕು ತಿಂಗಳ ಚಳಿಗಾಲ, ನಾಲ್ಕು ತಿಂಗಳ ಬೇಸಗೆ ಮತ್ತು ನಾಲ್ಕು ತಿಂಗಳ ಮಳೆಗಾಲ" ಎಂದು ಆ ಪದಗಳನ್ನು ಪುನರಾವರ್ತನೆ ಮಾಡತೊಡಗಿದಳು.

"ಹಾಗಲ್ಲ, ನನಗೋಸ್ಕರ ಅದನ್ನು ಹಾಡು" ಅವಳು ಹಾಡಲಿಲ್ಲ. ಆದರೆ, ತನ್ನ ಕೈ ಬೆರಳುಗಳ ಮೇಲೆ ವರ್ಷದ ಹನ್ನೆರಡು ತಿಂಗಳುಗಳ ಲೆಕ್ಕವನ್ನು ಮಾಡುತ್ತಿದ್ದಾಳೇನೋ ಎನ್ನುವ ಹಾಗೆ ಅವನ್ನು ಎಣಿಸತೊಡಗಿದಳು.

ನನ್ನೆದೆಯನಾಳುವುದು
    ನಾಲ್ದಿಂಗಳ ಚಳಿಗಾಲ
ನನ್ನೆದೆಯು ಕಂಪಿಪುದು
    ಓ ನನ್ನ ಒಲವೇ
ನಾಲ್ದಿಂಗಳು ಬೇಸಗೆಯಲಿ
    ಗಾಳಿ ಕಂಪಿಪುದು ಬಿಸಿಲಲಿ
ಮಳೆಗಾಲದ ನಾಲ್ದಿಂಗಳು
    ಮೋಡಗಳು ಕಂಪಿಪವು ಬಾನಿನಲಿ

"ಅಂಗೂರಿ?" ನಾನು ಜೋರಾಗಿ ಕರೆದೆ. ಅಂಗೂರಿ ಒಂದೇ ಸಮನೆ ನನ್ನ ಮುಖದತ್ತ ನೋಡತೊಡಗಿದಳು. ಅವಳ ಹೆಗಲ ಮೇಲೆ ಕೈಯಿಟ್ಟು "ಹುಚ್ಚಿ ಎಲ್ಲಾದರೂ

ಗಿಡಮೂಲಿಕೆಯ ಮದ್ದು ತಿಂದುಬಿಟ್ಟಿಯೋ ಹೇಗೆ" ಎಂದು ಕೇಳಲೇ ಎಂದು ಮನಸ್ಸಿನಲ್ಲಿ ಯೋಚನೆ ಬಂತು. ಆದರೆ ಹೀಗೆ ಕೇಳುವ ಬದಲು – "ನೀನು ಊಟಾನಾದರೂ ಮಾಡಿದೆಯೋ ಇಲ್ಲವೋ?" ಎಂದು ಕೇಳಿದೆ.

"ಊಟವೇ" ಅಂಗೂರಿ ತಲೆಯೆತ್ತಿ ನೋಡಿದಳು. ಅವಳ ಹೆಗಲ ಮೇಲೆ ಕೈಯಿಟ್ಟಿದ್ದೆನಲ್ಲ, ಅದರಿಂದ ಅಂಗೂರಿಯ ಇಡೀ ಶರೀರ ನಡುಗುತ್ತಿದೆ ಎನಿಸಿತು. ಈಗ ತಾನೇ ಅವಳು ಹಾಡುತ್ತಾ ಇದ್ದಳಲ್ಲ – ಮಳೆಗಾಲದ ನಾಲ್ದಿಂಗಳು ಬಾನಲಿ ಮುಗಿಲ ಕಂಪನ, ಬೇಸಗೆಯ ನಾಲ್ದಿಂಗಳು ಗಾಳಿಯ ಕಂಪನ ಮತ್ತು ಚಳಿಗಾಲದ ನಾಲ್ದಿಂಗಳು ಎದೆಯ ಕಂಪನ – ಆ ಇಡೀ ಹಾಡಿನ ಕಂಪನ ಅಂಗೂರಿಯ ದೇಹದಲ್ಲಿ ಸೇರಿಹೋಗಿತ್ತು.

ಅಂಗೂರಿ ತನಗೊಬ್ಬಳಿಗೆ ಮಾತ್ರ ಅಡಿಗೆ ಮಾಡಿಕೊಳ್ಳುತ್ತಿದ್ದಳೆಂದು ನನಗೆ ಗೊತ್ತಿತ್ತು. ಪ್ರಭಾತಿ ದಣಿಯ ಮನೆಯಲ್ಲಿ ದಣಿಗೆ ಅಡಿಗೆ ಮಾಡುತ್ತಿದ್ದುದರಿಂದ ಅವನ ಊಟ ಅಲ್ಲೇ ಆಗುತ್ತಿತ್ತು. ಹಾಗಾಗಿ ಅವನಿಗೆ ಅದರ ಯೋಚನೆ ಇರಲಿಲ್ಲ. ಹಾಗಾಗಿ ನಾನು ಅವಳನ್ನು ಮತ್ತೆ ಕೇಳಿದೆ – "ಈ ಹೊತ್ತು ಅಡಿಗೆ ಮಾಡಿಕೊಂಡಿದ್ದೆಯಾ?"

"ಇನ್ನೂ ಇಲ್ಲ"

"ಬೆಳಿಗ್ಗೆ ಟೀ ಕುಡಿದಿದ್ದೆಯಾ?"

"ಟೀನೇ ? ಈ ದಿನ ಹಾಲಿರಲಿಲ್ಲ"

"ಈ ಹೊತ್ತು ಹಾಲು ಯಾಕೆ ತಗೊಳ್ಳಲಿಲ್ಲ ? ಅದನ್ನು............"

"ನಾನು ಹಾಲು ತಗೊಳಲ್ಲ. ಅದನ್ನು....."

"ನೀನು ದಿನಾ ಟೀ ಕುಡಿಯಲ್ಲವಾ?"

"ಕುಡೀತೀನಿ"

"ಹಾಗಾದರೆ ಈ ಹೊತ್ತು ಏನಾಯಿತು?"

"ಹಾಲನ್ನು ಆ ರಾಮ್‌ತಾರಾ............"

ರಾಮ್‌ತಾರ ನಮ್ಮ ಮೊಹಲ್ಲಾದ ಕಾವಲುಗಾರ. ಎಲ್ಲರ ಕಡೆಯಿಂದಲೂ ಏನಾದರೊಂದು ಚೂರು ಪಾಲು ಕೇಳುವ ಕಾವಲುಗಾರ. ಇಡೀ ರಾತ್ರಿ ಕಾವಲು ಕಾಯುತ್ತಾನೆ. ಅವನು ಹಗಲೆಲ್ಲಾ ನಿದ್ದೆಯಲ್ಲೇ ಮುಳುಗಿರುತ್ತಾನೆ. ಅಂಗೂರಿ ಪ್ರಭಾತಿಯನ್ನು ಮದುವೆಯಾಗಿ ಇಲ್ಲಿಗೆ ಬರುವುದಕ್ಕೆ ಮುಂಚೆ ರಾಮ್‌ತಾರ ತನ್ನ ರಾತ್ರಿಯ ಕಾವಲು ಮುಗಿಸಿ, ಬೆಳಿಗ್ಗೆ ಬೆಳಿಗ್ಗನೇ ನಮ್ಮ ಯಾರದ್ದಾದರೂ ಮನೆಗಳಿಂದ ಒಂದು ಕಪ್ ಟೀ ಕೇಳಿ ಪಡೆಯುತ್ತಾ ಇದ್ದು ನನಗೆ ನೆನಪಾಯಿತು. ಟೀ ಕುಡಿದು ಮನೆಯ ಮುಂದಿದ್ದ ಬಾವಿಯ ಪಕ್ಕದಲ್ಲಿ ಮಂಚ ಹಾಕಿಕೊಂಡು ಮಲಗಿಬಿಡುತ್ತಿದ್ದ. ಅಂಗೂರಿ ಮದುವೆಯಾಗಿ ಬಂದ ಮೇಲೆ, ಅವನು ಯಾರಾದರೂ ಗೌಳಿಯ ಕಡೆಯಿಂದ ಹಾಲು ತರುತ್ತಾ ಇದ್ದ. ಅಂಗೂರಿ, ಪ್ರಭಾತಿ ಮತ್ತು ರಾಮ್‌ತಾರ ಮೂವರೂ ಒಲೆಯ ಮುಂದೆ ಕುಳಿತುಕೊಂಡು ಟೀ ಕುಡಿಯುತ್ತಿದ್ದರು... ಅದರೊಂದಿಗೆ ರಾಮ್‌ತಾರ್ ಮೂರುದಿನಗಳ ಹಿಂದೆ ರಜ ತೆಗೆದುಕೊಂಡು ತನ್ನ ಊರಿಗೆ ಹೋಗಿದ್ದು ನನಗೆ ನೆನಪಾಯಿತು.

ದುಃಖದಿಂದ ಕೂಡಿದ ನಗೆಯಿಂದ ಕೇಳಿದೆ – ಹಾಗಾದರೆ ನೀನು ಮೂರು ದಿನದಿಂದ ಟೀ ಕುಡಿದಿಲ್ಲವೇ?" ಅವಳು ತಲೆ ಅಲ್ಲಾಡಿಸಿದಳು.

"ಮೂರು ದಿನದಿಂದ ಊಟ ಕೂಡ ಮಾಡಿಲ್ಲವೆ?"

ಅವಳು ಮಾತಾಡಲಿಲ್ಲ. ನೋಡಲಿಕ್ಕೆ ಮಾತ್ರ ಅವಳು ಒಂದು ವೇಳೆ ಊಟ ಮಾಡಿದ್ದರೂ ಊಟ ಮಾಡದೆ ಇದ್ದವಳ ಹಾಗೇ ಕಾಣುತ್ತಿದ್ದಳು.

ನನಗೆ ರಾಮ್‌ತಾರನ ಇಡೀ ಆಕೃತಿ ನೆನಪಾಯಿತು. ಸುಂದರ ಮುಖದ, ಚುರುಕು ನಡಿಗೆಯ, ಸದಾ ವಿನೋದದ ಮಾತುಗಳನ್ನು ಆಡುತ್ತಿದ್ದ ರಾಮ್‌ತಾರ ನಗುನಗುತ್ತ ತುಟಿಗಳನ್ನು ಕುಣಿಸುತ್ತಾ ತನ್ನದೇ ಆದ ಧಾಟಿಯಲ್ಲಿ ಮಾತಾಡುತ್ತಿದ್ದ ರಾಮ್‌ತಾರ.

ನಾನು ಕರೆದೆ – "ಅಂಗೂರಿ"

"ಅಮ್ಮಾವ್ರೆ"

"ಗಿಡಮೂಲಿಕೆಯನ್ನೇನಾದರೂ ತಿಂದೆಯೋ ಹೇಗೆ?"

ಅಂಗೂರಿಯ ಕಣ್ಣುಗಳಿಂದ ನೀರು ಎರಡು ಧಾರೆಯಾಗಿ ಹರಿದು ತುಟಿಗಳ ಮೇಲಿಂದ ಸಾಗಿ ಅವಳ ಬಾಯ ಹತ್ತಿರ ಮಡುಗಟ್ಟಿ ನಿಂತಿತು. ಅಂಗೂರಿಯ ಬಾಯಿಂದ ಹೊರಟ ಅಕ್ಷರಗಳು ನೆನೆದಿದ್ದವು. ಗದ್ಗದ ಕಂಠದಿಂದ ಹೇಳತೊಡಗಿದಳು – "ನಾನು ಆಣೆ ಮಾಡಿ ಹೇಳ್ತೀನಿ ಅವನಿಂದ ಎಂದೂ ಸಿಹಿತಿಂಡಿ ಇಸ್ಕೊಂಡಿರಲಿಲ್ಲ. ಅಡಕೆಲೆ ಕೂಡ ತಗೊಂಡಿರಲಿಲ್ಲ. ಕೇವಲ ಟೀ ಮಾತ್ರ... ಅವನು ಟೀನಲ್ಲೇ... ಗೊತ್ತಿಲ್ಲ..." ಅವಳಿಗೆ ತನ್ನ ಮಾತನ್ನು ಪೂರ್ತಿಮಾಡಲಾಗಲಿಲ್ಲ.

ಅಂಗೂರಿಯ ಮಾತುಗಳೆಲ್ಲವೂ ಕಣ್ಣೀರಿನಲ್ಲಿ ಮುಳುಗಿ ಹೋದವು.

ಮೂರನೇ ಹೆಣ್ಣು

ಚಟ್ಟಗಳು ಮನೆಯಿಂದ ಹೊರಕ್ಕೆ ಹೋಗುತ್ತವೆ. ಆದರೆ ಮೀನಾ ತನ್ನ ತವರಿಗೆ ಬಂದಾಗ ಎಲ್ಲರಿಗೂ ಒಂದು ಚಟ್ಟ ಮನೆಯೊಳಕ್ಕೆ ಬಂದು ಬಿಟ್ಟಿತೇನೋ ಅನ್ನಿಸಿತು.

ಸರ್ಕಾರಿ ಮುದ್ರೆಗಳನ್ನು ಒತ್ತಿಸಿಕೊಂಡ, ಮೀನಾಳ ಶವದ ಬಟ್ಟೆಯಂತಿದ್ದ ಒಂದು ಪತ್ರ ಬಂದಿತು. ಅದರಲ್ಲಿ ಮೀನಾಳ ಸಾವಿನ ಸುದ್ದಿಯೇನೂ ಇರಲಿಲ್ಲವಾದರೂ ಅವಳ 'ಚೆಲುವಯೋಧ' ದೇಶದ ಗಡಿಯಲ್ಲಿ ಮರಣಹೊಂದಿದ ಸುದ್ದಿ ಇತ್ತಾದ್ದರಿಂದ ಅದು ಮೀನಾಳ ಶವದ ಬಟ್ಟೆಯಂತಿತ್ತು.

ಕೆಲವೊಂದು ಸಂಗತಿಗಳನ್ನು ಹೆಂಗಸು ಸಹಜವಾಗಿಯೇ ಗ್ರಹಿಸುತ್ತಾಳೆ. ಇದೂ ಅಂಥದೇ ಒಂದು ಸತ್ಯಸಂಗತಿಯಾಗಿತ್ತು. ಅದೆಂದರೆ ಗಂಡಸು ಒಮ್ಮೆ ಮಾತ್ರ ಸಾಯುತ್ತಾನೆ. ಆದರೆ ಅವನ ಸಾವಿನ ನಂತರ ಅವನ ಹೆಂಡತಿ. ಬದುಕಿರುವಷ್ಟು ಕಾಲದಲ್ಲಿ ಅದೆಷ್ಟು ಸಲ ಸಾಯುತ್ತಾಳೋ ಗೊತ್ತಿಲ್ಲ.

ಹಾಗಾಗಿ ಮೀನಾ ಚಟ್ಟದ ಹಾಗೆ ತೌರಿಗೆ ಬಂದಾಗ ಮನೆಯ ಮೂಕಗೋಡೆಗಳೂ ಅಯ್ಯೋ ಅಯ್ಯೋ ಎನ್ನತೊಡಗಿದವು.

ದೇವರು ಮನುಷ್ಯನ ನಾಲಗೆ ಕತ್ತರಿಸಿಬಿಟ್ಟಾಗ ಅವನು ಏನೂ ಮಾತನಾಡಲಾರ. ಮೀನಾಳ ತಂದೆ ತಾಯಿಗಳು ಮೂಕರ ಹಾಗೆ ಇದ್ದು ಬಿಟ್ಟರು.

ಮನೆ ತೆರದಿತ್ತು. ಮನೆಯ ಜೀವಿಗಳಿಗೆ ತಮ್ಮದೇ ಆದ ಸೂರು ಮತ್ತು ಗೋಡೆಗಳಿದ್ದವು. ಅತಿ ಚಿಕ್ಕ ಮಗುವಿಗೂ ಅದರ ಹೆಸರಿನಲ್ಲಿ ತನ್ನದೇ ಆದೊಂದು ಪಾಲು ಇತ್ತು. ಹಾಗಾಗಿ ಮೀನಾಳು ಮನೆಗೆ ಬಂದಾಗ, ಹಿಂದೆ ಸ್ಕೂಲಿನಿಂದಲೋ ಕಾಲೇಜಿನಿಂದಲೋ ಬಂದಾಗ ಹೇಗೆ ತನ್ನ ಕೊಠಡಿಗೆ ಹೋಗುತ್ತಿದ್ದಳೋ ಹಾಗೆಯೇ ನೇರವಾಗಿ ತನ್ನ ಕೊಠಡಿಗೆ ಹೋಗಿಬಿಟ್ಟಳು.

ಆದರೆ ಮೊದಲಿಗೆ ಮಾಮೂಲಿಯಾಗಿ ತೆರೆಯುತ್ತಿದ್ದಂಥ ಹಾಗೂ ಮುಚ್ಚುತ್ತಿದ್ದಂಥ

ಬಾಗಿಲುಗಳು ಕಳೆದ ಇಪ್ಪತ್ತು ವರ್ಷಗಳಿಂದ ಶಾಪಗ್ರಸ್ತವಾಗಿ ಬಿಟ್ಟಿದ್ದವು. ಈಗ ಅವು ವಿವಾಹ ಅಥವಾ ವಿಚ್ಛೇದನ, ಹುಟ್ಟು ಅಥವಾ ಸಾವಿನಂಥ ಘಟನೆಗಳಿಗೆ ಮಾತ್ರ ತೆರೆದುಕೊಳ್ಳುತ್ತಿದ್ದವು ಮತ್ತು ಮುಚ್ಚಿಕೊಳ್ಳುತ್ತಿದ್ದವು.

ವೃದ್ಧ ತಂದೆ ತಾಯಿಗಳು ನಡೆವ ಘಟನೆಗಳನ್ನು ಕೆಲವೊಮ್ಮೆ ಸಂತಸದ ಕಣ್ಣುಗಳಿಂದ ನೋಡುತ್ತಿದ್ದರೆ, ಇನ್ನು ಕೆಲವೊಮ್ಮೆ ಒದ್ದೆ ಕಣ್ಣುಗಳಿಂದ ನೋಡುತ್ತಿದ್ದರು.

ಇಂದಿಗೆ ಇಪ್ಪತ್ತು ವರ್ಷಗಳ ಹಿಂದೆ ಮೀನಾಳ ಅಕ್ಕನ ಮದುವೆಯ ಸಂದರ್ಭದಲ್ಲಿ ಅವಳ ಕೋಣೆಯನ್ನು ವಿವಾಹದ ಆ ಘಟನೆ ತನ್ನ ಕೈಗಳಿಂದ ಮುಚ್ಚಿತ್ತು. ಆದರೆ ಎರಡು ವರ್ಷಗಳ ನಂತರ ಮಗು ಹುಟ್ಟಿದಾಗ ತನ್ನ ತವರಿಗೆ ಹೋದ ಸಂದರ್ಭದಲ್ಲಿ ಮಗುವಿನ ಜನನದ ಘಟನೆ. ತನ್ನ ಕೈಯಿಂದ ಅವಳ ಕೋಣೆಯ ಬಾಗಿಲನ್ನು ತೆರೆಸಿತ್ತು. ಮತ್ತೆ ಅವಳು ನಲವತ್ತು ದಿನಗಳಲ್ಲಿ ಹಾಲು ಕುಡಿವ ಹಸುಗೂಸನ್ನು ಹಿಂದೆ ಬಿಟ್ಟು ತೀರಿಕೊಂಡಾಗ, ಸಾವು ತನ್ನ ಕೈಯಿಂದ ಕೊಠಡಿಯ ಬಾಗಿಲನ್ನು ಮುಚ್ಚಿಬಿಟ್ಟಿತು. ನವಜಾತ ಶಿಶುವನ್ನು ಅದರ ತಾತನ ಮನೆಯವರು ಮೊದಲು ಕರೆದುಕೊಂಡುಹೋಗಿದ್ದರು. ಅನಂತರ ಆ ಪುಟ್ಟ ಮಗುವನ್ನು ಸಂಭಾಳಿಸುವುದು ಕಷ್ಟ ಎನ್ನಿಸಿದಾಗ, ಆ ಗಂಡು ಮಗುವನ್ನು ಅದರ ತಾಯಿಯ ತೌರುಮನೆಗೆ ಕಳಿಸಿಬಿಟ್ಟರು. ಈ ಘಟನೆಯಾದರೋ ಆ ಬಾಲಕನ ಪುಟ್ಟ ಪುಟ್ಟ ಕೈಗಳಿಂದ ಆ ಕೊಠಡಿಯ ಬಾಗಿಲನ್ನು ಮತ್ತೆ ತೆರೆಸಿತು.

ಇದೇ ರೀತಿ ಮೀನಾಳ ಸೋದರ ಹನ್ನೆರಡು ವರ್ಷಗಳ ಹಿಂದೆ ಯೂನಿವರ್ಸಿಟಿಯ ಹಾಸ್ಟೆಲ್‌ನಲ್ಲಿ ವಾಸಿಸಲು ಮನೆ ಬಿಟ್ಟು ಹೊರಟು ಹೋದಾಗ, ಅವನ ಕೊಠಡಿಯ ಬಾಗಿಲನ್ನು ಮಾಮೂಲಿ ಕೈಗಳು ಮುಚ್ಚಿ ಬಿಟ್ಟಿದ್ದವು. ಆದರೆ ಐದು ವರ್ಷಗಳ ನಂತರ ಆಗಿನ ಘಟನೆಯೇ ತನ್ನ ಕೈಗಳಿಂದ ಬಾಗಿಲನ್ನು ತೆರೆಯಿತು. ಅವನು ಯೂನಿವರ್ಸಿಟಿಯಲ್ಲಿ ಓದುತ್ತಿದ್ದ ಬೇರೊಂದು ಜಾತಿಗೆ ಸೇರಿದ ಹುಡುಗಿಯನ್ನು, ಆ ಹುಡುಗಿಯ ತಂದೆ ತಾಯಿಗಳ ಕಣ್ ತಪ್ಪಿಸಿ ಕರೆದುಕೊಂಡುಹೋಗಿ ಮದುವೆ ಮಾಡಿಕೊಂಡು ಮನೆಗೆ ಕರೆ ತಂದಿದ್ದ. ಕೋಣೆಯ ಬಾಗಿಲು ತೆರೆದುಕೊಂಡಿತು. ರೇಷ್ಮೆಯ ಪರದೆಗಳು ಅದನ್ನು ಆವರಿಸಿಕೊಂಡವು. ಅನ್ನದ ತಪ್ಪಲೆಯಿಂದ ಹಾಗೂ ಮಾಂಸ ಬೇಯುತ್ತಿರುವ ಪಾತ್ರೆಯಿಂದ ವಾಸನೆ ಹೊರಹೊಮ್ಮುವಂತೆ ಕೊಠಡಿಯಿಂದ ಯೌವನದ ಆಮೋದದ ಸುವಾಸನೆ ಹೊರಹೊಮ್ಮತೊಡಗಿತು. ಆದರೆ ಹೇಗೋ ಕಷ್ಟದಿಂದ ಒಂದು ವರ್ಷ ಕಳೆದಿತ್ತೋ ಏನೋ. ಅಚಾನಕ್ ಆಗಿ ಆದ ಮದುವೆಯಂತೆಯೇ ಅಚಾನಕ್ ಆಗಿ ಆದ ವಿಚ್ಛೇದನವು ಆ ಕೋಣೆಯ ಬಾಗಿಲನ್ನು ಮುಚ್ಚಿಸಿಬಿಟ್ಟಿತು.

ಈಗ್ಗೆ ಮೂರು ವರ್ಷಗಳ ಹಿಂದೆ ಮೀನಾಳ ಮದುವೆಯ ಘಟನೆಯಿಂದ ಮುಚ್ಚಲ್ಪಟ್ಟಿದ್ದ ಕೊಠಡಿಯನ್ನು ಅವಳ ವೈಧವ್ಯವು ಈಗ ತನ್ನ ಕೈಗಳಿಂದ ತೆರೆದುಬಿಟ್ಟಿತು.

ಈ ಕೊಠಡಿಯಿಂದ ಮೀನಾ ಪಲ್ಲಕ್ಕಿಯ ಹಾಗೆ ಹೊರಹೋಗಿದ್ದಳು. ಈಗ ಚಟ್ಟದ ಹಾಗೆ ಒಳಕ್ಕೆ ಪ್ರವೇಶಿಸಿದಳು. ಅವಳ ವೃದ್ಧ ಮಾತಾಪಿತರು ಇದೆಲ್ಲವನ್ನೂ ನೋಡಲೆಂದೇ 'ವಿಧಿಯು ಕೈಗಳನ್ನು ಕಟ್ಟಿ ಹಾಕಿ ನಿಲ್ಲಿಸಿದ ನೋಟಕರಂತೆ ಇದ್ದರು.'

ಮೀನಾಳ ಸೋದರ ಮಂರ್ಚೆಟ್‌ನೇವಿಯಲ್ಲಿದ್ದು ಈಗ ಎರಡು ವರ್ಷದಿಂದ ದೇಶದ

ಹೊರಗೆ ಇದ್ದ. ಗತಿಸಿದ ಮೀನಾಳ ಅಕ್ಕನ ಮಗ ಇದೀಗ ಹದಿನೆಂಟು ವರ್ಷದ ಯುವಕ ನಾಗಿದ್ದ. ಕಳೆದ ಎರಡು ವರ್ಷಗಳಿಂದ ದೂರದ ಪಟ್ಟಣದಲ್ಲಿ ಕಾಲೇಜಿನಲ್ಲಿ ಓದುತ್ತಿದ್ದು ಹಾಸ್ಟೆಲ್‌ನಲ್ಲಿ ಇರುತ್ತಿದ್ದ. ಇನ್ನು ಮನೆಯ ಕೊಠಡಿಗಳು ಯಾವುದು ತೆರೆದಿದ್ದುವೋ ಯಾವು ಮುಚ್ಚಿದ್ದುವೋ! ಅವು ಮೀನಾಳನ್ನು ನೋಡಿ ತ್ರಾಹಿ ತ್ರಾಹಿ ಎನ್ನತೊಡಗಿದವು.

ವೃದ್ಧ ತಂದೆಯ ಕಣ್ಣುಗಳಲ್ಲಿ ಇನ್ನೂ ಹೆಚ್ಚಿನದನ್ನು ನೋಡುವ ಶಕ್ತಿ ಕಮ್ಮಿಯಾಯಿತೇನೋ ! ಕಣ್ಣುಗಳಿಗೆ ಹೂ ಬಂದಿತು.

ಸರ್ಕಾರಿ ಮುದ್ರೆಗಳನ್ನು ಒತ್ತಿಸಿಕೊಂಡ ಪತ್ರವೊಂದು ಹಿಂದೊಂದು ದಿನ ಮೀನಾಳ ಶವದ ಬಟ್ಟೆಯ ಹಾಗೆ ಬಂದಿತ್ತಲ್ಲ, ಅಂಥದೇ ಪತ್ರ ಮತ್ತೊಮ್ಮೆ, ಮಗುದೊಮ್ಮೆ ಬಂದಿತು. ಮನೆಯ ಮೇಲೆ ಕೆಲವೊಂದು ಹೂವುಗಳು ಮೂಡಿಬರುವಂತೆ ಅವು ಬಂದುವು. ಸರ್ಕಾರ ಯುದ್ಧದಲ್ಲಿ ಮಡಿದ ಯೋಧರ ವಿಧವೆಯರಿಗೆ ನೆರವು ನೀಡಲು ಬಯಸುತ್ತದೆ. ಅದಕ್ಕಾಗಿ ಅವರಿಗೆ ಮನೆಕಟ್ಟಿಕೊಳ್ಳಲು ಜಮೀನು ಕೊಡುತ್ತದೆ. ಅದರ ಜೊತೆಗೆ ಉದ್ಯೋಗವನ್ನೂ ನೀಡುತ್ತದೆ ಎಂದು ಅದರಲ್ಲಿ ಬರೆದಿತ್ತು. ಉದ್ಯೋಗ ನೀಡುವ ಸಂಬಂಧದಲ್ಲಿ ಸರ್ಕಾರವು ಅವರ ಇಚ್ಛೆಯನ್ನು ಕೇಳಿತ್ತು– ಸಣ್ಣ ಕೈಗಾರಿಕೆ ನಡೆಸುವುದಿದ್ದರೆ ಬೇಕಾದರೆ ಹಣ ತೆಗೆದುಕೊಳ್ಳಬಹುದು. ಅದು ಬೇಡ ಎಂದರೆ ಸೈನಿಕ ಶಾಲೆಗಳಲ್ಲಿ ನೌಕರಿ ಪಡೆದುಕೊಳ್ಳಬಹುದು–ಎಂದು

ಆದರೆ ಚಟ್ಟದ ಮೇಲಿನ ಹೂಗಳಂತಿದ್ದ, ಸರ್ಕಾರಿ ಮುದ್ರೆಗಳನ್ನು ಒತ್ತಿಸಿಕೊಂಡ ಈ ಪತ್ರಗಳನ್ನು ಮೀನಾ ಕೈಗೆ ತೆಗೆದುಕೊಂಡು ಹೊಸಕಿ ಹಾಕಿದಳು. ಅವಳ ಆಂತರ್ಯದ ಒಂದು ಭಾಗ ಎಷ್ಟರಮಟ್ಟಿಗೆ ಸತ್ತುಹೋಗಿತ್ತೆಂದರೆ ಈಗ ಅದಕ್ಕೆ ಯಾವುದೇ ಹೂವಿನ ಸುವಾಸನೆ ತಟ್ಟುತ್ತಿರಲಿಲ್ಲ. ಅವಳು ಇಡೀದಿನ, ಹಗಲು ರಾತ್ರಿಯೆನ್ನದೆ ಮಂಚದ ಮೇಲೆ ಒಂದು ಶವದಂತೆ ಬಿದ್ದಿರುತ್ತಿದ್ದಳು.

ಮೀನಾಳ ಸೋದರ ನಾಡಿನಿಂದ ದೂರ ಇದ್ದ. ಹೀಗಾಗಿ ನಾಲ್ಕು ದಿನಕ್ಕಾದರೂ ಸರಿ ಬಂದು ಹೋಗಲು ಆಗುತ್ತಿರಲಿಲ್ಲ. ಆದರೆ ಅವಳ ಅಕ್ಕನ ಮಗ ಅವಿನಾಶ್ ನಗರದ ಹಾಸ್ಟೆಲ್‌ನಿಂದ ಮನೆಗೆ ಬಂದು ಬಿಟ್ಟ. ಅವಿನಾಶ್ ಜೀವನದಲ್ಲಿ ತಾಯಿಯ ಮುಖ ನೋಡಿರಲಿಲ್ಲ. ಮತ್ತು ಹುಟ್ಟಿದಾಗಿನಿಂದ ತನ್ನೊಂದಿಗೆ ಆಟ ಆಡುವವರನ್ನು ಯಾರನ್ನೂ ಕಂಡಿರಲಿಲ್ಲ. ಆದರೆ ಅವರೆಲ್ಲರ ಜಾಗದಲ್ಲಿ ಕೇವಲ ಮೀನಾಳನ್ನು ಮಾತ್ರ ಕಂಡಿದ್ದ. ಅವನು ಮೀನಾಳ ಬಳಿಗೆ ಓಡಿ ಬಂದಾಗ, ಮೀನಾ ಅವನನ್ನು ತಬ್ಬಿಕೊಂಡು ಮೊದಲ ಬಾರಿಗೆ – ಅದುವರೆಗೆ ತಡೆದಿದ್ದ ಅಳುವನ್ನು ಅತ್ತಳು.

ಬಹುಶಃ ಅವನನ್ನು ತಬ್ಬಿಕೊಂಡು ಅಲ್ಲ, ಅವನಿಗೆ ತೆಕ್ಕೆ ಬಿದ್ದು.

ಮೀನಾ ತನ್ನ ತೊಡೆಯ ಮೇಲಿಟ್ಟುಕೊಂಡು ಸಾಕಿ ಬೆಳೆಸಿ ದೊಡ್ಡವನನ್ನಾಗಿ ಮಾಡಿದ್ದ ಅವಿನಾಶ್ ಈಗ್ಗೆ ಮೂರು ವರ್ಷಗಳ ಹಿಂದೆ ಹುಡುಗನ ಹಾಗಿದ್ದ. ಈಗ ನೋಡಿದರೆ ಮೀನಾಳಿಗಿಂತಲೂ ಸರಿಯಾಗಿ ನಾಲ್ಕು ಅಂಗುಲ ಎತ್ತರಕ್ಕೆ ಬೆಳೆದು ನಿಂತ ಗಂಡು!

ಊಟ ಬಡಿಸುವುದಕ್ಕೆಂದು ಬರುತ್ತಿದ್ದ ಮೀನಾಳ ತಾಯಿ ಬರಿಗೈಲಿ ವಾಪಾಸಾಗು ತ್ತಿದ್ದಳು. ಈಗ ಅವಿನಾಶ್ ಕೈಯಲ್ಲಿ ಊಟದ ತಟ್ಟೆ ಹಿಡಿದುಕೊಂಡು ಮೀನಾಳ ಹತ್ತಿರ

ಬಂದು "ಏಳು ಮೀನೂ! ಊಟ ಮಾಡೋಣ!" ಎಂದಾಗ ಮೀನಾಳ ಹಸಿವು ಜಾಗೃತ ಗೊಂಡಿತು. ಅವಳು ಮೊದಲ ಸಲಕ್ಕೆ ಅವಿನಾಶನ ಜೊತೆ ಮನಃಪೂರ್ತಿಯಾಗಿ ಊಟ ಮಾಡಿದಳು.

ಮೀನಾಳ ಹಸಿವನ್ನು ಜಾಗೃತಗೊಳಿಸಿದ್ದು ರೊಟ್ಟಿಯ ವಾಸನೆ ಅಲ್ಲ. ಅವಿನಾಶನ ಬಾಯಿಂದ ಹೊರಟ "ಮೀನೂ" ಎಂಬ ಶಬ್ದದಿಂದ ಹೊಮ್ಮಿದ ವಾಸನೆ.

ಮೀನಾ ಇದುವರೆಗೆ ಬದುಕಿನಲ್ಲಿ ಎಲ್ಲರಿಗೂ 'ಮೀನಾ' ಆಗಿದ್ದಳು, ಅಥವಾ 'ಮೀನಾಜಿ' ಆಗಿದ್ದಳು. ಆದರೆ ಅವಿನಾಶನಿಗೆ ಮೊದಲಿನಿಂದಲೂ 'ಮೀನೂ' ಆಗಿದ್ದಳು. ಅವನನ್ನು ಬಿಟ್ಟರೆ ಅವಳ 'ಮುದ್ದಿನ ವೀರ ಸಿಪಾಯಿ'ಗೆ ಜೀವನದಲ್ಲಿ 'ಮೀನೂ' ಆಗಿದ್ದಳು.

ಯಾರು ಮೀನಾಳನ್ನು 'ಮೀನಾ' ಎಂದು ಕರೆಯುತ್ತಿದ್ದರೋ, ಅವರು ಅವಳನ್ನು ಯಾವಾಗಲೂ ಅವಳ ವಯಸ್ಸಿಗಿಂತ ಚಿಕ್ಕವಳನ್ನಾಗಿ ಕಾಣುತ್ತಿದ್ದರು. 'ಮೀನಾಜೀ' ಎಂದು ಕರೆಯುತ್ತಿದ್ದವರು. ಅವಳನ್ನು ಅವಳ ವಯಸ್ಸಿಗಿಂತ ದೊಡ್ಡವಳನ್ನಾಗಿಸಿ ಬಿಡುತ್ತಿದ್ದರು.

ಅವಳಿಗಿಂತ ಹತ್ತು ವರ್ಷದಷ್ಟು ಚಿಕ್ಕವನಾಗಿದ್ದರೂ ತನ್ನ ತೊದಲು ಮಾತಿನಲ್ಲಿ ಅವಳನ್ನು 'ಮೀನೂ' ಎಂದು ಕರೆದಾಗ ಅವಿನಾಶ್ ಅವಳನ್ನು ತನ್ನ ಓರಗೆಯ ಸಂಗಾತಿ ಯಾಗಿಯೇ ಕಂಡಿದ್ದ. ಸ್ವಲ್ಪ ದೊಡ್ಡವನಾಗಿ ಸ್ಕೂಲಿನಲ್ಲಿ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳುವ ಹೊತ್ತಿನಲ್ಲಿ 'ಮೀನೂ' ಎಂದು ಕರೆದಾಗಲೂ ಅವಳ ಓರಗೆಯ ಸಂಗಾತಿಯಾಗಿಯೇ ಉಳಿದವನು ಈ ಅವಿನಾಶನೊಬ್ಬನೇ.

ಮೀನಾಳ ಮದುವೆ ಆದಾಗ, ತನ್ನ ಮುದ್ದಿನ ಬಹದ್ದೂರ ಸಿಪಾಯಿಗೆ ಅವಳು ಹೇಳಿದ್ದ ಒಂದೇ ಮಾತೆಂದರೆ ಅವನು ತನ್ನನ್ನು 'ಮೀನೂ' ಎಂದು ಕರೆಯಬೇಕೆಂದು. ಅವನು ತನ್ನ ಬದುಕಿನ ಕೊನೇ ಕ್ಷಣದವರೆಗೂ ಅವಳನ್ನು 'ಮೀನೂ' ಎಂದೇ ಕರೆಯುತ್ತಿದ್ದ.

ಅವನ ಸಾವಿನೊಂದಿಗೆ 'ಮೀನೂ' ಅಂತೂ ಸತ್ತಿದ್ದಳು. ನಡುಗುವ ಕೈಗಳಿಂದ ತಲೆಯನ್ನು ನೇವರಿಸುತ್ತಿದ್ದ ಅವಳ ತಂದೆ ತಾಯಿಗಳ ಮಗಳು 'ಮೀನಾ' ಈಗಲೂ ಜೀವಂತವಾಗಿದ್ದಳು. ಅವಳನ್ನು ಬಲ್ಲ ಪರಿಚಿತರ ಹಾಗೂ ಸಹಕಾರ, ಸಹಾಯ ನೀಡುತ್ತಿದ್ದ ಸಮಾಜದ ಪಾಲಿನ 'ಮೀನಾಜಿ' ಯೂ ಜೀವಂತವಾಗಿದ್ದಳು. ಆದರೆ. 'ಮೀನೂ'..... ಎಂದು ಕರೆಯುತ್ತಿದ್ದ ಸಂಗಾತಿಯ ಸಾವಿನಿಂದಾಗಿ ಮೀನೂ ಸತ್ತುಹೋಗಿದ್ದಳು. ಅವಿನಾಶನು ಅವಳನ್ನು 'ಮೀನೂ' ಎಂದು ಕರೆದಾಗ, ಅವಳು ಒಮ್ಮೆ ಜೋರಾಗಿ ಚೀರಿ ಅವನ ತುಟಿಗಳ ಮೇಲೆ ತನ್ನ ಅಂಗೈ ಇಟ್ಟಳು. ಆದರೆ ತಕ್ಷಣ ತುಟಿಗಳ ಮೇಲಿಂದ ಕೈ ತೆಗೆದಳು–ತನ್ನ ಕಿವಿಗಳಿಂದ ಆ ಶಬ್ದವನ್ನು ಇನ್ನೊಮ್ಮೆ ಕೇಳಲು; ಬಹುಶಃ ಕೊನೆಯುಸಿರೆಂಬಂತೆ. ಅವಿನಾಶನಿಗೆ ಇನ್ನೇನೂ ಹೇಳಲಿಲ್ಲ. ಶೂನ್ಯದಲ್ಲಿ ನೇತಾಡುತ್ತಿದ್ದ ಆ ಶಬ್ದವನ್ನು ನೋಡುತ್ತಲೇ ಇದ್ದಳು......

ಕೆಲವೊಂದು ಸಂಗತಿಗಳನ್ನು ಹೆಂಗಸು ಸಹಜವಾಗಿಯೇ ತಿಳಿದುಕೊಳ್ಳುತ್ತಾಳೆ. 'ಮೀನಾ'ಳ ಬದುಕಿಗೂ ಈ ಶಬ್ದಕ್ಕೂ ಈಗ ಯಾವ ಸಂಬಂಧವೂ ಉಳಿದಿರಲಿಲ್ಲ ಎಂಬುದೂ ಅಂಥದೇ ಒಂದು ಸಂಗತಿ. ಅಲ್ಲದೇ ಈಗ ಈ ಶಬ್ದವನ್ನು ಅವಳು ಎರಡೂ ಕೈಗಳಿಂದ ಎಂದಿಗೂ ಸ್ಪರ್ಶಿಸಲಾರಳು. ಆದರೆ ದೂರದಿಂದಲೇ ತೆರೆದ ಕಣ್ಣುಗಳಿಂದ ದಿನವೂ ಇದನ್ನು ನೋಡತೊಡಗಿದಳು.

ಅವಿನಾಶ್ ಅವಳ ಮುಂದೆ ಊಟದ ತಟ್ಟೆ ತಂದಿಟ್ಟರೆ ತಿನ್ನುತ್ತಿದ್ದಳು. ಕೇರಮ್ ಬೋರ್ಡ್ ತಂದು ಮುಂದಿಟ್ಟರೆ ಆಡುತ್ತಿದ್ದಳು. ಮನೆಯ ಹಿಂದಿನ ಗೋಡೆಗೆ ಅಂಟಿ ಕೊಂಡಿದ್ದ ಉದ್ಯಾನವನಕ್ಕೆ ಅವಳನ್ನು ಕರೆದೊಯ್ಯುತ್ತಿದ್ದ. ಮರಗಳ ನೆರಳಿನಲ್ಲಿ ನೆರಳಿನ ಹಾಗೆ ತಿರುಗಾಡುತ್ತಿದ್ದಳು.

ಬೆಳಕಿನ ಮೋಡಿ ಒಂದಾದರೆ ಕತ್ತಲೆಯ ಮೋಡಿ ಇನ್ನೊಂದು. ಅವೆರಡೂ ಮೀನಾಳ ಕೊರಳನ್ನು ಅಪ್ಪಿ ಹಿಡಿದುವು.

ಮೀನಾಳಿಗಿಂತ ಸರಿಯಾಗಿ ನಾಲ್ಕು ಅಂಗುಲ ಎತ್ತರಕ್ಕೆ ಬೆಳೆದು ನಿಂತಿದ್ದ ಅವಿನಾಶ್ ಕತ್ತಲೆಯ ಮೋಡಿಯಲ್ಲಿ ಅವಳಿಗೆ ತನ್ನ 'ಚೆಲುವ ಯೋಧನ' ಹಾಗೆ ಕಾಣಿಸುತ್ತಿದ್ದರೆ, ಬೆಳಕಿನ ಮೋಡಿಯಲ್ಲಿ ಅದೇ ಅವಿನಾಶ, ಚಿಕ್ಕಮ್ಮನ ಹಾಗೆ ಮಡಿಲಿನಲ್ಲಿಟ್ಟುಕೊಂಡು ತಾನು ಉಣಬಡಿಸುತ್ತಿದ್ದ ಎರಡೂವರೆ ಮೂರು ತಿಂಗಳಿನ ಮಗುವಿನ ಹಾಗೆ ಕಾಣಿಸುತ್ತಿದ್ದ.

ಗಂಡು ಸತ್ತನೆಂದರೆ ಹೆಣ್ಣಿನ ಎಲ್ಲ ಅಂಗಗಳೂ ಜೀವಂತವಾಗಿದ್ದರೂ ಅವಳ ಗರ್ಭವಂತೂ ಖಂಡಿತ ಸಾಯುತ್ತದೆ. ಮೀನಾಳಿಗಂತೂ ತನ್ನ ಸತ್ತ ಗರ್ಭದ ದುರ್ನಾತ ಮೂಗಿಗೆ ಅಡರಿದಂತೆನಿಸುತ್ತಿತ್ತು.

ಒಂದು ವೇಳೆ ತನ್ನ 'ಚೆಲುವ ಯೋಧನನ್ನು' ಗರ್ಭದಲ್ಲಿ ಧರಿಸಿದ್ದಿದ್ದರೆ ಅವನ ಒಂದು ಅಂಶ ಈ ಪ್ರಪಂಚದಲ್ಲಿ ಬದುಕಿರುತ್ತಿತ್ತು. ಎಂಬ ಆಶೆ ಮೊಳೆದೋರಿತು. ಕಳೆದುಹೋದ ಕ್ಷಣ ಮೀನಾಳ ಶರೀರದಲ್ಲಿ ಗಾನ ಮೊಳಗಿಸತೊಡಗಿತು.

ಬೆಳಕು ಮತ್ತು ಕತ್ತಲೆಗಳೆರಡೂ ಒಂದು ಮತ್ತೊಂದನ್ನು ಸಂಧಿಸುವ ಸಮಯವೊಂದಿತ್ತು. ಮೀನಾ ತನ್ನ ಕೊಠಡಿಯಲ್ಲಿ ಮಂಚದ ಮೇಲೆ ಮಲಗಿಕೊಂಡು ಅವಿನಾಶನ ಮುಖದ ಕಡೆ ಒಂದೇ ಸಮನೆ ನೋಡತೊಡಗಿದಳು

ಆ ಗಳಿಗೆಯಲ್ಲಿ ಅವಿನಾಶನ ಮುಖದ ಚೆಹರೆಯಲ್ಲಿ ಎರಡು ಚೆಹರೆಗಳು ಬೆರೆತಿದ್ದವು. ಒಂದು ಮೀನಾಳ ಪತಿಯ ಚೆಹರೆಯಾದರೆ ಇನ್ನೊಂದು ಆ ಪತಿಯಿಂದ ಹುಟ್ಟಬಹುದಾದ ಮಗುವಿನದು. ಒಬ್ಬ ಈ ಜಗತ್ತಿನಲ್ಲಿ ಈಗ ಬದುಕುಳಿದಿಲ್ಲ ಮತ್ತು ಇನ್ನೊಬ್ಬ ಈ ಜಗತ್ತಿಗೆ ಬರುವಂತಿಲ್ಲ ಎಂಬುದು ಮೀನಾಳಿಗೆ ಗೊತ್ತಿತ್ತು. ಆದರೆ ಈ ಎರಡು ಚೆಹರೆಗಳು ತನ್ನ ಕಣ್ಮುಂದೆ ನೆರಳಿನ ಹಾಗೆ ಏಕೆ ಸುಳಿದಾಡುತ್ತಿವೆ ಎಂದು ಮೀನಾ ವಿಸ್ಮಯದಿಂದ ನೋಡುತ್ತಿದ್ದಳು.

ಒಂದು ಜಾಗೃತಾವಸ್ಥೆ: ಎದುರಿನಲ್ಲಿ ಯಾವ ನೆರಳೂ ಇಲ್ಲ. ಒಂದು ಏರುಂಜವ್ವನದ ಈಗಿನ ಅವಿನಾಶನ ಚೆಹರೆಯಾದರೆ ಇನ್ನೊಂದು ಮುಗ್ಧಬಾಲಕ ಅವಿನಾಶನ ನೆನಪು.... ಅದರೊಂದಿಗೆ ಮೀನಾಳ ಹದಿನೆಂಟು ವರ್ಷಗಳ ನಂಟು.........

ಇನ್ನೊಂದು ಅಚೇತನಾವಸ್ಥೆ ಅಥವಾ ಸುಪ್ತಾವಸ್ಥೆ–ಎದುರುಗಡೆ ಏನು ಕಾಣುತ್ತಾ ಇದೆ ಅದು ಕೇವಲ ಒಬ್ಬ ಗಂಡು ಮತ್ತು ತಾನು ಕೇವಲ ಒಬ್ಬ ಹೆಣ್ಣು; ಆ ಹೆಣ್ಣಿನ ಗರ್ಭವಾದರೋ ಗಂಡನ್ನು, ಅವನ ಶಾಶ್ವತ ಅಸ್ತಿತ್ವವನ್ನು ಚೀರಿ ಬೇಡುತ್ತಿದೆ.

ಬೆಳಕು ಮತ್ತು ಕತ್ತಲೆಗಳು ಒಂದರೊಡನೊಂದು ಮಿಳಿತವಾಗುತ್ತಿದ್ದಂತೆ ಮೀನಾಳ ಮನಸ್ಸಿನ ಎರಡೂ ಅವಸ್ಥೆಗಳೂ ಒಂದು ಇನ್ನೊಂದರಲ್ಲಿ ಸೇರಿಹೋದುವು. ಮತ್ತು

ಅವಳ ಅಂದರೆ ಒಂದು ಹೆಣ್ಣಿನ ಎರಡೂ ಬಾಹುಗಳು ಮುಂದಕ್ಕೆ ಚಾಚಿ ಒಬ್ಬ ಗಂಡಿನ ಎರಡೂ ಬಾಹುಗಳನ್ನು ಹಿಡಿದುಕೊಂಡು ಬಿಟ್ಟಾಗ ಮಾಂಸಕ್ಕೆ ಮಾಂಸದ ತೀವ್ರವಾಸನೆ ತಾಕಿತು.

ಒಂದು ಹೆಣ್ಣಿನ ಬಟ್ಟೆಗಳು ಮತ್ತು ಒಂದು ಗಂಡಿನ ಬಟ್ಟೆಗಳು ಹಾರಾಡುತ್ತ ಮಂಚದ ಕೆಳಗೆ ಬಿದ್ದು ಬಿಟ್ಟುವು. ಮತ್ತು ಮಂಚದ ಕಾಲುಗಳ ಹತ್ತಿರ ತಲೆ ತಗ್ಗಿಸಿ ಗುಡ್ಡೆಯ ಹಾಗೆ ಕೂತು ಬಿಟ್ಟುವು.

ಇದು ಆತ್ಮವು ಆತ್ಮವನ್ನು ಸ್ಪರ್ಶಿಸಿದಂಥ ಶಾಂತ ಕ್ಷಣವಲ್ಲ; ಬದಲಿಗೆ ಒಂದು ಹೆಣ್ಣು ತನ್ನ ಮನಸ್ಸಿನ ಸಂಸ್ಕಾರಗಳ ಮೇಲೆ ಹೆಜ್ಜೆ ಇಟ್ಟು ಅಲಭ್ಯವಾದ್ದನ್ನು ಹುಡುಕುತ್ತಿರುವಂಥ ಹಾಗೂ ಒಂದು ಗಂಡು ಬಹಳ ಗಾಬರಿಗೊಂಡು ತನ್ನ ವಯಸ್ಸಿಗಿಂತಲೂ ಬಹಳ ದೊಡ್ಡವನಾಗಿಬಿಟ್ಟಂಥ ಪ್ರಳಯದ ಒಂದು ಕ್ಷಣ.

ಪ್ರಳಯದ ಆ ಕ್ಷಣ ಕಳೆದುಹೋಯಿತು. ಮೀನಾ ಒಂದು ಹೊಸ ಸಾವನ್ನು ಸತ್ತಳು... ಮೀನಾ ಅಷ್ಟೇ ಅಲ್ಲ 'ಮೀನೂ' ಕೂಡಾ......

ಇಡೀ ರಾತ್ರಿ ಮಂಚದ ಮೇಲೆ ಇಬ್ಬರು ಹೆಣ್ಣುಗಳು ಇದ್ದಂತೆ. ಒಬ್ಬರು ಇನ್ನೊಬ್ಬರ ಮೇಲೆ ಆರೋಪ ಮಾಡುತ್ತ ಒಬ್ಬರು ಇನ್ನೊಬ್ಬರನ್ನು ಕೊಂದು ಹಾಕಿದರು.

ಆಮೇಲೆ ಅಂದು ಬೆಳಿಗ್ಗೆ ಕೊಠಡಿಯಿಂದ ಹೊರಹೊರಟ ಹೆಣ್ಣು; ಅವಳು ಒಬ್ಬ ಮೂರನೇ ಹೆಣ್ಣಾಗಿದ್ದಳು. ಅಸ್ತವ್ಯಸ್ತವಾಗಿ ಚೆದುರಿಬಿದ್ದಿದ್ದ ಸರ್ಕಾರಿ ಕಾಗದಪತ್ರಗಳ ಮೇಲೆ ಲಗುಬಗೆಯಿಂದ ಸಹಿ ಹಾಕಿದಳು. ಮತ್ತು ತಾನು ಯಾವುದಾದರೂ ದೂರದ ಗುಡ್ಡಗಾಡು ಪ್ರದೇಶದ ಸ್ಕೂಲ್‌ನಲ್ಲಿ ಕೆಲಸಮಾಡಲು ಇಚ್ಛಿಸುತ್ತಿರುವುದಾಗಿ ಬರೆದು ಹಾಕಿದಳು. ಕೆಲವು ದಿನಗಳ ನಂತರ, ಒಂದು ಘಟನೆಯ ಕಾರಣವಾಗಿ ತೆರೆಯಲ್ಪಟ್ಟಿದ್ದ ಆ ಮನೆಯ ಒಂದು ಬಾಗಿಲನ್ನು ಇನ್ನೊಂದು ಘಟನೆಯು ಮತ್ತೆ ಮುಚ್ಚಿಬಿಟ್ಟಿತು. ಮೀನಾ ದೂರದ ಗುಡ್ಡಗಾಡು ಪ್ರದೇಶದ ಸ್ಕೂಲ್‌ಗೆ ಕೆಲಸಕ್ಕೆ ಹೋಗಿಬಿಟ್ಟಳು.–ಬಹುಶಃ ಶಾಶ್ವತವಾಗಿ.

ನದಿ ಹರಿಯುತ್ತಿತ್ತು ಎಂದಿನಂತೆ

ಒಂದು ಘಟನೆ. ಅದು ನದಿಯ ನೀರಿನಲ್ಲಿ ತೇಲಿಕೊಂಡು ಆ ಯುಗದ ದಡದ ಬಳಿ ಬಂದು ನಿಂತಿತು. ಅದಾದರೋ ವೇದವ್ಯಾಸರು ತಪಸ್ಸು ಮಾಡುತ್ತಿದ್ದ ದಟ್ಟ ಅರಣ್ಯ ಪ್ರದೇಶ...

ವೇದವ್ಯಾಸರ ಸಮಾಧಿಯ ಏಕಾಗ್ರತೆಗೆ ಭಂಗವಾದಾಗ ಎದುರಿನಲ್ಲಿ ಮ್ಲಾನವದನಳಾದ ದಿವ್ಯ ಸುಂದರಿಯ ರೂಪದಲ್ಲಿ ಸತ್ಯವತಿ ನಿಂತಿದ್ದಳು. ಮರದ ಎಲೆಗಳ ಹಾಗೆ ಬಾಗಿ ನಮಸ್ಕರಿಸಿ 'ನಿತ್ಯ ಸುಂದರಿಯಾದ ನನ್ನ ತಾಯೇ ಇಂದೇಕೆ ಹೀಗೆ ಮ್ಲಾನವದನಳಾಗಿದ್ದೀ" ಎಂದು ಕೇಳಿದರು.

ತಾಯಿ ಪ್ರೇಮಪೂರ್ವಕವಾಗಿ ಋಷಿಪುತ್ರನನ್ನು ತಬ್ಬಿಕೊಂಡಳು. "ನೀನು ಋಷಿಕುಲಕ್ಕೆ ಸೇರಿದವನು. ನಿನಗೆ ಪ್ರೀತಿಯ ವೇದನೆ ಏನು ಎಂಬುದು ತಿಳಿದಿಲ್ಲ. ರಾಜ್ಯಾಡಳಿತದ ನೋವೇನೆಂದು ನಾನು ಮಹಾರಾಜ ಶಂತನುವಿನಿಂದ ತಿಳಿದುಕೊಂಡೆ. ಅವನ ರಾಜ್ಯದ ರಕ್ಷಣೆಯ ಸಲುವಾಗಿ ಯಾವ ಗರ್ಭದಿಂದ ನಿನ್ನನ್ನು ಹೆತ್ತೆನೋ, ಅದೇ ಗರ್ಭದಿಂದ ಮಹಾರಾಜ ಶಂತನುವಿನ ಇಬ್ಬರು ಮಕ್ಕಳನ್ನು ಹೆತ್ತೆ. ಆದರೆ ನನ್ನ ಒಬ್ಬ ರಾಜಪುತ್ರ ಯುದ್ಧದಲ್ಲಿ ಅಸುನೀಗಿದ. ಇನ್ನೊಬ್ಬ, ಇಬ್ಬರು ರಾಣಿಯರನ್ನು ದುಃಖಕ್ಕೀಡು ಮಾಡಿ ಕ್ಷಯರೋಗದಿಂದ ತೀರಿಕೊಂಡ' ಎಂದಳು.

ಮರದ ಎಲೆಗಳೆಲ್ಲ ಬಾಡಿ ಹೋಗಿವೆಯೇನೋ ಎಂಬಂತೆ ವೇದವ್ಯಾಸರ ತೇಜಃಪುಂಜ ತಪಸ್ವೀ ವದನದ ಕಡೆ ನೋಡತೊಡಗಿದವು.

ಮಹಾರಾಣಿ ಸತ್ಯವತಿಯ ಮನಸ್ಸು ಗಂಗೆಯ ಪರಿಶುದ್ಧ ಲಹರಿಗಳ ಹಾಗೆ ಹರಿಯ ತೊಡಗಿತು. "ಮಹರ್ಷಿ ಪರಾಶರರು ಗಂಗಾಜಲದ ಹಾಗೆ ನನ್ನನ್ನು ತಮ್ಮ ದೇಹದೊಂದಿಗೆ ಆಲಿಂಗಿಸಿಕೊಂಡಿದ್ದರು. ನೀನು ಅದೇ ಗಂಗಾ ಸಲಿಲದ ಮುತ್ತು ನೆಲ ಮತ್ತು ನೀರಿನಲ್ಲಿ ನೀನು ಕ್ರೀಡೆಯಾಡುತ್ತೀ. ಕಾಡು, ಕಣಿವೆ, ಎಲ್ಲವೂ ನಿನ್ನ ಅಧೀನ. ಆದರೆ ಕಿರೀಟದಲ್ಲಿ ಹುದ್ದಿರುವ ಮುತ್ತಿನ ವೇದನೆ ನಿನಗೆ ತಿಳಿದಿಲ್ಲ" ಎಂದಳು.

ಹಸಿರು ವೃಕ್ಷದ ಹಾಗೆ ನಳನಳಿಸುತ್ತಿರುವ ತುಟಿಯಲ್ಲಿ ಮುಗುಳ್ನಗುವನ್ನು ಅರಳಿಸುತ್ತ ವೇದವ್ಯಾಸರು ಹೇಳಿದರು– "ನಿಜ, ನನಗೆ ರಾಜ್ಯದ ನೋವು ಗೊತ್ತಿಲ್ಲ. ಆದರೆ ತಾಯ ನೋವು ತಿಳಿಯುತ್ತದೆ".

ಸತ್ಯವತಿ ಮರಕ್ಕೆ ಜೋತುಬಿದ್ದ ಬಳ್ಳಿಯಂತೆ ತೂಗಾಡುತ್ತ ಹೇಳಿದಳು. 'ಕಿರೀಟದ ಮುತ್ತಿಗೆ ಸಿಂಹಾಸನದ ಉತ್ತರಾಧಿಕಾರಿ ಬೇಕಾಗಿದೆ. ನನ್ನಿಬ್ಬರು ಸೊಸೆಯಂದಿರೂ ಈಗ ವಿಧವೆಯರಾಗಿದ್ದಾರೆ. ಇಂದು ನಾನು ಅವರಿಗಾಗಿ ನಿನ್ನ ಬಳಿ ಪುತ್ರದಾನವನ್ನು ಕರುಣಿಸೆಂದು ಕೇಳಲು ಬಂದಿದ್ದೇನೆ."

ವೇದವ್ಯಾಸರು ತಲೆಯ ಮೇಲೆ ಹಬ್ಬಿ ನಿಂತಿದ್ದ ವೃಕ್ಷದತ್ತ ನೋಡಿದರು. ಇಡೀ ವೃಕ್ಷ ಅರಳಿ ನೆಲದೆದೆಯ ಮೇಲೆ ಚದುರಿ ಬಿದ್ದಿರುವ ತನ್ನ ಬೀಜಗಳತ್ತ ನೋಡುತ್ತಿರುವ ಹಾಗೆ ಕಂಡಿತು. ಋಷಿಯ ತುಟಿಗಳು ನಕ್ಕು ಹೇಳಿದವು– "ಈ ತಾಯಿಯ ಹಾಗೂ ಭೂ ತಾಯಿಯ ಆಜ್ಞೆ ನೆರವೇರುವುದು." ಮತ್ತು ವೇದವ್ಯಾಸರು ತಾಯಿಗೆ ಕೊಟ್ಟ ಮಾತನ್ನು ಈಡೇರಿಸಿದರು. ಅಂಬಿಕೆ, ಅಂಬಾಲಿಕೆಯರಿಬ್ಬರಿಗೂ ಒಬ್ಬೊಬ್ಬ ಪುತ್ರನನ್ನು ನೀಡಿದರು.

ನದಿಯ ನೀರು ಮಕ್ಕಳ ಕಿಲಕಿಲ ನಗೆಯಂತೆ ಮತ್ತೆ ಹಾಗೆಯೇ ನಕ್ಕು ಹರಿಯ ತೊಡಗಿದಾಗ ಅದೇ ಸಂಗತಿ ಯುಗಯುಗಗಳ ಮೂಲಕ ಸಾಗಿ, ಕಲಿಯುಗದ ದಡದ ಬಳಿ ಬಂದು ನಿಂತಿತು. ಎಲ್ಲಿಗೆ ಎಂದರೆ ಬಲದೇವನ ಸಾಧಾರಣವಾದ ಮನೆಯ ಹತ್ತಿರ, ಅಲ್ಲಾದರೋ ಬಲದೇವನ ಮೇಜಿನ ಮೇಲೆ ಮಹಾಭಾರತದ ಪರ್ವಗಳಷ್ಟೇ ಅಲ್ಲ, ಕಾಮು, ಕಾಫ್ಕಾ, ಪಾಸ್ಟರ್‌ನಾಕ್ ಎಲ್ಲರೂ ಎದ್ದರು.

ಅವನ ಎದುರಿನಲ್ಲಿ ಅವನ ಗೆಳೆಯ ಕಾಶೀನಾಥ ಮರದ ಒಂದು ಹರಿದ ಎಲೆಯಂತೆ ನಿಂತಿದ್ದ. ಹೇಳಿದ – "ದೇವರು ಕೊಡಲು ಸಾಧ್ಯವಾಗದಂಥ', 'ಯಾರೇ ವೈದ್ಯರ ಔಷಧಿ ಕೊಡಲು ಸಾಧ್ಯವಾಗದಂಥ ದಾನವನ್ನು, ಒಂದು ಗಂಡುಮಗುವಿನ ದಾನವನ್ನು ಬೇಡಲು ನಿನ್ನ ಬಳಿ ಬಂದಿದ್ದೇನೆ."

ತಲೆಯ ಮೇಲೆ ಯಾವ ವೃಕ್ಷವೂ ಇರಲಿಲ್ಲ. ಆದರೆ ಬಲದೇವನ ಕಿವಿಗಳಲ್ಲಿ ವೃಕ್ಷದ ಎಲೆಗಳ ಸುಂಯ್ ಸುಂಯ್ ಶಬ್ದ ತುಂಬಿಕೊಂಡಿತು.

ಕಾಶೀನಾಥ ಹೇಳತೊಡಗಿದ– "ನನ್ನ ಹೆಂಡತಿಯ ಅರೋಗ್ಯಪೂರ್ಣ ದೇಹಕ್ಕೆ ಒಬ್ಬ ರೋಗಿಷ್ಠ ಗಂಡಿನ ಶಾಪ ತಗುಲಿದೆ ಗೆಳೆಯಾ. ಈ ಶಾಪವನ್ನು ಒಂದು ಗಳಿಗೆಯಷ್ಟು ಕಾಲ ತೊಡೆದುಹಾಕು."

ಬಲದೇವನ ಇಡೀ ದೇಹ ವೃಕ್ಷದ ಬೇರಿನ ಹಾಗೆ ಜಡವಾಗಿಬಿಟ್ಟಿತು. ಕಾಶೀನಾಥ ಅಳುತ್ತಿರುವ ಒಣಗಿದ ಎಲೆಯ ಹಾಗೆ ಹಾರಿ ಅವನ ಪಾದದ ಮೇಲೆ ಬಿದ್ದ. "ಈ ರಹಸ್ಯ ಕೇವಲ ನನಗೆ. ನಿನಗೆ ಮತ್ತು ಅವಳಿಗೆ ಮಾತ್ರ ಗೊತ್ತಿರುತ್ತೆ. ಬೇರೆ ಇನ್ಯಾರಿಗೂ ಇಲ್ಲ... ಇನ್ಯಾರಿಗೂ ಇಲ್ಲ" ಮರದ ಬೇರಿನ ಹಾಗೆ ಜಡವಾಗಿಬಿಟ್ಟಿದ್ದ ಬಲದೇವನ ದೇಹದಲ್ಲಿ ಒಂದು ನಿಶ್ಚಯ ಮೂಡಿತ್ತು..... "ಬಹುಶಃ ಇದು ಇತಿಹಾಸದ ಆದೇಶ.

"ನಾನು ಪ್ರಾಯಶಃ ಒಬ್ಬ ವೇದವ್ಯಾಸ. ಒಬ್ಬ ಋಷಿ...."

ಮತ್ತೆ ಅದೇ ಯುಗ ಯುಗಗಳ ಹಿಂದಿನ ಘಟನೆ ಮರುಕಳಿಸಿತು. ಎಲೆಗಳೆಲ್ಲ ಉದುರಿ ಬೋಳಾದ ಮರದಲ್ಲಿ ಹೂಗಳ ಸಂತಾನ ಮತ್ತೆ ಮೊದಲಿಟ್ಟಿತ್ತು.

ಕಾಶೀನಾಥನ ಮನೆಯಲ್ಲಿ ಗಂಡು ಮಗುವಿನ ಜನನವಾಯಿತು. ನೆಂಟರಿಷ್ಟರಿಂದ ಅಭಿನಂದನೆಗಳ ಸುರಿಮಳೆಯಾಯಿತು. ಬಲದೇವ ತೊಟ್ಟಿಲಿನಲ್ಲಿ ಮಲಗಿದ್ದ ಮಗುವನ್ನು ಸಮೀಪದಿಂದ ನೋಡಿದಾಗ ಅದರ ತುಟಿಗಳು ವೇದವ್ಯಾಸರ ತುಟಿಗಳ ಹಾಗೆ ಮುಚ್ಚಿಕೊಂಡವು.

"ಇಲ್ಲ ಇಲ್ಲ ನಾನು ವೇದವ್ಯಾಸನಲ್ಲ" ತನ್ನದೇ ಚೀರು ದನಿಯಿಂದ ಬಲದೇವನ ನಿದ್ರಾಭಂಗವಾಯಿತು.

ಮಂಚದ ಪಕ್ಕದಲ್ಲಿದ್ದ ಟೀಪಾಯ್ ಮೇಲೆ ರಾತ್ರಿ ಇನ್ನೂ ಉಳಿಸಿದ್ದ ವಿಸ್ಕಿ ಅಲ್ಲೇ ಬಿದ್ದಿತ್ತು. ನಡುಗುವ ಕೈಗಳಿಂದ ಗ್ಲಾಸ್‌ಗೆ ವಿಸ್ಕಿ ಹಾಕಿಕೊಂಡು ಒಂದೆರಡುಸಲ ಗುಟುಕರಿಸಿದ. ಹುಚ್ಚು ಹಿಡಿದವನಂತೆ ಹೇಳತೊಡಗಿದ, "ನೀನು ದೇವಪುತ್ರನಾಗಿದ್ದೆ ವೇದವ್ಯಾಸ, ಮಾನವ ಪುತ್ರನಲ್ಲ...."

ಬಲದೇವನ ಕಲ್ಪನೆ ಅವನನ್ನು ಶತಮಾನಗಳ ಹಿಂದಕ್ಕೆ, ಒಂದು ಕಾಡಿಗೆ ಕೊಂಡೊಯ್ದಿತು. ಮತ್ತು ಆ ಕಾಡಿನಲ್ಲಿ ಅಳುವ ದನಿಯಿಂದ ಹೇಳಿದ. "ಋಷಿ ರಾಜ! ನಿನ್ನ ಬಳಿ ಸಮಾಧಿ, ಕೇವಲ ಸಮಾಧಿ ಇದೆ. ಆದರೆ ನನ್ನ ಬಳಿಯಾದರೋ ಕನಸುಗಳಿವೆ. ಅಸಂಖ್ಯಾತ ಕನಸುಗಳು..." ಬಲದೇವನ ಮಾತುಗಳು ಅವನ ಹೃದಯದಿಂದ ಒಂದೊಂದೇ ಹೊರಟು ಅಲ್ಲಿಯ ಮರಗಳಿಗೆ ಹೋಗಿ ತಾಗುತ್ತಿದ್ದವು. "ನೋಡು ಋಷಿಪುತ್ರ, ನನ್ನ ಕಡೆ ನೋಡು. ಇಲ್ಲಿ ನೋಡು; ನನ್ನ ಅಂಬಿಕಾ. ನಿನಗಂತೂ ಮರುದಿನವೇ ನಿನ್ನ ಅಂಬಿಕಾಳ ಗುರುತು ಕೂಡಾ ಇರಲಿಲ್ಲ. ಆದರೆ ನೋಡು ಇದು ನನ್ನ ನೆರಳಲ್ಲ. ಆದರೆ ನನ್ನ ಅಂಬಿಕಾ. ನಾನು ಎಲ್ಲಿಗೆ ಹೋದರೂ ನನ್ನ ಜೊತೆ ಬರುತ್ತಾಳೆ..."

ಮತ್ತೆ ಬಲದೇವನು ಜೋರಾಗಿ ನಕ್ಕು ಹೇಳಿದ – "ನೋಡು ಋಷಿಪುತ್ರ, ನಿನಗೆ ನೆರಳಾವುದೂ ಇರುವುದಿಲ್ಲ. ದೇವತೆಗಳಿಗೆ ನೆರಳಿರುವುದಿಲ್ಲ ಎಂದು ಜನ ಹೇಳುವುದು ನಿಜವೇ. ಆದರೆ ಮನುಷ್ಯನಿಗಂತೂ ನೆರಳಿನ ಶಾಪವಿದೆ... ನೋಡು ನನ್ನ ನೆರಳು ನನಗಿಂತಲೂ ದೊಡ್ಡದಿದೆ."

ಮತ್ತೆ ಬಲದೇವನ ದನಿ ಮಹಾಮೌನದೊಡನೆ ಹೋರಾಡಿ ಕೊನೆಗೆ ನಿಂತೇ ಹೋದಂತಾಯಿತು. ಹೇಳತೊಡಗಿದ– "ಸತ್ಯವತಿ ದನಿ ಎತ್ತರಿಸಿ ನುಡಿದಾಗ ನಿನ್ನ ಸಮಾಧಿ ಭಂಗವಾಗಿತ್ತು. ಆದರೆ ನನ್ನ ದನಿಯಿಂದ ಅದು ಭಂಗವಾಗುವುದಿಲ್ಲ. ಏಕೆ ಭಂಗವಾಗು ವುದಿಲ್ಲ? ನೀನು ಅಂಬಿಕಾಗಳ ಮಡಿಲಲ್ಲಿ ಆಡುತ್ತಿರುವ ನಿನ್ನ ಮಗನನ್ನು ಎಂದೂ ಕೈಗಳಿಂದ ಎತ್ತಿಕೊಂಡು ದಿಟ್ಟಿಸಿ ನೋಡಲಿಲ್ಲ. ಆದರೆ ನಾನು ನೋಡಿದ್ದೇನೆ, ಮಗುವನ್ನು ಕೈಗಳಿಂದ ಎತ್ತಿಕೊಂಡು, ಎದೆಗೆ ಅಪ್ಪಿಕೊಂಡು. ಆಲಿಂಗನದಿಂದ ಅವನನ್ನು ಸಡಿಲಿಸುವು ದೆಂದರೆ ನನ್ನ ಶರೀರದ ಮಾಂಸದಿಂದ ಅದರ ತುಣುಕನ್ನು ಕಿತ್ತು ತೆಗೆದಂತಾಗುತ್ತದೆ..."

ಬಲದೇವನ ಇಡೀ ಶರೀರ ದೇಹದಲ್ಲಿ ಹರಿಯುತ್ತಿರುವ ರಕ್ತದಿಂದ ತೊಯ್ದು ಹೋಯಿತು. "ರಕ್ತದ ವಾಸನೆ ಹೇಗಿರುತ್ತದೆಂದು ನಿನಗೆಂದೂ ಗೊತ್ತಿಲ್ಲ ಋಷಿಪುತ್ರ.

ಮನುಷ್ಯನಿಗೆ ಅವನ ಮನದ ಮೂಲದವರೆಗೂ ಅಘಾತ ಉಂಟಾದಾಗ ಮನುಷ್ಯನ ಶರೀರದ ರಕ್ತಕ್ಕೆ ತನ್ನದೇ ಅದೊಂದು ವಾಸನೆ ಬರುತ್ತದೆ. ಅಲ್ಲದೆ ರಕ್ತಕ್ಕೊಂದು ಸುವಾಸನೆಯೂ ಇರುತ್ತದೆ. ಮಕ್ಕಳ ಮೃದುವಾದ ಕೋಮಲವಾದ ತುಟಿಗಳು ನಕ್ಕಾಗ ಅವುಗಳದೇ ಶರೀರದಿಂದ ರಕ್ತದ ಸುವಾಸನೆ ಹೊರಹೊಮ್ಮುತ್ತದೆ....."

ಅನಂತರ ಇನ್ನೊಂದು ಕಟು ಸುಗಂಧ ಬಲದೇವನ ಹಣೆಯ ನರಗಳಲ್ಲಿ, ವ್ಯಾಪಿಸಿತು. ಅವನು ಆರ್ದ್ರ ಮನಸ್ಸಿನಿಂದ ಹೇಳಿದ.. "ನನ್ನ ಅಂಬಿಕಾಳ ಶರೀರದ ಸುಗಂಧ ಎಲ್ಲಿಗೆ ಬೇಕಾದರೂ ಹೋಗಲಿ. ನಾನು ಮಾತ್ರ ಅದನ್ನು ಪತ್ತೆ ಹಚ್ಚಬಲ್ಲೆ..... ಅವಳ ಕಂಪಿತಗೊಳ್ಳುತ್ತಿರುವ ಉಸಿರು ನನ್ನ ಹೆಗಲ ಬಳಿ, ನನ್ನ ತೋಳಬಳಿ, ನನ್ನ ಕೊರಳ ಬಳಿ, ನೆಲೆ ನಿಂತಿದೆ. ಅದೊಂದು ನ್ಯಾಸವಾಗಿ. ಅಷ್ಟು ಮಾತ್ರವಲ್ಲ. ನನ್ನ ಒಳಗೂ...... ನಾನು ಅವಳ ತುಟಿಗಳಿಂದ ಒಂದು ಗುಟುಕನ್ನು ಪೂರ್ಣ ಕುಡಿದಿದ್ದೆ."

ಬಲದೇವನ ಹಣೆಯ ಮೇಲಿನ ಒಂದು ನರ ಒಂದು..... ಗಂಟಿನ ಹಾಗೆ ಬಿಗಿದುಕೊಂಡು ಬಿಟ್ಟಿತು. ಹಲ್ಲಿನಿಂದ ಕೆಳತುಟಿಯನ್ನು ಕಚ್ಚುತ್ತ ಹೇಳಿದ. 'ಅಯ್ಯಾ ಋಷಿಪುತ್ರ, ನಿನಗೆ ಕೊಡುವುದು ಮಾತ್ರ ಗೊತ್ತಿತ್ತು. ಏನನ್ನಾದರೂ ತೆಗೆದುಕೊಳ್ಳುವ, ಬೇರೆಯವರಿಂದ ಸ್ವೀಕರಿಸುವುದರ ಪರಿಚಯವೇ ನಿನಗಿರಲಿಲ್ಲ. ಆದರೆ ನನಗದರ ಗುರುತು ಹತ್ತಿದೆ. ನನ್ನ ಅಂಬಿಕಾಳ ದೇಹದ ತಳಕ್ಕೆ ನಾನು ಇಳಿದಿದ್ದಾಗ. ಆ ತಳ ನನ್ನನ್ನು ಒಂದು ಮುಷ್ಟಿಯಲ್ಲೆಂಬಂತೆ ಒಳಗೆ ಅಡಗಿಸಿಕೊಂಡು ಬಂಧಿಸಿಬಿಟ್ಟಿತು. ಹೂವಿನ ದಳಗಳ ಹಾಗೆ ಮತ್ತೆ ಅರಳಿ. ನಾನು ಹೊರಬರುತ್ತಾ, ಅಲ್ಲಿಯ ಗಂಧವನ್ನು ನನ್ನೊಂದಿಗೆ ಹೊರತಂದಿದ್ದೆ. ಅದು ಕೇವಲ ಕಿಂಚಿತ್ತನ್ನು ನೀಡುವ ಕ್ಷಣವಷ್ಟೇ ಅಲ್ಲ. ಸ್ವಲ್ಪ ಪಡೆಯುವ ಕ್ಷಣವೂ ಆಗಿತ್ತು. ನಾನು ಕ್ಷಣವನ್ನು ಕಂಡೆ. ಋಷಿಪುತ್ರ ನೀನು ಕಾಣಲಿಲ್ಲ. ಕೊಡುವುದು ವೇದನೆಯಲ್ಲ; ಅದರೆ ಪಡೆಯುವುದಿದೆಯಲ್ಲ. ಅದೊಂದು ವೇದನೆ. ಆದರೆ ಹೇ ನನ್ನ ಋಷಿ ರಾಜ! ಆ ನೋವು ನಿನಗೆ ತಿಳಿದಿಲ್ಲ ನನ್ನ ಋಷಿರಾಜ !"

ಸುತ್ತಮುತ್ತೆಲ್ಲ ನೀರವ ವಾತಾವರಣ. ಅಷ್ಟೇ ಅಲ್ಲ. ಬಲದೇವನ ಇನ್ನುಳಿದ ಬದುಕಿನ ವರ್ಷಗಳ ಭವಿಷ್ಯ ಕಾಣುವಷ್ಟು ದೂರದವರೆಗೂ ಒಂದು ಅನಂತ ಮೌನ ಆವರಿಸಿತ್ತು.

ಅದೊಂದು ಬಗೆಯ ನೀರವ ಅಂಧಕಾರ. ಆದರೆ ಬಲದೇವನು ಕತ್ತಲಲ್ಲಿ ಬಿದ್ದಿರುವ ಕತ್ತಲಿನ ಒಂದು ತುಣುಕು ಎನ್ನುವ ಹಾಗೆ ಬಲವಾಗಿ ತನ್ನ ಶರೀರದಲ್ಲೇ ಮುದುಡಿಕೊಂಡನು. ಅವನ ತುಟಿಗಳು ಒಂದು ಥರ ಅಲುಗತೊಡಗಿವು. ಕತ್ತಲಿನ ತಳಪಾಯ ಅಲುಗುತ್ತಿದ್ದೆಯೇನೋ ಎಂಬಂತೆ. "ಅವಳು ಬೆಂಕಿಯ ಕಿಡಿಯೊಂದನ್ನು ಪಡೆದುಕೊಳ್ಳಲು ಬಂದಿದ್ದಳು. ನಾನು ಕಿಡಿಗಾಗಿ ನನ್ನನ್ನು ಸುಟ್ಟುಕೊಳ್ಳಬೇಕಿತ್ತು. ನಾನು ಸುಟ್ಟುಕೊಂಡೆ. ಆದರೆ ಕಿಡಿಯನ್ನು ಪಡೆಯಲು ಅವಳೂ ಬೆಂಕಿಯ ತಾಪವನ್ನು ಹೊಕ್ಕು ಬರಬೇಕಾಗುತ್ತದೆಂಬುದು ನನಗೆ ತಿಳಿದಿರಲಿಲ್ಲ. ಬಹುಶಃ ಅವಳಿಗೂ ತಿಳಿದಿರಲಿಲ್ಲ. ಬೆಂಕಿ ಅವಳಿಗೂ ತಾಕಿತ್ತು. ಆಗ ಅವಳು ಥರಗುಟ್ಟಿದಳು. ತನಗೆ ತಾಕಿದ ಜ್ವಾಲೆಯಿಂದ ನಾಚಿಕೊಂಡ ಳೆಂಬಂತೆ ಇಡಿಯಾಗಿ ನನ್ನಲ್ಲಿ ಹುದುಗಿಕೊಂಡು ಬಿಟ್ಟಳು... ಮತ್ತು ನನ್ನ ಈ ಬೂದಿಯಲ್ಲಿ ಅವಳೂ ಸುಟ್ಟು ಬೂದಿಯಾಗಿ ತನ್ನ ಬೂದಿಯನ್ನು ನನ್ನದರೊಂದಿಗೆ ಸೇರಿಸಿಬಿಟ್ಟಿದ್ದಾಳೆ.

ಚೈತನ್ಯದ ಕತ್ತಲಿನಲ್ಲಿ ಕಲ್ಲಿನ ಮೂರ್ತಿಯಂಥ ಆಕೃತಿಯೊಂದು ಮೂಡಿತು. ಬಹುಶಃ ಕಾಲದಿಂದಾಗಿ ಕಲ್ಲಾಗಿಬಿಟ್ಟಂಥ ಅಥವಾ ಈಗಲೂ ಜೀವಂತವಾಗಿದ್ದು ತಪೋಮಗ್ನವಾಗಿ ಕುಳಿತಿದೆಯೋ ಎಂಬಂಥದು..... ಬಲದೇವನು ಕತ್ತಲಲ್ಲಿ ನೆಲವನ್ನು ಕೈಗಳಿಂದ ತಡಕುತ್ತ ನೆಲದ ಮೇಲೆ ಕೈಯಾಡಿಸುತ್ತ ಅದರ ಪಾದಗಳನ್ನು ಸ್ಪರ್ಶಿಸಲು ತೋಳುಗಳನ್ನು ಚಾಚಿದ. ನಡುಗುವ ತೋಳುಗಳ ಹಾಗೆ ಅವನ ದನಿ ನಡುಗಿತು.

"…. ಓ ಮಹರ್ಷಿ ನಾನು ಮರೆತುಬಿಟ್ಟೆ. ಮಾನವ ಪುತ್ರನಾಗಿ ನಾನು ನಿನ್ನೊಂದಿಗೆ ಸಮಾನನೆಂಬಂತೆ ಸ್ಪರ್ಧಿಸಿದ್ದೆ. ಒಂದು ಕ್ಷಣ ನೀನಾಗಿ ನನ್ನನ್ನು ಕಂಡೆ. ಕೇವಲ ಒಂದು ಕ್ಷಣ...... ಒಂದು ಕ್ಷಣಕ್ಕಾಗಿ ನಾನು ನಿನ್ನ ಪೀಠವನ್ನು ಕದ್ದಿದ್ದೆ..... ಆದರೆ ನಾನು ನೀನಾಗಲು ಸಾಧ್ಯವಿಲ್ಲ.... ನೀನು ಈಗಲೂ ನಿನ್ನ ಅರಣ್ಯದಲ್ಲಿ ತಪಸ್ಸಿನಲ್ಲಿ ಸ್ಥಿರವಾಗಿ ಕುಳಿತಿದ್ದೀ..... ಆದರೆ ನಾನು ನನ್ನ ಅರಣ್ಯದಲ್ಲಿ ಅಲೆಯುತ್ತಿದ್ದೇನೆ. ನನಗೆ ಕೇವಲ ಕೊಡುವ ವರ ಮಾತ್ರ ಸಿಕ್ಕಿಲ್ಲ. ಪಡೆಯುವ ಶಾಪವೂ ಸಿಕ್ಕಿದೆ. ಅಂಬಿಕಾ ನನ್ನ ಬಳಿ ಇರಬೇಕೆಂದು ಬಯಸುತ್ತೇನೆ.... ನನ್ನ ಮಗುವೂ... ನೋಡು! ನನ್ನ ಕಣ್ಣುಗಳು ನನ್ನ ಮುಖದ ಮೇಲಷ್ಟೇ ಇಲ್ಲ; ಬೆನ್ನಿನ ಮೇಲೂ ಇವೆ. ಅಂಬಿಕಾಳು ನನ್ನ ಬಳಿ ಕುಳಿತಿದ್ದ; ನನ್ನ ಪಾರ್ಶ್ವಕ್ಕೆ ಅಂಟಿಕೊಂಡ ಹಿಂಭಾಗದ ದೂರದ ಆ ಸ್ಥಳವನ್ನು ನೋಡುತ್ತಿವೆ. ಅಲ್ಲದೆ ನಾನು ಅವಳ ಗರ್ಭದಲ್ಲಿ ಮೊಳೆದೋರುತ್ತಿದ್ದೆ..."

ಬಲದೇವನ ಆರ್ದ್ರ ಚೇತನವು ಮತ್ತೆ ನಿದ್ರಾಪರವಶನಾಗುತ್ತಿದ್ದಂತೆ ಕೊಠಡಿಯ ನೀರವತೆ ಒಂದು ನೆಮ್ಮದಿಯ ನಿಟ್ಟುಸಿರೆಳೆಯಿತು. ಕಿಟಕಿಯಿಂದ ಮಾತ್ರ ಬರುತ್ತಿದ್ದ ಗಾಳಿಯ ಹೊಡೆತದಿಂದ ಟೇಬಲ್ ಮೇಲಿದ್ದ ಪುಸ್ತಕಗಳ ಕೆಲ ಹಾಳೆಗಳು ಪಟಪಟನೆ ಅಲುಗಾಡತೊಡಗಿದವು. ಹೇಗೆಂದರೆ ಮಹಾಭಾರತದ ಯವುದೋ ಪರ್ವದ ಪುಟಗಳು ಎದ್ದು ಕಾಮೂನ 'ಔಟ್‌ಸೈಡರ್' ಪುಸ್ತಕದ ಪುಟಗಳೊಂದಿಗೆ ಏನೋ ಹೇಳುತ್ತಿವೆಯೆಂಬಂತೆ ಅಥವಾ ಬೋರಿಸ್ ಪಾಸ್ಟರ್‌ನಾಕ್‌ನ 'ಜಿವಾಗೋ' ಕಣ್ಣುಜ್ಜುತ ಮತ್ಸ್ಯಗಂಧಿ ಯೋಜನ ಗಂಧಿಯಾದದ್ದರ ರಹಸ್ಯವೇನೆಂದು ಪರಾಶರ ಮಹಿರ್ಷಿಯನ್ನು ಕೇಳುತ್ತಿರುವಂತೆ........

ಒಮ್ಮೆಲೆ ಕೊಠಡಿಯ ನೀರವತೆ ಬೆಚ್ಚಿ ಬಿದ್ದು ಬಲದೇವನತ್ತ ನೋಡತೊಡಗಿತು. ಅವನು ವೇದನೆಯಿಂದ ಚಡಪಡಿಸುತ್ತ ಹಾಸಿಗೆಯಿಂದ ಏಳುತ್ತ ಹೇಳುತ್ತಿದ್ದ– "ಇದೆಂಥ ಶಾಪ! ವೇದವ್ಯಾಸ ! ಮಲಗಿದಾಗಲೆಲ್ಲ, ಬೆಂಕಿಯಿಂದ ಉರಿಯತೊಡಗುತ್ತೇವೆ, ನಾನು ಮತ್ತು ನನ್ನ ಅಂಬಿಕಾಳೂ. ಎಚ್ಚೆತ್ತಾಗಲೆಲ್ಲಾ ಬೂದಿಯ ರಾಶಿಯಾಗಿಬಿಡುತ್ತೇನೆ...." ಹೇಳು ಮಹರ್ಷಿ ಈ ಬೂದಿಯ ರಾಶಿಯಲ್ಲಿ ನನ್ನ ಮಗ ದೊಡ್ಡವನಾದ ಮೇಲೆ ತನ್ನ ವಂಶವನ್ನು ಹೇಗೆ ತಾನೆ ಪತ್ತೆ ಮಾಡುತ್ತಾನೆ ?"

ಮತ್ತೆ ನದಿ ಎಂದಿನಂತೆ ಹರಿಯುತ್ತಲೇ ಇತ್ತು...... ಅದರ ನೀರು ಮಾತ್ರ ಮ್ಲಾನಗೊಂಡು ಈ ಸಂಗತಿ ಬೂದಿಯ ರಾಶಿಯಾಗಿ ಅಲ್ಲೇ ಆಚೆಯ ದಡದ ಮೇಲೆ ಬಿದ್ದಿರುವುದನ್ನು ನೋಡಿತು.

ಒಂದು ನಿಟ್ಟುಸಿರು

ಕರಮೋ ತಂಬಿಗೆಗೆ ಲಸ್ಸಿಯನ್ನು ಸುರುವಿದಳು. ಮತ್ತೆ ಅರ್ಧಕ್ಕಿಂತಲೂ ಕಡಿಮೆ ತುಂಬಿದ್ದ ತಂಬಿಗೆಯನ್ನು ನೋಡುತ್ತಾ ಹೇಳಿದಳು– "ಇವತ್ತು ದೊಡ್ಡ ಸರದಾರಿಣಿ ಎಲ್ಲೂ ಕಾಣಿಸ್ತಾ ಇಲ್ಲ ! ಸಂತೋಷದಿಂದ ಇದ್ದಾಳೋ ಹೇಗೆ?"

ಸರದಾರಣಿ ನಿಹಾಲ್‌ಕೌರ್ ಈಗ ತಾನೆ ಒಂದು ಗಂಟೆ ಮುಂಚೆ ಅಂಗಳಕ್ಕೆ ಬಂದಿದ್ದಳು. ಒಲೆ ಮೇಲಿಟ್ಟದ್ದ ಖೀರ್‌ನ ಕೆಳಗೆ ಧಗಾಲ್ ಭಗಾಲ್ ಉರಿ ನೋಡಿ ಸೌದೆಗಳನ್ನು ಹಿಂದಕ್ಕೆ ಎಳೆದಿದ್ದಳು "ಯಾಕಮ್ಮ ವೀರೋ ಖೀರನ್ನು ಯಾವತ್ತಾದರೂ ಇಷ್ಟು ದೊಡ್ಡ ಉರಿ ಮೇಲಿಡ್ತಾರಾ? ಇದರ ಕೆಳಗೆ ತುಂಬಾ ತೆಳ್ಳನೆ ಉರಿ ಇರಬೇಕು?" ಹಾಗೆಂದು ಹೇಳಿ ಒಲೆಯ ಹತ್ತಿರ ಸೌದೆ ಹಾಕಿಕೊಂಡು ಅದರ ಮೇಲೆ ಕುಳಿತುಕೊಂಡು ಖೀರಿನ ಪಾತ್ರೆಯಲ್ಲಿ ಸೌಟು ಆಡಿಸತೊಡಗಿದ್ದಳು. ಬೆಳಿಗ್ಗೆ ಸ್ವತಃ ಅವಳೇ ಮೊಸರನ್ನು ಕಡೆದಿದ್ದಳು. ಆದರೆ ಲಸ್ಸಿಯನ್ನು ಸೋಸುವಾಗ ವಿರೋಗೆ ಅವಳು ಈಗ ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಳ್ಳಬಹುದೆಂದು ಹೇಳಿದ್ದಳು. ಯಾರೇ ಬಂದರೂ ಅವರಿಗೆ ಲಸ್ಸಿ ಕೊಡುವುದೆಂದು ವೀರೋಗೆ ಹೇಳಿದ್ದಳು.

ಬಹುಶಃ ಬೇರೆಯವರು ಲಸ್ಸಿ ತೆಗೆದುಕೊಳ್ಳುವಾಗ ಈ ಮಾತನ್ನು ಕೇಳಿದ್ದರು. ಆದರೆ ನಿಹಾಲ್‌ಕೌರ್‌ಗೆ ಗೊತ್ತಿರಲಿಲ್ಲ. ಆಗ ಅವಳು ಒಳಗಿನ ಕೋಣೆಯಲ್ಲಿದ್ದಳು. ಆದರೆ ಈಗ ಅವಳು ಅಂಗಳದಲ್ಲಿದ್ದಳು. ಹೊಸ್ತಿಲುಗಳ ಆಚೆ ಕುಳಿತಿದ್ದ ಕರಮೋಳ ದನಿಯನ್ನು ಅವಳೇ ಸ್ವತಃ ಕೇಳಿಸಿಕೊಂಡಿದ್ದಳು.

"ನಾನು ಖುಷಿಯಾಗಿದ್ದೀನಿ ಕರಮೋ! ನೀನು ಸರಿಯಾಗಿದ್ದೀ ತಾನೇ" ನಿಹಾಲ್‌ಕೌರ್ ಒಳಗಡೆಯಿಂದ ಕೇಳಿದಳು.

ಕರಮೋ ಬೇಗನೆ ಹೊಸ್ತಿಲ ಬಳಿ ಹೋಗಿ ಒಳಗೆ ಇಣುಕುತ್ತ, ತನ್ನ ಒಂದು ಕೈಯಿಂದ ಹಣೆಯನ್ನು ಮುಟ್ಟಿಕೊಳ್ಳುತ್ತ ಹೇಳಿದಳು – "ತುಂಬ ಚೆನ್ನಾಗಿರು ಸರದಾರಿಣಿ.

ಈ ಹೊತ್ತು ನಿನ್ನನ್ನು ನೋಡಿರಲಿಲ್ಲ. ನನ್ನ ಸರದಾರಿಣಿ ಹುಷಾರಾಗಿದ್ದಾಳೋ ಹೇಗೋ ಎಂದು ಅಂದುಕೊಂಡಿದ್ದೆ."

ಎಲ್ಲರೂ ನಿಹಾಲ್ ಕೌರಳ ಕಷ್ಟವನ್ನು ತಾವು ಹೊತ್ತುಕೊಳ್ಳುತ್ತಿದ್ದರು. ಇದೇನೂ ಹೊಸದಲ್ಲ. ಲಸ್ಸಿ ತೆಗೆದುಕೊಳ್ಳುತ್ತಿದ್ದ ಹಾಗೇ ಕರಮೋ ಅವಳನ್ನು ನೆನೆಸಿಕೊಂಡಿದ್ದಳೆಂದರೆ, ಏನೋ ವಿಷಯ ಇರಲೇಬೇಕು ಎಂದು ನಿಹಾಲ್‌ಕೌರಳಿಗೆ ಅನ್ನಿಸಿತು. ನಿಹಾಲ್‌ಕೌರ್, ಕರಮೋಳ ಕಡೆ ನೋಡಿದ ಕೂಡಲೇ ಅವಳು ತಂಬಿಗೆಯನ್ನು ನಿಹಾಲ್ ಕೌರ್‌ಳ ಕಡೆಗೆ ವಾಲಿಸಿಕೊಂಡು ನಿಂತಿದ್ದಳು. ನಿಹಾಲ್‌ಕೌರಳಿಗೆ ಅರ್ಥವಾಗಿ ಬಿಟ್ಟಿತು. ಅವಳು ವೀರೋಳ ಕಡೆಗೆ ನೋಡುತ್ತ ಹೇಳಿದಳು– "ಕೇಳು! ಕರಮೋಳ ತಂಬಿಗೆಯನ್ನು ತುಂಬಿಸುತ್ತಾ ಇರು. ಇವಳ ಹಸುಳೆಗಳು ಲಸ್ಸಿ ಕುಡಿದೇ ಬೆಳೆಯುತ್ತವೆ"

"ದೇವರು ನಿನಗೆ ದುಪ್ಪಟ್ಟು ನೀಡಲಿ! ನಿನ್ನ ಕೈಗಳಿಗೆ ಅದೆಷ್ಟೊಂದು ಸಂತೋಷವಾಗಿದೆಯೆಂದರೆ, ಅವು ತಮಗೇ ಗೊತ್ತಿಲ್ಲದೆ ಎರೆಡೆರಡು ಸಲ ಲಸ್ಸಿ ತುಂಬಿಸುತ್ತವೆ." ತಂಬಿಗೆಯಲ್ಲಿ ಇನ್ನಷ್ಟು ಲಸ್ಸಿ ತುಂಬಿಸಿಕೊಳ್ಳುತ್ತ ಕರಮೋ ಹೇಳಿದಳು. ಈಗ ಸದ್ಯಕ್ಕೆ ಅವಳಿಗೆ ಸಂತೃಪ್ತಿಯನ್ನು ನೀಡುತ್ತಿರುವ ಕೈಗಳು ವೀರೋಳದ್ದಾಗಿರಬಹುದು. ಆದರೆ ಅವಳು ಹೇಳುತ್ತಾ ಇದ್ದದ್ದು ನಿಹಾಲ್ ಕೌರ್‌ಳ ಕೈಗಳ ಬಗ್ಗೆ

ಕರಮೋ ಹೊರಟು ಹೋದಮೇಲೆ, ನಿಹಾಲ್‌ಕೌರ್ ಅವಳು ಹೇಳಿದ ಶುಭಾಶಂಸನೆಗಳನ್ನು ಮರೆತುಬಿಟ್ಟಳು. ಆದರೆ ಅವಳು ಹೇಳಿದ "ದೊಡ್ಡ ಸರದಾರಿಣಿ" ಎಂಬ ಒಂದು ಶಬ್ದ ಮಾತ್ರ ಅವಳ ನೆನಪಿನಲ್ಲಿ ಉಳಿದುಬಿಟ್ಟಿತು.

ಒಂದೇ ದಿನದಲ್ಲಿ ನಿಹಾಲ್‌ಕೌರ್ ಸರದಾರಿಣಿಯಿಂದ ದೊಡ್ಡ ಸರದಾರಿಣಿ ಆಗಿಬಿಟ್ಟಿದ್ದಳು. ಅವಳನ್ನು ದೊಡ್ಡ ಸರದಾರಿಣಿ ಎಂದು ಕರೆಯಬೇಕೆಂಬ ವಿಚಾರ ಎಲ್ಲರಿಗಿಂತ ಮೊದಲು ಯಾರಿಗೆ ಬಂದಿತ್ತೋ ಗೊತ್ತಿಲ್ಲ. ಬಹುಶಃ ಎಲ್ಲರಿಗೂ ಏಕಕಾಲಕ್ಕೆ ಬಂದಿತ್ತು. ಮನೆಗೆಲಸದವಳಿಂದ ಹಿಡಿದು ಕಾರ್ಖಾನೆಯ ಎಲ್ಲ ಕಾರಕೂನರವರೆಗೆ ಅವಳನ್ನು ದೊಡ್ಡ ಸರದಾರಿಣಿ ಎಂದು ಕರೆಯತೊಡಗಿದ್ದರು. ಅದು ಎಲ್ಲಿಯವರೆಗೆ ಹೋಯಿತೆಂದರೆ ಮನೆಯ ಯಜಮಾನ ಸರದಾರನೂ ನಿನ್ನೆ ಅವಳನ್ನು ದೊಡ್ಡ ಸರದಾರಿಣಿ ಎಂದು ಕರೆದಿದ್ದನು. ಆಮೇಲೆ ಚಿಕ್ಕ ಸರದಾರಿಣಿಯನ್ನು ಅವಳ ಕೋಣೆಗೆ ಹೋಗಿ ಕರೆದುಕೊಂಡು ಬಾ ಎಂದು ತಾನೇ ಮನೆ ಗೆಲಸದವಳಿಗೆ ಹೇಳಿದ್ದು ನಿಹಾಲ್ ಕೌರ್‌ಳ ಮನಸ್ಸಿಗೆ ಬಂದಿತು. ಒಂದು ವೇಳೆ ಚಿಕ್ಕ ಸರದಾರಿಣಿ ಅಂತ ಯಾರಾದರೂ ಇದ್ದರೆ ತಾನೆ ದೊಡ್ಡ ಸರದಾರಿಣಿ ತಾನೇ ಆಗುತ್ತಿದ್ದಳು. ಇನ್ನೂ ಎಷ್ಟೋ ವಿಚಾರಗಳು, ಚಿಕ್ಕ ಚಿಕ್ಕ ಕಾಳುಗಳ ಹಾಗೆ ಅವಳ ಮನಸ್ಸಿನ ಎಸರಿನಲ್ಲಿ ಕುದಿಯತೊಡಗಿದ್ದುವೆಂದು ನಿಹಾಲ್‌ಕೌರಳಿಗೆ ಅನ್ನಿಸತೊಡಗಿತು.

ಹಾಗೆ ಮನಸ್ಸಿನಲ್ಲಿ ಕೂಳ್ಗುದಿಗೊಳ್ಳುತ್ತಿದ್ದ ವಿಚಾರಗಲ್ಲಿ ವೀರೋ ಈ ಮನೆಗೆ ಕಿರಿಯ ಸೊಸೆಯಾಗಿ ಬಂದ ದಿನದಿಂದಲೂ ಅವಳು ರಾತ್ರಿ ಮಲಗುವ ಮುನ್ನ ನಿಯಮದಂತೆ ಒಂದು ದಿನವೂ ತಪ್ಪದ ಹಾಗೆ, ನಿಹಾಲ್‌ಕೌರ್‌ಳ ಕೋಣೆಗೆ ಬಂದು ಅವಳು ಕುಳಿತಿದ್ದ ಚಿಕ್ಕ ಪಲ್ಲಂಗದ ಕಾಲಿನ ಬಳಿ ಕುಳಿತು ಅವಳ ಕಾಲುಗಳನ್ನು ಒತ್ತುತ್ತಿದ್ದ ವಿಚಾರವೂ

ಒಂದು. ನಿಹಾಲ್‌ಕೌರಳಂತೂ ಮಗಳ ತೊಟ್ಟಿಲನ್ನು ಕಳಿಸುವುದಾಗಲಿ, ಮಗನ ತೊಟ್ಟಿಲನ್ನು ತರುವುದಾಗಲಿ ಮಾಡಿರಲಿಲ್ಲ. ಆದರೆ ಅವಳು ಕೈಯಾರೆ ಮದುವೆ ಮಾಡಿಸಿದ್ದ ವೀರೋ ಅವಳ ಕಾಲುಗಳನ್ನು ಒತ್ತುತ್ತಿದ್ದರೆ ಅವಳಿಗೆ ತನಗೆ ಮಗಳು, ಸೊಸೆ ಇಬ್ಬರೂ ಸಿಕ್ಕಿಬಿಟ್ಟರು ಎನಿಸುತ್ತಿತ್ತು. ಹಾಗಾಗಿ ನಿಹಾಲ್ ಕೌರಳು ಒಂದು ದೀರ್ಘವಾದ ಉಸಿರುತೆಗೆದುಕೊಂಡು ನಗುವ ತುಟಿಗಳಿಂದ, ವೀರೋ ತನಗೆ ಸೊಸೆಯೂ ಹೌದು, ಮಗಳೂ ಹೌದು ಎಂದು ತನಗೆ ತಾನೇ ಸಮಾಧಾನ ತಾಳುತ್ತಿದ್ದಳು.

ತನ್ನ ಸರದಾರನ ಎರಡನೆಯ ಮದುವೆಗೆ ಈ ಹುಡುಗಿ ವೀರೋಳನ್ನು ಸ್ವತಃ ನಿಹಾಲ್‌ಕೌರಳೇ ಹುಡುಕಿದ್ದಳು. ಸಂಬಂಧಗಳು ಒಳ್ಳೆಯ ಮನೆಗಳಿಂದಲೂ ಬರುತ್ತಿದ್ದವು. ಆದರೆ ಅವೆಲ್ಲವೂ ಸರದಾರನ ಸಲುವಾಗಿ ಬರುತ್ತಿರಲಿಲ್ಲ. ಸರದಾರನ 'ದೊಡ್ಡ ಮನೆ'ಯ ಕಾರಣದಿಂದಾಗಿ ಬರುತ್ತಿದ್ದವು. ಸರದಾರನಿಗೆ ವಯಸ್ಸಾಗುತ್ತಿರುವ ಕಾರಣದಿಂದ ಹೆದರುತ್ತ ಸಂಬಂಧದ ಪ್ರಸ್ತಾಪ ತೆಗೆದುಕೊಂಡು ಬರುತ್ತಿದ್ದವರು ಸಂಬಂಧ ಬೆಳೆಸುವುದಕ್ಕಿಂತ ಮೊದಲು 'ದೊಡ್ಡಮನೆ'ಯನ್ನು ತಮ್ಮ ಮಗಳ ಹೆಸರಿಗೆ ಮಾಡಿಕೊಳ್ಳಬಯಸುತ್ತಿದ್ದರು. ತನ್ನ ಮನೆಯ ಹಕ್ಕುದಾರನನ್ನಂತೂ ಸರದಾರ ಖಂಡಿತಾಗಿಯೂ ಹುಡುಕುತ್ತಿದ್ದನು. ಆದರೆ ವಾರಸುದಾರನೊಬ್ಬನಿಗೆ ಹೆಣ್ಣೊಬ್ಬಳು ಅದ್ಯಾವಾಗ ಜನ್ಮ ನೀಡುವುದಿತ್ತೋ ಏನೋ, ಸದ್ಯದಲ್ಲಂತೂ ಕೇವಲ ಕಣಿ ನುಡಿಯುಬಹುದಾಗಿದ್ದ ಹೆಣ್ಣಿನ ಹೆಸರಿಗಂತೂ ಬರೆಯಲಾಗುತ್ತಿರಲಿಲ್ಲ.

ಅಲ್ಲದೆ ಸರದಾರನಂತೂ ಎರಡನೇ ಮದುವೆ ಮಾಡಿಕೊಳ್ಳಲು ನಿರಾಕರಿಸಿದ್ದನು. ಆದರೆ ಈ ನಿರಾಕರಣೆಯಲ್ಲೊಂದು ನೆಮ್ಮದಿಯ ನಿಟ್ಟುಸಿರು ಸೇರಿತ್ತು. ನಿಹಾಲ್‌ಕೌರ್ ಈ ನಿಟ್ಟುಸಿರನ್ನು ಕೇಳಿಸಿಕೊಂಡಿದ್ದಳು. ಹಾಗೂ ಈ ರೀತಿಯಲ್ಲಿ ಅವಳು ಒಂದು ಯಃಕಶ್ಚಿತ್ ಕುಟುಂಬದ ಹೆಣ್ಣಾದ ಈ ವೀರೋಳನ್ನು ಹುಡುಕಿ ತಂದು ತನ್ನ ಸರದಾರನಿಗೆ ನೀಡಿದ್ದಳು. ಅದಕ್ಕೆ ಪ್ರತಿಯಾಗಿ ಸ್ವತಃ ತಾನೇ ಅವನ ಆ ನೆಮ್ಮದಿಯ ನಿಟ್ಟುಸಿರನ್ನು ಬಿಟ್ಟಿದ್ದಳು.

ಸರದಾರನು ಒಂದು ದಿನ ಗೋಡೆಗೆ ಹದ್ದಿದ್ದ ತನ್ನ ಕಬ್ಬಿಣದ ಅಲಮಾರನ್ನು ತೆರೆದಾಗ, ಆ ತೆರೆದ ಬೀರುವಿನ ಎದುರು ಅದೆಷ್ಟೋ ಹೊತ್ತು ನಿಂತು ಏನೋ ಯೋಚಿಸುತ್ತಿದ್ದನು. "ದೊಡ್ಡ ಸರದಾರಿಣಿ ಎಲ್ಲಿ ಹೋಗಿದ್ದಾಳೆ"? ಎಂದು ಸರದಾರನು ವೀರೋಳನ್ನು ಅವಸರವಸರವಾಗಿ ಕೇಳಿದನು. ದೊಡ್ಡ ಸರದಾರಿಣಿ ಮನೆಯಲ್ಲಿರಲಿಲ್ಲ. ಸರದಾರನು ಅಲಮಾರ್‌ಗೆ ಬೀಗ ಹಾಕಿ ಮುಚ್ಚಿ ಬೀಗದ ಕೈಯನ್ನು ಜೇಬಿನಲ್ಲಿರಿಸಿಕೊಂಡನು. ಕಾರ್ಖಾನೆಗೆ ಹೋಗುವಾಗ, ನಿಹಾಲ್‌ಕೌರ್ ಮನೆಗೆ ಬಂದಕೂಡಲೇ, ಕೆಳಗಡೆ ಇರುವ ಗುಮಾಸ್ತೆ, ಮೂಲಕ ತನಗೆ ಹೇಳಿಕಳಿಸಿ ಕಾರ್ಖಾನೆಯಿಂದ ಕರೆಸಿಕೊಳ್ಳಬೇಕೆಂದು ವೀರೋಳಿಗೆ ಹೇಳಿದನು. ನಿಹಾಲ್‌ಕೌರ್ ಮನೆಗೆ ಹಿಂತಿರುಗಿದಾಗ, ವೀರೋ ಹೊರಗಡೆ ಬಾಗಿಲ ಹತ್ತಿರ ಗಾಬರಿಗೊಂಡು ಕುಳಿತಿದ್ದಳು. ಅವಳು ಅದೇ ತಾನೆ ವಾಂತಿ ಮಾಡಿಕೊಂಡಿದ್ದಳು.

ನಿಹಾಲ್‌ಕೌರ್ ವೀರೋಳ ಕೈಹಿಡಿದು ಎಬ್ಬಿಸಿ ಭುಜವನ್ನು ಅದುಮಿ ಹಿಡಿದು ಮಂಚದ ಮೇಲೆ ಮಲಗಿಸಿದಳು. ಆದರೆ ವೀರೋ ನಡುಗುತ್ತ ಮಂಚದಿಂದ ಕೆಳಗಿಳಿದು ನಿಹಾಲ್‌ಕೌರಳ ಪಾದಗಳನ್ನು ಒತ್ತಿ ಹಿಡಿದಳು.

"ಸರದಾರಿಣಿ ಅಮ್ಮ, ನಾನು ನಿಮ್ಮ ಮಗಳೂ ಹೌದು ಸೊಸೆಯೂ ಹೌದು ಅಂತ ನೀವು ನನಗೊಂದು ದಿವಸ ಹೇಳಿದ್ದಿರಿ. ಈ ಹೊತ್ತು ನನ್ನನ್ನು ನಿಮ್ಮ ಮಗಳು ಅಂತ ತಿಳಿದು, ಬೇಕಾದರೆ ಸೊಸೆ ಅಂತಲೂ ಭಾವಿಸಿ ನನ್ನನ್ನು ಕಾಪಾಡಿ" ಎಂದು ವೀರೋ ಬಿಕ್ಕತೊಡಗಿದಳು. ಬಿಕ್ಕಿ ಬಿಕ್ಕಿ ಅಳುತ್ತ, ಕೆಲವು ದಿನಗಳ ಹಿಂದೆ, ಅವಳ ಅಣ್ಣ ಅವಳನ್ನು ನೋಡಿಕೊಂಡು ಹೋಗಲು ಬಂದಾಗ, ಅವಳ ಅಣ್ಣನಿಗೆ ಸ್ವಲ್ಪ ಹಣದ ಅವಶ್ಯಕತೆ ಇತ್ತು. ವೀರೋ ಅವನಿಗೆ ಸ್ವಲ್ಪ ಹಣವನ್ನು ಕೊಟ್ಟಿದ್ದಳು. ಅವಳ ಹತ್ತಿರ ಇದ್ದ ಹಣ ತುಂಬ ಕಡಿಮೆ. ಹಾಗಾಗಿ ಅವಳು ಸರದಾರನ ಜೇಬಿನಿಂದ ಬೀಗದ ಕೈ ಕದ್ದುಕೊಂಡು, ಕಬ್ಬಿಣದ ಬೀರು ತೆಗೆದು ಅದರೊಳಗಿದ್ದ ಬೆಳ್ಳಿಯ ಪಾತ್ರೆಗಳನ್ನು ತನ್ನ ಅಣ್ಣನಿಗೆ ಕೊಟ್ಟೆನೆಂದು ನಿಹಾಲ್ ಕೌರಳಿಗೆ ಹೇಳಿದಳು.

"ಇದು ನಿನ್ನ ಸ್ವಂತ ಮನೆ ವೀರೋ! ಒಂದು ವೇಳೆ ನೀನೇ ನಿನ್ನ ಕಯ್ಯಾರೆ ನಿನ್ನ ಮನೆಯನ್ನು ಹಾಳು ಮಾಡಕ್ಕೆ ಹೊರಟರೆ" – ಆ ಮಾತುಗಳು ಇನ್ನೂ ನಿಹಾರ್‌ಕೌರ್‌ಳ ಬಾಯಲ್ಲೇ ಇದ್ದವು. ಅಷ್ಟರಲ್ಲಿ ವೀರೋ ಉದ್ವೇಗದಿಂದ ಹೇಳಿದಳು. "ಈ ಮನೆ ನನ್ನದು ಅಂತ ಎಂದೂ ಅನ್ನಿಸಿಲ್ಲ. ಅನ್ನಿಸೋದು ಇಲ್ಲ. ಆದರೆ ಸರದಾರಿಣಿ ಅಮ್ಮ ನಾನು ಇನ್ನು ಮುಂದೆ ಯಾವತ್ತೂ ಈ ಮನೆಯ ಏನೊಂದೂ ಸಾಮಾನನ್ನು ಹೊರಗಡೆ ಕೊಡೋದಿಲ್ಲ ಅಂತ ಆಣೆ ಮಾಡಿ ಹೇಳ್ತೀನಿ. ನಾನು ಆ ಹೊತ್ತು ತಪ್ಪು ಮಾಡಿದ್ದೆ. ಹೀಗೇ ಮಾಡಿಬಿಟ್ಟೆ. ಆಮೇಲೆ ಪಶ್ಚಾತ್ತಾಪಾನೂ ಪಟ್ಟಿದ್ದೆ. ನನ್ನ ಮದುವೆ ಸಮಯದಲ್ಲಿ ನಮ್ಮ ತಂದೆ ನಮ್ಮ ಅಣ್ಣನ ವ್ಯಾಪಾರ–ವ್ಯವಹಾರದ ಸಲುವಾಗಿ ನಿಮ್ಮ ಹತ್ತಿರ ಎರಡು ಸಾವಿರ ರೂಪಾಯಿ ಕೇಳಿದ್ದು ನಿಮಗೆ ಗೊತ್ತೇ ಇದೆ. ನೀವು ಅದನ್ನು ಕೊಟ್ಟಿದ್ದಿರಿ. ನಮ್ಮಪ್ಪ ಮದುವೆ ಮಾಡಿಕೊಟ್ಟುಬಿಟ್ಟ. ನನ್ನನ್ನು ಮಾರೋದಕ್ಕೆ ಇನ್ನೇನು ತಾನೇ ಕಮ್ಮಿಯಾಗಿತ್ತು. ಎರಡು ಸಾವಿರ ರೂಪಾಯಿಗೆ ಈ ಮುದಿಗೂಟಕ್ಕೆ ನನ್ನನ್ನು ಕಟ್ಟಿಬಿಟ್ಟರು. ಅಪ್ಪ, ಅಣ್ಣ ಅನ್ನೋ ಸಂಬಂಧ ಇನ್ನೇನು ಉಳೀತು – ನಾನು ಯಾರದ್ದೋ ಮನೆ ಹಾಳು ಮಾಡಿ ಅವನ ಮನೆ ಯಾಕೆ ತುಂಬಿಸಲಿ?"

"ವೀರೋ!..." ನಿಹಾಲ್‌ಕೌರ್ ಬೆಚ್ಚಿ ಬಿದ್ದು ವೀರೋಳ ಮುಖ ನೋಡ ತೊಡಗಿದಳು. ನಿಹಾಲ್‌ಕೌರ್ ವೀರೋಳ ಮರ್ಯಾದೆ ಉಳಿಸಿದಳು. ಅಲಮಾರಿನಲ್ಲಿ ಇರಿಸಿದ್ದ ಬೆಳ್ಳಿಯ ಪಾತ್ರೆಗಳು ಹಳೆಯ ಮಾದರಿಯವಾಗಿದ್ದರಿಂದ ಅವಳೇನೇ ಆ ಪಾತ್ರೆಗಳನ್ನೆಲ್ಲಾ ತೆಗೆದು, ಅದಕ್ಕೆ ಇನ್ನೂ ಸ್ವಲ್ಪ ಬೆಳ್ಳಿ ಸೇರಿಸಿ ಹೊಸ ಪಾತ್ರೆ ಮಾಡಿಸಲು ಅಕ್ಕಸಾಲಿಗನಿಗೆ ಕೊಟ್ಟಿದ್ದಾಗಿ ಸರದಾರನಿಗೆ ಹೇಳಿಬಿಟ್ಟಳು.

ಸರದಾರನ ಚಿಂತೆ ದೂರವಾಗುತ್ತಾ ಹೋಯಿತು. ಆದರೆ ನಿಹಾರ್‌ಕೌರ್ ವೀರೋಳ ಮುಖದ ಕಡೆ ನೋಡಿದರೆ ಈಗಲೂ ಅವಳ ಮನಸ್ಸಿನಲ್ಲಿ ಒಂದು ಚಿಂತೆ ಮೂಡುತ್ತದೆ. ವೀರೋಳ ಕಣ್ಣುಗಳು ಕಪ್ಪು ದುಂಬಿಗಳಂತಿದ್ದವು. ಬಣ್ಣ ಸ್ವಲ್ಪ ಶ್ಯಾಮಲ ವರ್ಣ. ಆದರೆ ಆ ಶ್ಯಾಮಲ ವರ್ಣದಲ್ಲಿ ಯೌವನವೆಂಬುದು ಬನಿಯಾದ ಹಿಟ್ಟಿನ ಹಾಗೆ ಮಿಳಿತವಾಗಿ ಬಿಟ್ಟಿತ್ತು. ಅವಳ ಬಾಹುಗಳು ಲಟ್ಟಣಿಗೆಗಳ ಹಾಗೆ ದುಂಡಾಗಿ ಮತ್ತು ಬಲಿಷ್ಠವಾಗಿದ್ದವು. ಅವಳ ಮಾಂಸಲ ದೇಹದಲ್ಲಿ ಬೆರಳಿನ ಒಂದು ಗೆಣ್ಣೂ ಇಳಿಯುತ್ತಿರಲಿಲ್ಲ. ಸರದಾರನ

ಕಡೆಯಿಂದ ಯಾವ ನೆಮ್ಮದಿಯ ನಿಟ್ಟುಸಿರಿನ ಹೊಣೆಯನ್ನು ತಾನು ಹೊತ್ತು ಕೊಂಡಿದ್ದಳೋ ವೀರೋ ಅದೇ ನೆಮ್ಮದಿಯ ನಿಟ್ಟುಸಿರನ್ನು ತನ್ನ ಎದೆಯಲ್ಲಿ ಇರಿಸಿದ್ದಳು.

ವೀರೋ ಗರ್ಭಿಣಿಯಾದಳು. ಮನೆ ಬಹಳ ದೊಡ್ಡದಾಗಿತ್ತು. ಆದರೆ ಶುಭ ಕಾಮನೆಗಳಾದರೋ ಮನೆಯಲ್ಲಿ ಹಿಡಿಸಲಾರದಷ್ಟು ಅಸಂಖ್ಯಾತವಾಗಿದ್ದವು. ಸರದಾರನ ಕಾಲು ನೆಲದ ಮೇಲೆ ನಿಲ್ಲುತ್ತಲೇ ಇರಲಿಲ್ಲ. ಅಲ್ಲದೆ ನಿಹಾಲ್‌ಕೌರ ವೀರೋ ನೆಲದ ಮೇಲೆ ಹೆಜ್ಜೆ ಊರಲು ಬಿಡುತ್ತಿರಲಿಲ್ಲ. ಆದರೆ ಜನರು, ನಿಹಾಲ್‌ಕೌರ್‌ಳಿಗೆ ನೀಡಿದಷ್ಟು ಶುಭ ಕಾಮನೆಗಳನ್ನು ಸರದಾರನಿಗಾಗಲಿ ವೀರೋಳಿಗಾಗಲಿ ನೀಡಲಿಲ್ಲ.

"………ಮಗು ಹುಟ್ಟುತ್ತಿದ್ದ ಹಾಗೇ ನಾನು ಇದನ್ನು ನನ್ನ ಮಡಿಲಲ್ಲಿ ಹಾಕಿಕೊಂಡು ಬಿಡಲೇ?……ಆಮೇಲೆ ಆಗಲ್ಲ ಅಂತ ಹೇಳಕೂಡದು…….. ನಾನು ದೊಡ್ಡ ಸರದಾರಣಿ. ನೀನು ಚಿಕ್ಕ ಸರದಾರಿಣಿ. ಮೊದಲನೇ ಮಗ ದೊಡ್ಡವಳಿಗೆ ಸೇರಿದವನು. ಅನಂತರ ಹುಟ್ಟಿದವರು ನಿನ್ನವರು…." ಎಂದು ನಿಹಾಲ್‌ಕೌರ್ ವಿರೋಳೊಂದಿಗೆ ನಗುತ್ತ ಹೇಳುತ್ತಿದ್ದಳು. ತನ್ನ ಮನಸ್ಸಿಗೆ ಕಿಂಚಿತ್ತಾದರೂ ಬೇಸರ ಅದೇಕೆ ಆಗುತ್ತಿಲ್ಲವೆಂದು ಸ್ವತಃ ನಿಹಾಲ್‌ಕೌರ್‌ಳಿಗೆ ಅರ್ಥವಾಗುತ್ತಿರಲಿಲ್ಲ. ಅವಳು ತನ್ನ ಕೈಯಾರೆ ತನ್ನ ಪತಿಯನ್ನು ಬೇರೊಬ್ಬ ಹೆಣ್ಣಿಗೆ ಕೊಟ್ಟುಬಿಟ್ಟಿದ್ದಳು. ಇದೀಗ ಸಮಸ್ತ ಆಸ್ತಿಯನ್ನು ಬೇರೆಯವಳ ಮಗನಿಗೆ ಕೊಟ್ಟುಬಿಟ್ಟಿದ್ದಳು.

"ಅರೆ ಮಾಟಗಾತಿ! ನಾನು ಅದು ಹೇಗೆ ನಿನ್ನನ್ನು ನನ್ನ ಮಗಳು ಮತ್ತು ಸೊಸೆ ಎಂದು ಹೇಳಿಬಿಟ್ಟಿದ್ದೆ! ಈಗ ನಾನು ನಿಜಕ್ಕೂ ಒಬ್ಬ ತಾಯಿಯ ಹಾಗೆ ಸಂತೋಷವಾಗಿದ್ದೀನಿ.

ನನಗೆ ಯಾವತ್ತೂ ಜ್ಞಾಪಕವೇ ಇಲ್ಲ ನೋಡು ನೀನು ನನ್ನ……..." ನಿಹಾಲ್‌ಕೌರಳ ಈ ಮಾತಿಗೆ ವೀರೋ ಮಧ್ಯದಲ್ಲಿಯೇ ನಕ್ಕು ಹೇಳುತ್ತಿದ್ದಳು. "ಸರದಾರಿಣೇ! ನಾನು ನಿಸ್ಸಂದೇಹವಾಗಿ ಬೇರೆ ಇನ್ನೇನೋ ಅನ್ನಿಸುತ್ತೇನೋ. ಇಲ್ಲವೋ, ಆದರೆ ನಾನು ನಿಮ್ಮ ಸವತಿಯ ಹಾಗಂತೂ ಇಲ್ಲವೇ ಇಲ್ಲವೆಂದು ನಿಮಗೆ ಗೊತ್ತಿದೆ."

ನಿಹಾಲ್‌ಕೌರಳು ಬಡಗಿಗೆ ಹೇಳಿ ತೊಟ್ಟಿಲು ಮಾಡಿಸಿದಳು. ಅದರಲ್ಲಿ ಬೆಳ್ಳಿಯ ಗೆಜ್ಜೆಗಳನ್ನು ಕಟ್ಟಿದಳು. ಒಳ್ಳೆ ರೇಷ್ಮೆಯ ಚಿಕ್ಕದೊಂದು ರಜಾಯಿಯನ್ನು ಮಾಡಿಸಿದಳು.

ನಗರದ ಬ್ರಿಟಿಷ್ ಅಧಿಕಾರಿಯೊಬ್ಬ ಒಂದು ತಿಂಗಳ ರಜೆ ಮೇಲೆ ವಿದೇಶಕ್ಕೆ ಹೋಗುತ್ತಿದ್ದನು. "ವಿದೇಶಿ ಸ್ವೆಟರ್‌ಗಳು ರೇಷ್ಮೆ ಸ್ವೆಟರ್‌ಗಳ ಹಾಗಿರುತ್ತವೆ" ಎಂದು ಹೇಳಿ ನಿಹಾಲ್‌ಕೌರ್ ಆ ಬ್ರಿಟಿಷ್ ಅಧಿಕಾರಿಗೆ ಎರಡು ಚಿಕ್ಕ ಚಿಕ್ಕ ಸ್ವೆಟರ್‌ಗಳನ್ನು ವಿದೇಶದಿಂದ ತರಬೇಕೆಂದು ಹೇಳಿ. ಆ ಬಗ್ಗೆ ಅವನಿಂದ ಭರವಸೆಯನ್ನು ಪಡೆದಿದ್ದಳು.

ತಾನು ಬಹಿಷ್ಠೆಯಾಗಿದ್ದಾಗ, ನಿಹಾಲ್‌ಕೌರ್ ದಾದಿಗಳಿಗೆ ತನ್ನನ್ನು ತೋರಿಸಿಕೊಂಡಳು ಮತ್ತು ದೊಡ್ಡ ಪಟ್ಟಣಗಳಿಗೆ ಹೋಗಿ ಡಾಕ್ಟರುಗಳಿಗೂ ತೋರಿಸಿಕೊಂಡಳು. ಆದರೆ ತಾನು ಬಹಿಷ್ಠೆಯಾಗಿದ್ದ ದಿನಗಳಲ್ಲಿ ಎಂದೂ ದೇವತಾ ಕಾರ್ಯಗಳನ್ನು ಮಾಡಲಿಲ್ಲ. ವೀರೋಳಿಗೆ ಪೂರ್ತಿ ಮೂರುದಿನ ಸೊಂಟದಲ್ಲಿ ನೋವು ಕಾಣಿಸಿಕೊಳ್ಳುತ್ತಿದ್ದಾಗ ಮತ್ತೆ ಒಂದು ದಿನ ಸ್ವಲ್ಪ ರಕ್ತದ ಕಲೆಯೂ ಕಾಣಿಸಿಕೊಂಡಾಗ, ನಿಹಾಲ್ ಕೌರಳು ಮೊದಲ ಬಾರಿಗೆ ತನ್ನ ಜೀವನದಲ್ಲಿ ಹಬ್ಬ ಮಾಡಿದಳು.

ಇದು ಬಯಕೆಯ ಸಮಯವಾಗಿತ್ತು. ವೀರೋ ಒಂದು ವೇಳೆ ಬಯಸಿದ್ದರೆ, ದೇಶ, ವಿದೇಶಗಳಿಂದ ತನಗೆ ಇಷ್ಟವಾದ ವಸ್ತುಗಳನ್ನು ತರಿಸಿಕೊಂಡು ಬಯಕೆಗಳನ್ನು ಈಡೇರಿಸಿಕೊಳ್ಳಬಹುದಿತ್ತು. ಸರದಾರನು ಈಗ ಅವಳ ಬಾಯಿಂದ ಬರುವ ದನಿಗಾಗಿ ಅವಳ ಮುಖವನ್ನೇ ನೋಡುತ್ತಿರುತ್ತಿದ್ದನು. ಆದರೆ ಉಪ್ಪಿನಕಾಯಿನ ಒಂದು ಸಣ್ಣ ಹೋಳಿಗಾಗಿ, ಸಂಕೋಚದಿಂದ ಎರಡೆರಡು ಸಲ ತನ್ನ ಮುಖ ನೋಡುತ್ತಿದ್ದಳೆಂದು, ನಿಹಾಲ್‌ಕೌರಳಿಗೆ ಗೊತ್ತಿತ್ತು. ಹೀಗಾಗಿ ಸ್ವತಃ ನಿಹಾಲ್‌ಕೌರಳೇ ವೀರೋಳ ಬಯಕೆಗಳ ನಿಗಾ ವಹಿಸುತ್ತಿದ್ದಳು. ಈ ಎಲ್ಲ ದಿನಗಳಲ್ಲಿ ವೀರೋ ತನ್ನ ಬಾಯಿ ತೆಗೆದು ಜೋರಾಗಿ ಏನಾದರೂ ಮಾತು ಹೇಳಿದ್ದಾಳೆ ಅಂತ ಅಂದರೆ ಅದು ಅಂಗಳದಲ್ಲಿ ಹಗ್ಗದಿಂದ ನೇತು ಹಾಕಿರುವ ಶುಂಠಿ ಗೆಡ್ಡೆಗಳ ಹಾರವನ್ನು ಕಳಚಿ ಆ ಕಡೆ ಪಕ್ಕ ಇಡಿ ಎಂಬಷ್ಟು ಮಾತುಗಳನ್ನು ಮಾತ್ರ. " ಇವುಗಳನ್ನು ನೋಡಿದರೆ ಮನಸ್ಸಿನಲ್ಲಿ ಏನೋ ಒಂಥರಾ ಆಗುತ್ತೆ. ಈ ಶುಂಠಿ ಗೆಡ್ಡೆಗಳನ್ನು ನೋಡಿದರೆ, ಯಾವುದರದ್ದೋ ಚರ್ಮವನ್ನು ಸುಲಿದು ನೇತು ಹಾಕಿರೋ ಹಾಗೆ ಅನ್ನಿಸುತ್ತೆ?" ಎಂದು ವೀರೋ ಹೇಳಿದ್ದಳು. ಅಲ್ಲದೆ ಒಣಗುತ್ತಿರುವ ಶುಂಠಿ ಗೆಡ್ಡೆಗಳನ್ನು ನೋಡುತ್ತಿದ್ದ ಹಾಗೇ ವಾಂತಿ ಮಾಡಿಕೊಳ್ಳುತ್ತಿದ್ದಳು.

ಅನಂತರ ವೀರೋಳ ಮನಸ್ಸಿಗೆ ಏನನ್ನಿಸಿತೋ ಅವಳಿಗೆ ಒಂಬತ್ತು ತಿಂಗಳು ನಡೆಯುತ್ತಿದ್ದಾಗ, ತನ್ನ ತವರು ಮನೆಯಲ್ಲೇ ಬಾಣಂತನ ಮಾಡಿಸಿಕೊಳ್ಳುತ್ತೇನೆ ಎಂದು ಹಟ ಹಿಡಿದಳು. ಸರದಾರನು ಅವಳ ಹಟವನ್ನು ಒಪ್ಪುತ್ತಿರಲಿಲ್ಲ. ನಿಹಾಲ್‌ಕೌರ್ ಅವಳನ್ನು ಬೇಡಿಕೊಳ್ಳುತ್ತಾ ಇದ್ದಳು. ಆದರೆ ವೀರೋಳದ್ದು ಒಂದೇ ಹಟ. ಅವಳ ಊರಿನ ಒಬ್ಬ ಮುದಿ ಸೂಲಗಿತ್ತಿ ತುಂಬಾ ಅನುಭವಸ್ಥೆ. ತನಗೆ ಅವಳೊಬ್ಬಳ ಮೇಲೆ ಮಾತ್ರ ನಂಬಿಕೆ, ಬೇರೆ ಯಾರ ಮೇಲೂ ನಂಬಿಕೆ ಇಲ್ಲ. ತಾನೊಂದು ವೇಳೆ ಇಲ್ಲೇ ಇದ್ದದ್ದೇ ಆದರೆ, ನಗರದ ಲೇಡಿ ಡಾಕ್ಟರುಗಳ ಕೈಯಲ್ಲಿ ಸತ್ತು ಹೋಗುತ್ತೇನೆ ಎಂದು.

"ಈ ಭಯವೇ ಒಂದು ದೊಡ್ಡ ಖಾಯಿಲೆ" ಎಂದು ಡಾಕ್ಟರುಗಳು ಸರದಾರನಿಗೆ ತಮ್ಮ ಅಭಿಪ್ರಾಯ ತಿಳಿಸಿದರು. ಆದರೆ ಸರದಾರನ ಮನಸ್ಸಿನಲ್ಲಿ ಬೇರೊಂದು ಭಯವಿತ್ತು. ನಿಹಾಲ್‌ಕೌರ್‌ಳನ್ನು ಬೇರೆಯಾಗಿ ಕರೆದು ಹೇಳಿದ. "ಅವಳಿಗೊಂದು ವೇಳೆ ಅಲ್ಲಿ ಹೆಣ್ಣು ಮಗು ಹುಟ್ಟಿದರೆ ಅವಳು ಬೇರೆ ಯಾರದ್ದಾದರೂ ಗಂಡು ಮಗುವಿಗೆ ಅದನ್ನು ಬದಲಾಯಿಸಿಕೊಂಡು ಬಿಡುತ್ತಾರೆ. ನಾನು ಈ ಮುಂಚೇನೂ ಇಂಥ ಸಂಗತಿಗಳನ್ನು ಕೇಳಿದ್ದೀನಿ. ಒಂದು ವೇಳೆ ಗಂಡು ಮಗು ಆದರೆ, ಅದು ದೊಡ್ಡದಾದ ಮೇಲೆ ಆಸ್ತಿಯ ವಾರಸುದಾರನಾಗುತ್ತಾನೆ ಎನ್ನುವ ದುರಾಸೆ ಇದೆ ಅವಳಿಗೆ........."

"ಹಾಗಾದರೆ ಇದಕ್ಕಿರೋದು ಒಂದೇ ಉಪಾಯ. ನಾನು ಇವಳ ಜೊತೆ ಹೋಗಿ ಬಿಡ್ತೀನಿ. ನಾನು ಹತ್ತಿರ ಇದ್ದರೆ ಅವಳೇನೂ ಮಾಡಕ್ಕಾಗಲ್ಲ" ಎಂದು ನಿಹಾಲ್‌ಕೌರ್ ಸ್ವಲ್ಪ ಹೊತ್ತು ಯೋಚನೆ ಮಾಡಿ ಹೇಳಿದಳು.

ಸರದಾರನು ಇದಕ್ಕೆ ಒಪ್ಪಿದನು. ವೀರೋ ಕೂಡ ಇದಕ್ಕೆ ಏನೂ ಆಕ್ಷೇಪ ಮಾಡಲಿಲ್ಲ. ನಿಹಾಲ್‌ಕೌರಳು ಸೇವೆ ಮಾಡಲೆಂದು ಮನೆಯ ಕೆಲಸದವಳನ್ನು ಜೊತೆಗೆ ಕರೆದುಕೊಂಡಳು ಹಾಗೂ ವೀರೋಳ ಸಂಗಡ ಅವಳ ತೌರಿಗೆ ಹೋದಳು.

ವೀರೋಳ ಹೆರಿಗೆ ಕಷ್ಟವಾಗಲಿಲ್ಲ. ಅವಳು ತುಂಬು ಯೌವನವಂತೆ ಮತ್ತು ಆರೋಗ್ಯವಂತಳಾಗಿ ಇದ್ದಳು. ಅವಳ ತಾಯಿ ಮತ್ತು ಅತ್ತಿಗೆ ಅವಳಿಗೆ ನೆಟ್ಟಿಗೆ ತೆಗೆಯುತ್ತಾ ಹೇಳಿದ್ದರು– "ಸುಮ್ಮನೆ ಹೆದರ್ತಿದ್ದೀಯಾ. ಹೆರಿಗೇಲಿ ಏನು ತಾನೆ ಕಷ್ಟ ಆಗುತ್ತೆ. ಒಂದು ಸಲ ಜೋರಾಗಿ ಕಿರುಚಿದರೆ ಆಯಿತು. ಮಗ ಹುಟ್ಟಿ ಬಿಡುತ್ತಾನೆ.

ನಿಹಾಲ್ ಕೌರ್ ವೀರೋಳ ತೌರು ಮನೆಯಲ್ಲಿ ಯಾವುದೇ ರೀತಿಯಲ್ಲಿ ಭಾರವಾಗಲಿಲ್ಲ. ಕೈಬಿಟ್ಟು ಖರ್ಚು ಮಾಡುತ್ತಿದ್ದಳು. ಮನೆಯಲ್ಲಿನ ಎಲ್ಲರೂ ಸರದಾರಣಿ ಸರದಾರಣಿ ಎಂದು ಕರೆದು ದಣಿಯರು. ನಿಹಾಲ್‌ಕೌರ್ ನಗುತ್ತ– "ಒಂದು ಸಲ ಚೀರಿದರೆ ಮಗ ಹುಟ್ಟುತ್ತಾನೆ. ಒಂದು ವೇಳೆ ಮಗಳನ್ನು ಹೆರುವುದಾದರೆ?"

ವೀರೋಳ ಅತ್ತಿಗೆ ಗಟ್ಟಿಯಾಗಿ ನಗುತ್ತಾ – "ಎರಡು ಸಲ ಚೀರಿದರೆ ಮಗಳನ್ನು ಹೆತ್ತುಬಿಡಬಹುದು"– ಎಂದಳು.

"ಮಗಳಿಗೆ ಎರಡು ಸಲ ಚೀರಬೇಕೇ?" ನಿಹಾಲ್ ಕೌರ್ ನಕ್ಕು ಕೇಳುತ್ತಿದ್ದಳು.

"ಒಂದು ಸಲ ಚೀರುವುದು ನೋವಿಗಾಗಿ, ಇನ್ನೊಂದು ಸಲ ಚೀರುವುದು ದುಃಖಕ್ಕಾಗಿ..." ಎಂದು ವೀರೋಳ ಅತ್ತಿಗೆ ಹೇಳಿದಳು. "ಖುಷಿ ಏನಿದ್ದರೂ ಗಂಡು ಮಕ್ಕಳದು. ಹೆಣ್ಣು ಮಕ್ಕಳದೇನು ಖುಷಿ ಇರುತ್ತೆ!

ನಿಹಾಲ್‌ಕೌರಳ ಎದೆಯಲ್ಲೊಂದು ಆಳವಾದ ವೇದನೆ ಉಂಟಾಯಿತು. ನನ್ನ ಜೀವನದಲ್ಲಿ ನನಗೆ ಒಂದು ಸಲವಾಗಲಿ ಇಲ್ಲ ಎರಡು ಸಲವಾಗಲಿ ಚೀರಿದ ಅನುಭವಾಗಲಿಲ್ಲ. ಆದರೆ ಅವಳು ತನ್ನ ಮುಗುಳ್ನಗುವ ತುಟಿಗಳಿಂದ ತನ್ನ ಈ ವೇದನೆಯನ್ನು ನುಂಗಿಬಿಟ್ಟಳು. ಎಷ್ಟರ ಮಟ್ಟಿಗೆ ಎಂದರೆ, ಅವಳ ನೋವು ಅವಳ ಮುಖವನ್ನು ನೋಡಿ ನಾಚಿಕೊಂಡಿತು.

ವೀರೋಳಿಗೆ ಪ್ರಸವವೇದನೆ ಶುರುವಾದ ರಾತ್ರಿ ಅವಳು ಆ ವೇದನೆಯನ್ನು ತನ್ನ ತುಟಿ ಕಚ್ಚಿ ಸಹಿಸಿಕೊಂಡು ಬಿಟ್ಟಳು. ಅದು ಯಾವ ರೀತಿ ಸಹಿಸಿದಳೆಂದರೆ ಯಾರಿಗೂ ಅದರ ಸುದ್ದಿ ಕೂಡ ಹತ್ತಲಿಲ್ಲ. ಕೇವಲ ಒಮ್ಮೆ ಮಾತ್ರ ಅವಳ ಚೀರಿಕೆ ಕೇಳಿದ್ದೇ ತಡ, ವೀರೋಳ ತಲೆ ಬದಿಯಲ್ಲಿ ಕುಳಿತಿದ್ದ ನಿಹಾಲ್‌ಕೌರ್ ಕಡೆ ನೋಡಿ ಸೂಲಗಿತ್ತಿ ಹೇಳಿದಳು– "ಶುಭವಾಗಲಿ ಸರದಾರಣಿ ಅವರೇ! ಬನ್ನಿ ಗಂಡು ಮಗುವಿನಿಂದ ನಿಮ್ಮ ಮಡಿಲನ್ನು ತುಂಬುತ್ತೇನೆ!"

ನಿಹಾಲ್‌ಕೌರಳು ಮಗನನ್ನು ಮಡಿಲು ತುಂಬಿಸಿಕೊಂಡಳು. ಶುಭಕಾಮನೆಗಳನ್ನು ಸಹ ತುಂಬಿಸಿಕೊಂಡಳು. ಆದರೆ ಬೆಳಗಾಗುತ್ತಲೇ ಅವಳು ಸರದಾರನಿಗೆ ತಂತಿ ಕಳಿಸ ಹೊರಟಾಗ, ವೀರೋ ನಿಹಾಲ್‌ಕೌರಳನ್ನು ತನ್ನ ಬಳಿ ಕರೆದು ತನ್ನ ಎರಡೂ ಕೈಗಳನ್ನು ಅವಳ ಪಾದಗಳ ಮೇಲೆ ಊರಿ ಹೇಳಿದಳು "ಸರದಾರಿಣಿ ನಾನು ಪ್ರಪಂಚಕ್ಕೆ ಬೇಕಾದರೆ ಸುಳ್ಳು ಹೇಳಬಲ್ಲೆ. ಆದರೆ ನಿಮಗೆ ನಾನು ಸುಳ್ಳು ಹೇಳಲಾರೆ. ಈ ಹುಡುಗ ನಿಮ್ಮ ಸರದಾರನದಲ್ಲ......"

"ವೀರೋ..." ಅವಳಿಗೆ ತನ್ನ ನಾಲಿಗೆ ಗಾಬರಿಯಿಂದ ನಿಂತು ಹೋದಂತಾಯಿತು.

"ನಾನು ಸರದಾರನಿಗೆ ಯಾವುದೇ ಥರದಲ್ಲೂ ಋಣಿಯಲ್ಲ. ಆದರೆ ನಿಮಗೆ ನಾನು ಋಣಿ. ಈ ಹುಡುಗ ಕೇವಲ ಸರದಾರನ ಮನೆಯಂಗಳದಲ್ಲಿ ಆಡಿದರೆ ನಂದೇನೂ

ಹಾಳಾಗಲ್ಲ. ಆದರೆ ಈ ಹುಡುಗನನ್ನು ನಿಮ್ಮ ಮಡಿಲಲ್ಲಿ ನಾನು ಹಾಕಲಾರೆ. ಇವನು ನಿಮ್ಮ ಮಡಿಲಿಗೆ ಯೋಗ್ಯನಲ್ಲ"

"ಏನು ಹೇಳ್ತಾ ಇದ್ದೀ ವೀರೋ ನೀನು?"

"ನಾನೇನೋ ನಗುನಗುತ್ತಲೇ ಮಾಡಿದ್ದೆ. ಬಹುಶಃ ಕಾಲವು ನಗುವನ್ನು ಇದೇ ರೀತಿ ಕಚ್ಚಿಕೊಲ್ಲುತ್ತದೆ. ನಿಮ್ಮ ಹತ್ತಿರ ನಾನು ನಿಜವನ್ನೇ ಹೇಳ್ತಿದ್ದೀನಿ. ನಾನು ಮಾಡಿದ್ದಕ್ಕೆ ನನಗೆ ಯಾವುದೇ ಪಶ್ಚಾತ್ತಾಪ ಇಲ್ಲ. ನನ್ನ ಹೃದಯದಲ್ಲಿ ನಾನು ಪಶ್ಚಾತಾಪ ಪಡುತ್ತಿದ್ದರೆ ಅದು ನಿಮ್ಮ ಸಲುವಾಗಿ ಅಷ್ಟೆ.

"ವೀ.........ರೋ!"

"ನಿಮಗೆ ನೆನಪಿರಬಹುದು. ನಾನು ಕಳೆದ ವರ್ಷ ಒಂದು ಸಲ ನನ್ನ ತವರು ಮನೆಗೆ ಬಂದಿದ್ದೆ... ನಿಮ್ಮ ಗುಮಾಸ್ತ ನನ್ನನ್ನು ತವರಿಗೆ ತಲುಪಿಸಿ ಮತ್ತೆ ವಾಪಸ್ ಕರೆದುಕೊಂಡು ಹೋಗಲು ನನ್ನ ಜೊತೆ ಬಂದಿದ್ದ. ನಮ್ಮ ತಂದೆ ತಾಯಿಗಳು ಹಣ ತೆಗೆದುಕೊಂಡು ನನ್ನನ್ನು ಮುದಿ ಸರದಾರನಿಗೆ ಮದುವೆ ಮಾಡಿಕೊಟ್ಟು ಬಿಟ್ಟಿದ್ದಾರೆ ಎನ್ನುವ ಸುದ್ದಿ ಇಡೀ ಹಳ್ಳಿಯಲೆಲ್ಲಾ ಹಬ್ಬಿಬಿಟ್ಟಿತ್ತು. ಸರದಾರ್ ಎಂದೂ ಈ ಹಳ್ಳಿಗೆ ಬರಲಿಲ್ಲ. ನಮ್ಮ ಅಪ್ಪನೇ ನೀವು ಇದ್ದ ಪಟ್ಟಣಕ್ಕೆ ಕರೆದುಕೊಂಡು ಬಂದಿದ್ದ ಮತ್ತು ಗುರುದ್ವಾರದಲ್ಲಿ ಮದುವೆ ಮುಗಿದ ನಂತರ ನನ್ನನ್ನು ನಿಮ್ಮ ಮನೆಯಲ್ಲಿ ಬಿಟ್ಟು ಬಂದಿದ್ದ. ನಾನು ಊರಿಗೆ ಬಂದ ಮೇಲೆ, ಪ್ರತಿಯೊಬ್ಬರೂ ನನ್ನ ಸರದಾರ ಎಷ್ಟು ಮುದುಕ ಎಂದು ಕೇಳತೊಡಗಿದರು. ನನ್ನ ಬುದ್ಧಿಗೆ ಅದೇನು ಹೊಳೆಯಿತೋ ಏನೋ, ನಾನು ಅವರ ಕಾಟ ತಪ್ಪಿಸಿಕೊಳ್ಳಲು, ನನ್ನ ಮದುವೆ ಮುದುಕನೊಂದಿಗೆ ನಡೆಯಲಿಲ್ಲ ಎಂದು ಹೇಳಿದೆ ನಿಮ್ಮ ಗುಮಾಸ್ತ ಒಳ್ಳೆಯ ಯುವಕ, ಸುಂದರವಾಗೂ ಇದ್ದ. ಅವನನ್ನು ತೋರಿಸಿ ಇವನೇ ನನ್ನ ಯಜಮಾನ ಎಂದು ಹೇಳಿದೆ. ಇಡೀ ಊರಿಗೆ ಊರೇ ಆಶ್ಚರ್ಯ ಚಕಿತಗೊಂಡಿತು. ಗುಮಾಸ್ತನಿಗೆ ನಾನು ಈ ವಿಷಯ ಹೇಳಿದೆ. ಗುಮಾಸ್ತನು ಸುಳ್ಳನ್ನೇ ಅಪ್ಪಿಕೊಂಡನು. ನನ್ನ ಗೆಳತಿಯರು, ಕಿವಿಯ ಓಲೆಕೊಡಿಸಬೇಕು ಎಂದು ಅವನನ್ನು ಒತ್ತಾಯಿಸಿದಾಗ, ತನ್ನ ಅಕ್ಕಸಾಲಿ ಹತ್ತಿರ ಬೆಳ್ಳಿಯ ಓಲೆಗಳನ್ನು ಖರೀದಿಸಿ ಅವರಿಗೆ ಕೊಟ್ಟನು. ನಾನು ಐದಾರು ದಿನ ಇಲ್ಲಿದ್ದೆ. ದಿನವೂ ನಗುತ್ತಾ ನಗುತ್ತಾ ಇದ್ದ ಕಾರಣ ನನ್ನ ಮದುವೆ ಅವನ ಜೊತೇನೇ ಆಗಿತ್ತೇ ಹೊರತು, ಬೇರೆ ಇನ್ನಾರ ಜೊತೆಯಲ್ಲೂ ಅಲ್ಲ ಎಂದು ನನಗೂ ಅನ್ನಿಸತೊಡಗಿತು."

"ಅದೇ ನಮ್ಮ ಗುಮಾಸ್ತೆ ಮದನಸಿಂಹ.........."

"ಈಗ ನಾನು ವಾಪಸ್ ಸರದಾರನ ಮನೆಗೆ ಬರಲ್ಲ. ಈ ಹುಡುಗನನ್ನೂ ಕರೆದುಕೊಂಡು ಬರಲ್ಲ. ಅದಕೋಸ್ಕರಾನೇ ಹಟಮಾಡಿ ನಾನು ಇಲ್ಲಿಗೆ ಬಂದಿದ್ದೀನಿ. ನಾನು ಮಾಡಿದ್ದು, ನನ್ನ ಕಣ್ಣೆದುರು ಬರುತ್ತೆ. ನಾನು ನಿಮ್ಮನ್ನು ಮತ್ತಿನ್ನೇನೂ ಕೇಳಲ್ಲ ಸರದಾರಣಿ ಅಮ್ಮ. ಆ ಗುಮಾಸ್ತೆಯ ಹೆಸರನ್ನು ಸರದಾರರಿಗೆ ಹೇಳಬಾರದು ಅಂತ ಅಷ್ಟೆ ನಾನು ಕೇಳಿಕೊಳ್ಳುವುದು. ಇಲ್ಲದೆ ಹೋದರೆ ಆ ಗುಮಾಸ್ತೆಯನ್ನು ಆತ ಕೆಲಸದಿಂದ ತೆಗೆದುಬಿಡುತ್ತಾರೆ."

"ಆದರೆ ವೀರೋ ಮದನಸಿಂಹನಿಗೆ ಈಗಾಗಲೇ ಮದುವೆ ಆಗಿದೆ. ಅವನಿಗೆ ಎರಡು ಮಕ್ಕಳಿವೆ...."

"ಸರದಾರನಿಗೇನಾದರೂ ಗೊತ್ತಾಯಿತು ಅಂದರೆ ತನ್ನ ಕೆಲಸ ಹೋಗಿಬಿಡುತ್ತೆ ಅಂತ ಅವನಿಗೆ ಹೆದರಿಕೆ. ಅವನ ಕೆಲಸ ಹೋಗೋ ಹಾಗೆ ಮಾಡಿ, ನಾನು ಏನಂತ ಸಂಸಾರಸ್ಥಳಾಗಲಿ ? ಅವನು ಎಲ್ಲೇ ಇರಲಿ, ಸಂತೋಷವಾಗಿರಲಿ, ಯೌವನವಂತ ವ್ಯಕ್ತಿ ಹೇಗೆ ಇರುತ್ತಾನೆ. ಅಂತ ನಾನು ಒಂದು ಸಲವಂತೂ ನೋಡಿದೆ..............."

ನಿಹಾಲ್‌ಕೌರ್‌ಳು ಗಾಬರಿಯಿಂದ ಕಣ್ಣುಮುಚ್ಚಿಕೊಂಡಳು. ಮತ್ತೆ ಅವಳು ಕಣ್ಣುತೆರೆದಾಗ, ವೀರೋಳ ಮಡಿಲಿನಲ್ಲಿದ್ದ ಅವಳ ಮಗ ಅವಳ ಎದೆ ಹಾಲು ಕುಡಿಯಲು ತನ್ನ ಬಾಯಿ ತೆರೆಯುತ್ತಿದ್ದನು.

ಮತ್ತೆ ನಿಹಾಲ್ ಕೌರ್‌ಳಿಗೆ ಅನ್ನಿಸಿತು – ಸರದಾರನ ನೆಮ್ಮದಿಯ ಯಾವ ನಿಟ್ಟುಸಿರಿನ ಹೊಣೆಯನ್ನು ಅವಳು ಹೊತ್ತಿದ್ದಳೋ ವೀರೋ ಅದೇ ನೆಮ್ಮದಿಯ ನಿಟ್ಟುಸಿರನ್ನು ಅವಳಿಂದ ಪಡೆದುಕೊಂಡು ತನ್ನ ಎದೆಯಲ್ಲಿಟ್ಟುಕೊಂಡು ಬಿಟ್ಟಿದ್ದಳು. ಈಗ ಈ ಹುಡುಗ ವೀರೋಳ ಎದೆಯಿಂದ ಅದೇ ನೆಮ್ಮದಿಯ ನಿಟ್ಟುಸಿರನ್ನು ಹೀರಲೆತ್ನಿಸುತ್ತಿದ್ದಾನೆ–ಎಂದು.

ಮಲ್ಲಿಕಾ

ಸೂರ್ಯಕಿರಣಗಳು ಬಾಗಿ ನಿಧಾನವಾಗಿ ಗುಲಾಬಿಯ ಟೊಂಗೆಯೊಂದನ್ನು ಸ್ಪರ್ಶಿಸಿದವು. ಪುರುಷನೊಬ್ಬನ ನೋಟಗಳು ಬಾಗಿ ಸಾವಧಾನವಾಗಿ ರಾಣಿಯ ತುಟಿಗಳನ್ನು ಚುಂಬಿಸಿದವು. ಟೊಂಗೆಯ ಮೇಲೊಂದು ಹೂವು ಅರಳಿತು. ತುಟಿಗಳ ಮೇಲೊಂದು ಮುಗುಳ್ನಗೆ ಅರಳಿತು. ಆ ಪುರುಷನು ಗುಲಾಬಿಯ ಹೂವನ್ನು ಮೂಸಿ ನೋಡಿದನು. ರಾಣಿಯ ತುಟಿಗಳನ್ನು ಕೂಡಾ. ರಾಣಿಯು ಮೊದಲು ಗುಲಾಬಿಯ ಹೂಗಳನ್ನು ಕಿತ್ತು ಆ ಪುರುಷನ ಕೋಟಿಗೆ ಸಿಕ್ಕಿಸಿದಳು. ಆಮೇಲೆ ತನ್ನ ತುಟಿಗಳ ಮೇಲಿನ ಮುಗುಳ್ನಗೆಯನ್ನು ಕೈಯಿಂದ ಸ್ಪರ್ಶಿಸಿ ಅದನ್ನು ಆ ಪುರುಷನ ತುಟಿಗಳ ಮೇಲಿರಿಸಿದಳು.

ರಾಣಿಯ ಕೊಮಲ ಯುವ ತೋಳುಗಳನ್ನು ಆ ಪುರುಷ ತನ್ನ ಬಲಿಷ್ಠ ಯುವ ತೋಳುಗಳಲ್ಲಿ ಬಿಗಿದು ಬಂಧಿಸಿದನು ಹಾಗೂ ಹರೆಯದ ಹೆಣ್ಣಿನ ಕಿವಿಗಳಲ್ಲಿ ಒಬ್ಬ ಹರೆಯದ ಯುವಕನ ದನಿ ಅವಳ ಒಂದೊಂದು ಅಂಗವನ್ನು ಕುರಿತು ಶತಶತಮಾನಗಳಿಂದ ಮತ್ತೆ ಮತ್ತೆ ಹೇಳುತ್ತಾ ಬಂದಿರುವ ಅವವೇ ಉಪಮೆಗಳನ್ನು ಅವನು ರಾಣಿಯ ಕಿವಿಯಲ್ಲಿ ಪುನರುಚ್ಚರಿಸಿದನು.

ರೋಮರೋಮದಲ್ಲೂ ಉಂಟಾದ ಕಂಪನದಿಂದ ರಾಣಿಯ ನಿದ್ರೆ ಹಾರಿಹೋಯಿತು. ಕಳೆದುಹೋದ ಕ್ಷಣಗಳನ್ನು ಸೆರೆಹಿಡಿಯುವ ಸಲುವಾಗಿ ಅವಳು ಮತ್ತೆ ಕಣ್ಮುಚ್ಚಿದಳು. ಆದರೆ ಅದು ನಿಜವಲ್ಲ. ಕೇವಲ ಒಂದು ಕನಸು ಎಂಬ ಅರಿವು ಅವಳಿಗೆ ಈಗ ಬಂದಿತ್ತು. ಮಂಚದಿಂದ ನಿಧಾನವಾಗಿ ಎದ್ದು ಎದುರುಗಡೆ ಅಲ್ಮಾರಿನಲ್ಲಿದ್ದ ಒಂದು ಪತ್ರವನ್ನು ಹೊರತೆಗೆದಳು. ಕೊಠಡಿಯ ಕಿಟಕಿಯನ್ನು ತೆರೆದಳು. ಬೆಳಗಿನ ಎಳೆಯ ಬೆಳಕಿನಲ್ಲಿ ಪತ್ರವನ್ನು ಓದಿದಳು. ಅನಂತರ ಕನ್ನಡಿಯ ಮುಂದೆ ನಿಂತು ಇಂದು ರಾತ್ರಿ ಕಂಡ ಕನಸು ಕೂಡ ನಿಜವಾಗಬಹುದು ಎಂದು ತನಗೆ ತಾನೆ ಭರವಸೆ ಕೊಟ್ಟುಕೊಳ್ಳತೊಡಗಿದಳು.

ಕನ್ನಡಿಯ ಎದುರಿನಲ್ಲಿ ನಿಂತು ರಾಣಿಯು ತನ್ನ ಒಂದೊಂದೂ ಅಂಗವನ್ನು ನೋಡಿಕೊಂಡಳು. ಹಾಗೂ ರಾತ್ರಿ ಕನಸಿನಲ್ಲಿ ಕೇಳಿದ ಎಲ್ಲ ಉಪಮೆಗಳೂ ನೆನಪಾದವು. ಶ್ರೀಗಂಧದ ಕಾಂಡದಂಥ ತೋಳುಗಳು, ಬೆಂಡೆಯ ಕಾಯಿಯಂಥ ಬೆರಳುಗಳು, ಮಾವಿನ ಹೋಳಿನಂಥ ಕಣ್ಣುಗಳು ಗುಲಾಬಿಯ ಪಕಳೆಗಳಂಥ ತುಟಿಗಳು....

ಪುರುಷನೊಬ್ಬನ ಬಾಯಿಂದ ಈ ಉಪಮೆಗಳನ್ನು ಕೇಳಿದಾಗ, ಈ ಎಲ್ಲ ಉಪಮೆಗಳೂ ತನ್ನ ಅಂಗಾಂಗಗಳಿಗೋಸ್ಕರವೇ ಮಾಡಿದಂಥವು ಎಂದು ಪ್ರತಿಯೊಬ್ಬ ಹೆಣ್ಣಿಗೂ ಅನ್ನಿಸುವ ಹಾಗೆ, ರಾಣಿಗೂ ಈ ಎಲ್ಲ ಉಪಮೆಗಳೂ ತನ್ನ ದೇಹದ ಅಂಗಗಳ ಸಲುವಾಗಿಯೇ ಆದಂಥವು ಇಲ್ಲವೆ, ಅಂಗಗಳು ಈ ಉಪಮೆಗಳಿಗೋಸ್ಕರವೇ ಆದಂಥವು ಎಂದು ಅನ್ನಿಸತೊಡಗಿತು.

ರಾಣಿಯು ಕೊಠಡಿಯ ಬಾಗಿಲು ತೆಗೆದಳು. ಹೊರಗಡೆಯ ಗಾರ್ಡನ್‌ನಲ್ಲಿದ್ದ ತೋಟದಲ್ಲಿ ಗುಲಾಬಿಯ ಗಿಡದಿಂದ ಒಂದು ಹೂ ಕಿತ್ತಳು. ತುಟಿಗಳ ಮೇಲೊಂದು ಮುಗುಳ್ನಗೆಯನ್ನು ತಂದುಕೊಂಡು ಎದುರಿನ ಉದ್ದನೆಯ ರಸ್ತೆಯ ಕಡೆಗೆ ನೋಡ ತೊಡಗಿದಳು. ಆ ನೋಟ ಹೇಗಿತ್ತೆಂದರೆ, ಅವಳಿಗೆ ಪತ್ರ ಬರೆದ ವ್ಯಕ್ತಿ ಈಗಲೇ ಈ ದಾರಿಯ ಮೇಲೆ ವೇಗವಾಗಿ ಹೆಜ್ಜೆ ಹಾಕುತ್ತಾ ಅವಳನ್ನು ಸಮೀಪಿಸಿ, ಅವಳ ಕೈಯಲ್ಲಿರುವ ಹೂವನ್ನು ಮತ್ತು ಅವಳ ತುಟಿಯ ಮೇಲೆ ಅರಳಿರುವ ನಗೆಯನ್ನು ಮೂಸುವನೇನೋ ಎಂಬಂತೆ.

ರಾಣಿಯು ಸ್ವಲ್ಪ ಹೊತ್ತು ಎದುರುಗಡೆಯ ರಸ್ತೆಯನ್ನು ನೋಡುತ್ತಿದ್ದಳು. ಅನಂತರ ಅವಳಿಗೆ 'ರಾಣಿ ರಾಣಿ' ಎಂಬ ಮೆಲ್ಲನೆಯ ದನಿ ಕೇಳಿಸಿತ್ತು. ಆದರೆ ಈ ದನಿ ಎದುರಿನ ರಸ್ತೆಯ ಕಡೆಯಿಂದ ಕೇಳಿಬಂದಿರಲಿಲ್ಲ. ಹಿಂದುಗಡೆಯಿಂದ, ರಾಣಿಯ ಅಕ್ಕನ ಕೋಣೆಯಿಂದ ಬಂದಿತ್ತು. ರಾಣಿಯು ಹಗುರವಾದೊಂದು ನಿಟ್ಟುಸಿರು ಬಿಟ್ಟು, ಅಕ್ಕನ ಕೊಠಡಿಯ ಕಡೆ ಹೋಗುತ್ತ 'ಹಾ ಮಲ್ಲಿಕಾ, ಬರುತ್ತಾ ಇದ್ದೀನಿ' ಎಂದು ಹೇಳಿದಳು.

ಭದ್ರವಾಗಿ ಮುಚ್ಚಿದ ಬಾಗಿಲನ್ನು ದಬ್ಬಿಕೊಂಡು ರಾಣಿ ಅಕ್ಕನ ಕೊಠಡಿಯನ್ನು ಪ್ರವೇಶಿಸಿದಾಗ, ಅವಳ ಅಕ್ಕ "ಬಾಗಿಲು ಹಾಕಿಬಿಡು ರಾಣಿ! ಇವತ್ತು ಗಾಳಿ ಬಹಳ ಜೋರಾಗಿ ಬೀಸುತ್ತಾ ಇದೆ" ಎಂದು ತುಂಬ ತ್ವರೆಯಿಂದ ಹೇಳಿದಳು.

"ಆದರೆ ಇವತ್ತು ಹವೆ ಬಹಳ ಚೆನ್ನಾಗಿದೆ ಎಂದು ರಾಣಿ ಒಮ್ಮೆ ಹೇಳಿ ಬಾಗಿಲು ಮುಚ್ಚಿದಳು.

"ಗಾಳಿ ನನ್ನ ಮೂಳೆಗಳನ್ನು ಕೊರೀತಾ ಇದೆ. ನನ್ನ ಕೈಯಲ್ಲಿ ಸ್ವಲ್ಪವೂ ತಡೆದು ಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ಹಾಗೆ ಹೇಳುತ್ತಾ ಮಲ್ಲಿಕಾ ತಾನು ಹೊದ್ದುಕೊಂಡಿದ್ದ ಕಂಬಳಿಯ ಅಂಚನ್ನು ಎಳೆದುಕೊಂಡು ಇನ್ನಷ್ಟು ಬಿಗಿಯಾಗಿ ಹೊದ್ದುಕೊಂಡಳು.

"ರಾತ್ರಿ ನಿದ್ದೆ ಹೇಗೆ ಬಂತು"– ಮಂಚದ ತುದಿಗೆ ಕೂಡುತ್ತ ರಾಣಿ ಮೆಲ್ಲಗೆ ಕೇಳಿದಳು.

"ಈ ಹೊತ್ತು ರಾತ್ರಿ ಏನು ನಿತ್ಯಕ್ಕಿಂತ ವಿಶೇಷವಾದ ರೀತಿಯ ನಿದ್ದೆ ಬರೋದಿತ್ತೇನು? ಅದೇ ದಿನಾ ಬರೋ ಹಾಗೆ ಬಿಟ್ಟೂ ಬಿಟ್ಟೂ ನಿದ್ದೆ"

ರಾಣಿ ಸ್ವಲ್ಪ ಹೊತ್ತು ಸುಮ್ಮನಿದ್ದಳು. ಅನಂತರ ಇದ್ದಕ್ಕಿದ್ದ ಹಾಗೆ ಅವಳ ಬಾಯಿಂದ "ಯಾವಾಗಲಾದರೂ ನಿನಗೆ ಕನಸುಗಳು ಬೀಳುತ್ತಿರಬಹುದಲ್ಲವೆ ಮಲ್ಲಿಕಾ?" ಎಂಬ ಮಾತು ಹೊರಬಿತ್ತು.

ರಾಣಿ ಬಹುಶಃ ತಾನು ರಾತ್ರಿ ಕಂಡ ಕನಸಿನ ಬಗ್ಗೆ ಯೋಚಿಸಿದಷ್ಟು ಮಲ್ಲಿಕಾಳ ಕನಸಿನ ವಿಚಾರವಾಗಿ ಯೋಚಿಸುತ್ತಿದ್ದಿರಲಾರಳು. ಅಲ್ಲದೆ ಕನಸುಗಳ ವಿಷಯ ಪ್ರಸ್ತಾಪಿಸುವ ಮೂಲಕ ತನ್ನ ಅಕ್ಕನಿಗೆ ತನ್ನ ರಾತ್ರಿಯ ಕನಸನ್ನು ಕುರಿತು ಹೇಳಬೇಕೆಂದಿದ್ದಳು. "ಕನಸುಗಳಾ? ಕನಸಗಳನ್ನಂತೂ ಇಡೀ ಜೀವಮಾನ ಪರ್ಯಂತ ಕಾಣುತ್ತಲೇ ಬಂದಿದ್ದೀನಿ. ನಿದ್ರೆಯಲ್ಲಿ ಕನಸು ಕಾಣೋದೇನು, ಎಚ್ಚರದಲ್ಲಿ ಕನಸು ಕಾಣೋದೇನು!"

"ಈ ಕನಸುಗಳು ನಿಜವಾದವೋ ಅಲ್ಲವೋ ? ನಸುಕಿನ ಕನಸುಗಳು ನಿಜವಾಗುತ್ತವೆ ಅಂತ ಹೇಳ್ತಾರೆ."

"ಈ ನಸುಕು ಬಹಳ ಚೆನ್ನಾಗಿರುತ್ತೆ. ನಿನ್ನಂಥ ಹಾಗೂ ನನ್ನಂಥ ಹೆಂಗಸರನ್ನು ಮರುಳು ಮಾಡೋದಕ್ಕೆ ಬರುತ್ತದೆ."

"ಕನಸುಗಳು ನಿಜವಲ್ಲವೇ?"

ಕನಸುಗಳು ನಿಜವಲ್ಲ. ಅವು ಕೇವಲ ಗಾಯವುಂಟು ಮಾಡುತ್ತವೆ"

"ಮಲ್ಲಿಕಾ"

"ಬಿಟ್ಟುಹಾಕು ಅತ್ಲಾಗೆ ಈ ಕನಸುಗಳ ವಿಷಯವನ್ನು. ಈ ಕನಸುಗಳ ಬಗ್ಗೆ ಮಾತಾಡಿ ಮಾತಾಡಿ ನನ್ನ ನಾಲಿಗೆ ಬಿದ್ದು ಹೋಗಿದೆ".

"ಏಳು ಮಲ್ಲಿಕಾ ಹೊರಗಡೆ ತೋಟದಲ್ಲಿ ಸುತ್ತಾಡೋಣ. ಹೊರಗಡೆ ಎಂಥ ಹವಾಮಾನ ಇದೆ ನೋಡೋಣ"

"ಎಂಥ ಹವಾಮಾನ ಇದೆ?"

"ವಸಂತ ಋತುವಿನ ಹವಾಗುಣ ಇದೆ"

"ಹುಚ್ಚಿ"!

"ಇಲ್ಲ ಮಲ್ಲಿಕಾ! ಖಂಡಿತಾ ವಸಂತದ ಹವಾಗುಣ ಇದೆ"

"ಈ ಪ್ರಪಂಚದಲ್ಲಿ ವಸಂತದ ಹವಾಗುಣ ಯಾವುದೂ ಇರುವುದಿಲ್ಲ ರಾಣಿ! ಅದೆಲ್ಲ ಹಾಳು ಬಿದ್ದಿರೋಂಥದು. ಅದೇ ಒಮ್ಮೊಮ್ಮೆ ವಸಂತದ......... ಸೋಗು ಹಾಕುತ್ತೆ"

"ರಾಣಿಯ ಕೈ ಗಾಬರಿಯಿಂದ ಅವಳ ಎದೆ ಮೇಲಕ್ಕೆ ಹೋಯಿತು. ಅಲ್ಮಾರುವಿನಿಂದ ತೆಗೆದು ಇದೇ ನಸುಕಿನಲ್ಲಿ ರಾಣಿ ಓದಿದ್ದ ಪತ್ರ ಈಗ ಅವಳ ರವಿಕೆಯೊಳಗೆ ಇತ್ತು.

"ಏನು ಸಮಾಚಾರ ರಾಣಿ"?

"ಈ ಪತ್ರ ...."

"ಬಹಳ ಚೆನ್ನಾಗಿದೆಯೇನು?"

"ಹೌದು ಬಹಳ ಚೆನ್ನಾಗಿ"

"ಜೀವನದ ಪ್ರತಿಜ್ಞೆಗಳಿಂದ ತುಂಬಿದೆಯೇನು?"

"ಹೌದು ಜೀವನದ ಪ್ರತಿಜ್ಞೆಗಳಿಂದ ತುಂಬಿಬಿಟ್ಟಿದೆ"

"ಈ ಶಬ್ದಗಳನ್ನು ನೀನು ಈ ಮುಂಚೆ ಎಂದೂ ಕೇಳಿರಲಿಲ್ಲವೇನು?"

"ಆದರೆ ಮಲ್ಲಿಕಾ"

"ಈ ಎಲ್ಲಾ ಶಬ್ದಗಳೂ ಡಿಕ್ಷನರಿಯಲ್ಲಿರುತ್ತವೆ"

"ಆದರೆ ಯಾರಾದರೂ ಇವುಗಳನ್ನು ಪತ್ರದಲ್ಲಿ ಬರೆದರು ಅಂದರೆ..... ಆಗ ಇವುಗಳಿಗೇನೂ ಅರ್ಥವಿಲ್ಲದಿರುವ ಕಾರಣ ಎಲ್ಲ ಕಾಲದ ನಿಘಂಟಿನಲ್ಲಿ ಇದಕ್ಕೆ ಅರ್ಥಗಳಿರುತ್ತವೆ."

"ನನ್ನ ಮಂಚದ ತುದಿಯಲ್ಲಿ ಒಂದು ಬೀಗದ ಕೈ ಬಿದ್ದಿದೆ. ಈ ಬೀಗದ ಕೈ ತೆಗೆದು ಕೊಂಡು ನನ್ನ ಎದುರುಗಡೆ ಇರುವ ಅಲ್ಮಾರವನ್ನು ತೆರೆದುನೋಡು. ಅದರಲ್ಲಿ ಒಂದಲ್ಲ, ಹಲವಾರು ಪತ್ರಗಳು ಬಿದ್ದಿವೆ. ನಿನ್ನ ಈ ಪತ್ರದಂಥ ಹಲವಾರು ಪತ್ರಗಳು ಬಿದ್ದಿವೆ...."

"ಈ ಹೊತ್ತು ನೀನು ಒಪ್ಪದೆ ಇರಬಹುದು. ಆದರೆ ನಿನ್ನನ್ನು ಒಬ್ಬ ಡಾಕ್ಟರ್ ಹತ್ತಿರ ಖಂಡಿತ ಕರೆದುಕೊಂಡು ಹೋಗ್ತೀನಿ. ದಿನದಿಂದ ದಿನಕ್ಕೆ ನಿನ್ನ ಸ್ಥಿತಿ ನೋಡು ಹೇಗೆ ಆಗ್ತಾ ಇದೆ"?

ರಾಣಿಯು ಗಮನವಿಟ್ಟು ಮಲ್ಲಿಕಾಳ ಮುಖದ ಕಡೆ ನೋಡಿದಳು. ರಾತ್ರಿ ಅವಳು ಕನಸಿನಲ್ಲಿ ಕೇಳಿದ ಆ ಎಲ್ಲಾ ಉಪಮೆಗಳು ನೆನಪಾದವು. ಮಲ್ಲಿಕಾಳ ಮುಖದ ಮೇಲೆ ಸಹಿಸಲಾಗದೆ ಇರುವಂಥ ಮಲ್ಲಿಕಾಳ ಆ ರೂಪವೂ ರಾಣಿಯ ನೆನಪಿನಲ್ಲಿ ಸುಳಿದುಹೋಯಿತು.

ಮಲ್ಲಿಕಾ ಬಹಳ ಸುಂದರವಾಗಿದ್ದಳು. ಅಷ್ಟೇ ಅಲ್ಲ, ರಾಣಿಗಿಂತಲೂ ಎಷ್ಟೋ ಪಾಲು ಸುಂದರವಾಗಿದ್ದಳು ಎನ್ನುವುದು ನಿಜ. ಕಾರಣ ಅವಳ ಶರೀರದ ಆ ರೂಪದಲ್ಲಿ ಮನಸ್ಸಿನ ರೂಪವೂ ಸೇರಿಕೊಂಡುಬಿಟ್ಟಿತ್ತು. ರಾಣಿಗೂ ಅದು ಗೊತ್ತಿತ್ತು. ಹಾಗಾಗಿ ಮಲ್ಲಿಕಾಳ ಕಡೆ ನೋಡಿದ ಕೂಡಲೇ ರಾಣಿ ಕಂಪಿಸತೊಡಗಿದಳು.

ಈ ದಿನ ಹಾಸಿಗೆಯ ಮೇಲೆ ಮಲಗಿರುವವಳು ಮಲ್ಲಿಕಾ ಅಲ್ಲ, ಹೆಣ್ಣಿನ ಸೌಂದರ್ಯಕ್ಕೆ ಕೊಡಬಹುದಾದ ಈ ಪ್ರಪಂಚದ ಪ್ರತಿಯೊಂದು ಉಪಮೆಯೂ ಕಾಯಿಲೆ ಮಲಗಿದೆಯೇನೋ ಎನ್ನುವ ಹಾಗೆ. ಮಲ್ಲಿಕಾಳ ಕಡೆ ನೋಡಿದ ಕೂಡಲೇ ರಾಣಿ ಕಂಪಿಸತೊಡಗಿದಳು.

ರಾಣಿ ಚಹಾ ಮಾಡಿದಳು. ಮಲ್ಲಿಕಾಳಿಗೂ ಕುಡಿಸಿದಳು. ತಾನೂ ಕುಡಿದಳು. ಆನಂತರ ಬಲವಂತವಾಗಿ ಮಲ್ಲಿಕಾಳನ್ನು ನಗರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಳು.

ಆಸ್ಪತ್ರೆಯಲ್ಲಿ ತುಂಬ ಜನ ಇದ್ದರು. ರಾಣಿ ಈ ಮುಂಚೆ ಎಂದೂ ಆಸ್ಪತ್ರೆಗೆ ಬಂದಿರಲಿಲ್ಲ. ಇಡೀ ಪ್ರಪಂಚವೆಲ್ಲ ಒಮ್ಮೆಗೇ ಖಾಯಿಲೆ ಮಲಗಿಬಿಟ್ಟಿದೆಯೇನೋ ಎಂದು ಅವಳಿಗೆ ಅನ್ನಿಸಿತು.

ಡಾ. ಶ್ರೀಚಂದ್ ಆಸ್ಪತ್ರೆಯ ಬಹಳ ದೊಡ್ಡ ಡಾಕ್ಟರ್, ರಾಣಿಯು ಅವರ ಕೊಠಡಿಯ ವಿಳಾಸ ತಿಳಿದುಕೊಂಡು ಮಲ್ಲಿಕಾಳನ್ನು ಅವರ ಕೊಠಡಿಯ ಹೊರಗಡೆ ಒಂದು ಮೂಲೆಯಲ್ಲಿ ಕೂಡಿಸಿ, ಸರದಿಗಾಗಿ ಕಾಯುತ್ತಾ ಕುಳಿತಳು.

ಮಧ್ಯಾಹ್ನವಾಯಿತು. ಮಲ್ಲಿಕಾಳ ಹಳದಿ ಬಣ್ಣದ ಮೇಲೆ ಇನ್ನೊಂದು ಹಳದಿ ಛಾಯೆ ಆವರಿಸಿಕೊಂಡಿತು. ಗೋಡೆಯನ್ನು ಒರಗಿಕೊಂಡು ಮಲ್ಲಿಕಾ ನಿಧಾನವಾಗಿ ರಾಣಿಗೆ ಹೇಳಿದಳು– "ಯಾಕೆ ನನ್ನನ್ನು ಯಾರೋ ಅಪರಿಚಿತರ ಮನೆ ಬಾಗಿಲಿಗೆ ಕರೆದುಕೊಂಡು ಬಂದು ಸಾಯಿಸ್ತೀಯ? ಸಾಯೋದೇ ಆದರೆ ನನ್ನ ಮಂಚದ ಮೇಲೆ ಮಲಗಿ ಕೊಂಡಿದ್ದ ಹಾಗೇ ಸತ್ತುಹೊಗ್ತೀನಿ. ನನ್ನ ಕೊಠಡಿಯ ಬಾಗಿಲಿನ ಮುಂದೆ..."

"ಇನ್ನೇನು ಮುಂದಿನ ಸರದಿ ನಮ್ಮದೇ. ಈಗ ಎಲ್ಲಾ ರೋಗಿಗಳದ್ದೂ ಮುಗಿಯಿತು."

ಅಂತೂ ಕೊನೆಗೆ ಮಲ್ಲಿಕಾಳ ಸರದಿ ಬಂದಿತು. ರಾಣಿ ತನ್ನ ಭುಜದ ಆಧಾರ ಕೊಟ್ಟು ಅವಳನ್ನು ಡಾಕ್ಟರ್ ಕೋಣೆಗೆ ಕರೆದೊಯ್ದಳು.

ಡಾಕ್ಟರರು ತಮ್ಮ ಮೇಜಿನ ಮೇಲಿಟ್ಟಿದ್ದ ಆಸ್ಪತ್ರೆಯ ಪಾರ್ಮ್ ಅನ್ನು ನೋಡಿ ಕೈಯಲ್ಲಿ ಪೆನ್ನು ಹಿಡಿದು "ರೋಗಿಯ ಹೆಸರೇನು?" ಎಂದು ಕೇಳಿದರು.

"ಮಲ್ಲಿಕಾ"

"ಮಲ್ಲಿಕಾ"? ಅವಳ ಹರಡಿಕೊಂಡ ಉಡುಗೆಯ ಕಡೆಗೊಮ್ಮೆ ಪಸರಿಸಿದ ರೂಪದ ಕಡೆಗೊಮ್ಮೆ ನೋಡಿ ಮುಗುಳ್ನಗುತ್ತ ಫಾರ್ಮ್ ಮೇಲೆ "ಮಲ್ಲಿಕಾ" ಎಂದು ಬರೆದುಕೊಂಡರು.

ಮಲ್ಲಿಕಾಳ ಹಣೆಯ ಮೇಲೊಂದು ತೆಳುವಾದ ಮಡಿಕೆಗೆರೆ ಮೂಡಿತು. ಆಮೇಲೆ ಅವಳು ನಕ್ಕು ಹೇಳಿದಳು– "ಇದೇನು ಆಶ್ಚರ್ಯದ ಸಂಗತಿಯಲ್ಲ. ನನ್ನ ಬಳಿ ಒಂದು ದೊಡ್ಡ ಸಾಮ್ರಾಜ್ಯವೇ ಇದೆ. ಅದರಿಂದ ನನ್ನ ಹೆಸರು ಮಲ್ಲಿಕಾ"

ಡಾಕ್ಟರು ಬಹುಶಃ ಸಾಮ್ರಾಜ್ಯದ ಹೆಸರು ಕೇಳುತಾ ಇದ್ದರು. ಆದರೆ ಅವರು ಮಲ್ಲಿಕಾಳ ಕಣ್ಣುಗಳ ಕಡೆಗೆ ನೋಡಿದರು. ಕಣ್ಣುಗಳ ನೋಟ ಬಹಳ ಎಚ್ಚರದಿಂದ ಕೂಡಿದ್ದು ತೀಕ್ಷ್ಣವಾಗಿತ್ತು. ಡಾಕ್ಟರ್ ಕೇವಲ– "ಏನು ತೊಂದರೆ ಎಂದಷ್ಟೇ ಕೇಳಿದರು.

"ಒಂದು ನನಗೆ ತುಂಬಾ ಹಸಿವಾಗುತ್ತೆ. ಯಾವುದರಿಂದಲೂ ಹಸಿವು ಅಡಗುವುದಿಲ್ಲ. ಅಲ್ಲದೆ ತುಂಬಾ ಬಾಯಾರಿಕೆ ಆಗುತ್ತೆ."

"ಇದಕ್ಕೆ ಅಸಹಜ ಹಸಿವು ಎನ್ನುತ್ತಾರೆ."

"ಇದನ್ನು ಅಸಹಜ ಹಸಿವು ಎನ್ನುತ್ತಾರೋ ಸಹಜವಾದ ಹಸಿವು ಅನ್ನೋತ್ತಾರೋ ಗೊತ್ತಿಲ್ಲ. ಎಷ್ಟೋ ಸಲ ಬಾಟಲ್‌ಗಳ ಮೇಲೆ ತಪ್ಪು ಲೇಬಲ್‌ಗಳನ್ನು ಅಂಟಿಸಿಬಿಡಲಾಗುತ್ತದೆ."

ಡಾಕ್ಟರರು ಕಿಂಚಿತ್ ಚಕಿತಗೊಂಡರು. ಆಮೇಲೆ ಸಂಬಾಳಿಸಿಕೊಂಡು, ಮಲ್ಲಿಕಾಳನ್ನು ಕೊಠಡಿಯ ಬಲಮೂಲೆಯಲ್ಲಿದ್ದ ಟೇಬಲ್ ಮೇಲೆ ಹಾಸಿದ್ದ ಚಾದರದ ಮೇಲೆ ಮಲಗಿ ಕೊಳ್ಳಲು ಹೇಳಿದರು. ರೋಗಿಗಳನ್ನು ಅವರು ಪರೀಕ್ಷಿಸುತ್ತಿದ್ದುದು ಅಲ್ಲಿಯೇ.

ಮಲ್ಲಿಕಾ ಅದರ ಮೇಲೆ ಮಲಗಿದಳು. ಡಾಕ್ಟರರು ಟೇಬಲ್ ಮೇಲಿರಿಸಿದ್ದ ಕಾಲಿಂಗ್ ಬೆಲ್ ಒತ್ತಿದರು. ಬಾಗಿಲ ಕಡೆ ನೋಡಿದರು. ಕೆಲವು ನಿಮಿಷಗಳು ಕಳೆದವು. ಡಾಕ್ಟರರು ಮತ್ತೆ ಕಾಲಿಂಗ್ ಬೆಲ್ ಒತ್ತಿದರು. ಆದರೆ ಬಾಗಿಲಿನಿಂದ ಯಾರೂ ಒಳಗೆ ಬರಲಿಲ್ಲ.

"ಸಿಸ್ಟರ್ ಎಲ್ಲಿಗೆ ಹೋದರು ಅಂತ ಗೊತ್ತಿಲ್ಲವೇನು?" ಎಂದು ಹೇಳಿ ಮತ್ತೊಮ್ಮೆ ಬೆಲ್ ಒತ್ತಿದರು. ಜವಾನ ಒಳಗೆ ಬಂದ. ಡಾಕ್ಟರ್ ಸ್ವಲ್ಪ ಸಿಟ್ಟು ಮಾಡಿಕೊಂಡು ಬೇಗನೇ ನರ್ಸ್ ಅನ್ನು ಹುಡುಕಿಕೊಂಡು ಕರೆತರಲು ಅವನಿಗೆ ಹೇಳಿದರು.

"ಈಗ ನರ್ಸ್‌ದೇನೂ ಕೆಲಸವಿಲ್ಲ ಡಾಕ್ಟ್ರೇ" ಮಲ್ಲಿಕಾ ಮೆಲ್ಲಗೆ ಹೇಳಿದಳು.

"ಆದರೆ ನರ್ಸ್ ಬಾರದ ಹೊರತು, ನಾನು ನಿಮ್ಮ ಹತ್ತಿರ ಬಂದು ನಿಮ್ಮನ್ನು ಎಕ್ಸಾಮಿನ್ ಮಾಡಕ್ಕಾಗಲ್ಲ. ಪಕ್ಕದಲ್ಲಿ ಯಾರಾದರೂ ನರ್ಸ್ ಇಲ್ಲದೆ ಇದ್ದರೆ, ಯಾರೇ ಜಂಟ್ಸ್ ಡಾಕ್ಟರ್ ಸ್ತ್ರೀರೋಗಿಯ ಶರೀರದ ಮೇಲೆ ಕೈ ಹಾಕಲಾಗದು". ಡಾಕ್ಟರ್ ಹೇಳಿದರು.

"ಯಾರೇ ಸೆನ್ಸಿಬಲ್ ಡಾಕ್ಟರ್ ಒಬ್ಬ ಸ್ತ್ರೀ ರೋಗಿಯ ಶರೀರದ ಮೇಲೆ ಕೈ ಹಾಕುತ್ತಾರೆ

ಅಂದರೆ, ಕೆಟ್ಟ ದೃಷ್ಟಿಯಿಂದ ಅಲ್ಲ ಅಂತ ಸಾಕ್ಷಿ ಹೇಳೋಕೆ ತಾನೇ" ಮಲ್ಲಿಕಾ ನಗತೊಡಗಿದಳು. ಮಲ್ಲಿಕಾ ರೋಗಿಯಾಗಿದ್ದಳು. ಆದರೆ ಅವಳ ನಗೆ ರೋಗಿಯಾಗಿರಲಿಲ್ಲ.

"ಹೌದು ಅದೇ ಕಾರಣಕ್ಕೆ"

"ಅಂದರೆ ಒಬ್ಬ ಪುರುಷನ ಕೈ ಒಂದು ಹೆಣ್ಣನ್ನು ಸ್ಪರ್ಶಿಸಿತು ಅಂದರೆ ಅದರ ಸಹಜವಾದ ಕಾರಣ ಒಂದೇ– ಆ ಕೈ ಡಾಕ್ಟರ್‌ದಾದರೂ ಅಷ್ಟೇ, ಮತ್ತು ಆ ಶರೀರ ರೋಗಿಯದಾದರೂ ಅಷ್ಟೇ.

"ಇದು ನಮ್ಮ ಆಸ್ಪತ್ರೆಯ ನಿಯಮ. ಆಸ್ಪತ್ರೆಯ ಕಾನೂನು".

"ನಮ್ಮ ಈ ಪ್ರಪಂಚದಲ್ಲಿ ನಿಯಮಗಳು ಮತ್ತು ಕಾನೂನುಗಳ ಬೆಳೆ ಆಗುವಷ್ಟು ಗೋಧಿ ಬೆಳೆ ಆಗಲ್ಲ. ಹೌದಲ್ಲವೆ ಡಾಕ್ಟ್ರೆ?"

ಡಾಕ್ಟರು ಚಕಿತಗೊಂಡು ಸ್ತ್ರೀ ರೋಗಿಯ ಕಡೆ ನೋಡಿದರು. ಬಹುಶಃ ಏನೋ ಹೇಳಲು ಹೊರಟಿದ್ದರು. ಅಷ್ಟು ಹೊತ್ತಿಗೆ ನರ್ಸ್ ಬಂದುಬಿಟ್ಟಳು. ಡಾಕ್ಟ್ರು ರೋಗಿಗೆ ಏನಾದರೂ ಹೇಳುವ ಬದಲು ನರ್ಸ್‌ಗೆ ಹೇಳಿದರು– "ಒಬ್ಬ ಪೇಷೆಂಟ್ ಅನ್ನು ನೋಡುವುದಿದೆ."

ನರ್ಸ್ ಮಲ್ಲಿಕಾಳ ಹತ್ತಿರ ನಿಂತಳು. ಡಾಕ್ಟರು ಆಕೆಯ ನಾಡಿ ಹಿಡಿದು ನೋಡುತ್ತ ಕೇಳಿದರು – "ಶರೀರದಲ್ಲಿ ಎಲ್ಲಾದರೂ ನೋವಿದೆಯೇನು?"

"ಪ್ರತಿಯೊಂದು ನರನರದಲ್ಲೂ" ಮಲ್ಲಿಕಾ ಹೇಳಿದಳು. ಡಾಕ್ಟರ್ ಸ್ಟೇಥಾಸ್ಕೋಪ್ ಇಟ್ಟು "ಧೀರ್ಘವಾಗಿ ಉಸಿರಾಡಿ" ಎಂದು ಹೇಳಿದರು.

"ನಾನು ಯಾವಾಗಲೂ ದೀರ್ಘವಾಗೇ ಉಸಿರಾಡ್ತೀನಿ"

"ಉಸಿರಾಡಲು ಕಷ್ಟವಾಗುತ್ತದೆಯೇ?"

"ಪ್ರತಿಸಲ ಉಸಿರಾಡುವಾಗಲೂ"

ಆನಂತರ ಡಾಕ್ಟರ್‌ರು ಹೃದಯ ಪರೀಕ್ಷೆ ಮಾಡಿದರು.

"ಹಾರ್ಟ್ ಎನ್ ಲಾರ್ಜ್ ಆಗಿಲ್ಲ" ಎಂದರು.

"ದೊಡ್ಡದಾಗದೇ ಇದ್ದರೆ ಚಿಕ್ಕದಂತೂ ಖಂಡಿತ ಆಗಿರಬೇಕು" ಮಲ್ಲಿಕಾ ನಿಧಾನವಾಗಿ ಹೇಳಿದಳು. ಡಾಕ್ಟರ್ ಒಂದು ಆಳವಾದ ನೋಟದಿಂದ ಮಲ್ಲಿಕಾಳ ಕಡೆ ನೋಡಿ ನರ್ಸ್ ಹತ್ತಿರ ಹೇಳಿದರು– "ರಕ್ತ ಪರೀಕ್ಷೆ ಮಾಡಬೇಕಾಗುತ್ತೆ. ಅದರ ನಂತರವೇ ನಾನು ಏನಾದರೂ ಹೇಳಲಿಕ್ಕೆ ಸಾಧ್ಯ"

ಡಾಕ್ಟರ್‌ರು ತಮ್ಮ ಕುರ್ಚಿಯ ಮೇಲೆ ಕುಳಿತು, ತಮ್ಮೆದುರಿನ ಮೇಜಿನ ಮೇಲಿದ್ದ ಆಸ್ಪತ್ರೆಯ ಫಾರ್ಮಿನ ಖಾಲಿ ಜಾಗವನ್ನು ತುಂಬಲು ಮಲ್ಲಿಕಾಳನ್ನು ಪ್ರಶ್ನಿಸತೊಡಗಿದರು.

"ವಯಸ್ಸು?"

"ಅದೇ, ಯಾವಾಗ ಮನುಷ್ಯ ಈ ಜೀವನದಲ್ಲಿ ಪ್ರತಿಯೊಂದು ವಸ್ತುವಿನ ವಿಷಯದಲ್ಲಿ ಯೋಚನೆ ಮಾಡೋದಕ್ಕೆ ಶುರು ಮಾಡ್ತಾನೋ ಹಾಗೂ ಯೋಚನೆ ಮಾಡ್ತಾನೇ ಹೋಗುತ್ತಾನೋ..... ಮೂವತ್ತು –ಮೂವತ್ತೆರಡು ವರ್ಷ"

"ನಿಮ್ಮ ಯಜಮಾನರ ಹೆಸರು?"

"ನನಗೆ ಯಾರಾದರೊಬ್ಬ ಯಜಮಾನರು ಇದಾರೆ ಅಂತ ಹೇಳೋಕೆ ನಾನೇನು ಸೈಕಲ್ಲೋ ವಾಚೋ? ನಾನು ಹೆಣ್ಣು?"

"ನನ್ನ ಮಾತಿನ ಅರ್ಥ ನಿಮ್ಮ ಪತಿಯವರ ಹೆಸರು ?"

"ನಾನು ನಿರುದ್ಯೋಗಿ. ನಾನು ಯಾವುದೂ ನೌಕರಿ ಮಾಡ್ತಾ ಇಲ್ಲ."

"ನಾನು ನಿಮ್ಮ ನೌಕರಿಯ ಬಗ್ಗೆ ಕೇಳ್ತಾ ಇಲ್ಲ"

"ನನ್ನ ಮಾತಿನ ಅರ್ಥ ನಾನು ಯಾರ ಹೆಂಡತೀನೂ ಆಗಿಲ್ಲ.

"ಹೆಂಡತಿ ಆಗಿಲ್ಲವೆ?"

"ನನ್ನ ಮಾತಿನ ಅರ್ಥ, ಪ್ರತಿಯೊಬ್ಬರೂ ಒಂದಲ್ಲ ಒಂದು ಕೆಲಸದಲ್ಲಿರುತ್ತಾರೆ. ಹೇಗೆ ಅಂದರೆ ನೀವು ಡಾಕ್ಟ್ರಾಗಿದ್ದೀರಿ. ಹತ್ತಿರ ನಿಂತಿರೋ ಈ ಹುಡುಗಿ ನರ್ಸ ಆಗಿದ್ದಾಳೆ ಈ ಕೊಠಡಿಯ ಬಾಗಿಲ ಆಚೆ ನಿಂತಿರುವ ವ್ಯಕ್ತಿ ಪ್ಯೂನ್ ಆಗಿದ್ದಾನೆ. ಅದೇ ಥರ ಜನ ಮದುವೆ ಆದರು. ಅಂದರೆ, ಪುರುಷರು ಯಜಮಾನ ಆಗುತ್ತಾರೆ. ಸ್ತ್ರೀಯರು ಹೆಂಡತಿಯರಾಗುತ್ತಾರೆ."

ಡಾಕ್ಟರರು ಕೈಯಲ್ಲಿ ಹಿಡಿದಿದ್ದ ಪೆನ್ನನ್ನು, ಅದರಲ್ಲಿ, ಇಂಕು ಬರೋದು ನಿಂತು ಹೋಗಿದೆಯೇನೋ ಎನ್ನುವಂತೆ ಜೋರಾಗಿ ಕೊಡವಿದರು.

"ಯಾಕೆ ಡಾಕ್ಟ್ರೆ ನಾನು ಹೇಳಿದ್ದು ಸರಿಯಲ್ಲವೇ? ಕೆಲವೊಂದು ಉದ್ಯೋಗದಲ್ಲಿ ಕೆಲವರಿಗೆ ಬಡ್ತೀನೂ ಸಿಕ್ಕುತ್ತೆ. ಈ ಹೊತ್ತು ಲೆಫ್ಟಿನೆಂಟ್ ಆಗಿ ಅಪಾಯಿಂಟ್ ಆದವನು ನಾಳೆ ಕರ್ನಲ್ ಆಗಿ ಬಿಡುತ್ತಾನೆ. ಬ್ರಿಗೆಡಿಯರ್ ಆಗುತ್ತಾನೆ. ಜನರಲ್ ಕೂಡಾ ಆಗ್ತಾನೆ. ಆದರೆ ಈ ವಿವಾಹದ ಉದ್ಯೋಗದಲ್ಲಿ ಎಂದೂ ಯಾರಿಗೂ ಪ್ರಮೋಷನ್ನೇ ಆಗಲ್ಲ. ಹೆಂಡತಿಯರು ಇಡೀ ಜೀವಮಾನ ಪರ್ಯಂತ ಹೆಂಡತಿಯರಾಗೇ ಇದ್ದು ಬಿಡುತ್ತಾರೆ. ಗಂಡದಿರು ಗಂಡಂದಿರಾಗೇ ಇರುತ್ತಾರೆ"

"ಇವರುಗಳ ಪ್ರಮೋಷನ್ ಆದರೆ ಏನಂತ ಆಗಬೇಕು?" ಡಾಕ್ಟರ್‌ರು ಇದುವರೆಗೂ ಒಬ್ಬ ಸ್ತ್ರೀರೋಗಿಯೊಂದಿಗೆ ಆಕೆಯ ಆರೋಗ್ಯದ ಹೊರತು ಬೇರೆ ಏನೂ ಮಾತಾಡಿರಲಿಲ್ಲ. ಆದರೆ ಈ ಪ್ರಶ್ನೆ ಅವರು ಕೇಳಲೇಬೇಕಾಗಿತ್ತು.

"ಇವರುಗಳ ಪ್ರಮೋಷನ್ನೂ ಆಗಲಿಕ್ಕೆ ಸಾಧ್ಯ. ಆದರೆ ಆದದ್ದು ನಾನು ಯಾವತ್ತೂ ಕಾಣೆ?"

"ಆದರೆ ಏನಾಗಬಹುದು?"

ಇದೇ, ಈ ಹೊತ್ತು ಪತಿಯಾದವನು, ನಾಳೆ ಪ್ರೇಮಿಯಾಗಬಹುದು ನಿನ್ನೆ ಪ್ರೇಮಿಯಾಗಿದ್ದವನು ನಾಡಿದ್ದು, ದೇವರಾಗಿಬಿಡಬಹುದು – ಈ ಸಂಬಂಧ, ಒಂದು ಪದ್ಧತಿಯ ಆಧಾರದಿಂದ ರೂಢಿಯಲ್ಲಿದ್ದದ್ದು, ದಿನಾ ಕಳಿತಾ ಕಳಿತಾ, ಹೃದಯದ ಆಧಾರವನ್ನು ನೆಮ್ಮಬಹುದು, ಆತ್ಮದ ಆಧಾರವನ್ನು ಹೊಂದಬಹುದು.

ಡಾಕ್ಟರ್ ಏನೂ ಹೇಳಲಿಲ್ಲ. ಟೇಬಲ್‌ನ ಡ್ರಾನಿಂದ ಒಂದು ಸಿಗರೇಟ್ ಎಳೆದುಕೊಂಡು ಸೇದತೊಡಗಿದರು.

ನರ್ಸ್ ಪಕ್ಕದ ಕೊಠಡಿಯಲ್ಲಿದ್ದ ರಕ್ತದ ಪರೀಕ್ಷೆ ಮಾಡುವ ಡಾಕ್ಟರನ್ನು ಕರೆದಳು.

ಡಾಕ್ಟರರು ಬಂದು ಮಲ್ಲಿಕಾಳ ಬೆರಳಿನಿಂದ ರಕ್ತದ ಕೆಲವು ತೊಟ್ಟುಗಳನ್ನು ತೆಗೆದುಕೊಂಡು ಗಾಜಿನ ಒಂದು ನಳಿಕೆಯಲ್ಲಿ ತುಂಬಿದರು.

ಡಾಕ್ಟರ್ ಶ್ರೀ ಚಂದ್ ಅವರು ಆಸ್ಪತ್ರೆಯ ಫಾರಮ್ ಮೇಲೆ ಏನೋ ಬರೆದು ಆ ಫಾರ್ಮನ್ನು ನರ್ಸ್ ಕೈಗೆ ನೀಡುತ್ತಾ ಹೇಳಿದರು. "ರೋಗಿಯನ್ನು ಇಪ್ಪತ್ತನೆಯ ನಂಬರಿನ ಕೊಠಡಿಗೆ ಕರೆದುಕೊಂಡು ಹೋಗು... ಎಂಟನೇ ನಂಬರಿನ ಬೆಡ್ ಖಾಲಿ ಇದೆ. ಅದನ್ನು ಕೊಟ್ಟು ಬಿಡು."

ರಾಣಿಯು ಮಲ್ಲಿಕಾಳಿಗೆ ತನ್ನ ತೋಳಿನ ಆಧಾರ ಕೊಟ್ಟು ಎಬ್ಬಿಸಿದಳು. ಡಾಕ್ಟರರು ಎಚ್ಚರಿಕೆ ಕೊಟ್ಟರು. "ರೋಗಿಯ ಹತ್ತಿರ ಯಾವುದೇ ದುಡ್ಡು ಕಾಸು ಅಥವಾ ಒಡವೆ ಇರಕೂಡದು."

ಮಲ್ಲಿಕಾಳು ತನ್ನ ದುಪಟ್ಟಾದ ಅಂಚಿನಲ್ಲಿ ಏನನ್ನೋ ಕಟ್ಟಿಕೊಂಡಿದ್ದಳು. ಅದರ ಕಡೆ ನೋಡುತ್ತ ಡಾಕ್ಟರರ ಹತ್ತಿ ಹೇಳತೊಡಗಿದಳು – "ನನ್ನ ಹತ್ತಿರ ಕೆಲವು ಬೆಲೆಬಾಳುವ ನಾಣ್ಯಗಳಿವೆ. ಇವುಗಳನ್ನು ಏನು ಮಾಡಲಿ?

"ಇವುಗಳನ್ನು ಆಸ್ಪತ್ರೆಯಲ್ಲಿ ನಿಮ್ಮ ಹತ್ತಿರ ಇಟ್ಟುಕೊಳ್ಳುವ ಹಾಗಿಲ್ಲ" ಎಂದು ಡಾಕ್ಟರು ಹೇಳಿದರು.

"ಪ್ರಪಂಚದಲ್ಲೂ ಇವುಗಳನ್ನು ನಾನು ಇಟ್ಟುಕೊಳ್ಳುವುದಕ್ಕಂತೂ ಸಾಧ್ಯವಾಗುತ್ತಿರಲಿಲ್ಲ. ಆದರೆ ಹೇಗೋ ಏನೋ ಇವುಗಳನ್ನು ಕಾಪಾಡಿಕೊಳ್ಳುತ್ತ ಬಂದಿದ್ದೀನಿ."

ಮಲ್ಲಿಕಾಳು ಎಷ್ಟೊಂದು ಮೆಲುದನಿಯಲ್ಲಿ ಮಾತನಾಡಿದಳೆಂದರೆ ಸ್ವತಃ ಅವಳೂ ಅದನ್ನು ಅತಿ ಕಷ್ಟದಿಂದ ಕೇಳಿಸಿಕೊಂಡಳು. ಮತ್ತು ದುಪಟ್ಟಾದ ಅಂಚಿಗೆ ಕಟ್ಟಿದ್ದ ಕೆಂಪು ಬಣ್ಣದ ಪೊಟ್ಟಣವನ್ನು ಬಿಚ್ಚಿ ರಾಣಿಗೆ ಕೊಡುತ್ತ ಹೇಳತೊಡಗಿದಳು – "ಇವು ತುಂಬಾ ಬೆಲೆ ಬಾಳುವ ನಾಣ್ಯಗಳು. ಇವುಗಳನ್ನು ಜೋಪಾನವಾಗಿಟ್ಟುಕೊಂಡಿರು."

ಮಲ್ಲಿಕಾಳನ್ನು ಇಪ್ಪತ್ತನೇ ನಂಬರಿನ ವಾರ್ಡ್‌ಗೆ ಕರೆದುಕೊಂಡು ಹೋಗಿ ಕಬ್ಬಿಣದ ಮಂಚದ ಮೇಲೆ ಮಲಗಿಸುತ್ತಾ ಮೊದಲನೇ ನರ್ಸ್, ವಾರ್ಡ್‌ನ ಇನ್ನೊಬ್ಬ ನರ್ಸ್‌ಗೆ ಅವಳನ್ನು ಒಪ್ಪಿಸುತ್ತ ಹೇಳಿದಳು – "ಪೇಷಂಟ್ ನಂ ಎಂಟು." ಮಲ್ಲಿಕಾ ಮುಗುಳ್ನಕ್ಕು ರಾಣಿಗೆ ವ್ಯಾಕುಲತೆಯಿಂದ ಹೇಳಿದಳು. "ಈ ನಂಬರ್‌ಗಳ ವಿಷಯ ನನಗೆ ತುಂಬಾ ಹಿಡಿಸುತ್ತೆ"

"ಏಕೆ?"

"ಏಕೆಂದರೆ ಇಲ್ಲಿ ಯಾವುದೇ ರೋಗಿಯ ಹೆಸರೇನೂ ಇರುವುದಿಲ್ಲ. ಪೇಷೆಂಟ್‌ನಂ ಏಳು, ಪೇಷೆಂಟ್‌ನಂ ಎಂಟು ಪೇಷೆಂಟ್ ನಂ ಒಂಬತ್ತು...... ಈ ಹೆಸರುಗಳು ಮನುಷ್ಯನ ವ್ಯಕ್ತಿತ್ವವನ್ನು ತಿಳಿಸುವ ಸಲುವಾಗಿ ಆದಂಥವು. ಆದರೆ ಯಾವುದೇ ಮನುಷ್ಯನಿಗೆ ಯಾವುದೇ ವ್ಯಕ್ತಿತ್ವ ಇರುವುದಿಲ್ಲ. ಅದರಿಂದ ಈ ಹೆಸರುಗಳ ವಿಷಯ ಎಲ್ಲ ಬರೀ ಸುಳ್ಳು. ಈ ನಂಬರ್‌ಗಳ ವಿಷಯವಾದರೂ ಸತ್ಯವಾದುದ್ದು.

ರಾಣಿ ತನ್ನ ನೋವನ್ನು ನುಂಗಿಕೊಂಡು ಮಲ್ಲಿಕಾಳ ಭುಜವನ್ನು ಚುಂಬಿಸಿ, ಹನಿಗಣ್ಣಾಗಿ ವಾರ್ಡ್‌ನಿಂದ ಹೊರನಡೆದಳು.

ಈ ವಾರ್ಡ್‌ನಲ್ಲಿ ಆರು ಜನ ರೋಗಿಗಳಿದ್ದರು. ಮಲ್ಲಿಕಾ ತನ್ನ ಜೊತೆಯ ಐದು ಜನ

ಸ್ತ್ರೀರೋಗಿಗಳನ್ನು ನೋಡಿ, ಮೆಲುದನಿಯಲ್ಲಿ ಅವರ ಸ್ಥಿತಿಗತಿಗಳನ್ನು ವಿಚಾರಿಸ ತೊಡಗಿದಳು. ಒಬ್ಬ ಪೂರ್ತಿ ಹಳದಿ ಬಣ್ಣಕ್ಕೆ ತಿರುಗಿರುವ ಯುವತಿಯನ್ನು ಬಿಟ್ಟು ಬಾಕಿ ನಾಲ್ಕು ಜನ ಸ್ತ್ರೀಯರು ಬಡತನ ಮತ್ತು ವೃದ್ಧಾಪ್ಯದಿಂದ ಬರಬಹುದಾದ ಕಾಯಿಲೆ ಗಳಿಂದ ನರಳುತ್ತಿದ್ದರು. ಅವರ ಆಸೆಗಳ ಹಾಗೆಯೇ, ನೀರಿನ ಗುಟುಕು ಒಂದು ಕ್ಷಣ ಒಳಕ್ಕೆ ಇಳಿದರೆ ಮರುಕ್ಷಣವೇ ಹೊರಕ್ಕೆ ಬಂದುಬಿಡುತ್ತಿತ್ತು.

ಡಾಕ್ಟರು ಸಾಯಂಕಾಲ ರೌಂಡ್ಸ್‌ಗೆ ಬಂದಾಗ ಮಲ್ಲಿಕಾಳ ಕಂಡೀಷನ್ ಹೇಗಿದೆ ಎಂದು ಕೇಳುತ್ತ ಹೇಳಿದರು – "ರಾತ್ರಿ ನರ್ಸ್ ನಿಮಗೆ ನಿದ್ರೆ ಮಾತ್ರೆ ಕೊಡುತ್ತಾರೆ."

"ಯಾವುದೇ ವಿಶೇಷ ಅಗತ್ಯವಿಲ್ಲ. ಎಂದಿನ ಹಾಗೆ ನಾನು ಸ್ವಲ್ಪ ನಿದ್ದೆ ಮಾಡೇ ಮಾಡ್ತೀನಿ."

"ಇಲ್ಲಿ ನಿಮಗೆ ಬಹುಶಃ ಎಂದಿನ ಹಾಗೆ ನಿದ್ದೆ ಬರುವುದಿಲ್ಲ, ಕಾರಣ ಬಹಳಷ್ಟು ಜನ ರೋಗಿಗಳು ಹಗಲಿಗಿಂತ ರಾತ್ರಿ ಹೊತ್ತು ಹೆಚ್ಚು ನರಳುತ್ತಾರೆ. ಇವರಲ್ಲಿ ಒಬ್ಬರಂತೂ ಕ್ಯಾನ್ಸರ್ ಪೇಷೆಂಟ್, ಇನ್ನೊಬ್ಬರ ಗಾಯಗಳಲ್ಲಿ ನೀರು ತುಂಬಿಕೊಂಡಿದೆ ಮತ್ತು ನಿಮ್ಮ ಪಕ್ಕದ ಮಂಚದ ಮೇಲೆ ಮಲಗಿರುವ ಆ ಹೆಂಗಸು...."

"ಏನೂ ಪರವಾಗಿಲ್ಲ ಡಾಕ್ಟ್ರೇ! ಈ ಚೀರಾಟ ಮತ್ತು ನರಳಾಟ ಕೇಳುವುದು ರೂಢಿಯಾಗಿ ಬಿಟ್ಟಿದೆ. ನಮ್ಮ ಈ ಪ್ರಪಂಚದಲ್ಲಿ ಜನ ಸುಖವಾಗಿ ನಿದ್ದೆ ಮಾಡುವಂಥ ಜಾಗವಾದರೂ ಎಲ್ಲಿದೆ? ಯಾರಿಗೋ ಕೈಗೆ ಗಾಯವಾಗಿದ್ದರೆ ಇನ್ಯಾರಿಗೋ ಕಾಲಿಗೆ ಗಾಯ, ಇನ್ಯಾರದೋ ಕನಸಿಗೆ ಗಾಯ...." ಆನಂತರ ಮಲ್ಲಿಕಾ ಕಿಟಕಿ ಕಡೆ ಕೈ ತೋರಿಸುತ್ತ – "ಅಲ್ಲಿ ದೂರದಲ್ಲಿ ನಮ್ಮ ದೇಶದ ಗಡಿಯಲ್ಲಿ ಅದೆಷ್ಟು ಜನ ಗಾಯಗಳಿಂದ ನರಳುತ್ತಿದ್ದಾರೋ. ಯಾರಿಗೆ ಗೊತ್ತು..."

ವೈದ್ಯರು ಮಲ್ಲಿಕಾಳ ಹಳದಿ ಮತ್ತು ಕೋಮಲ ಮುಖದ ಕಡೆ ಅದೆಷ್ಟೋ ಹೊತ್ತು ನೋಡುತ್ತಲೇ ಇದ್ದರು. ಅನಂತರ ಕೈಯಲ್ಲಿ ಹಿಡಿದಿದ್ದ ಕಾಗದದ ಕಡೆ ನೋಡುತ್ತ ಹೇಳತೊಡಗಿದರು. –"ನಿಮ್ಮ ರಕ್ತ ಪರೀಕ್ಷೆಯ ಫಲಿತಾಂಶ ಬಂದಿದೆ. ಆದರೆ......

"ನನ್ನ ರಕ್ತದಲ್ಲಿ ಏನು ದೋಷ ಇದೆ ಅಂತ ಬಂದಿದೆ.?"

"ಕೆಂಪು ರಕ್ತ ಕಣ, ಬಿಳಿ ರಕ್ತ ಕಣ ಎಲ್ಲ ಸರಿಯಾಗಿದೆ. ನಮಗೆ ಚೆನ್ನಾಗಿ ಗೊತ್ತಿರುವಂಥ ಯಾವುದೇ ರೋಗದ ಬ್ಯಾಕ್ಟೀರಿಯಾಗಳು ಅದರಲ್ಲಿ ಕಂಡು ಬರುತ್ತಿಲ್ಲ. ಆದರೆ ಒಂದು ವಿಚಿತ್ರ ರೀತಿಯ ಬ್ಯಾಕ್ಟೀರಿಯಾಗಳು ಪತ್ತೆಯಾಗಿವೆ. ಅವು ಯಾವ ಥರದ ಕೀಟಾಣುಗಳು ಅಂತ ಪತ್ತೆ ಹಚ್ಚಲಾಗುತ್ತಿಲ್ಲ....."?

ಮಲ್ಲಿಕಾ ಮುಗುಳ್ನಕ್ಕಳು. ದಿನಕಳೆದಂತೆ ಉಲ್ಬಣಗೊಳ್ಳುತ್ತಿರುವ ನೋವಿನಿಂದಾಗಿ ಮಲ್ಲಿಕಾಳ ದನಿ ಕ್ಷೀಣಿಸುತ್ತ ಹೋಗಿರಬಹುದು. ಆದರೆ ಆಕೆಯ ಕೋಮಲತೆಯಲ್ಲಿ ಏನೂ ವ್ಯತ್ಯಾಸವಾಗಿರಲಿಲ್ಲ. ಅದೇ ಕೋಮಲ ಹಾಗೂ ಮೃದು ಸ್ವರದಲ್ಲಿ ಅವಳು ಹೇಳತೊಡಗಿದಳು. "ತಾವು ಈ ಬ್ಯಾಕ್ಟೀರಿಯಾಗಳನ್ನು ಎಷ್ಟು ದಿನ ಬೇಕಾದರೂ ಪರೀಕ್ಷೆ ಮಾಡಿ ನೋಡಿ. ಒಂದು ವೇಳೆ ತಮಗೆ ಇವುಗಳ ಬಗ್ಗೆ ಏನೂ ಗೊತ್ತಾಗಲಿಲ್ಲ ಅಂದರೆ, ಈ ಬ್ಯಾಕ್ಟೀರಿಯಾಗಳು ಎಂಥವು ಅಂತ ನಾನು ಹೇಳ್ತೀನಿ."

ಡಾಕ್ಟರರು ಮಲ್ಲಿಕಾಳತ್ತ ತೀಕ್ಷ್ಣ ದೃಷ್ಟಿಯಿಂದ ನೋಡಿದರು. ಮತ್ತೆ ಅವರು ಮಾತನಾಡಿದಾಗ ಅವರ ದನಿಯಲ್ಲಿ ಆಶ್ಚರ್ಯ ತುಂಬಿತ್ತು, "ಇವು ಎಂಥ ಬ್ಯಾಕ್ಟೀರಿಯಾಗಳು ಅಂತ ನಿಮಗೆ ಗೊತ್ತೇನು?"

"ಹೌದು"

"ನಾವು ಡಾಕ್ಟರುಗಳೆಲ್ಲ, ಇವುಗಳನ್ನು ಪರೀಕ್ಷೆ ಮಾಡಿ ಮಾಡಿ ಸುಸ್ತಾಗಿ ಬಿಟ್ಟಿದ್ದೇವೆ. ನಿಮ್ಮ ರಕ್ತದ ಸ್ಯಾಂಪಲ್ ಅನ್ನು ವಿದೇಶೀ ವೈದ್ಯರಿಗೆ ಕಳಿಸೋಣವೆ ಎಂದು ಯೋಚನೆ ಮಾಡ್ತಾ ಇದ್ದೀವಿ. ನಮಗಿಂತ ಕೆಲವು ವಿದೇಶಗಳಲ್ಲಿ ಮೆಡಿಕಲ್ ಸೈನ್ಸ್ ಹೆಚ್ಚು ಅಡ್ವಾನ್ಸ್ ಆಗಿದೆ"

"ಕಳಿಸಿ ನೋಡಿ. ಬಹುಶಃ ಅವರಿಗೂ ಇವು ಏನು ಅಂತ ಗೊತ್ತಾಗದೆ ಹೋಗಬಹುದು.

"ಬಹಳ ಆಶ್ಚರ್ಯದ ವಿಷಯ!"

"ನಿಜ ಆಶ್ಚರ್ಯದ ವಿಷಯವೇ......"

"ಆದರೆ ನಿಮಗೆ ಗೊತ್ತಿದೆ ಅಂತ ನೀವು ಹೇಗೆ ಹೇಳಿದಿರಿ?"

"ಯಾಕೆಂದರೆ ನನಗೆ ಎಲ್ಲವೂ ಚೆನ್ನಾಗಿ ಗೊತ್ತಿದೆ."

"ಹಾಗಾದರೆ ನೀವೇ ನಮಗೆ ಹೇಳಿಬಿಡಿ."

"ನಾನು ಹೇಳಿಬಿಡ್ತೀನಿ. ಆದರೆ ನೀವು ನಂಬಲ್ಲ"

"ನಿಮಗೆ ಅದರ ಚಿಕಿತ್ಸೇನೂ ತಿಳಿದಿದೆಯೇ?"

"ಹೌದು"

"ಹಾಗಿದ್ದ ಮೇಲೆ ಆ ಚಿಕಿತ್ಸೆಯನ್ನು ಯಾತಕ್ಕೆ ಮಾಡ್ತಿಲ್ಲ?"

"ನನ್ನ ಆಪರೇಷನ್ ಅನ್ನು ನಾನು ಹೇಗೆ ಮಾಡಕ್ಕೆ ಸಾಧ್ಯ? ಅದನ್ನು ತಾವುಗಳೇ ಮಾಡಬಲ್ಲಿರಿ."

"ಹಾಗಿದ್ದ ಮೇಲೆ ನೀವು ಹೇಳಿದ ಚಿಕಿತ್ಸೆಯನ್ನು ನಾವು ಮಾಡಿದಲ್ಲಿ ನೀವು ಸರಿ ಹೋಗುವ ಹಾಗಿದ್ದರೆ, ನಾವು ಇದನ್ನೆಲ್ಲ ಒಪ್ಪಿಕೊಳ್ಳಲೇ ಬೇಕಾಗುತ್ತೆ"

"ನಾನು ಅದನ್ನು ಹೇಳುವುದಕ್ಕೆ ತಯಾರಿದ್ದೀನಿ"

"ಇವು ಯಾವ ಥರದ ಬ್ಯಾಕ್ಟೀರಿಯಾಗಳು?"

"ತಾವು ಪಾರ್ವತಿಯ ಒಂದು ಕಥೆ ಕೇಳಿದ್ದೀರೋ ಇಲ್ಲವೋ? ಒಂದು ಪೌರಾಣಿಕ ಸಂಗತಿ ನಡೆದುಕೊಂಡು ಬಂದಿದೆ....."

"ಪಾರ್ವತಿಯ ಕಥೆ?"

"ಒಂದು ಸಲ ಶಿವ ಎಲ್ಲೋ ಹೊರಗಡೆ ಹೋಗಿದ್ದ ಅಂತ ಹೇಳ್ತಾರೆ. ಅವನು ಬಹಳ ತಡ ಮಾಡಿದನಂತೆ. ಏಕಾಂಗಿಯಾಗಿದ್ದ ಪಾರ್ವತಿಗೆ ಮನಸ್ಸಿಟ್ಟು ಕೆಲಸ ಮಾಡಲಾಗುತ್ತಿರಲಿಲ್ಲ. ಹಾಗಾಗಿ ಅವಳು ತನ್ನ ಮೈನ ಕೊಳೆಯನ್ನೇ ತೆಗೆದು ಒಂದು ಮಗುವನ್ನು ನಿರ್ಮಿಸಿದಳು."

ಡಾಕ್ಟರ ಮುಖದ ಮೇಲೆ ನಗೆಯ ಮತ್ತು ಕೋಪದ ಒಂದು ಎಳೆ ಸುಳಿದು ಹೋಯಿತು. ಅವರು ತಮಗೆ ತಾವೇ ಹೇಳಿಕೊಂಡರು– " ನಾನು ಈ ಹುಚ್ಚು ಹೆಂಗಸಿನ

ಹತ್ತಿರ ವ್ಯರ್ಥವಾಗಿ ತಲೆ ಚಚ್ಚಿಕೊಳ್ಳುತ್ತಾ ಇದ್ದೀನಿ. ಏನನ್ನಿಸುತ್ತೆ ಅಂದರೆ ಈಕೆಯ...."

"ನನ್ನ ಮೇಲೆ ನಿಮಗೆ ನಂಬಿಕೆ ಬರಲ್ಲ ಅಂತ ನಾನು ಹೇಳಿದ್ದೆ. ಅಲ್ಲವೆ?"

"ಇದು ನಂಬಿಕೆ ಇಡುವಂಥ ವಿಷಯವೆ?"

"ಒಳ್ಳೆಯದು, ಈ ವಿಷಯ ಹಾಗಿರಲಿಬಿಡಿ. ತಾವೇ ಖುದ್ದು ಬ್ಯಾಕ್ಟೀರಿಯಾಗಳನ್ನು ಪತ್ತೆ ಹಚ್ಚಿ. ಒಂದು ವೇಳೆ ಪತ್ತೆ ಹಚ್ಚಲಿಕ್ಕೆ ಸಾಧ್ಯವಾಯಿತು ಅಂದರೆ........."

ಡಾಕ್ಟರರ ಹಣೆಯ ಮೇಲೆ ಒಂದು ವಿಸ್ಮಯ ಅಂಕಿತವಾಯಿತು. ಅವರು 'ಈ ಹೆಂಗಸಿನ ಪ್ರಜ್ಞೆ ಸ್ಥಿರವಾಗಿರುವ ಹಾಗೆಯೂ ಕಾಣಿಸುತ್ತೆ. ಇಲ್ಲದ ಹಾಗೂ ಕಾಣಿಸುತ್ತೆ' ಎಂದು ಯೋಚಿಸಿತೊಡಗಿದರು. ಗಟ್ಟಿ ದನಿಯಲ್ಲಿ ಅವರು ಇಷ್ಟು ಮಾತ್ರ ಹೇಳಿದರು. "ನೀವು ಹೇಳುವುದನ್ನೆಲ್ಲ ನಾನು ಕೇಳಿಸಿಕೊಳ್ಳುತ್ತೇನೆ. ಮುಂದೆ ಹೇಳಿ"

"ಯಾವ ರೀತಿಯಲ್ಲಿ ಪಾರ್ವತಿ ತನ್ನ ದೇಹದ ಕೊಳೆಯಿಂದ ಒಬ್ಬ ಮಗನನ್ನು ಮಾಡಿದ್ದಳೋ ಅದೇ ರೀತಿ ಇಡೀ ಹೆಣ್ಣು ಜಾತಿ ಎಲ್ಲಾ ಸೇರಿಕೊಂಡು ತಮ್ಮ ಹೃದಯದ ರಕ್ತ ಬೆವರು ಮತ್ತು ಕಣ್ಣೀರು ಎಲ್ಲವನ್ನೂ ಸೇರಿಸಿ ನನಗೆ ಜನ್ಮ ಕೊಟ್ಟಿತು. ಆದ್ದರಿಂದಲೇ ನನ್ನ ರಕ್ತದಲ್ಲಿ ತಮಗೆ ವಿಚಿತ್ರ ರೀತಿಯ ಬ್ಯಾಕ್ಟೀರಿಯಾಗಳು ಸಿಕ್ಕಿದವು."

ಡಾಕ್ಟರು ತಮ್ಮ ಹಣೆಯ ಮೇಲೆ ಬಂದಿದ್ದ ಬೆವರನ್ನು ಒರೆಸಿಕೊಂಡು ಮತ್ತೆ ಕೇಳಿದರು. "ತಮ್ಮ ಕಾಯಿಲೆಯ ಹೆಸರೇನು?"

"ಯೋಚನೆ ಮಾಡುವ ಕಾಯಿಲೆ. ಎಲ್ಲದರ ಬಗ್ಗೆಯೂ ಯೋಚಿಸುವ ಕಾಯಿಲೆ"

"ಇದರ ಚಿಕಿತ್ಸೆ?"

ಪ್ರತಿಯೊಬ್ಬ ಮನುಷ್ಯನ ಹೊಟ್ಟೆಯಲ್ಲಿ ಬಲಭಾಗದಲ್ಲಿ ಒಂದು ತೆಳ್ಳನೆಯ ನಾಳ ಇರುತ್ತೆ. ಅನೇಕ ಬಾರಿ ಆಹಾರದ ಒಂದು ಸ್ವಲ್ಪ ಭಾಗ ಅದರಲ್ಲಿ ಹೋಗಿ ಸೇರಿಕೊಂಡು ಬಿಡುತ್ತೆ. ಅದು ಅಲ್ಲೇ ಇದ್ದುಕೊಂಡು ಕೊಳೆಯುವುದಕ್ಕೆ ಶುರುವಾಗತ್ತೆ. ಮನುಷ್ಯ ದಿನ ಕಳೆಯುತ್ತ ಇದ್ದ ಹಾಗೆ ಹಳದಿ ಬಣ್ಣಕ್ಕೆ ತಿರುಗುತ್ತಾ ನಿಶ್ಶಕ್ತನಾಗುತ್ತ ಹೋಗುತ್ತಾನೆ ಹಾಗೂ ಆಪರೇಷನ್‌ನಿಂದ ಆ ನಾಳವನ್ನು ಕತ್ತರಿಸಿ ಹಾಕದೆ ಹೋದರೆ, ಯಾವತ್ತಾದರೂ ಒಂದು ದಿನ ಅದೇ ತುಂಡಾಗಿ ಹೋಗುತ್ತೆ. ಸರಿ ಆಮೇಲೆ ಅದರ ವಿಷ ಇಡೀ ಶರೀರದಲ್ಲೆಲ್ಲಾ ವ್ಯಾಪಿಸಿಕೊಂಡು ಬಿಡುತ್ತೆ ಮತ್ತು ಮನುಷ್ಯ ಸತ್ತು ಹೋಗುತ್ತಾನೆ."

"ಹೌದು"

"ಅದೇ ರೀತಿ ಮನುಷ್ಯನ ತಲೆಯಲ್ಲಿ ಒಂದು ನಾಳ ಇರುತ್ತೆ. ಅದರಲ್ಲಿ ವಿಚಾರಗಳ ಕೆಲವೊಂದು ಭಾಗ ಬಂದು ಸೇರಿಕೊಳ್ಳುತ್ತಾ ಇರುತ್ತೆ. ಅಲ್ಲೇ ಸೇರಿಕೊಂಡು ಸೇರಿಕೊಂಡು ಕೊಳೆಯುವುದಕ್ಕೆ ಶುರುವಾಗುತ್ತೆ. ಯಾವತ್ತೋ ಒಂದಿನ ಅದು ಹರಿದೂ ಹೋಗುತ್ತೆ ಮತ್ತು ಮನುಷ್ಯ ಅದರ ವಿಷದಿಂದ ಸತ್ತು ಹೋಗುತ್ತಾನೆ"

"ಇದಕ್ಕೆ ಏನು ಪುರಾವೆ ?"

"ಎಕ್ಸರೇ ಮಾಡಿ ನೋಡಿ. ನಿಮ್ಮ ಸೈನ್ಸ್ ಆ ನಾಳದ ಚಿತ್ರವನ್ನು ತೆಗೆದುಕೊಳ್ಳುವಷ್ಟರ ಮಟ್ಟಿಗೆ ಪ್ರಗತಿ ಹೊಂದಿದೆಯೋ ಇಲ್ಲವೋ ಅಂತ ನನಗೆ ಗೊತ್ತಿಲ್ಲ. ಒಂದು ವೇಳೆ ತಾವು ನನ್ನ ಮಾತನ್ನು ಒಪ್ಪುವುದಾದರೆ........."

"ನೀವು ಏನು ಹೇಳಬೇಕೆಂದಿದ್ದೀರಿ?"

"ನನ್ನ ತಲೆಯ ಆಪರೇಷನ್ ಮಾಡಿ ನೋಡಿ ನಿಮಗೆ ಈ ನಾಳ ಖಂಡಿತಾ ಸಿಕ್ಕುತ್ತೆ..."

ಡಾಕ್ಟರು ಸ್ವಲ್ಪ ಹೊತ್ತು ಸುಮ್ಮನೆ ಮಲ್ಲಿಕಾಳ ಮುಖದ ಕಡೆ ನೋಡುತ್ತಾ ಇದ್ದರು. ಅನಂತರ ಏನೂ ಹೇಳದೇ ವಾರ್ಡ್‌ನಿಂದ ಹೊರನಡೆದರು.

ಮಾರನೇ ದಿನ ಬೆಳಿಗ್ಗೆ ರೌಂಡ್ಸ್‌ಗೆ ಡಾಕ್ಟರು ಬಂದಾಗ ಮಲ್ಲಿಕಾಳ ಸ್ಥಿತಿ ಇನ್ನಷ್ಟು ಹಾಳಾಗಿತ್ತು. ಮಲ್ಲಿಕಾಳ ಧ್ವನಿ ಕೇಳಿಸಿಕೊಳ್ಳಲು ಡಾಕ್ಟರು ಮಲ್ಲಿಕಾಳ ಮಂಚದ ತುದಿಗೆ ಬಗ್ಗ ಬೇಕಾಯಿತು. ಮಲ್ಲಿಕಾ ಹೇಳುತ್ತಾ ಇದ್ದಳು–

"ಡಾಕ್ಟ್ರೇ ನೀವು ನನ್ನ ಮಾತು ಕೇಳಲಿಲ್ಲ... ಈಗಲಾದರೂ ಒಪ್ಪಿಕೊಳ್ಳಿ... ನನ್ನನ್ನು ಆಪರೇಷನ್ ಥಿಯೇಟರ್‌ಗೆ ಕರೆದುಕೊಂಡು ಹೋಗಿ... ನನ್ನ ತಲೆಯ ನಾಡಿ ಇಷ್ಟರಲ್ಲೇ ಸಿಡಿಯಬಹುದು. ಅಂತ ನನ್ನಗನ್ನಿಸುತ್ತಾ ಇದೆ..."

ಡಾಕ್ಟರಿಗೆ ಏನು ಹೇಳಬೇಕು ಅಂತ ತೋಚಲಿಲ್ಲ. ಹಾಗಾಗಿ ರೋಗಿಗೆ ಏನಾದರೂ ಹೇಳಬೇಕಲ್ಲ. ಎಂದು ಇಷ್ಟು ಮಾತ್ರ ಹೇಳಿದರು "ಈ ಹೊತ್ತು ಎಕ್ಸ್‌ರೇ ಮಾಡಿ ನೋಡುತ್ತೀವಿ"

"ನಿಮ್ಮ ಸೈನ್ಸ್ ಇಷ್ಟೊಂದೆಲ್ಲಿ ಮುಂದುವರೆದಿದೆ....." ಮಲ್ಲಿಕಾಳ ದನಿ ಒಡೆಯತೊಡಗಿತು.

ಡಾಕ್ಟರ್ ಶ್ರೀಚಂದ್ ಪಕ್ಕದ ಕೊಠಡಿಗೆ ಹೋಗಿ ಇತರೆ ಡಾಕ್ಟರ್‌ಗಳಿಗೆ ಅವರೆಲ್ಲರೂ ಇಪ್ಪತ್ತನೇ ನಂಬರಿನ ವಾರ್ಡ್‌ಗೆ ಬರಬೇಕೆಂದು ಟೆಲಿಫೋನ್ ಮಾಡಿದರು. ಮತ್ತು ಸ್ವತಃ ತಾವು ಮಲ್ಲಿಕಾಳ ಬಳಿಗೆ ಬಂದಾಗ ಕೈಯಲ್ಲಿ ಇಂಜೆಕ್ಷನ್ ಕೊಡುವ ಸಲಕರಣೆಗಳನ್ನು ಹಿಡಿದಿದ್ದರು.

"ಇದೇನು ಡಾಕ್ಟರ್?"

"ಕೈ, ಈ ಕಡೆ ಕೊಡಿ. ನಾನು ಇಂಜೆಕ್ಷನ್ ಕೊಡುತ್ತೀನಿ"

"ಇಂಜೆಕ್ಷನ್ ಯಾತಕ್ಕೆ ಡಾಕ್ಟರ್ ಈಗ?"

"ಹೃದಯಕ್ಕೆ ಶಕ್ತಿ ಕೊಡುವಂಥ ಇಂಜೆಕ್ಷನ್"

ಮಲ್ಲಿಕಾಳ ಒಂದೊಂದು ಅಂಗವೂ ಸೊರಗಿದ್ದರೇನಂತೆ, ಅವಳ ಮುಗುಳುನಗೆ ಈಗಲೂ ಸೊರಗಿರಲಿಲ್ಲ. ಮಲ್ಲಿಕಾ ಅದೇ ಮುಗುಳ್ನಗೆ ಸೂಸುತ್ತ ಹೇಳಿದಳು. "ಹೃದಯಕ್ಕೆ ಶಕ್ತಿ ಬರಿಸುವಂಥದ್ದೆ?"

"ಹೌದು"

"ಡಾಕ್ಟ್ರೆ ಅದಂತೂ ಮುಂಚೆನೇ ಹೆಚ್ಚಾಗಿದೆ. ಇರಬೇಕಾದ್ದಕ್ಕಿಂತ ಜಾಸ್ತಿ ಇದೆ. ಅದರ ಕಾರಣನಿಂದಲೇ ನಾನು ಸಾಯುತ್ತಾ ಇದ್ದೀನಿ."

ಇಂಜೆಕ್ಷನ್ ಸೂಜಿಯನ್ನು ಬಿಸಿ ನೀರಿನಿಂದ ತೆಗೆಯುತ್ತಾ ಇದ್ದಾಗ ಡಾಕ್ಟರರ ಕೈ ನಡುಗಿತು.

ಬೆಳಿಗ್ಗೆ ಒಂಬತ್ತು ಗಂಟೆಯಿಂದ ಹನ್ನೊಂದು ಗಂಟೆಯತನಕ ವಿಸಿಟಿಂಗ್ ಅವರ್ಸ್ ಆಗಿತ್ತು. ಈಗ ಹತ್ತು ಗಂಟೆ. ರಾಣಿ ತನ್ನ ಸೋದರಿಯ ಆರೋಗ್ಯ ವಿಚಾರಿಸಲು ಬಂದಳು.

"ನೀನು ಬಂದು ಬಿಟ್ಟಿಯಾ ರಾಣಿ?"

"ಹೌದು ಮಲ್ಲಿಕಾ!"

"ನಾನು ನಿನ್ನ ಬಗ್ಗೇನೇ ಯೋಚಿಸುತ್ತಾ ಇದ್ದೆ...."

"ನಾನು ಬಂದಿದ್ದೀನಿ. ನಿನ್ನ ಸ್ಥಿತಿ ಹೇಗಿದೆ?"

"ಈ ಕಡೆ ಬಾ"

"ಹೇಳು"

"ನನ್ನ ಆ ಕೆಂಪು ಪೊಟ್ಟಣ ನೀನು ಎಲ್ಲಿಟ್ಟಿದ್ದೀ?"

"ನಾನು ಅದನ್ನು ತುಂಬಾ ಜೋಪಾನವಾಗಿಟ್ಟಿದ್ದೀನಿ. ನೀನು ಚಿಂತೆ ಮಾಡಬೇಡ."

"ಅದರಲ್ಲಿ ತುಂಬಾ ಬೆಲೆಬಾಳುವ ನಾಣ್ಯಗಳಿವೆ..... ನೀನು ಬಿಚ್ಚಿ ನೋಡಿದ್ದೀಯಾ?"

"ಇಲ್ಲ ಮಲ್ಲಿಕಾ ನಾನು ಅದನ್ನು ಬಿಚ್ಚಿಲ್ಲ. ನಿನ್ನ ಆದೇಶವಿಲ್ಲದೆ ನಾನು ಹೇಗೆ ಬಿಚ್ಚಲಿ! ನೀನು ಗುಣವಾದ ಮೇಲೆ ನೀನೇ ಬಿಚ್ಚಿ ನನಗೆ ತೋರಿಸಬೇಕು. ನಿನಗೆ ತಿನ್ನುವುದಕ್ಕೆ ಏನು ಕೊಡಲಿ ಅನ್ನುವುದನ್ನು ಹೇಳು ನನಗೆ. ನಾನು ಸ್ವಲ್ಪ ಹಣ್ಣುಗಳನ್ನು ತಂದಿದ್ದೀನಿ"

"ಈ ಹೊತ್ತು ನನಗೆ ಏನೂ ತಿನ್ನಕ್ಕೆ ಆಗಲ್ಲ. ಪ್ರಪಂಚದ ಯಾವುದೇ ಹಣ್ಣನ್ನು........"

ಮಲ್ಲಿಕಾಳ ಕಣ್ಣುಗಳು ನಿಶ್ಚೇಷ್ಟವಾಗಿ ಒಂದು ಕ್ಷಣಕ್ಕೆ ಮುಚ್ಚಿಕೊಂಡು ಬಿಟ್ಟವು. ಮತ್ತೆ ಯಾವುದೋ ಆಂತರಿಕ ಶಕ್ತಿಯಿಂದ ತೆರೆದುಕೊಂಡವು. ಅವಳು ರಾಣಿಯತ್ತ ನೋಡುತ್ತ ಹೇಳತೊಡಗಿದಳು. "ನಾನು ಹೊರಡುವ ಸಮಯ ಬಂದು ಬಿಟ್ಟಿದೆ ರಾಣಿ! ನನ್ನ ಹತ್ತಿರ ಬಾ... ಇನ್ನೂ ಹತ್ತಿರ ನನ್ನ ತಲೆಯ ನಾಳ ಬಹುಶಃ ಸಿಡಿದಿದೆ."

"ನಾನು ನಿನ್ನ ಹತ್ತಿರ ಇದ್ದೀನಿ ಮಲ್ಲಿಕಾ"

"ಆ ನಾಣ್ಯಗಳು...."

ಅವು ಎಂದೂ ಕಳೆದುಹೋಗಲ್ಲ ಮಲ್ಲಿಕಾ! ನೀನು ಈ ಹೊತ್ತಿನಲ್ಲಿ ಅವುಗಳ ಚಿಂತೆ ಮಾಡಬೇಡ."

"ನಿನಗೆ ಒಂದು ಮಾತು ಹೇಳುತ್ತೀನಿ."

"ಹೇಳು"

"ಆ ನಾಣ್ಯಗಳು ನಿನಗೆ ಏತಕ್ಕೂ ಪ್ರಯೋಜನಕ್ಕೆ ಬರದೇ ಹೋಗಬಹುದು. ಆದರೆ...."

"ಆದರೆ ಅವು ಬಹಳ ಬೆಲೆ ಬಾಳುವಂಥವು ಎಂದು ನೀನು ಹೇಳುತ್ತಾ ಇದ್ದೆ"

"ಬಹಳ ಬೆಲೆ ಬಾಳುವಂಥವು......"

"ನಾನು ಅವುಗಳನ್ನು ಯಾವತ್ತೂ ಕಳೆದುಕೊಳ್ಳಲ್ಲ ಮಲ್ಲಿಕಾ"

"ಆದರೆ ಅವು ಈ ಪ್ರಪಂಚದಲ್ಲಿ ನಡೆಯಲ್ಲ"

ರಾಣಿಯ ಜೊತೆಯಲ್ಲಿ ಡಾಕ್ಟರರು ಮಲ್ಲಿಕಾಳ ಮಂಚದ ತುದಿಗೆ ಬಾಗಿದರು. ಮಲ್ಲಿಕಾ ತನ್ನ ಕುಸಿಯುತ್ತಿರುವ ದನಿಯನ್ನು ಒಟ್ಟುಗೂಡಿಸಿ ಹೇಳತೊಡಗಿದಳು.

"ಅವುಗಳಲ್ಲಿ ಒಂದು ನಾಣ್ಯ ಪ್ರೇಮದ ನಾಣ್ಯ. ಒಂದು ನಾಣ್ಯ-ವಿಶ್ವಾಸದ ನಾಣ್ಯ ಮತ್ತೊಂದು ಶಾಂತಿಯ ನಾಣ್ಯ. ಬಹಳ ಬೆಲೆ ಬಾಳುವ ನಾಣ್ಯಗಳು...."

ಮುಂದೆ ಮಲ್ಲಿಕಾಳ ದನಿ ಯಾರಿಗೂ ಕೇಳಿಸಲಿಲ್ಲ. ರಾಣಿ ಗಾಬರಿಗೊಂಡು ಮಲ್ಲಿಕಾಳ ಹಣೆಯ ಮೇಲೆ ಕೈಯಾಡಿಸಿ ಮತ್ತೆ ಡಾಕ್ಟರ ಕಡೆ ನೋಡಿದಳು. ಡಾಕ್ಟರು ಸ್ವಲ್ಪ ಹೊತ್ತು

ಮಲ್ಲಿಕಾಳ ನಾಡಿ ಹಿಡಿದು ನೋಡುತ್ತಾ ಇದ್ದರು. ಆಮೇಲೆ ಅವರು ಕಂಬಳಿಯ ತುದಿ ಹಿಡಿದು ಮಲ್ಲಿಕಾಳ ಮುಖದ ಮೇಲಕ್ಕೆ ಏಳೆದರು. ರಾಣಿಯ ಮನಸ್ಸಿನಲ್ಲಿ ಮೊದಲಿಗೆ ಬಂದ ವಿಚಾರವೆಂದರೆ, ಈ ದಿನ ಮಲ್ಲಿಕಾ ಸತ್ತಿರಲಿಲ್ಲ. ಹೆಣ್ಣಿನ ಸೌಂದರ್ಯಕ್ಕೆ ಕೊಡಬಹುದಾದ ಈ ಪ್ರಪಂಚದ ಎಲ್ಲ ಉಪಮೆಯೂ ಸತ್ತುಹೋಗಿತ್ತು ಎಂದು.

ಎರಡು ಕಿಟಕಿಗಳು

ಐದು ಅಂತಸ್ತುಗಳ ಕಟ್ಟಡ ವೈಭವಗಳ ಪ್ರತೀಕದಂತಿತ್ತು. ಬೇರೆಯವು ಹೇಗಿರುತ್ತವೋ ಅದೇ ಥರ ಅದು. ಬೇರೆಯವುಗಳಲ್ಲಿ ಹೇಗೆ ಹದಿನೈದು ಮನೆಗಳಿದ್ದುವೋ ಅದರಲ್ಲಿ ಸಹ ಇದ್ದವು. ಹೊರಗಡೆಯಿಂದ ಏನೂ ವ್ಯತ್ಯಾಸವಿರಲಿಲ್ಲ. ವ್ಯತ್ಯಾಸವಿದ್ದುದೆಲ್ಲಾ ಒಳಗಡೆಯಿಂದ.........

"ಇದು ಒಂದೇ ಥರಾ ಕಾಣುತ್ತಾ ಇದ್ದರೂ ಒಂದೇ ಥರಾ ಇರಲ್ಲ. ಇದು......." ಡಾಂಕಾ 'ಇದು'ನ ಮುಂದಿನ ಖಾಲೀ ಜಾಗವನ್ನು ನೋಡತೊಡಗಿದಳು......

ಖಾಲಿ ಜಾಗದ್ದು ಏನಿರುತ್ತೆ, ಅದನ್ನು ಎಷ್ಟು ಹೊತ್ತು ನೋಡುತ್ತಾ ಇದ್ದರೂ ಯಾವುದು ಖಾಲಿ ಕಾಣಿಸುತ್ತೆ ಅದು ನಿಜಕ್ಕೂ ಖಾಲಿಯಾಗಿರುತ್ತೆ....." ಮತ್ತೆ ಅವಳ ಹತ್ತಿರ ಅಂಥ ಬಹಳಷ್ಟು ವಿಷಯಗಳು ಇದ್ದವು. ಅವುಗಳ ಶಬ್ದಗಳು ಅವಳ ಹತ್ತಿರ ಇದ್ದವು. ಆದರೆ, ಅರ್ಥಗಳು ಖಾಲೀ ಜಾಗಕ್ಕೆ ಹೋಗಿಬಿಟ್ಟದ್ದವು ಎಂದು ಡಾಂಕಾಳಿಗೆ ಅನ್ನಿಸುತ್ತಿತ್ತು........

ಇಂದು ಸಹ ಡಾಂಕಾಳು ತನ್ನ ದೊಡ್ಡ ಕೊಠಡಿಯಲ್ಲಿದ್ದ ಒಂದೊಂದು ವಸ್ತುವನ್ನೂ ಹುಡುಕುತ್ತ ಶಬ್ದಗಳನ್ನು ಹುಡುಕ ಹತ್ತಿದ್ದಳು. ಅರ್ಥ ಇಲ್ಲದಿದ್ದರೆ ಹೋಗಲಿ, ಶಬ್ದವೇ ಆದರೂ ಆಯಿತು. ಆದರೆ ಅವು ತಾನೆ ಎಲ್ಲಿವೆ?

ಡಾಂಕಾಳ ದೊಡ್ಡ ಕೊಠಡಿಯಲ್ಲಿ ಎರಡು ಕಿಟಕಿಗಳು ಇದ್ದವು. ಮುಂದುಗಡೆ ಇದ್ದ ಕಿಟಕಿ ಕಡೆಗೆ ದೊಡ್ಡ ರಸ್ತೆ ಇತ್ತು. ಅಲ್ಲಿ ರಾತ್ರಿ ಬಹಳ ಹೊತ್ತಿನವರೆಗೂ ಜನ ಹೋಗುತ್ತಾ ಬರುತ್ತಾ ಇದ್ದರು. ಆದರೆ ಹಿಂದುಗಡೆ ಕಿಟಕಿಯ ಕಡೆಗೊಂದು ಕಾಡು ಇತ್ತು. ಅದರಲ್ಲಿಯ ಮರಗಳು ಎಲ್ಲಿಗೂ ಹೋಗುತ್ತ ಬರುತ್ತ ಇರಲಿಲ್ಲ. ಇನ್ನು ಡಾಂಕಾ ಎರಡೂ ಕಿಟಕಿಗಳನ್ನು ನೋಡುತ್ತ ನೋಡುತ್ತ "ಶಬ್ದಗಳು ಮುಂದುಗಡೆ ಕಿಟಕಿಯಿಂದ ಹೊರಟು ಹೊರಗಡೆ ದೊಡ್ಡ ರಸ್ತೆಗೆ ಹೊರಟುಹೋಗಿವೆ. ಹಾಗೂ ಅರ್ಥಗಳು ಹಿಂದುಗಡೆಯ ಕಿಟಕಿಯಿಂದ ಸಾಗಿ ಹೊರಗಡೆ ಕಾಡಿಗೆ ಹೋರಟು ಹೋಗಿವೆ ಎನಿಸುತ್ತದೆ" ಎಂದು ಅಳುವ ಹಾಗೆ

ಮಾಡುತ್ತಿದ್ದಳು. ಮತ್ತೆ ಎರಡೂ ಕಿಟಕಿಗಳ ನಡುವೆ ಇದ್ದ ಜಾಗ ಏನಿತ್ತು ಅದು ಎರಡು ದೇಶಗಳ ಸರಹದ್ದುಗಳ ನಡುವೆ ಖಾಲಿಬಿಟ್ಟಿದ್ದ ಸಣ್ಣ ಜಾಗವಾಗಿದ್ದು ತಾನು ಅಲ್ಲಿ ಅನೇಕ ವರ್ಷಗಳಿಂದ ನಿಂತಿದ್ದೆ ಎಂದು ಡಾಂಕಾಳಿಗೆ ಅನಿಸುತ್ತಿತ್ತು. ಬಹಳ ಒಬ್ಬಂಟಿಯಾಗಿದ್ದರೂ ಅನೇಕ ವರ್ಷಗಳಿಂದ ಅಲ್ಲೇ ನಿಂತಿದ್ದಳು. ತಾನೂ ಯಾವಾಗಲಾದರೂ ಈ ಕಡೆಯ ಇಲ್ಲ ಆ ಕಡೆಯ ಗಡಿಯನ್ನು ದಾಟಿ ಯಾವುದಾದರೂ ಒಂದು ಕಡೆಗೆ ಯಾಕೆ ಹೋಗಿ ಬಿಡಲಿಲ್ಲ ಎನ್ನುವುದು ಗಮನಕ್ಕೆ ಬಂದಿತು. ತನ್ನ ಪಾದಗಳು ಹಲವಾರು ವರ್ಷಗಳಿಂದ ಕದಲುತ್ತಲೇ ಇಲ್ಲವೇನೋ ಹಾಗೂ ತಾನೂ ಸದಾ ಅಲ್ಲೇ ನಿಂತಿರುತ್ತಿದ್ದಳೇನೋ ಎಂದು ಅವಳಿಗೆ ಅನ್ನಿಸಿತು. ಮುಂದಿನ ಕಿಟಕಿಯಿಂದ ಬಹಳ ಗಲಾಟೆ ಕೇಳಿಬರುತ್ತಿತ್ತು.

ಜನಗಳ ಪಾದಗಳ, ಟ್ರಾಮುಗಳ ಚಕ್ರಗಳ ಖಟ್ ಖಟ್ ಶಬ್ದದಂಥ ಶಬ್ದಗಳು.... ಆದರೆ ಹಿಂಬದಿಯ ಕಿಟಕಿಯಿಂದ ಯಾವ ಖಟ್ ಖಟ್ ಶಬ್ದವೂ ಬರುತ್ತಿರಲಿಲ್ಲ. ಅರ್ಥಗಳದ್ದು ಖಟ್ ಖಟ್ ಶಬ್ದ ಯಾವುದೂ ಇರುವುದಿಲ್ಲವೇನೋ ಅನ್ನುವ ಹಾಗೆ ಹಾಗೂ ಮರಗಳಲ್ಲಿ ಎಲೆಗಳ ಹಾಗೆ ಅವು ಸದ್ದಿಲ್ಲದೆ ಉದಿಸುತ್ತವೇನೋ ಮತ್ತು ಸದ್ದಿಲ್ಲದೆ ಉದುರಿಹೋಗುತ್ತವೇನೋ ಎನ್ನುವ ಹಾಗೆ.

ಸ್ವತಃ ಅವಳು ಹೇಗಿದ್ದಳೋ ಕೊಠಡಿಯೊಳಗಿನ ವಸ್ತುಗಳೂ ಹಾಗೇ ಇದ್ದವು. ಒಂದು ಗಾಢ ಕೆಂಪು ಮಖಮಲ್‌ನ, ರಾಜಠೀವಿಯ 'ದಿವಾನ್ ಇತ್ತು' ಅದರ ಎತ್ತರದ ಪಾರ್ಶ್ವಗಳಲ್ಲಿ ಚಿನ್ನದ ಬಣ್ಣದ ಕಲ್ಲನ್ನು ಇಡಲಾಗಿತ್ತು. ಒಂದು ಕಡೆ ಕಪ್ಪು ಬಣ್ಣದ ಹೊಳೆಯುತ್ತಿರುವ ಮರದ ಟೇಬಲ್ ಇತ್ತು. ಅದರ ಮೇಲೆ ಕೆತ್ತನೆಯ ಕೆಲಸ ಮಾಡಲಾಗಿತ್ತು. ಒಂದು ಕಡೆ ಅಲಮಾರು ಇತ್ತು. ಅದರಲ್ಲಿ ಎತ್ತರದ ಕಂಠದ ಗಾಜಿನ ಹೂಜಿಗಳಿದ್ದವು. ನೀಲಿ ಹೂವುಗಳಿಂದ ಚಿತ್ರಿತವಾದ ಪ್ಲೇಟುಗಳಿದ್ದವು. ಬೆಳ್ಳಿಯ ಮುಳ್ಳುಗಳು ಮತ್ತು ಬೆಳ್ಳಿಯ ಚಮಚಗಳಿದ್ದವು. ಮೂರೂ ಗೋಡೆಗಳ ಮೇಲೆ ತೈಲ ವರ್ಣದ ಮೂರು ದೊಡ್ಡ ಚಿತ್ರಗಳಿದ್ದವು. ಅವುಗಳ ದೊಡ್ಡ ದೊಡ್ಡ ಫ್ರೇಮ್‌ಗಳಲ್ಲಿ ಚಿನ್ನದ ಬಣ್ಣದ ಕಲ್ಲುಗಳನ್ನು ಹದಿಯಲಾಗಿತ್ತು. ಅಲ್ಲದೆ ಈ ದೊಡ್ಡ ಕೊಠಡಿಯ ಎರಡನೇ ಮೂಲೆಯಲ್ಲಿ ಊಟ ಮಾಡಲು ಬಹಳ ದೊಡ್ಡ ಟೇಬಲ್ ಇತ್ತು. ಅದರ ನಾಲ್ಕೂ ಕಡೆ ಮಕಮಲ್ಲಿನ ದೊಡ್ಡದಾದ ಎತ್ತರದ ಪೀಠವುಳ್ಳ ಎಂಟು ಕುರ್ಚಿಗಳಿದ್ದವು ಇಡೀ ದೊಡ್ಡ ಕೊಠಡಿಯಲ್ಲಿ ಒಂದು ಬಾಗಿಲು ಒಂದು ಚಿಕ್ಕ ಕೋಣೆಗೆ ತೆರೆದುಕೊಳ್ಳುತ್ತಿತ್ತು. ಅದರಲ್ಲಿ ಒಂದು ಮಂಚವಿತ್ತು. ಅದರ ಮೇಲೆ ರೇಷ್ಮೆಯ ಬಹಳ ದೊಡ್ಡ ಚಾದರವೊಂದನ್ನು ಹಾಸಲಾಗಿತ್ತು. ಅದರ ಎರಡೂ ಪಾರ್ಶ್ವಗಳಲ್ಲಿ ಇರಿಸಲಾಗಿದ್ದ ಹಿತ್ತಾಳೆಯ ಟೀಪಾಯಿಗಳ ಮೇಲೆ ಚಿನ್ನ ಮತ್ತು ಬೆಳ್ಳಿಯ ಕೆತ್ತನೆ ಕೆಲಸ ಮಾಡಲಾಗಿತ್ತು. ಇದೇ ಕೊಠಡಿಯ ಒಂದು ಗೋಡೆಯ ಬದಿಗೆ ಪುಸ್ತಕಗಳನ್ನಿಟ್ಟಿದ್ದ ಅಲಮಾರು ಇತ್ತು. ಅದರ ಕಪಾಟುಗಳಲ್ಲಿ ಬಹಳ ಬೆಲೆಬಾಳುವ ಮೇಲು ಹೊದಿಕೆಗಳಿದ್ದು ಪುಸ್ತಕಗಳನ್ನು ಆಯ್ಕೆ ಮಾಡಿ ಇಡಲಾಗಿತ್ತು.

ಈ ಎಲ್ಲವುಗಳ ವಯಸ್ಸು ಡಾಂಕಾಳಷ್ಟೇ ಆಗಿತ್ತು. ಕಾರಣ ಇವೆಲ್ಲವುಗಳನ್ನು ಡಾಂಕಾ ಹುಟ್ಟಿದ ದಿನದಂದು ಖರೀದಿಸಲಾಗಿತ್ತು ಎಂದು ಡಾಂಕಾಳ ಅಪ್ಪ ಹೇಳಿದ್ದನು. ಡಾಂಕಾಳ ಯೌವನ ಇಳಿದು ಹೋದ ಹಾಗೆ ಈ ವಸ್ತುಗಳ ಚಮಕ್-ಧಮಕ್ ಎಲ್ಲಾ ಇಳಿದು

ಹೋಗಿತ್ತು. ಚಿನ್ನದ ಬಣ್ಣದ ಕಲ್ಲುಗಳು ಕಾಂತಿಹೀನವಾಗಿದ್ದವು. ಮಕಮಲ್ ಕೂಡಾ ಕಳೆಗುಂದಿತ್ತು.

ಈ ವಸ್ತುಗಳೂ ಡಾಂಕಾಳ ಹಾಗೆಯೇ ತುಂಬ ಏಕಾಕಿಯಾಗಿದ್ದವು. ಅವಳು ಟೇಬಲ್ ಮೇಲೆ ಊಟ ಮಾಡಲು ಕುಳಿತರೆ, ಎಂಟರಲ್ಲಿ ಏಳು ಕುರ್ಚಿಗಳು ಖಾಲಿ ಇರುತ್ತಿದ್ದವು.... ನೀಲಿ ಹೂಗಳುಳ್ಳ ತಟ್ಟೆಗಳಲ್ಲಿ ಒಂದನ್ನು ಮಾತ್ರ ನೀರಿನಿಂದ ತೊಳೆಯುತ್ತಿದ್ದಳು. ಬೆಳ್ಳಿಯ ಚಮಚೆಗಳಲ್ಲಿ ಒಂದು ಚಮಚವನ್ನು ಮಾತ್ರ ಉಪಯೋಗಿಸಲಾಗುತ್ತಿತ್ತು. ರೇಷ್ಮೆ ಚಾದರ ಹಾಸಿದ ದೊಡ್ಡ ಮಂಚದ ಒಂದು ಮೂಲೆ ಮಾತ್ರ ಯಾರಾದರೂ ಜೀವಂತ ಮನುಷ್ಯನು ಉಸಿರಾಡುವುದನ್ನು ಕೇಳಿಸಿಕೊಳ್ಳುತ್ತಿತ್ತು.

ಈ ದಿನ ಡಾಂಕಾ ಹಿಂಭಾಗದ ಕಿಟಕಿಯ ಹತ್ತಿರ ನಿಂತಿದ್ದಂತೆಯೇ, ಈ ಎಲ್ಲ ವಸ್ತುಗಳೂ ಎಲ್ಲೋ ಕಾಣೆಯಾಗಿ ಬಿಟ್ಟಿದ್ದ ಆ ಸಂದರ್ಭ ನೆನಪಾಯಿತು. ಕ್ರಾಂತಿಕಾರಿಗಳು ಅವಳ ತಂದೆಯನ್ನು ಅರ್ಧರಾತ್ರಿಯ ಹೊತ್ತಿನಲ್ಲಿ ಅವರ ಮನೆಯಿಂದ ಹೊರದಬ್ಬಿ ಮನೆಯ ಸಕಲ ವಸ್ತುಗಳ ಸಮೇತ ಇಡೀ ಮನೆಯನ್ನು ವಶಪಡಿಸಿಕೊಂಡು ಬಿಟ್ಟಿದ್ದರು.

ಆನಂತರ ಅವರು ಮೂವರನ್ನೂ ಒಂದು ಕ್ಯಾಂಪ್‌ನಲ್ಲಿ ಇರಿಸಿದ್ದರು. ಅಲ್ಲಿಂದ ಒಂದು ದಿನ ಆಕೆಯ ತಂದೆಯವರನ್ನು ಕೊಂಡೊಯ್ದಿದ್ದರು ಮತ್ತು ಅವರು ಅಲ್ಲಿಂದ ಎಂದೂ ವಾಪಸ್ ಬಂದಿರಲಿಲ್ಲ. ತಾಯಿಯಂತೂ ಹುಚ್ಚಳಂತೆ ಮಾಂಸದ ಒಂದು ಮುದ್ದೆಯಾಗಿ ಬಿಟ್ಟಿದ್ದಳು. ಆಗ ಡಾಂಕ ಒಬ್ಬ ಮದುವೆಯಾಗದ ಕನ್ಯೆ.

ಅವಳ ಕೌಮಾರ್ಯವನ್ನು ಭಂಗಮಾಡಿದ್ದು ಒಬ್ಬ ಪುರುಷನಲ್ಲ, ರಾಜಕೀಯದ ಒಂದು ಘಟನೆ. ರಾಜ್ಯ ಬದಲಾಯಿತು. ರಾಜ್ಯದ ವ್ಯವಸ್ಥೆ ಬದಲಾಯಿತು. ಯಾವ ವಸ್ತುವಿನ ಮೇಲೂ ಯಾರ ಹಕ್ಕೂ ಇರಲಿಲ್ಲ. ಯಾವುದೇ ರೀತಿಯ ವಿರೋಧದ ಕುರಿತಾಗಿ ಯಾರಿಗೂ ಯಾವ ಅಧಿಕಾರವೂ ಇರಲಿಲ್ಲ. ಯಾವ ಕೆಲಸವನ್ನು ಮಾಡಿ ಎಂದು ಆದೇಶವಾಗುತ್ತಿತ್ತೋ ಅದೇ ಕೆಲಸವನ್ನೇ ಮಾಡಬೇಕಾಗುತ್ತಿತ್ತು. ಯೋಚನೆ ಮಾಡುವಂಥದ್ದು ಕೂಡಾ, ಯಾವುದರ ಬಗ್ಗೆ ಫರ್ಮಾನು ಹೊರಡಿಸಲಾಗುತ್ತಿತ್ತೋ ಅದರ ಬಗ್ಗೆಯೇ ಆಗಿರುತ್ತಿತ್ತು.

ಡಾಂಕಾಳ ತಂದೆ ಅವಳಿಗೆ ಮೂರು ಭಾಷೆಗಳನ್ನು ಕಲಿಸಿದ್ದನು. ಒಂದು ತನ್ನ ದೇಶದ ಭಾಷೆ, ಇನ್ನೊಂದು ಫ್ರೆಂಚ್. ಮತ್ತೊಂದು ಜರ್ಮನ್. ಇಷ್ಟೆಲ್ಲಾ ಶಿಕ್ಷಣ ಎಲ್ಲೋ ಕೆಲವರಿಗೆ ಮಾತ್ರ ಸಿಕ್ಕಿರುತ್ತದೆ. ಹಾಗಾಗಿ ಹೊಸ ರಾಜನೀತಿಗೆ ಅವಳ ಅವಶ್ಯಕತೆ ಇದ್ದಿತು. ಡಾಂಕಾ ಆ ಭಾಷೆಗಳಲ್ಲಿ ತನಗೆ ಬರೆಯಬೇಕೆಂದು ಆದೇಶಿಸಿದ್ದನ್ನೇ ಬರೆಯತೊಡಗಿದಳು. ಆಗ ಅವಳಿಗೆ ಸರ್ಕಾರಿ ಆದೇಶವು ಒಬ್ಬ ಕದ್ದೋಡುವ ಪುರುಷನ ಹಾಗೆ ಅವಳ ಕೌಮಾರ್ಯ ಭಂಗ ಮಾಡಿದೆ ಎಂದು ಅನ್ನಿಸಿತು.

ತಂದೆ ಕೊಲೆಯಾಗಿದ್ದನು. ಆದರೆ ಡಾಂಕಾ ಕೊಲೆಯಾದದ್ದನ್ನು ಕಣ್ಣಾರೆ ಕಂಡಿರಲಿಲ್ಲ. ತಾಯಿ ಬದುಕುತ್ತಿದ್ದ ರೀತಿಯನ್ನು ಕಣ್ಣಾರೆ ಕಾಣುವುದೆಂದರೇನೇ ಯಾರಾದರೂ ದಿನವೂ ಇಷ್ಟಿಷ್ಟೇ ಒದ್ದಾಡಿ ಸಾಯುವುದನ್ನು ಕಣ್ಣಾರೆ ನೋಡಿದಂತಿತ್ತು. ತಾಯಿ ಸುತ್ತಲೂ ನೋಡುತ್ತಿದ್ದಳು. ಆದರೆ ಏನನ್ನೂ ಗುರುತಿಸುತ್ತಿರಲಿಲ್ಲ. ಯಾವಾಗಲಾದರೂ ಡಾಂಕಾಳ ಕೈ ಹಿಡಿದು, ದೂರದೂರಕ್ಕೆ ನೋಡುತ್ತ–

"ನಾವು ಎಲ್ಲಿಗೆ ಬಂದು ಬಂದುಬಿಟ್ಟಿದ್ದೀವಿ? ನಮ್ಮ ಊರು ಎಲ್ಲಿ ಹೋಯಿತು. ಇದು ಯಾರ ಮನೆ?" ಎಂದು ಕೇಳುತ್ತಿದ್ದಳು. ಆಗ ಡಾಂಕಾ ಅತ್ತುಬಿಡುತ್ತಿದ್ದಳು.

ಸ್ವಲ್ಪ ನೆಮ್ಮದಿ ಮೂಡಿತು ಅನ್ನಿಸಿದಾಗ, ಡಾಂಕಾಗೆ ಇರಲು ಈ ಮನೆ ಸಿಕ್ಕಿತು. ಆಗ ಡಾಂಕಾಳ ಮನಸ್ಸಿಗೆ ಒಂದು ವಿಚಾರ ಬಂದಿತ್ತು. ತನ್ನ ಸೇವೆಗೆ ಪ್ರತಿಯಾಗಿ ಅವಳ ತಂದೆ ಬದುಕಿದ್ದಾಗ ಮನೆಯಲ್ಲಿದ್ದ ಕೆಲವು ಸಾಮಾನುಗಳನ್ನು ಹಿಂತಿರುಗಿಸಬೇಕೆಂದು ಉನ್ನತ ಅಧಿಕಾರಿಗಳಲ್ಲಿ ವಿನಂತಿಸಿದ್ದಳು. ಹಾಗೆ ಮಾಡಿದರೆ ಅವಳು ಮೊದಲಿಗಿಂತ ಹೆಚ್ಚಾಗಿ ಅವರ ಅಜ್ಞೆಯನ್ನು ಪಾಲಿಸುವುದಾಗಿಯೂ ಹೇಳಿದಳು.

ಡಾಂಕಾಳ ಈ ಕೋರಿಕೆಯನ್ನು ಈಡೇರಿಸಲಾಯಿತು. ಡಾಂಕಾಳ ಈ ವಿಚಾರ ನಿಜಕ್ಕೂ ಅವಳ ನೆರವಿಗೆ ಬಂದಿತ್ತು. ತಾಯಿಯ ಕಣ್ಣುಗಳಿಗೆ ಕೆಲವನ್ನು ಗುರುತಿಸುವ ಸಾಮರ್ಥ್ಯ ಮರಳಿಬಂದಿತ್ತು. ಕೆಲವೊಂದು ಸಲ ಎದ್ದು ತಾನೇ ಕೈಯಾರೆ ಮೇಜು, ಕುರ್ಚಿಗಳನ್ನು ಒರೆಸತೊಡಗುತ್ತಿದ್ದಳು. ನಂತರ ಅವಳು 'ಇದು ಯಾರ ಮನೆ' ಎಂದು ಕೇಳುವುದನ್ನು ಬಿಟ್ಟಿದ್ದಳು.

ಹೀಗಾಗಿ ಡಾಂಕಳ ಮನೆಯಲ್ಲಿ ಹಿಂದೊಂದು ದಿನ ಕಳುವಾದ ಹಾಗೂ ಮತ್ತೆ ಕಾಣಿಸಿಕೊಂಡ ಅದೇ ವಸ್ತುಗಳಿದ್ದವು.

ಆದರೆ ಡಾಂಕಾ ಯೋಚಿಸುತ್ತಿದ್ದಳು. "ಯಾವುದು ಕನಸು ಮತ್ತು ವಿಚಾರಗಳಿಂದಲೂ ಮರೆಯಾಗಿ ಹೋಗಿದೆಯೋ ಅದರ ಸಮಾಚಾರ ಏನು?" ಡಾಂಕಾ ಆ 'ಅದರ' ಮುಂದಿನ ಖಾಲೀ ಜಾಗವನ್ನು ಅದೆಷ್ಟು ಹೊತ್ತು ದುರುಗುಟ್ಟಿಕೊಂಡು ನೋಡುತ್ತಿದ್ದಳೋ.....

(2)

ಡಾಂಕಾ ಟೇಬಲ್‌ನ ಡ್ರಾ ತೆರೆದಳು. ಈ ಡ್ರಾನಲ್ಲಿ ಅವಳು ಒಂದಷ್ಟು ಸಿಗರೇಟ್ ಇಡುತ್ತಾ ಇದ್ದಳು. ಮನಸ್ಸು ಭಾರವಾದಾಗ ಅವಳು ಅವನ್ನು ಸೇದುತ್ತಿದ್ದಳು. ಆಗ ಅವಳ ಪ್ರಾಣ ಸಿಗರೇಟಿನ ಹೊಗೆಯ ಹಾಗೆ ಗಾಳಿಯಲ್ಲಿ ಸೇರಿ ಹೋಗಲು ಬಯಸುತ್ತಿತ್ತು.

ತಾನು ಸಿಗರೇಟ್ ಸೇದಿದ ಆ ಮೊದಲ ದಿನ ಅವಳಿಗೆ ನೆನಪಿತ್ತು. ಒಂದು ದಿನ ಅಮ್ಮ ಮಂಚದ ಮೇಲೆ ರೇಷ್ಮೆಯ ಚಾದರವನ್ನು ಹಾಸುತ್ತಿದ್ದಳು. ಆಗ ಅವಳಿಗೆ ಇದ್ದಕ್ಕಿದ್ದಂತೆ ನೆನಪಾಯಿತು. "ಡಾಂಕಾ ಈ ಚಾದರವನ್ನು ನಿಮ್ಮ ತಂದೆ ಚೀಣಾದಿಂದ ಕೊಂಡುಕೊಂಡು ಬಂದಿದ್ದರು. ನೋಡು ಇದನ್ನು ಎಷ್ಟೊಂದು ಜೋಪಾನವಾಗಿ ಇಟ್ಟಿದ್ದೀನಿ"

ಅದಕ್ಕೆ ಉತ್ತರವಾಗಿ ಡಾಂಕಾಳ ದನಿ ಕಂಪಿಸತೊಡಗಿತ್ತು. ಈಗಿನ್ನೇನು ತನ್ನ ಅಮ್ಮನಿಗೆ ತನ್ನ ಪತಿಯ ನೆನಪು ಬಂದು ಅವಳು ಕುಳಿತಿದ್ದ ಹಾಗೆಯೇ ಅಳುವುದಕ್ಕೆ ಶುರುಮಾಡಿ ಬಿಡುತ್ತಾಳೇನೋ ಅಂತ ಹೆದರಿಕೆಯಾದಂತಾಯಿತು. ಕೂತುಕೂತಿದ್ದ ಹಾಗೆಯೇ ಈ ಮುಂಚೆಯೂ ಕೆಲವು ಸಲ ಅವಳಿಗೆ ಏನಾದರೂ ಆಗುತ್ತಾ ಇತ್ತು.

ಆದರೆ ಸಂತೋಷದ ಸಂಗತಿಯೆಂದರೆ ತನ್ನ ಗಂಡನ ಕೊಲೆಯಾಗಿದೆಯೆಂದು ಅವಳ ತಾಯಿಗೆ ಗೊತ್ತಿರಲಿಲ್ಲ. ಆತ ಇದ್ದಕ್ಕಿದ್ದ ಹಾಗೆ ಕಾಣೆಯಾದ ಈ ಒಂದು ಪೆಟ್ಟು ಅವಳ ಉತ್ಸಾಹವನ್ನೆಲ್ಲಾ ಅದೆಷ್ಟರಮಟ್ಟಿಗೆ ಕಸಿದುಕೊಂಡು ಬಿಟ್ಟಿತ್ತೆಂದರೆ ತನ್ನ ಗಂಡ

ವ್ಯಾಪಾರ ಮಾಡುವ ಸಲುವಾಗಿ ದೂರದೇಶಕ್ಕೆ ಹೋಗಿಬಿಟ್ಟಿದ್ದಾನೆ ಎಂದು ತನಗೆ ತಾನೇ ಮನಸ್ಸಿಗೆ ಗಟ್ಟಿ ಮಾಡಿಕೊಂಡು ಬಿಟ್ಟಿದ್ದಳು. ಆದರೆ ಆ ದಿನ ತನ್ನ ತಾಯಿಯ ಉತ್ಸಾಹ ಗರಿಗೆದರಿದೆ ಎಂದು ಡಾಂಕಾಳಿಗೆ ಅನ್ನಿಸಿತು. ಮನೆಯ ಕೆಲ ವಸ್ತುಗಳಿಂದಾಗಿ ಆತನನ್ನು ಗುರುತಿಸುವುದು ಸಾಧ್ಯವಾಗಿತ್ತು. ಅಲ್ಲದೆ ಅವಳಿಗೊಂದು ವೇಳೆ ಏನಾದರೂ ಕ್ಯಾಂಪಿನ ದಿನಗಳ ಆ ಜನರ ಕಿವಿಮಾತೇನಾದರೂ ನೆನಪಾಯಿತೋ ಹೇಗೆ ಅಂತ ಡಾಂಕಾಳಿಗೆ ಅನ್ನಿಸಿತು. ಡಾಂಕಾ ವಸ್ತುಗಳಲ್ಲೇ ಅವಳ ಗಮನ ನೆಟ್ಟಿರುವಂತೆ ಮಾಡಲು ಕೂಡಲೇ ಕೇಳಿದಳು. "ಅಮ್ಮಾ ಇಷ್ಟೊಂದು ಸುಂದರವಾದ ಮಂಚ ಯಾರ ಕಡೆಯಿಂದ ಮಾಡಿಸಿದ್ದೆ?"

"ನಿಮ್ಮ ಅಪ್ಪ ಒಂದು ಚಿತ್ರಗಳ ಪುಸ್ತಕ ತಂದಿದ್ದರು. ಎಲ್ಲಿಂದ ಅಂತ ಗೊತ್ತಿಲ್ಲ. ಅದರಲ್ಲಿ ಈ ಮಂಚದ ಮಾದರಿ ಇತ್ತು...."

"ಕುರ್ಚಿಗಳ ಮಾದರೀನೂ ಅದರಲ್ಲಿತ್ತೇ"?

"ಹೌದು ಕುರ್ಚಿಗಳದೂ ಇತ್ತು.... ಕುರ್ಚಿಗಳ ಮೇಲೆ ಮಕಮಲ್ ಹಾಸಿಬಿಟ್ಟಿದ್ದಾರೇನೋ ಅನ್ನುವಷ್ಟು ವರ್ಣರಂಜಿತ ಚಿತ್ರಗಳಿದ್ದವು.........."

"ಅಂದ ಹಾಗೆ ಕೆಲವು ಪ್ಲೇಟುಗಳು ಕೂಡಾ... ಯಾರ ಮನೇಲೂ ಇಲ್ಲದೆ ಇರೋಂಥೋವು.." ಅವುಗಳನ್ನಂತೂ ಫ್ರಾನ್ಸ್‌ನಿಂದ್ ತಂದಿದ್ದರು. ನೋಡು ನಾನು ಅವುಗಳಲ್ಲಿ ಒಂದನ್ನೂ ಒಡೆಯೋದಕ್ಕೆ ಬಿಟ್ಟಿಲ್ಲ. ಹನ್ನೆರಡು ಪ್ಲೇಟ್ ಇದಾವೆ. ಬೇಕಾದರೆ ಎಣಿಸಿನೋಡು."

ತಾಯಿಯ ಗಮನ ಯಾವುದರಲ್ಲಾದರೂ ಸರಿ. ಪ್ಲೇಟು, ಚಮಚ ಎಣಿಸುವುದರಲ್ಲಾದರೆ ತಾನೆ ಏನಂತೆ, ತೊಡಗಿದ್ದರೆ ಸಾಕು. ಅಂತ ಬಯಸಿದ್ದಳು. ಅಲ್ಲಿ ಇಲ್ಲದೆ ಇರುವ ವಸ್ತುಗಳೇ ನೆನಪಾಗುತ್ತಿದ್ದಂತೆ ಅದರಲ್ಲೂ ಒಂದು ಕಷ್ಟ ಇದೆ ಅನ್ನಿಸತೊಡಗಿತು. ಒಂದು ದಿನವಂತೂ ಅವಳು ಮುತ್ತಿನ ಒಂದು ಬಾಚಣಿಗೆಯ ಸಲುವಾಗಿ ದಿನವಿಡೀ ತಗಾದೇ ಶುರು ಮಾಡಿದ್ದಳು. ಒಂದೊಂದು ಸಾಮಾನನ್ನೂ ತೆಗೆದು ತೆಗೆದು ಆ ಬಾಚಣಿಗೆಯನ್ನು ಹುಡುಕಹತ್ತಿದ್ದಳು: ಬೆಳಿಗ್ಗೆ ತಾನೇ ಎಲ್ಲೋ ಇಟ್ಟುಬಿಟ್ಟು ಮರೆತಿದ್ದೀನೇನೋ ಎನ್ನುವ ಹಾಗೆ.

ಆದರೆ ಆ ದಿನ ಅಮ್ಮನಿಗೆ ಬೇರೆ ಇನ್ನಾವ ಸಾಮಾನೂ ನೆನಪಾಗಿರಲಿಲ್ಲ. ಡಾಂಕಾಗೆ ಸ್ವಲ್ಪ ಏನೋ ಭರವಸೆ ಸಿಕ್ಕಿತು. ಅಷ್ಟು ಹೊತ್ತಿಗೆ ಇದ್ದಕ್ಕಿದ್ದ ಹಾಗೆ ಅಮ್ಮ ಮೇಜಿನ ಒಂದು ಡ್ರಾ ತೆರೆಯುತ್ತ ಕೇಳಿದ್ದಳು. "ನಿಮ್ಮಪ್ಪನ ಕಾಗದ ಇಲ್ಲೇ ಇತ್ತಲ್ಲ ಎಲ್ಲಿ ಹೋಯಿತು."?

"ಕಾಗದ"......... ಡಾಂಕಾ ಬೆಚ್ಚಿ ಬಿದ್ದಳು.

"ನಿನ್ನೆ ನಾನು ಬೇಗ ಬಂದು ಬಿಡ್ತೀನಿ ಅಂತ ನಿಮ್ಮ ಅಪ್ಪನ ಕಾಗದ ಬಂದಿತ್ತು. ನಿನ್ನೇ ನಾನು ನಿನಗೆ ಹೇಳಿದ್ದೆ ಅಲ್ಲವೇ"

"ಇಲ್ಲವಲ್ಲ"?

"ಬಹುಶಃ ಸಂತೋಷದಲ್ಲಿ ಹೇಳೋದು ಮರೆತು ಬಿಟ್ಟೆನೋ ಏನೋ? ಇಲ್ಲೇ ಮೇಜಿನ ಡ್ರಾನಲ್ಲಿ ಇಟ್ಟಿದ್ದೆ."

ಅಮ್ಮನಿಗೆ ರಾತ್ರಿ ಎಲ್ಲೋ ಕನಸು ಬಿದ್ದಿರಬೇಕೆಂದು ಡಾಂಕಾಳಿಗೆ ಅನ್ನಿಸಿತು.

"ಯಾಕೆ ಏನೂ ಮಾತಾಡ್ತಾ ಇಲ್ಲ? ಕಾಗದ ನೀನು ತೆಗೆದಿಟ್ಟಿದ್ದೀಯಾ?" ಅಮ್ಮ ಕೇಳುತ್ತ ಇದ್ದಳು. ಆದರೆ ಡಾಂಕಾಗೆ ಏನೂ ಹೇಳಲಾಗಲಿಲ್ಲ.

ತಾಯಿ ಮತ್ತೆ ಕೇಳಹತ್ತಿದಳು– "ಪ್ಯಾರಿಸ್‌ನಿಂದ ಬಂದಿತ್ತಲ್ವ?" ಮತ್ತೆ ತನ್ನದೇ ಲೆಕ್ಕಾಚಾರ ಹಾಕುತ್ತ "ಅಲ್ಲಿಂದ ಬಂದು ಅವರು ಇಟಲಿಗೆ ಹೋಗದೆ ಇರಲಪ್ಪ...... ಒಂದು ವೇಳೆ ಇಟಲಿಗೆ ಹೋಗಿಬಿಟ್ಟರೆ....."

ತಾಯಿಯ ಗಮನವನ್ನು ಬೇರೆ ಕಡೆಗೆ ತಿರುಗಿಸಲು ಡಾಂಕಾ ಮೆಲ್ಲಗೆ ಹೇಳಿದಳು. "ಇಟಲಿ", "ಅಮ್ಮಾ ನೀನು ಯಾವತ್ತಾದರೂ ಇಟಲಿಗೆ ಹೋಗಿದ್ದೀಯಾ?"

"ಇಲ್ಲ, ಆದರೆ ಇಟಲಿಗೆ ಹೋದ ಮನುಷ್ಯ ಬೇಗ ವಾಪಸ್ ಬರಲ್ಲ ಅಂತ ನನಗೆ ಗೊತ್ತು. ಕೆಲವರಂತೂ ವಾಪಸ್ಸೇ ಬರಲ್ಲ. ಯಾರಿಗೆ ಗೊತ್ತು ನಿಮ್ಮ ಅಪ್ಪನೂ...." ಹೀಗೆ ಹೇಳುತ್ತ ಅಮ್ಮ ತನ್ನದೇ ಆದ ಯೋಚನೆಗಳಲ್ಲಿ ಮುಳುಗಿದಳೋ ಏನೋ ಅವಳ ಕೈಯಲ್ಲಿ ನಿಂತುಕೊಳ್ಳುವುದಕ್ಕೇ ಆಗಲಿಲ್ಲ. ಅವಳು ಮಂಚದ ಒಂದು ಕಟ್ಟಿನ ಮೇಲೆ ಸ್ತಬ್ಧಳಾಗಿ ಕುಳಿತುಬಿಟ್ಟಳು.

ತಾಯಿ ಕಲ್ಲಿನಂತಾಗಿ ಬಿಟ್ಟಾಗ, ಡಾಂಕಾಳಿಗೆ ತಾಯಿಯ ಈ ಸ್ಥಿತಿ ತೀರ ಕೆಟ್ಟನಿಸಿತು. ಅವಳು ತಾಯಿಯನ್ನು ಈ ಗಾಢಮೌನದಿಂದ ಹೊರತರಲು ಕೇಳಿದಳು– "ಆದರೆ ಅಮ್ಮಾ ಇಟಲಿಗೆ ಹೋದ ಜನ ವಾಪಾಸ್ ಯಾಕೆ ಬರಲ್ಲ"?

ತಾಯಿ ಅದೆಷ್ಟೋ ಹೊತ್ತು ಮಗಳ ಮುಖ ನೋಡುತ್ತಿದ್ದಳು. ಆಮೇಲೆ ನಕ್ಕಂತೆ ಮಾಡಿ ಹೇಳಿದಳು – "ಗಂಡ ಯಾವ ದೇಶಕ್ಕಾದರೂ ಹೋಗಲಿ, ಅವನ ಹೆಂಡತಿ ಹೆದರಲ್ಲ. ಆದರೆ ಅವನು ಇಟಲಿಗೆ ಹೋಯಿತು ಅಂದರೆ, ಹೆಂಡತಿಗೆ ಅವನ ಮೇಲೆ ನಂಬಿಕೇನೇ ಇರಲ್ಲ."

"ಯಾಕೆ ಹಾಗೆ"? ಡಾಂಕಾಳು ನಕ್ಕಂತೆ ಮಾಡಿದಳು.

"ನೀನೊಬ್ಬಳು ಹುಚ್ಚಿ" ತಾಯಿಗೆ ಈ ಮಾತನ್ನು ಹೇಳುವಾಗ ನಾಚಿಕೆಯಾದಂತೆನಿಸಿತು. "ಇಟಲಿಯ ಹೆಂಗಸರು ಗಂಡಸರ ಮೇಲೆ ಜಾದೂ ಮಾಡಿ ಬಿಡ್ತಾರೆ"

ಆನಂತರ ತಾಯಿ ದೀರ್ಘವಾಗಿ ನಿಟ್ಟುಸಿರುಬಿಟ್ಟು ಹೇಳಿದ್ದಳು "ಅಬ್ಬಾ ಸದ್ಯ ಅವರು ಎಲ್ಲೇ ಹೋಗಿರಲಿ ಇಟಲಿಗೆ ಹೋಗದೆ ಇರಲಪ್ಪ. ಅಷ್ಟಾದರೆ ನಾನು ಜೀವನವಿಡೀ ಅವರಿಗೋಸ್ಕರ ಕಾಯ್ತಿರ್ತೀನಿ..... ಅವರು ಬರೋದಿಲ್ಲ"

ಆ ದಿನ ಒಬ್ಬಳೇ ಕುಳಿತು ಡಾಂಕಾ ಜೀವಮಾನದಲ್ಲಿ ಮೊದಲ ಸಿಗರೇಟ್ ಸೇದಿದ್ದಳು.....

3

"ಸಿಗರೇಟಿನ ಇತಿಹಾಸ ಯಾರು ಬರೀತಾರೆ?" ಡಾಂಕಾಳಿಗೆ ಒಂದು ಆಲೋಚನಾ ಲಹರಿ ಸುಳಿಯಿತು. "ಸಿಗರೇಟಿನ ಇತಿಹಾಸ ಅಂದರೆ ಅದರ ಹೆಸರಿನಲ್ಲಿದೆ ಅನ್ನಿಸುತ್ತೆ. ಎಲ್ಲವೂ ಒಂದೊಂದು ಬೇರೆ ಬೇರೆ ಹೆಸರಲ್ಲಿ. ಬೇರೆ ಬೇರೆ ಬ್ರಾಂಡ್‌ಗಳಲ್ಲಿ – ಒಂದರದ್ದು ಮೂವತ್ತೈದು ವರ್ಷ ಆದರೆ ಇನ್ನೊಂದರದ್ದು ಐವತ್ತು ವರ್ಷ. ಫಿಲ್ಮ್‌ನಲ್ಲಿ ಯಾವುದಾದರೂ ಒಂದು ಜಾಹೀರಾತು ಬಂದರೆ, ಆಗ ಅದರ ಇತಿಹಾಸವನ್ನು ಹೀಗೇ ಹೇಳಲಾಗುತ್ತದೆ.

ಆದರೆ ಇದು ಹೇಗೆ ಸಿಗರೇಟಿನ ಇತಿಹಾಸ ಆಗುತ್ತೆ? ಇದಂತೂ ಒಂದು ಕಂಪನಿಯ ಇತಿಹಾಸ ಆಗುತ್ತೆ"

ಡಾಂಕಾ ಕೈನಲ್ಲಿದ್ದ ಸಿಗರೇಟಿನಿಂದ ಇನ್ನೊಂದು ಸಿಗರೇಟ್ ಹತ್ತಿಸಿಕೊಂಡಳು ಯೋಚಿಸಿತೊಡಗಿದಳು– ತನಗೆ ಮೊದಲನೇ ಸಂಪಾದನೆ ಕೈಗೆ ಬಂದಾಗ ಆ ಸಂತೋಷದಲ್ಲಿ ಮೊದಲನೇ ಸಿಗರೇಟ್ ಸೇದಿದ್ದಾಗಿ ಅಪ್ಪ ಒಂದು ಸಲ ಸ್ವತಃ ಹೇಳಿದ್ದರು. ಓದುತ್ತಾ ಇದ್ದಾಗ ಭಾರೀ ಸಂಯಮಿಯಾಗಿದ್ದರಂತೆ. ಸ್ವಂತ ಸಂಪಾದನೆಯ ಹಣ ಕೈಗೆ ಬಂದ ಹೊರತು, ಯಾವುದೇ ಭೋಗದ ವಸ್ತುಗಳನ್ನೂ ಕೊಂಡುಕೊಳ್ಳಲ್ಲ ಅಂತ ಮನಸ್ಸಿನಲ್ಲಿ ಪ್ರತಿಜ್ಞೆ ಮಾಡಿದ್ದರಂತೆ........ ಹಾಗಿದ್ದ ಮೇಲೆ ಇದು ಅವರಿಗೆ ಭೋಗದ ಸಂಕೇತ..."

ಡಾಂಕಾಳಿಗೆ ತಲೆ ಸುತ್ತುಬಂತು.... ಬಹುಶಃ ಬೆಳಿಗ್ಗೆಯಿಂದ ಅವಳು ಏನೂ ತಿಂದಿಲ್ಲದೆ ಇದ್ದುದಕ್ಕಿರಬೇಕು. ಆ ಹೊತ್ತು ಭಾನುವಾರ, ಕೆಲಸಕ್ಕೆ ಹೋಗಬೇಕಾಗಿರಲಿಲ್ಲ.

ಅದಕ್ಕೇ ಏನೂ ಮಾಡಲು ಹೋಗಿರಲಿಲ್ಲ. ಕಾಫಿಯ ಬದಲು ಸಿಗರೇಟ್ ಸೇದಿದ್ದಳು. ರೊಟ್ಟಿ ಪಲ್ಯದ ಬದಲಿಗೂ ಸಿಗರೇಟ್. ಮತ್ತೆ ಸಿಗರೇಟಿನ ಬದಲೂ ಸಿಗರೇಟು. ಆಗ, ತಾನು ಓದಿದ ಖಲೀಲ್‌ಗಿಬ್ರಾನನ ಪುಸ್ತಕದಲ್ಲಿ ಅವನು ಒಂದು ದಿನದಲ್ಲಿ ಹತ್ತು ಲಕ್ಷ ಸಿಗರೇಟ್ ಸೇದಿದ್ದೆ ಎಂದು ತಾನೇ ಒಂದು ಪತ್ರದಲ್ಲಿ ಹೇಳಿಕೊಂಡಿದ್ದು ನೆನಪಾಯಿತು.

ಡಾಂಕಾ ಮತ್ತೆ ವಿಚಾರಗಳಲ್ಲಿ ಮುಳುಗಿದಳು. ಸಿಗರೇಟಿನ ಅಸಲಿ ಇತಿಹಾಸವೆಂದರೆ ಯಾರಿಗೆ ಯಾವ ಹೊತ್ತಿಗೆ ಸಿಗರೇಟು ಬೇಕು ಅನ್ನಿಸುತ್ತೆ ಅನ್ನುವುದು.

ಡಾಂಕಾಳಿಗೆ ಬೆಟ್ಟದ ಮೇಲಿದ್ದ ಆ ಚರ್ಚ್‌ನ ನೆನಪಾಯಿತು. ಅದರಲ್ಲಿ ಕಲ್ಲಿನಿಂದ ನಿರ್ಮಿಸಿದ ಕೆಲವು ಗುಹೆಗಳಿದ್ದುವು. ಎರಡು ವರ್ಷದ ಹಿಂದೆ ಇಲ್ಲಿ ತುರ್ಕರ ರಾಜ್ಯಸ್ಥಾಪನೆ ಯಾದಾಗ, ಜನಗಳ ಮೇಲೆ ತುಂಬಾ ಹಿಂಸಾಚಾರಗಳು ನಡೆದಿದ್ದವು ಅಂತ ಹೇಳುತ್ತಾರೆ. ಆಗ ಕೆಲವು ವಿದ್ವಾಂಸರು ಈ ಗುಹೆಗಳಲ್ಲಿ ಸೇರಿಕೊಂಡು ತುರ್ಕರ ಕಣ್ಣು ತಪ್ಪಿಸಿ ಆ ಕಾಲದ ಇತಿಹಾಸವನ್ನು ಬರೆಯುತ್ತಿದ್ದರಂತೆ. ಕಾಡಿನಲ್ಲಿ ಸಿಕ್ಕುವ ಗೆಡ್ಡೆ ಗೆಣಸು, ತಂಬಾಕಿನ ಎಲೆ ತಿಂದುಕೊಂಡು ಬದುಕು ಸಾಗಿಸುತ್ತ ಇತಿಹಾಸ ರಚಿಸಿದರಂತೆ.

ಡಾಂಕಾಳ ಮನಸ್ಸಿನಲ್ಲಿ ಬೆಟ್ಟದ ಗುಹೆಗಳಲ್ಲಿ ಕುಳಿತು ಇತಿಹಾಸ ರಚಿಸುತ್ತಿದ್ದ ಆ ವಿದ್ವಾಂಸರ ಆಕೃತಿಗಳು, ಚಿತ್ರದಲ್ಲಿ ನೋಡಿದ್ದ ಖಲೀಲ್ ಗಿಬ್ರಾನನ ಆಕೃತಿಗಳು ಹೊಂದಿಕೆ ಯಾಗಲಿಲ್ಲ. ಯೋಚಿಸತೊಡಗಿದಳು– ಹಾಗಿದ್ದರೂ ಇದೂ ಸಿಗರೇಟಿನ ಇತಿಹಾಸವೇ– ಯಾವುದನ್ನಾದರೂ ರಚಿಸುವ ಸಂದರ್ಭದಲ್ಲಿ.

ಡಾಂಕಾ ದೀರ್ಘವಾಗಿ ಸಿಗರೇಟಿನ ದಮ್ ಎಳೆದುಕೊಂಡು ಕಣ್ಣು ಮುಚ್ಚಿಕೊಂಡಳು. ಕೈ ತನಗೆ ತಾನೇ ತುಟಿಗಳ ಮೇಲಕ್ಕೆ ಹೋಯಿತು. ಸಿಗರೇಟಿನ ತುದಿಯಲ್ಲಿ ಕಟ್ಟಿದ್ದ ಬೂದಿ ಅವಳ ಬಾಯ ಮೇಲೆ ಅದುರಿ ಬಿದ್ದಾಗ, ಅದರ ಬಿಸಿತಾಕಿ ಅವಳು ಬೆಚ್ಚಿದಳು.

"ಹಾಳಾದೋನು ಎಲ್ಲಿ ಇರಬಹುದು."? ಡಾಂಕಾಳ ಮನಸ್ಸಿನಲ್ಲಿ ಏನೋ ಒಂದು ಥರಾ ಆದಾಗ – ಅವಳ ಕೊಠಡಿಯ ಎರಡೂ ಕಿಟಕಿಗಳು ಒಮ್ಮೆಲೇ ಬಂದ್ ಆಗಿಬಿಟ್ಟಿವೆ, ಎನಿಸಿತು. ಮುಂದಿನ ಕಿಟಕಿಯಿಂದ ಹೊರಗೆ ಹೋಗಿದ್ದ ಆ ಶಬ್ದ ಶಾಶ್ವತವಾಗಿ ಹೊರಗೆ ಉಳಿದು ಬಿಟ್ಟಿದೆ. ಹಿಂದುಗಡೆಯ ಕಿಟಕಿಯಿಂದ ಹೊರಗೇ ಹೋಗಿದ್ದ ಪ್ರತಿಯೊಂದು 'ಅರ್ಥವೂ' ಶಾಶ್ವತವಾಗಿ ಹೊರಗೇ ಉಳಿದುಬಿಟ್ಟಿತ್ತು ಅಂತ ಅನ್ನಿಸಿತು

ಕೊಠಡಿಯಲ್ಲಿ ಸಿಗರೇಟ್ ಉರಿಯುತ್ತಿತ್ತು. ಡಾಂಕಾ ಉರಿಯುತ್ತಲೇ ಇದ್ದಳು. “ಸಿಗರೇಟಿನ ಇತಿಹಾಸ...” ಡಾಂಕಾಳ ಕಣ್ಣಮುಂದೆ ಕತ್ತಲು ಕವಿದಂತೆ ಆಯಿತು. ಬಹುಶಃ ಸಿಗರೇಟಿನ ಹೊಗೆ.

ಈ ಕ್ಷಣ, ಈ ಗಳಿಗೆ.... ಇದರಂಥ ಹಲವು ಕ್ಷಣಗಳು, ಹಲವು ಗಳಿಗೆಗಳು... ಇವೂ ಕೂಡ ಸಿಗರೇಟಿನ ಇತಿಹಾಸ, ನಿಸ್ಸಂದೇಹವಾಗಿ ಇವಕ್ಕೆ ಯಾವುದೇ ಶಬ್ದವೂ ಇಲ್ಲ, ಅರ್ಥವೂ ಇಲ್ಲ. ಡಾಂಕಾ ಬೆರಳ ಸಂದಿಯಲ್ಲಿ ಹಿಡಿದಿದ್ದ ಸಿಗರೇಟಿನ ಉಳಿದಿದ್ದ ತುಂಡನ್ನು ಅಲ್ಲೇ ಎಸೆದು ಬಿಟ್ಟಳು.

ಸ್ವತಃ ಅವಳು ಆರಿಹೋದ ಸಿಗರೇಟಿನ ಹಾಗೆ ಕೂತಲ್ಲೇ ತ್ರಾಣವಿಲ್ಲದಂತಾದಳು.

“ಡಾಂಕಾ ನನ್ನ ಮೇಲಾಣೆ ನಿನ್ನ ಬಗ್ಗೆ ನಿಗಾ ಇಟ್ಟುಕೊಳ್ಳಬೇಕು. ಇಟ್ಟುಕೊಳ್ತೀಯಲ್ಲ?

“ಇಟ್ಟುಕೊಳ್ತೀನಿ”

“ಈ ನನ್ನ ಡಾಂಕಾಳನ್ನು ನನ್ನ ಒತ್ತೆಯಾಗಿ”

“ಒತ್ತೆ?”

“ಇದು ನನ್ನನ್ನು ಅಡವಿಡೋದು ಡಾಂಕಾ”

ಡಾಂಕಾ ಆರಿಹೋಗಿದ್ದರೂ ಪ್ರಜ್ವಲಿಸಿದಳು. ಅವಳ ಕಿವಿಗಳಲ್ಲಿ ಕೊಮಾರಕನ ದನಿ ತುಂಬಿಕೊಳ್ಳುತ್ತಿತ್ತು....

“ಕೊಮಾರಕ್ ಎಲ್ಲಿದ್ದಾನೆ? ಎಲ್ಲೂ ಇಲ್ಲ...” ಡಾಂಕಾಳ ಮನಸ್ಸು ವ್ಯಾಕುಲಗೊಂಡಿತು. “ಇಲ್ಲಿ ಇರೋದು ನಾನು ಮಾತ್ರ; ಆದರೆ ದನಿ ಅವನದ್ದು...”

ಡಾಂಕಾಗಳಿಗೆ ವ್ಯಾಕುಲತೆಯ ಭಾವವುಂಟಾಯಿತು. ನೆಮ್ಮದಿಯ ಭಾವವೂ ಉಂಟಾಯಿತು. “ಒಂದು ವೇಳೆ ಭೂತಕಾಲದ ಕೆಲದನಿಗಳೂ ಮನುಷ್ಯನ ಬಳಿ ಇಲ್ಲದೆ ಹೋದರೆ ಮನುಷ್ಯನದು ಏನು ತಾನೆ ನಡೆಯುತ್ತೆ....”

ಜೊತೆಯಲ್ಲೇ ತಾನು ಕೊಮಾರಕನಿಗೆ ನ್ಯಾಸವಾಗಿ ಇದ್ದವಳು. ಮತ್ತು ತಾನು ಆ ನ್ಯಾಸವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ ಎಂಬ ತನ್ನ ಕರಾರು ನೆನಪಾಯಿತು. ಅವಳು ಎದ್ದು ಕಾಫಿ ತಯಾರಿಸಿದಳು. ಪ್ಲೇಟನಲ್ಲಿ ಮೊಸರಿನ ಒಂದು ತುಂಡನ್ನು ಇರಿಸಿಕೊಂಡು ತಿನ್ನತೊಡಗಿದಾಗ ಇದ್ದಕ್ಕಿದ್ದಂತೆ ನೆನಪಾಯಿತು. ಕವಿಗೋಷ್ಠಿಗಳಲ್ಲಿ ಬಹಳ ಉತ್ಸಾಹದಿಂದ ಓದುತ್ತಿದ್ದ ಕವಿತೆಗಳನ್ನು ಬರೆಯಬೇಕೆಂದು ಹೊರಟಾಗ ಅವಳು ಎಲ್ಲಾದರೂ ಒಂದು ನೂರು ಸಿಗರೇಟ್ ಸೇದಿದ್ದಿರಬಹುದು. ಕೊಮಾರಕನು ಮನೆಯಲ್ಲೂ ಆ ಕವಿತೆಯನ್ನು ಬಹಳ ಆಸಕ್ತಿಯಿಂದ ಓದುತ್ತಿದ್ದನು.

“ಹುತಾತ್ಮರ ಸಮಾಧಿಗಳ ಮೇಲೆ ಕುಳಿತು
ಕತ್ತಿಯನು ಹರಿತಗೊಳಿಸುತಿರುವೆ
ಕತ್ತಿಯೊಂದು ಉಸಿರಾಡಿದರೆ
ಸಿಡಿಯುವುದು ಕ್ರಾಂತಿ
ಅಲ್ಲದೆ ಆ ಹುತಾತ್ಮರು ಹರಿಸಿದ ರಕ್ತಕೆ
ಪ್ರತಿಯಾಗಿ ಸೇಡು ತೀರಿಸಿಕೊಳುವರು”

"ಒಂದು ಕವಿತೆ ಬರೆಯುತ್ತಿರುವಾಗ ನೀನು ಒಂದು ನೂರು ಸಿಗರೇಟು ಸೇದಿದೆ. ಈಗಂತೂ ನೀನು ಹೇಗೂ ಚೂರಿಯನ್ನು ಹರಿತಗೊಳಿಸುತ್ತಿದ್ದೀ. ಇದರಿಂದ ಬಂಡಾಯ ಎಬ್ಬಿಸುವ ಸಂದರ್ಭದಲ್ಲಿ ನೀನು ಇನ್ನೆಷ್ಟು ಸಿಗರೇಟ್ ಸೇದುತ್ತೀ?" ಎಂದು ಡಾಂಕಾ ನಗೆಯಾಡುತ್ತಿದ್ದಳು.

ಹಳೆಯ ನಗುವಿನೊಳಗಿಂದ ಹೊಸ ಅಳು ಬಂದು ಬಿಟ್ಟಿತು. "ಕವಿತೆ ಬರೆಯುವ ಹೊತ್ತಿನಲ್ಲಿ ಕೊಮಾರಕನು ಸೇದಿದ್ದ ಸಿಗರೇಟುಗಳ ಇತಿಹಾಸವನ್ನು ಯಾರು ಬರೆಯುತ್ತಾರೆ?" ಡಾಂಕಾ ಕಾಫಿಯ ಕೊನೆಯ ಗುಟುಕನ್ನು ಕುಡಿದು, ಸಿಗರೇಟು ಸೇದುತ್ತಾ ಆಲೋಚನೆಗಳಲ್ಲಿ ಮುಳುಗಿಬಿಟ್ಟಳು – "ಈ ಕವಿತೆಯ ಇತಿಹಾಸವಾದರೂ ಯಾರಿಗೆ ಗೊತ್ತಿದೆ? ಅವನು ಅದು ಯಾರಿಗೋಸ್ಕರ ಬರೆದಿದ್ದನೋ, ಜನ ಯಾರಿಗೆ ಅಂತ ತಿಳಿದುಕೊಂಡರೋ ಯಾರಿಗೆ ಗೊತ್ತು....."

"ಈ ಕವಿತೆ ಕೇಳಿ ಚಪ್ಪಾಳೆ ಹೊಡೆದಾಗ ನನಗೆ ಆಶ್ಚರ್ಯವಾಗುತ್ತೆ?" ಎಂದು ಕೊಮಾರಕ್ ಹೇಳುತ್ತಾ ಇದ್ದ.

"ಈ ಬಂಡಾಯ ಏನಿದೆ, ಅದು ಈ ಕವಿತೆಯ ಇತಿಹಾಸ ಎಂದು ಜನ ತಿಳೀತಾರೆ" ಡಾಂಕಾ ಅವನ ಮಾತಿಗೆ ಉತ್ತರ ಕೊಡುತ್ತಿದ್ದಳು.

"ಇದೇ ಕಷ್ಟದ್ದು. ಈ ಒಂದು ಹಸಿಹಸಿ ಇಲ್ಲ ಮಾಗಿದ ಬಂಡಾಯ ಏನು ಆಗಿದೆ. ಇದರಿಂದ ಏನು ಬದಲಾಗಿದೆ? ಸರ್ಕಾರಿ ಶಾಸನಗಳು ಬದಲಾಗಲಿಲ್ಲ. ಕೇವಲ ಶಾಸಕರ ಮುಖಗಳು ಬದಲಾದವು. ಹಾಗೆ ಹೇಳುತ್ತ ಕೊಮಾರಕನ ದನಿ ಕೊಂಚ ಏರುತ್ತಿತ್ತು. ಡಾಂಕಾ ತನ್ನ ತುಟಿಗಳಿಂದ ಅವನ ದನಿಯನ್ನು ಅಡಗಿಸಿ ಬಿಡುತ್ತಿದ್ದಳು– "ದೇವರ ಮೇಲೆ ಆಣೆ, ಈ ಮಾತನ್ನು ಬೇರೆ ಯಾರ ಮುಂದೆಯೂ ಹೇಳಕೂಡದು."

"ನನಗೆ ಏನನ್ನೂ ಆಡುವುದರಲ್ಲಿ ನಂಬಿಕೆ ಇಲ್ಲ. ಬರೀ ಮಾಡುವುದರಲ್ಲಿ ಮಾತ್ರ ನಂಬಿಕೆ ಇದೆ" ಕೊಮಾರಕ್ ಗಹಗಹಿಸಿ ನಕ್ಕನು.

"ಆದರೆ ನೀನು–ನಾನು ಮಾಡುವುದರಿಂದ ಏನಾಗುತ್ತೆ"? ಡಾಂಕಾ ಬೇಸರ ಗೊಂಡಂತಾಗಿ ಬಿಡುತ್ತಿದ್ದಳು.

ಅವಳಿಗೆ ಈ ಮುಂಚೆ ಏನೇನೋ ಗೊತ್ತಿಲ್ಲದೆ ಇರುವಂಥ ಅದು ಯಾವ ಮಾತನ್ನು ಹೇಳ ಹೊರಟಿದ್ದಾನೋ ಅನ್ನುವ ಹಾಗೆ ಒಂದು ದಿನ ಕೊಮಾರಕನು "ನಿನಗೆ ಒಂದು ಮಾತು ಹೇಳಲೇ?" ಎಂದು ಕೇಳಿದನು.

"ಏನದು?"

"ಆ ನನ್ನ ಕವಿತೆ ಇದೆಯಲ್ಲ....."

"ಯಾವುದು? ಸತ್ತವರ ಸಮಾಧಿಗಳ ಮೇಲೆ ಚೂರಿಯನ್ನು ಮಸೆಯುವ ಕವನವೋ ಇಲ್ಲ ಬೇರೆನೋ?"

"ಇಲ್ಲ ಅದೇ!"

"ಸರಿ"

"ಅದು ಬಹಳ ಕಾಲದಿಂದ ನನ್ನ ಮನಸ್ಸಿನಲ್ಲಿ ಇತ್ತು. ಯಾವಾಗಿನಿಂದ ಅಂದರೆ ಹಿಂದೆ ನಡೆದ ಬಂಡಾಯ ಸ್ವಲ್ಪ ಹಸಿರಾಗಿದ್ದಾಗಿನಿಂದ.........."

"ಹಾಗಾದರೆ ಈ ಕವಿತೆ ಆ ಕ್ರಾಂತಿಯ ಕೊಡುಗೆಯೇನು?"

"ಇದರ ಬಗ್ಗೆ ಕಲ್ಪಿಸಿಕೊಂಡಾಗ ಇದರದ್ದೇ ಆಗಿತ್ತು, ಆದರೆ ಬರೆದ ಮೇಲೆ ಅದು ಇದರದ್ದಾಗಿರಲಿಲ್ಲ"

"ಅದು ಹೇಗೆ?"

"ಅದು ಹೇಗೆ ಅಂದರೆ ಆ ಬಂಡಾಯ ತಾನು ಹೇಳಿದ್ದಕ್ಕೆ ದೃಢವಾಗಿ ಬದ್ಧವಾಗಿರಲಿಲ್ಲ. ಯಾವ ಆಯುಧವನ್ನು ಅದರ ರಕ್ಷಣೆಯ ಸಲುವಾಗಿ ಹಿಡಿಯಲಾಗಿತ್ತೊ, ಅದನ್ನೇ ಇದರಿಂದ ರಕ್ಷಿಸಿಕೊಳ್ಳಲು ಹಿಡಿಯಬೇಕಾಯಿತು. ಡಾಂಕಾ!"

"ಹೌದಾ.........."

"ನಿಮ್ಮ ತಂದೆ ಒಬ್ಬ ಶ್ರೀಮಂತ ವ್ಯಾಪಾರಿಗಳಲ್ಲವೇ?"

"ಹೌದು"

"ಈ ಕ್ರಾಂತಿ ಅವರನ್ನು ಸಾಯಿಸಿದ ಕಾರಣ, ಈ ಭೂಮಿಯ ಮೇಲೆ ಕೋಟೆಗಳು ಮತ್ತು ದಿಣ್ಣೆಗಳು ಇರಬಾರದು ಅಂತಾ. ಆದರೆ ಆಮೇಲೆ ಒಂದು ವೇಳೆ ಹೊಸ ಕೋಟೆಗಳು ಮತ್ತು ದಿಣ್ಣೆಗಳನ್ನು ನಿರ್ಮಿಸಬೇಕು ಅಂದಿದ್ದರೆ......."

ಡಾಂಕಾಗೆ ಗೊತ್ತಿದ್ದ ಮಟ್ಟಿಗೆ ಅವಳ ತಂದೆ ಒಬ್ಬ ಕರುಣಾಳು ವ್ಯಕ್ತಿಯಾಗಿದ್ದರು. ಬಹುಶಃ ಅವರು ಇದ್ದಂಥ ಜಾಗದಲ್ಲಿ ಬೇರೆ ಯಾರೇ ವ್ಯಕ್ತಿಗಳು ಇದ್ದರೂ ಅವರ ಥರ ಇರುತ್ತಿರಲಿಲ್ಲವೇನೋ ಆದರೆ ಏನಾಗಿತ್ತೋ ಅದಕ್ಕಾಗಿ ಈ ಶಿಕ್ಷೆ ಏಕೆ ಎಂದು ಅವಳು ಯೋಚಿಸುತ್ತಿದ್ದಳು.

ಯಾವ ಕಡೆಯಿಂದಲೂ ಅವಳಿಗೆ ಉತ್ತರ ಸಿಕ್ಕಿರಲಿಲ್ಲ. ಹೀಗಾಗಿ ಬಹಳಷ್ಟು ಸಲ ಮೌನವಹಿಸುವುದು ಅವಳಿಗೆ ರೂಢಿಯಾಗಿಬಿಟ್ಟಿತು.

"ಏಕೆ ಡಾಂಕಾ"? ಕೊಮಾರಕನ ಮನಸ್ಸಿನಲ್ಲಿದ್ದದ್ದು ಆ ದಿನ ಅವಳ ಮನಸ್ಸಿನೊಳಕ್ಕೆ ಹೋಗುತ್ತಿರಲಿಲ್ಲ.

"ನಾನು ಯಾವತ್ತೂ ಚರ್ಚ್‌ಗೆ ಯಾಕೆ ಹೋಗೊದಿಲ್ಲ ಅಂತ ನಿನಗೆ ಗೊತ್ತಿದೆ; ಅಮ್ಮ ಬಹಳಷ್ಟು ಸಲ ಹೋಗಬೇಕು ಅಂತ ಹಠ ಹಿಡಿಯುತ್ತಾಳೆ. ಆದರೆ ನಾನು ತಳ್ಳಿ ಹಾಕುತ್ತೇನೆ" ಹೀಗೆಂದು ಏನೋ ಸ್ವಲ್ಪ ಹೇಳುವುದಕ್ಕೆ ಹೊರಟಿದ್ದಳು. ಹೇಳತೊಡಗಿದಳು– "ಅಲ್ಲಿರುವ ಜನಗಳ ದುಃಖಭರಿತ ಮುಖವನ್ನು ನೋಡೋಕೆ ನನ್ನ ಕೈಯಿಂದ ಆಗಲ್ಲ. ಬಹುಶಃ ಜನಗಳ ದುಃಖಕ್ಕೆ ರಕ್ಷಣೆ ನೀಡುವಂಥ ಜಾಗ ಒಂದು ಅಲ್ಲಿದೆ ಅಥವಾ ಜನಗಳೇ ಅಲ್ಲಿ ನೆಮ್ಮದಿಯ ಭ್ರಮೆ ಹೊಂದಲು ಹೋಗುತ್ತಾರೆ. ಅಲ್ಲಿಗೆ ಹೋಗುವುದರಿಂದ ಸುಧಾರಣೆ ಏನೂ ಆಗುವುದಿಲ್ಲ. ಆದರೆ ಹೋಗುವುದಂತೂ ಹೋಗ್ತಾರೆ ಕೊಮಾರಕ್"

"ನಿಜ"

"ವಾಸ್ತವವಾಗಿ ನಾವು ಸಾಯಿಸಬೇಕಾಗಿದ್ದದ್ದು ಅವರ ದುಃಖವನ್ನು" ಡಾಂಕಾಳ ಈ ಶಬ್ದಗಳು ಅವಳ ಬಾಯಲ್ಲಿ ಇನ್ನೂ ಇದ್ದ ಹಾಗೆ ಅವಳನ್ನು ತನ್ನ ತೋಳುಗಳಲ್ಲಿ

ಆಲಿಂಗಿಸಿಕೊಂಡು ಅವಳ ಶಬ್ದಗಳನ್ನು ಚುಂಬಿಸಿದ್ದನು. ಡಾಂಕಾಳ ಕಣ್ಣುಗಳು ತುಂಬಿ ಬಂದಿದ್ದವು. ಅವಳು ಅಂಜುತ್ತ ಕೊಮಾರಕನ ಮುಖದ ಕಡೆ ನೋಡಿದ್ದಳು. ಹೇಗೆಂದರೆ ಈ ತುಂಬಿದ ಪ್ರಪಂಚದಲ್ಲಿ ಬಹಳ ಕಷ್ಟದಿಂದ ಇಂಥ ಒಂದು ಮುಖಾಕೃತಿ ಸಿಕ್ಕಿದೆಯೇನೋ ಮತ್ತು ಈ ಮುಖಾಕೃತಿ ಎಲ್ಲ ಕಾಲಕ್ಕೂ ಕಾಣಿಸುತ್ತಿರುತ್ತದೆ ಎನ್ನುವ ನಂಬಿಕೆಯೇ ಇಲ್ಲವೇನೋ ಎನ್ನುವ ಹಾಗೆ;

(4)

ಈ ಹೊತ್ತು ಅವಳಿಗೆ ಕೊಮಾರಕನು ನೆನಪಾದ. ನೆನಪು ಮಾಡಿಕೊಳ್ಳಲು ಬಹಳ ಕಾಲದಿಂದ ಹೆದರುತ್ತಿದ್ದು ಇಂದು ಆ ಭಯ ಕೊನೆಗೊಂಡು ಬಿಟ್ಟಿತೇನೋ ಎನ್ನುವ ರೀತಿಯಲ್ಲಿ ಕೊಮಾರಕನು ಅವಳಿಗೆ ನೆನಪಾದನು. ಕೊಮಾರಕನು ಹೊರಟು ಹೋಗಿ ಐದು ವರ್ಷವಾಗಿತ್ತು. ಅವನನ್ನು ಮನಃಪೂರ್ತಿಯಾಗಿ ನೆನಪು ಮಾಡಿಕೊಳ್ಳುವ ಸಂದರ್ಭ ಗಳನ್ನು ಡಾಂಕಾ ಬಹಳ ಪ್ರಯತ್ನ ಪೂರ್ವಕವಾಗಿ ದೂರ ಮಾಡುತ್ತ ಬಂದಿದ್ದಳು. ಅವನು ಈ ರೀತಿಯಲ್ಲಿ ನೆನಪಾದರೆ ಅವನಿಲ್ಲದೆ, ಬದುಕಿನ ಒಂದು ದಿನವೂ ಸಾಗಲಾರದೆಂದು ಅವಳಿಗೆ ತಿಳಿದಿತ್ತು. ಆದರೆ ದಿನಗಳಂತೂ ಸಾಗುತ್ತಿದ್ದವು. ಇದು ಕೊಮಾರಕನ ಸೂಚನೆಯೂ ಆಗಿತ್ತು; ಜೀವನದ ಆಧಾರವೂ ಆಗಿತ್ತು.

ಕೊಮಾರಕನನ್ನು ಅವಳು ಸ್ವತಃ ತನ್ನ ಕೈಗಳಿಂದ ಬೀಳ್ಕೊಟ್ಟಾಗ ಡಾಂಕಾಳ ಕೈಗಳು ತೀರ ಅಸಹಾಯಕವಾಗಿದ್ದವು.....

"ಅವನು ಬದುಕಿನಲ್ಲಿ ನನಗೆ ಸಿಕ್ಕಿದ್ದು ಹಾಗೂ ಮೂರು ವರ್ಷ ನಾನು ಅವನೊಂದಿಗೆ ಕಳೆದದ್ದು ನನ್ನ ಬದುಕಿನ ಒಂದು ಅದೃಷ್ಟವೇ ಆಗಿತ್ತು" ಮರಳಿನ ದಡದಲ್ಲಿ ಕುಳಿತು ಕೆಲವೊಂದು ಖಾಲಿ ಕಪ್ಪೆಚಿಪ್ಪುಗಳನ್ನು ಗುಡ್ಡೆ ಹಾಕಿಕೊಳ್ಳುತ್ತಿದ್ದಾಳೇನೋ ಎನ್ನುವ ಹಾಗೆ ಡಾಂಕಾಳಿಗೆ ತನ್ನ ಜೀವಿತದ ಎಲ್ಲ ವರ್ಷಗಳೂ ನೆನಪಾದವು. ಕೊಮಾರಕನನ್ನು ಸಂಧಿಸಿದ್ದಂತೂ, ಇದ್ದಕ್ಕಿಂದಂತೆ ಒಂದು ಒಂದು ಕಪ್ಪೆ ಚಿಪ್ಪಿನಲ್ಲಿ ಮುತ್ತು ಮೂಡಿಬಂದಂತೆ....

ಅವರಿಬ್ಬರೂ ಭೇಟಿಯಾದ್ದು ಒಂದು ಸರಕಾರಿ ಕಛೇರಿಯಲ್ಲಿ – ಅದು ಒಂದು ಗಾಢ ಹಾಗೂ ದೀರ್ಘ ಮೌನದಲ್ಲಿ. ನೋಡೋದೇನೋ ಡಾಂಕಾ ಅವನನ್ನು ಪ್ರತಿದಿನವೂ ನೋಡುತ್ತಿದ್ದಳು. ಆದರೆ ಮುಖಗಳು ಗುರುತು ಹತ್ತುತಿರಲಿಲ್ಲ.

ಒಂದು ದಿನ ಡಾಂಕಾ ಕಛೇರಿಯಲ್ಲಿ ತೀರಾ ಉದಾಸಳಾಗಿದ್ದಳು. ಬರೆಯುತ್ತಾ ಇದ್ದದ್ದನ್ನು ಬರೆಯಲು ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. ಆಫೀಸಿನಲ್ಲೇ ಅವಳ ಕಣ್ಣು ಮತ್ತೆ ಮತ್ತೆ ತುಂಬಿ ಬರುತ್ತಿದ್ದವು. ಕೊಮಾರಕನು ಅವಳಿಗೆ ಕಾಯಿಲೆ ಆಗಿದ್ದಿರಬಹುದೆಂದು ಭಾವಿಸಿದ. ಅವಳ ಆರೋಗ್ಯ ಹೇಗಿದೆ ಅಂತ ಕೇಳಿದ್ದ. ಆದರೆ ಡಾಂಕಾ ತೀವ್ರವಾದ ತಲೆನೋವು ಅಂತ ಹೇಳಿ ಆಫೀಸಿನಿಂದ ರಜ ತೆಗೆದುಕೊಂಡು ಮನೆಗೆ ಬಂದು ಬಿಟ್ಟಿದ್ದಳು. ಕೊಮಾರಕನೇ ಅವಳನ್ನು ಮನೆಗೆ ತಲುಪಿಸಿದ್ದ. ಮನೆಗೆ ಬಂದ ಮೇಲೆ ಡಾಂಕಾ ತನಗೂ ಅವನಿಗೂ ಕಾಫಿ ಮಾಡಿದ್ದಳು. ಯಾರ ಬಗ್ಗೆಯಾದರೂ ವಿಶ್ವಾಸವಿಡುವುದು ಡಾಂಕಾಳ ಪದ್ಧತಿ ಅಲ್ಲ. ಆದರೆ ಆದಿನ ಕಾಫಿ ಕುಡಿಯುತ್ತ ಕೊಮಾರಕನ ಮುಂದೆ ಅವಳ ಬಾಯಿಂದಲೇ

"ದಿನವೂ ಇಷ್ಟೊಂದು ವಿಶ್ವಾಸಘಾತುಕತೆಯನ್ನು ಹೊರಲು ಸಾಧ್ಯವಿಲ್ಲ. ಧೈರ್ಯ ಉಳಿದಿಲ್ಲ..." ಎಂಬ ಮಾತು ಹೊರಟಿತು.

ಡಾಂಕಾಳ ಕಣ್ಣುಗಳು ಮತ್ತೆ ತುಂಬಿ ಬಂದುವು– "ಜನ ಉಸಿರು ಬಿಗಿಹಿಡಿದು ಬದುಕುತ್ತಿದ್ದಾರೆ. ನಾನು ಪ್ರತಿದಿನವೂ ಅವರ ಸಂತಸದ ಜಾಹೀರಾತನ್ನು ಬರೆಯುತ್ತೇನೆ. ಇದೆಲ್ಲಾ ಮಾಡ್ತಾ ಇರೋದು ಜೀವಂತವಾಗಿರಬೇಕು ಅಂತ ತಾನೆ......."

ಇದೇ ಪರಸ್ಪರ ವಿಶ್ವಾಸದ ತಾಯಿಬೇರಿನಲ್ಲಿ ಡಾಂಕಾ ಮತ್ತು ಕೊಮಾರಕರ ಸ್ನೇಹ ಅಂಕುರಿಸಿತ್ತು. ಮತ್ತೆ ಕೆಲವು ತಿಂಗಳುಗಳ ನಂತರ ಅವರಿಬ್ಬರೂ ಮದುವೆ ಮಾಡಿಕೊಂಡು ತಮ್ಮಿಬ್ಬರ ವಿಚಾರಗಳನ್ನು ಒಂದೇ ಮಾಡಿಕೊಂಡಿದ್ದರು. ಮತ್ತು ಕನಸುಗಳನ್ನು ಕೂಡಾ.

ತಾಯಿಯ ಮುಖದ ಮೇಲೊಂದು ವಿಶೇಷ ಕಳೆ ಮತ್ತೆ ಬಂದಿತ್ತು. ಒಂದು ದಿನ ಮಾತ್ರ ಅವಳು– "ಡಾಂಕಾ ನೀನು ನಿಮ್ಮಪ್ಪನಿಗೆ ಇಟಲಿಗೆ ಒಂದು ಕಾಗದ ಹಾಕಿದರೆ ಸಾಕು. ಅವರು ಕಾಗದ ಓದಿ ಖಂಡಿತ ಬಂದು ಬಿಡುತ್ತಾರೆ. ನೀನು ಅವರು ಬಂದ ಮೇಲೆ ಮದುವೆ ಮಾಡಿಕೊಂಡಿದ್ದರೆ ಚೆನ್ನಾಗಿತ್ತು..." ಎಂದಿದ್ದಳು. ಆದರೆ ಮತ್ತೆ ಯಾವತ್ತೂ ಅವಳು ಏನೂ ಹೇಳಲಿಲ್ಲ.

ಸ್ವತಃ ಕೊಮಾರಕನೇ ಒಂದು ಸಲ ತಾಯಿಯ ಮುಖದತ್ತ ದೃಷ್ಟಿ ಹಾಯಿಸಿ ಡಾಂಕಾಳೊಂದಿಗೆ ಏಕಾಂತದಲ್ಲಿ ಹೇಳಿದನು– "ಸಮಾಧಿಗಳ ಮೇಲೆ ಚೂರಿಯನ್ನು ಮಸೆಯುವುದರ ಕುರಿತಾದ ಈ ಕವನ ಇದೆಯಲ್ಲ, ಅವು ಯಾರ ಸಮಾಧಿಗಳು?

'ಹುತಾತ್ಮರ ಸಮಾಧಿಗಳು' ಡಾಂಕಾ ಹೇಳಿದಳು. "ಹೌದು ಹುತಾತ್ಮರದು; ಆದರೆ ಈ ಶಬ್ದದ ಅರ್ಥಗಳು ತುಂಬ ಹಿರಿದಾದವು"

"ಯಾವ ರೀತಿ?"

"ಇವು ತಮ್ಮ ಇಚ್ಛೆ ಇರಲಿ, ಬಿಡಲಿ, ಬಲವಂತವಾಗಿ ಹತ್ಯೆಗೀಡಾದ ಮುಗ್ಧ ಜನರ ಸಮಾಧಿಗಳು, ಉದಾಹರಣೆಗೆ ನಿಮ್ಮ ತಂದೆಯವರ ಸಮಾಧಿ– ಅಲ್ಲದೆ ಇವುಗಳಲ್ಲಿ ಸತ್ತವರದಷ್ಟೇ ಅಲ್ಲ. ನಿಮ್ಮ ತಾಯಿಯಂಥ ಬದುಕಿರುವವರ ಸಮಾಧಿಗಳೂ ಸೇರಿವೆ...."

ಆದಿನ ಕೊಮಾರಕನ ಎದೆಗೆ ಒರಗಿ ಡಾಂಕಾ ತುಂಬ ಅತ್ತಿದ್ದಳು.

ಡಾಂಕಾ ಮತ್ತು ಕೊಮಾರಕರ ಸಂಬಂಧ ಒಂದು ವಿಶ್ವಾಸದ ತಾಯಿಬೇರಿನಲ್ಲಿ ಅಂಕುರಿಸಿತ್ತು. ಅಲ್ಲದೆ ಇದರೊಂದಿಗೆ ಆ ಸಸಿಗೆ ನೀರೆರೆಯಲು ಅಪರಿಮಿತವಾದ ಕಣ್ಣೀರಿತ್ತು. ತನ್ನ ಮದುವೆಯ ಮೊದಲ ರಾತ್ರಿಯಲ್ಲೂ ತಾನೂ ಅತ್ತಿದ್ದಳೆಂದು ಡಾಂಕಾಳಿಗೆ ನೆನಪಾಯಿತು.....

ಅದು ಒಬ್ಬ ಪೂರ್ಣ ಸ್ತ್ರೀ ಒಬ್ಬ ಪೂರ್ಣ ಪುರುಷನನ್ನು ಸೇರುವ ರಾತ್ರಿ. ಆ ರಾತ್ರಿ ಡಾಂಕಾ ಕೊಮಾರಕನಿಗೆ ಹೇಳಿದ್ದಳು– "ಆಫೀಸ್‌ನಲ್ಲಿ ಸುಳ್ಳು ಲೇಖನಗಳನ್ನು ಬರೆದಾಗ ಮನೆಗೆ ಬಂದ ಮೇಲೆ ಪರಪುರುಷನೊಂದಿಗೆ ಮಲಗಿ ಬಂದಿರುವೆನೇನೋ ಎನಿಸುತ್ತದೆ. ದೇಹವೆಲ್ಲಾ ಕೊಳಕು ಎಂದೆನಿಸಿಬಿಡುತ್ತದೆ." ಡಾಂಕಾಳ ಕಣ್ಣುಗಳು ನೀರಿನ ಕೊಳಗಳಾಗುತ್ತಿದ್ದವು. "ಈ ಹೊತ್ತು ಮೊದಲ ಸಲಕ್ಕೆ ದೇಹ ಪವಿತ್ರವಾಗಿರುವುದೆಂದರೇನೆಂದು ತಿಳಿಯಿತು."

ಆ ರಾತ್ರಿ ಕೊಮಾರಕನ ಬಾಹುಗಳು ಡಾಂಕಾಳ ಸಾಮೀಪ್ಯದಿಂದ ಕದಲಲಿಲ್ಲ. "ನೀನು ಎಷ್ಟೊಂದು ಪವಿತ್ರಳೆಂದರೆ ನಿನ್ನನ್ನು ಎಲ್ಲಿ ಬಚ್ಚಿಡಲೆಂದು ಯೋಚಿಸುತ್ತೇನೆ" ಎಂದು ಮತ್ತೆ ಮತ್ತೆ ಹೇಳುತ್ತಿದ್ದನು.

ಒಂದು ವರ್ಷ ಉರುಳಿತು. ಎರಡು ವರ್ಷ ಕಳೆಯಿತು. ಮೂರನೆಯದೂ ಮುಗಿಯುವುದಕ್ಕೆ ಬಂದಿತು. ಡಾಂಕಾ ಒಬ್ಬ ಹೆಣ್ಣು. ಒಬ್ಬ ಪುರುಷನನ್ನು ಪಡೆದುಕೊಂಡು ತನ್ನೆಲ್ಲಾ ಪ್ರಪಂಚವನ್ನು ಅವನೊಡನೆ ಐಕ್ಯಗೊಳಿಸಿದಳು. ಆದರೆ ಕೊಮಾರಕನು ಒಬ್ಬ ಗಂಡು, ಅವನಿಗೆ ಪ್ರಪಂಚವೆಂದರೆ ಅದು ಬಹಳ ವಿಶಾಲವಾದ್ದು. ಅವನ ಸುತ್ತಮುತ್ತ ಬದಲಾಗಿದ್ದದ್ದು ಎನ್ನುವುದೆಲ್ಲಾ ಕೇವಲ ಶಬ್ದಗಳಲ್ಲಷ್ಟೇ ಬದಲಾಗಿತ್ತು. ಅರ್ಥ ಅದೇ ಪ್ರಭುತ್ವದ್ದಾಗಿತ್ತು. ಅಲ್ಲದೆ ಹೊಸ ಪ್ರಭುತ್ವದ್ದು ಇನ್ನೂ ಪ್ರಬಲವಾಗಿರುತ್ತದೆ. ಕೊಮಾರಕನು ಇಷ್ಟು ವರ್ಷಗಳಲ್ಲಿ ಏನೆಲ್ಲವನ್ನು ಕಾಣುತ್ತ ಬಂದಿದ್ದನೋ ಅದರ ವಿಷಯದಲ್ಲಿ ಅವನು ಯಾರೊಂದಿಗೂ ಏನೂ ಹೇಳುತ್ತಿರಲಿಲ್ಲ. ಆದರೆ ತನ್ನ ಕವಿತೆಗಳಿಗೆ ಹೇಳುತ್ತಿದ್ದನು. ಬಹುಶಃ ಮೌನ ಸಮಾಧಿಯ ಮೇಲೆ ಅವನು ಏನನ್ನೋ ಮಸೆಯುತ್ತಿದ್ದನು.

ಇದ್ದಕ್ಕಿದ್ದಂತೆ ಕೊಮಾರಕನ ಜೀವ ಅಪಾಯದಲ್ಲಿದೆ ಎಂದು ಸುದ್ದಿಬಂತು.

ಬಹುಶಃ ಒಂದು ರಾತ್ರಿಯೂ ಬದುಕುಳಿಯುವ ಭರವಸೆ ಇರಲಿಲ್ಲ. ಇದ್ದ ಏಕೈಕ ಮಾರ್ಗವೆಂದರೆ ಕೊಮಾರಕನು ರಾತ್ರಿಯೋ ರಾತ್ರಿ ದೇಶದಿಂದ ಹೊರಟುಬಿಡಬೇಕು. ಗಡಿದಾಟಿ ಬಿಡಬೇಕು.

ಡಾಂಕಾ ಇಡಿಯಾಗಿ ಅವನೊಂದಿಗೆ ಐಕ್ಯವಾಗಿ ಬಿಡಬೇಕೆಂದು ಬಯಸಿದ್ದಳು. ಕೊಮಾರಕ್ ಹೊರಡಲು ಅವನನ್ನು ತಯಾರುಮಾಡಿದ್ದಳು. ಆದರೆ ಅವನ ಎದೆಯಿಂದ ಏನು ಮಾಡಿದರೂ ಅಗಲಲಾಗುತ್ತಿರಲಿಲ್ಲ.

ತಾಯಿ ಹಿಂದೆಯೇ ಇದ್ದಳು. ತಾಯಿಯನ್ನು ಎಲ್ಲಿಯೂ ಒಬ್ಬಳನ್ನೇ ಬಿಟ್ಟಿರಲು ಸಾಧ್ಯವೇ ಇರಲಿಲ್ಲ. ಇಲ್ಲದೆ ಇದ್ದರೆ, ಒಮ್ಮೆ ಡಾಂಕಾ ಆಗಬಾರದ್ದನ್ನು ಯೋಚಿಸಿದ್ದಳು...

"ಒಂದು ವೇಳೆ ಆಗಬಾರದ್ದು ಆಗಿಬಿಟ್ಟರೆ" ಡಾಂಕಾಳ ಎದೆ ಕುದಿಯತೊಡಗಿತು. "ಅಮ್ಮನಂತೂ ಆಮೇಲೆ ಒಂದು ವರ್ಷವೂ ಜೀವಂತವಾಗಿರಲ್ಲ. ಅಲ್ಲೇ ಬದುಕಿರುತ್ತಾಳೆ. ಇಲ್ಲಿ ನಾನು ಉಳಿದುಬಿಟ್ಟೆ ಮತ್ತು ಈ ಗೋಡೆಗಳು ಉಳಿದವು..."

ಡಾಂಕಾಳಿಗೆ ತಾಯಿಯ ದುಃಖವೂ ಮತ್ತೆ ಹಸಿರಾಯಿತು. ಕೊಮಾರಕನು ಹೋಗುವ ಹೊತ್ತಿನಲ್ಲಿ ತಾಯಿಯ ಪ್ರೀತಿಯನ್ನು ಕೊಂಡುಹೋದನು. ಪರದೇಶದಲ್ಲಿ ಯಾವುದೋ ಕೆಲಸವಿದೆ. ಹಾಗಾಗಿ ಒಂದು ವರ್ಷದ ನಂತರ ಹಿಂತಿರುಗುವುದಾಗಿ ಹೇಳಿದನು. ಅವನು ಯಾವ ದೇಶಕ್ಕಾದರೂ ಹೋಗಬಹುದು. ಆದರೆ ಇಟಲಿಗೆ ಮಾತ್ರ ಹೋಗಕೊಡದೆಂದು ತಾಯಿಯು ತಾಕೀತು ಮಾಡಿದಳು...

ಇಂದು ಡಾಂಕಾಳ ಕಣ್ಣುಗಳಲ್ಲಿ ತಾಯಿಯ ಕಣ್ಣೀರು ತುಂಬಿಕೊಂಡಂತಾಯಿತು. "ಅಮ್ಮಾ ಬದುಕಿದ್ದಷ್ಟು ಕಾಲ ಹೇಳುತ್ತಿದ್ದಳು– "ಅವನದ್ದೇನಾದರೂ ಪತ್ರ ಬಂತೇನು? ಬರಲಿಲ್ಲವೇ? ಅವನು ಖಂಡಿತಾ ಇಟಲಿಗೆ ಹೋಗಿ ಬಿಟ್ಟಿರಬೇಕು..."

ಪತ್ರ......... ಡಾಂಕಾ ಈ ಶಬ್ದವನ್ನು ವಿಷದ ಗುಟುಕಿನಂತೆ ಕುಡಿದುಬಿಟ್ಟಳು– ಅವಳಿಗೆ ಒಂದು ಪತ್ರ ಮಾತ್ರ ಗೊತ್ತಿತ್ತು. ಅದನ್ನು ಅವಳು ಒಮ್ಮೆ ಮಾತ್ರ ಕಣ್ಣಿಂದ ನೋಡಿದ್ದಳು. ಪೋಲಿಸ್ ಕೇಸ್‌ನಲ್ಲಿ ಅವಳನ್ನು ಕರೆಸಿ, ಅವಳ ಹೆಸರಿಗೆ ಬಂದಿದ್ದ ಕೊಮಾರಕನ ಪತ್ರವನ್ನು ಅವಳಿಗೆ ತೋರಿಸಲಾಗಿತ್ತು. ಅವನು ಜೀವಂತವಾಗಿ ಫ್ರಾನ್ಸ್ ತಲುಪಿದ್ದಾನೆಂಬ ಸಮಾಚಾರವಷ್ಟೇ ಅದರಲ್ಲಿ ಇತ್ತು. ಕೊಮಾರಕನು ಮನೆಯಿಂದ ಹೊರಟು ಹೋದ ಆ ರಾತ್ರಿಯಿಂದಲೇ ಪೋಲಿಸರು ಡಾಂಕಾಳಿಗೆ ಗಂಟು ಬಿದ್ದಿದ್ದರು. ಅವನು ಹೋಗುವುದಕ್ಕೂ ಪೋಲೀಸರು ಬರುವುದಕ್ಕೂ ಕೆಲವು ಗಂಟೆಗಳಷ್ಟೇ ಕಳೆದಿತ್ತು. ಕೆಲವು ತಿಂಗಳುಗಳಂತೂ ಅವನು ಜೀವಂತ ಇದ್ದಾನೋ ಇಲ್ಲವೋ ಎಂಬ ಚಿಂತೆಯೇ ಕಾಡುತ್ತಿತ್ತು. ಅನಂತರ ಪೋಲಿಸರು ಅವನ ಪತ್ರವನ್ನು ತೋರಿಸಿ, ಒಂದು ವೇಳೆ ಮತ್ತೆಂದಾದರೂ ಅವನ ಪತ್ರ ಬಂದರೆ ಅಥವಾ ಅವಳ ಪತ್ರಕ್ಕೆ ಅವನು ಉತ್ತರಿಸಿದ್ದೇ ಆದರೆ ಅವಳ ಪ್ರಾಣಕ್ಕೆ ಅವಳೇ ಹೊಣೆಗಾರಳಾಗುವಳೆಂದು ಹಲವು ಸಲ ಆದೇಶಿಸಿದ್ದರು. ಆದರೆ ಅದರಿಂದ ಅವಳ ಒಂದು ಚಿಂತೆ ದೂರವಾಗಿತ್ತು. ಅದೇ ಕ್ಷಣ ಕೊಮಾರಕನು ಜೀವಂತವಿದ್ದಾನೆಂಬುದಷ್ಟೇ ಅವಳ ನೆಮ್ಮದಿಗೆ ಸಾಕಾಗಿತ್ತು.

ಡಾಂಕಾ ಎಂದೂ ಅವನಿಂದ ಪತ್ರವನ್ನು ನಿರೀಕ್ಷಿಸಿರಲಿಲ್ಲ. ಯಾವುದೇ ಪತ್ರ ಯಾವತ್ತೂ ಅವಳಿಗೆ ತಲುಪುವುದಿಲ್ಲವೆಂದೂ ಅವಳಿಗೆ ತಿಳಿದಿತ್ತು. ಆದರೆ ಅವಳು ವರ್ಷಗಳನ್ನು ಕಳೆಯುತ್ತ ಸಾಗಿದ್ದಳು. ಈ ವರ್ಷಗಳು ನೀರವವಾಗಿದ್ದವು. ವ್ಯರ್ಥವಾಗಿದ್ದವು. ಇವುಗಳ ಶಬ್ದಗಳು ಮುಂದುಗಡೆಯ ಕಿಟಕಿಯಿಂದ ಹೊರಗೆ ಹೋಗಿಬಿಟ್ಟಿದ್ದವು. ಮತ್ತು ಇವುಗಳ ಅರ್ಥ ಹಿಂದುಗಡೆಯ ಕಿಟಕಿಯಿಂದ ಹೊರಗೆ ಬಿದ್ದಿದ್ದವು ಎಂದು ಡಾಂಕಾಳಿಗೆ ಅನ್ನಿಸಿತ್ತು.... ಆದರೆ.... ಆದರೆ.... 'ಆದರೆ' ಶಬ್ದದ ಮುಂದೆ ಇದ್ದ ಖಾಲಿ ಜಾಗದಲ್ಲಿ ಸ್ವತಃ ತಾನೇ ನಿಂತು ಬಿಟ್ಟಂತೆ ಡಾಂಕಾ ಹೇಳಿದಳು– "ಕೊಮಾರಕ್ ನಾನು ನಿನ್ನ ನಿರೀಕ್ಷೆಯಲ್ಲಿರುತ್ತೇನೆ. ಎಲ್ಲಿಯವರೆಗೆ ನೀನು ಸಮಾಧಿಗಳ ಬಳಿಹೋಗಿ ಅವುಗಳ ಮೇಲೆ ನಿನ್ನ ಚೂರಿ ಮಸೆಯುವುದಿಲ್ಲವೋ ಅಲ್ಲಿಯವರೆಗೂ ನಿನ್ನನ್ನು ನಿರೀಕ್ಷಿಸುತ್ತಿರುತ್ತೇನೆ."

ಇಷ್ಟೊಂದು ಅಸಂಖ್ಯಾತ ಸಮಾಧಿಗಳಲ್ಲಿ ಒಂದು ಸಮಾಧಿ ಅವಳು ನಿರೀಕ್ಷಿಸುತ್ತಿರುವ ವರ್ಷಗಳದೂ ಆಗಿತ್ತೆಂದು ಡಾಂಕಾಳಿಗೆ ಅನ್ನಿಸಿತು.

ಡಾಂಕಾ ಎದ್ದು ಯಾವುದೋ ಒಂದು ಆಸೆಯಿಂದ ಕೊಠಡಿಯ ಎರಡೂ ಕಿಟಕಿಗಳನ್ನು ತೆರೆದು ಬಿಟ್ಟಳು. ಒಂದು, ಶಬ್ದಗಳು ಹಿಂತಿರುಗಲು ಇನ್ನೊಂದು –ಅರ್ಥಗಳು ಹಿಂತಿರುಗಿ ಬರಲು. ಯಾವಾಗ ಬರುತ್ತವೋ ಗೊತ್ತಿಲ್ಲ. ಆದರೆ ಯಾವಾಗ ಬೇಕಾದರೂ.......

ಆ ಮನುಷ್ಯ

ಇಪ್ಪತ್ತು ವರ್ಷಗಳವರೆಗೆ ಅವನಿಗೆ ಬೀಳುತ್ತಿದ್ದುದು ಒಂದೇ ಕನಸು.

ಇಡೀ ಆಫೀಸಿನ ಆವರಣದಲ್ಲಿ ಗಡಿಯಾರದ ಮುಳ್ಳಿನ ಹಾಗೆ ಅವನು ಸುತ್ತುತ್ತಿರುತ್ತಾನೆ ಎನ್ನುವ ಕಾರಣಕ್ಕೆ ಅವನು ಕೆಲಸ ಮಾಡುವ ಆಫೀಸಿನ ಮಾಲಿಕ ತುಂಬ ಖುಷಿಯಾಗಿದ್ದ. ಇಂಥ ಕೆಲಸ ಆಗಬೇಕು ಎಂದು ಅವನಿಗೆ ನೆನಪಿಸುವ ಅಗತ್ಯವೇ ಇರುತ್ತಿರಲಿಲ್ಲ. ಅಂದರೆ ಗಡಿಯಾರಕ್ಕೆ ಕೀಲಿ ಕೊಡುವ ಅವಶ್ಯಕತೆ ಇರಲಿಲ್ಲ. ಗಡಿಯಾರವಾದರೂ ಒಂದೊಂದು ಸಲ ನಿಂತು ಹೋಗುತ್ತೆ, ಕಾಲ ಮಾತ್ರ ನಿಲ್ಲಲ್ಲ......... ಅವನು ಬದುಕಿನ ಕಾಲದಂಥವನು ಎಂದು ಅವನ ಮಾಲಿಕ ಮನಸ್ಸಿನಲ್ಲಿ ಅಂದುಕೊಳ್ಳುತ್ತಿದ್ದನು.

ಆಫೀಸಿನ ಆವರಣದಿಂದ ಹೊರಟು ಸೀದಾ ಮನೆಯ ಆವರಣಕ್ಕೆ ಬಂದು ಬಿಡುತ್ತಿದ್ದನು. ಸಣ್ಣದರಿಂದ ಹಿಡಿದು ದೊಡ್ಡ ದೊಡ್ಡ ಅಗತ್ಯಗಳವರೆಗೂ ತನಗೆ ಬೇಕು ಅನ್ನಿಸಿದ್ದನ್ನೆಲ್ಲ ಅವನ ಹತ್ತಿರ ಕೇಳಬಹುದಾಗಿತ್ತು ಅನ್ನುವ ಕಾರಣಕ್ಕೆ ಅವನ ಹೆಂಡತಿಗೆ ತುಂಬ ಖುಷಿ. ಅವನು ಯಾವತ್ತೂ ಯಾವುದನ್ನೂ ಬೇಡಾ ಅನ್ನುತ್ತಿರಲಿಲ್ಲ. ಮನೆಯಲ್ಲಿ ಯಾವುದಾದರೂ ಬಿದ್ದರೆ ಒಡೆದರೆ ಇಲ್ಲ ಕಳೆದುಹೋದರೆ ಅವನು ಯಾವತ್ತೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ.

ಅಜ್ಞಾತ ರೋಗಗಳ ಹಾಗೆ ನಾಲ್ಕು ನಾಲ್ಕು ಗೋಡೆಗಳ ಎರಡು ಪ್ರಾಕಾರಗಳಿದ್ದವು. ಅವುಗಳ ಮೇಲೆ ಕಛೇರಿಯ ಮಾಲೀಕನು ಹಗಲಿನ ಹಾಗೆ ಹತ್ತುತ್ತಿದ್ದನು. ಇನ್ನು ಮನೆಯಲ್ಲಿದ್ದ ಹೆಂಡತಿ ರಾತ್ರಿಯ ಹಾಗೆ ಬಿದ್ದಿರುತ್ತಿದ್ದಳು. ಇದೆಲ್ಲ ಅನ್ಯರ ಕನಸು ಎಂಬ ವಿಷಯ ಮಾತ್ರ. ಅವನಿಗೆ ಗೊತ್ತಿತ್ತು.

ಪೂರಾ ಇಪ್ಪತ್ತು ವರ್ಷಗಳವರೆಗೂ ಈ ಪರಕೀಯ ಕನಸು ಅವನಿಗೆ ಬೀಳುತ್ತಿತ್ತು. ಅವನ ಹಣೆಯ ಮೇಲೆ ಗಂಟಿಕ್ಕದ ಹುಬ್ಬುಗಳು ಮಾತ್ರ ಅವನ ಅಂತರಂಗದ ಮೇಲೆ ಗಂಟಿಕ್ಕಿದ್ದವು. ಅವು ಅವನದೇ ಹೃದಯದ ಮೇಲೆ ಗಂಟಿಕ್ಕಿದ್ದವು.. ಇನ್ನು ಹೃದಯವಂತೂ ಬಿಗಿದು ಕಟ್ಟಿದ ಹುಬ್ಬಿನ ಮಾಂಸದಂತಾಗಿ ಬಿಟ್ಟಿತ್ತು.

ಅವನಿಗೆ ತಾನು ಇನ್ನೊಬ್ಬರ ನಿದ್ರೆಯನ್ನು ಮಾಡುತ್ತಿದ್ದೇನೇನೋ, ಇನ್ನೊಬ್ಬರ ನಿದ್ದೆಯಿಂದ ಎಚ್ಚರಗೊಳ್ಳುತ್ತಿದ್ದೇನೇನೋ ಎನಿಸುತ್ತಿತ್ತು.

ಆಮೇಲೆ ಮತ್ತೊಂದು ದುರ್ಘಟನೆ ನಡೆಯಿತು. ಅವನ ಹೆಂಡತಿಗೆ ಸಣ್ಣದೊಂದು ಆಪರೇಷನ್ ಆಗಬೇಕಾಗಿತ್ತು. ಬಹಳ ಒಳ್ಳೆಯ ಆಸ್ಪತ್ರೆಗೆ ಹೋಗಿದ್ದಳು. ಆದರೆ ಜೀವಂತವಾಗಿ ಹಿಂತಿರುಗಲಿಲ್ಲ.

ಅವನ ಜೀವನದ ಒಂದು ಪ್ರಾಕಾರವೇ ಭಗ್ನಗೊಂಡಿತು. ಅದೂ ದೇವರ ಕೈಗಳಿಂದ........ ಆದರೆ ಇನ್ನೊಂದು ಬಾಕಿ ಇತ್ತು. ಅದನ್ನು ಅವನು ಮರುದಿನ ದೇವರ ಮೇಲಿನ ಕೋಪದಿಂದ ತನ್ನ ಕೈಗಳಿಂದ ಭಗ್ನಗೊಳಿಸಿದನು.

ತನ್ನ ನೌಕರಿಗೆ ರಾಜೀನಾಮೆ ಕೊಟ್ಟನು.

ಈ ರೀತಿ ಒಂದೇ ಸಲಕ್ಕೆ ನಾಲ್ಕು ನಾಲ್ಕು ಗೋಡೆಗಳ ಎರಡೂ ಪ್ರಾಕಾರಗಳು ಭಗ್ನಗೊಂಡವು.

ಹೆಂಡತಿಯ ಸಾವಿನಿಂದ ಅವನು ದುಃಖಿತನಾಗಿದ್ದ.

ಇಂಥ ಮೃದು ಮನಸ್ಸಿನ ವ್ಯಕ್ತಿಗೆ ನೆರೆಮನೆಯಲ್ಲಿ ಆದ ಸಾವಿನಿಂದ ದುಃಖವುಂಟಾಗುತ್ತದೆ ಅಥವಾ ವರ್ತಮಾನ ಪತ್ರಿಕೆಯಲ್ಲಿ ಎಲ್ಲೋ ದೂರದಲ್ಲಿದ್ದ ವ್ಯಕ್ತಿಯ ಸಾವಿನ ಸುದ್ದಿ ಓದಿ ದುಃಖವುಂಟಾಗುತ್ತದೆ. ಒಂದು ಕ್ಷಣ ಕಾಲ ಆ ಮನುಷ್ಯನ ಮುಖ ಇಳಿದುಹೋಗುತ್ತದೆ. ಮನಸ್ಸು ಸಹ. ಆದರೆ ಆನಂತರ ಅವನು ತನ್ನ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಾನೆ.

ಅವನು ಕೂಡ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡನು. ಮನೆಯಲ್ಲಿ ಅವನಿಗೆ ಯಾವುದೇ ವಸ್ತು ವೇಸ್ಟು ಅನ್ನಿಸಿದರೆ, ಅದನ್ನು ಅರ್ಧ ಬೆಲೆಗೆ ಮಾರಿ ಖಾಲಿ ಮಾಡಿ ಬಿಡುವುದು ಅವನು ಎಲ್ಲಕ್ಕಿಂತ ಮೊದಲು ಮಾಡುತ್ತಾ ಇದ್ದ ಕೆಲಸ.

ರೇಡಿಯೋಗ್ರಾಂ ಅವನಿಗೆ ಎಲ್ಲಕ್ಕಿಂತ ನಿಷ್ಪ್ರಯೋಜಕ ವಸ್ತುವಾಗಿತ್ತು. ವಿಪರೀತ ಗಲಾಟೆ, ಸದ್ದು. ಹಾಗಾಗಿ ಅವನು ಎಲ್ಲಕ್ಕಿಂತ ಮೊದಲು ಆದರಿಂದ ಬಿಡುಗಡೆ ಪಡೆದುಕೊಳ್ಳಲು ಬಯಸಿದನು. 'ಕುಕಿಂಗ್ ರೇಂಜ್ ಕೂಡ ಇದೇ ರೀತಿ ಸುಮ್ಮನೆ ಜಾಗ ಆಕ್ರಮಿಸಿಕೊಂಡು ಕೂತಿತ್ತು. ಅವನಿಗಂತೂ ಏನನ್ನಾದರೂ ಬೇಯಿಸಲು ಕೇವಲ ಬೆಂಕಿಯ ಒಂದು ಉರಿ ಸಾಕಾಗಿತ್ತು. ಮತ್ತು ಬೆಂಕಿಯ ಉರಿಗೆ ಒಂದೆರಡು ಇಟ್ಟಿಗೆಯ ಚೂರು ಬೇಕಾದಷ್ಟಾಗುತ್ತಿತ್ತು. ಫ್ರಿಜ್ ಕೂಡಾ ಹೀಗೇ ಜಾಗ ಆಕ್ರಮಿಸಿಕೊಂಡು ಕುಳಿತಿತ್ತು. ಅವನಿಗೆ ಎರಡು ಹೊತ್ತಿನ ತಾಜಾ ರೊಟ್ಟಿಯಲ್ಲಿ ಏನನ್ನೂ ಉಳಿಸಿಡುವ ಅಗತ್ಯವೇ ಇರುತ್ತಿರಲಿಲ್ಲ. ಇನ್ನು ಬೆಲೆ ಬಾಳುವ ಸ್ಟೀಲ್ ಪಾತ್ರೆಗಳಂತೂ ಖಂಡಿತ ವ್ಯರ್ಥ, ಒಂದು ತಪ್ಪಲೆ ನೀರು ಕುದಿಸುವ ಪಾತ್ರೆ. ಒಂದು ತವ, ಒಂದೋ ಎರಡೋ ತಟ್ಟೆ ಬಟ್ಟಲು, ಅಥವಾ ಇನ್ನು ಒಂದೋ ಎರಡೂ ಪಾತ್ರೆ ಬೇಕಾದಷ್ಟಾಗುತ್ತಿತ್ತು. ವಾಷಿಂಗ್ ಮೆಷಿನ್ ತೀರಾ ನಿಷ್ಪ್ರಯೋಜಕ ವಸ್ತುವಾಗಿತ್ತು. ತನ್ನ ಕುರ್ತಾ ಪೈಜಾಮ ಇವನ್ನೆಲ್ಲ ಕೈಯಿಂದಲೇ ಒಗೆದು ಕೊಳ್ಳುತ್ತಿದ್ದ. ಬಹಳ ಬೆಲೆ ಬಾಳುವ ಕುರ್ಚಿ ಮೇಜುಗಳಂತೂ ಖಂಡಿತ ಬೇಕಿರಲಿಲ್ಲ. ಕಟ್ಟಿಗೆಯ ಒಂದೆರಡು ತುಂಡುಗಳೇ ಅವನಿಗೆ ಬೇಕಾದಷ್ಟಾಗಿತ್ತು.

ಎಲೆಕ್ಟ್ರಿಕ್ ಬಿಲ್, ವಾಟರ್‌ಬಿಲ್, ಟೆಲಿಫೋನ್ ಬಿಲ್, ಹೌಸ್‌ಟ್ಯಾಕ್ಸ್, ಇನ್‌ಕಮ್‌ಟ್ಯಾಕ್ಸ್ ಇವನ್ನೆಲ್ಲ ಕಟ್ಟಿ ಬಿಟ್ಟಿದ್ದನು. ಇವೇ ಕೊನೆಯ ಬಿಲ್‌ಗಳು, ಇನ್ನು ಮೇಲೆ ಇವುಗಳನ್ನು ಕಟ್ಟಲು ಯಾವುದೇ ಕ್ಯೂ ನಲ್ಲಿ ನಿಂತು ಕೊಳ್ಳುವುದಿಲ್ಲ ಎಂದು ಅವನು ನಿರ್ಧರಿಸಿಬಿಟ್ಟಿದ್ದನು. ಕುಳಿತುಕೊಳ್ಳಲು, ನಿಂತುಕೊಳ್ಳಲು, ಮಲಗಲು ಮತ್ತು ಏಳಲು ಮಾತ್ರ ಅವನಿಗೆ ಖಾಲಿ ಜಾಗ ಬೇಕಾಗಿತ್ತು.

ಸಾಮಾನುಗಳು ಜಾಗ ಖಾಲಿ ಮಾಡಿದವು. ಆದರೆ ಇಷ್ಟು ಅವನಿಗೆ ಸಾಕಾಗಲಿಲ್ಲ. ಇದರ ನಾಲ್ಕೂ ಕಡೆ ಪಕ್ಕಾ ಇಟ್ಟಿಗೆಯ ಗೋಡೆಗಳಿದ್ದವು. ಇವು ಅವನ ಅಸ್ತಿತ್ವವನ್ನು ಚುಚ್ಚುತ್ತಿದ್ದವು.

ಪ್ರಾರಂಭದಲ್ಲಿ ಯಾವಾಗ ಅವನು ತನ್ನ ಹೆಂಡತಿಯೊಂದಿಗೆ ತನ್ನ ಕನಸುಗಳನ್ನು ಕುರಿತು ಮಾತಾಡುತ್ತಿದ್ದನೋ, ಆಗ ಅವನ ಹೆಂಡತಿಗೆ ತನ್ನ ನಾಲ್ಕೂ ಕಡೆ ಧೂಳು ಏಳುತ್ತಿರುವ ಹಾಗೆ ಅನ್ನಿಸುತ್ತಿದ್ದುದು ನೆನಪಾಯಿತು. ಆದರೆ ತನ್ನ ಕನಸು ನಗರದ ಹಾಗೂ ನಾಗರಿಕತೆಯ ಪಕ್ಕಾ ರಸ್ತೆಗಳಲ್ಲಿ ಚಲಾವಣೆಯಾಗುವಂಥದಲ್ಲ ಎಂದು ಅವನಿಗೆ ಗೊತ್ತಿತ್ತು. ಅವನು ತನಗೆ ನಿರ್ಜನವಾದ ಕಚ್ಚಾರಸ್ತೆಗಳು ಬೇಕು ಅನ್ನುತ್ತಿದ್ದ. ಆದರೆ ಅವನ ಹೆಂಡತಿಗೆ ಕಚ್ಚಾ ಮತ್ತು ನಿರ್ಜನವಾದ ರಸ್ತೆಗಳು ಎಂದೂ ಅರ್ಥವೇ ಆಗುತ್ತಿರಲಿಲ್ಲ.

ಹೆಂಡತಿಯ ಮರಣಾನಂತರ, ಮತ್ತು ಕೆಲಸಕ್ಕೆ ರಾಜೀನಾಮೆ ನೀಡಿದ ನಂತರ, ಮನಃಪೂರ್ತಿಯಾಗಿ ನಿದ್ದೆ ಮಾಡಿದ ಮೇಲೆ ಅವನಿಗೆ ತನ್ನ ಸ್ವಂತ ನಿದ್ರೆಯನ್ನು ಮಾಡಿದಂತೆ ಹಾಗೂ ತನ್ನ ಎಚ್ಚರವನ್ನು ತಾನು ಎದ್ದಂತೆ ಅನಿಸಿತ್ತು.

ಹಾಗಾಗಿ ಬೇಗನೆ ಮುಂದಿನ ದಿನಗಳಲ್ಲಿ ಅವನು ಪಕ್ಕಾ ರಸ್ತೆಗಳ ಲೆಕ್ಕ ಚುಕ್ತಮಾಡಿ ಹಳ್ಳಿಗಾಡಿನ ಕಚ್ಚಾರಸ್ತೆಯನ್ನು ಹಿಡಿದನು. ಸ್ವಲ್ಪ ಜಮೀನು ಕೊಂಡುಕೊಂಡನು. ಆ ಜಮೀನಿನಲ್ಲಿ ಮಣ್ಣು ಮತ್ತು ಹುಲ್ಲಿನಿಂದ ಒಂದು ಗುಡಿಸಿಲನ್ನು ಕಟ್ಟಿದನು. ಅದು ಯಾವ ರೀತಿ ಇತ್ತೆಂದರೆ ಯಾರಾದರೂ ತನ್ನ ಕುತ್ತಿಗೆಗೆ ಶರಟನ್ನು ತೂರಿಸಿಕೊಳ್ಳುವಂತೆ ಇಲ್ಲವೆ ಚಳಿ ಮತ್ತು ಹಿಮದಿಂದ ಬಚಾವಾಗಲು ಯಾವುದಾದರೂ ಚಾದರವನ್ನೋ ಉಣ್ಣೆಯ ಶಾಲನ್ನೋ ಸುತ್ತಿಕೊಳ್ಳುವಂತೆ. ಈ ಗುಡಿಸಲು ಅವನ ಶರೀರವನ್ನು ಚುಚ್ಚುತ್ತಿರಲಿಲ್ಲ. ಅವನಿಗೆ ಅಲ್ಲಿ ಇರಲು ಹೊರಗೆ ದೂರದವರೆಗೂ ಜಮೀನು ಹರಡಿತ್ತು. ಆಕಾಶವೂ ತೆರೆದೇ ಇತ್ತು......

ಮತ್ತು ದೂರ ದೂರದವರೆಗೆ ಎಲ್ಲಿಯವರೆಗೂ ದೃಷ್ಟಿ ಹಾಯುತ್ತಿತ್ತೋ, ಹೊಲಗದ್ದೆಗಳಿಂದಾಗಚೆಗೆ ನದಿಯಿಂದಾಚೆಗೆ, ಚಿಕ್ಕ ದೊಡ್ಡ ಬೆಟ್ಟಗಳಿಂದ ಇನ್ನೂ ಮುಂದಕ್ಕೆ ಅವನಿಗೆ ತನ್ನ ಅಸ್ತಿತ್ವ ಕಾಣುತ್ತಿತ್ತು.

ಅವನ ಕೈ ಕಾಲುಗಳು ವಿಶಾಂತ್ರಿ ಬಯಸಿದ್ದವು, ಆದರೆ ಅವನ ಮನಸ್ಸಿಗೆ ವಿಶ್ರಾಂತಿ ಬೇಡವಾಗಿತ್ತು. ಅಲ್ಲಿ ಈಗ ಅವನು ತನ್ನ ಚಿಕ್ಕ ಚಿಕ್ಕ ಸಸಿ ಮಡಿಗಳನ್ನು ಅಗೆದು ಮಣ್ಣು ತಿರುವಿ ಹಾಕಿ ಬೀಜ ಬಿತ್ತಿದಾಗ ಅವನೆದುರಿಗೊಂದು ರಹಸ್ಯದಂಥದು ತೆರೆಯುತ್ತಾ ಹೋಯಿತು.

"ಕೈ ಕಾಲು ದಣಿಯದಿದ್ದಾಗ ಮನದಣಿಯುತ್ತದೆ.

ನಾನು ಇಪ್ಪತ್ತು ವರ್ಷಗಳು ದಣಿದಿದ್ದೆ

ಈಗ ನನ್ನ ಕೈ ಕಾಲು ದಣಿಯುತಿವೆಯಾಗಿ
ನನ್ನ ಇಪ್ಪತ್ತು ವರ್ಷಗಳ ದಣಿವು ಇಳಿಯತೊಡಗಿದೆ"

ಮರದ ಎಲೆಗಳ ಶ್–ಶ್ ದನಿ, ಹುಲ್ಲಿನ ಸರ–ಸರ ದನಿ, ಸಮೀಪದ ನದಿಯ ಕಲ ಕಲ ನಿನಾದ, ಅವನ ಒಂದು ಕುರಿಯ ಮ್ಯಾ–ಮ್ಯಾ ಶಬ್ದ, ಅವನ ಮೂರು ಕೋಳಿಗಳ ಕುಕ್ಕೂಕ್ಕೂ, ಚಳಿಗಾಲದ ಮೊದಲ ದಿನಗಳಲ್ಲಿ ದೂರ ಬೆಟ್ಟದ ಇಳಿಜಾರುಗಳಲ್ಲಿ ಕೆಳಗಿಳಿದು ಬರುತ್ತಿರುವ ಕ್ರಾಂತಿಯ ಹಾಡುಗಳ ದನಿಗಳು, ಬೇಸಿಗೆಯ ಆರಂಭದ ದಿನಗಳಲ್ಲಿ ಅದೇ ಇಳಿಜಾರುಗಳಲ್ಲಿ ಮೇಲಕ್ಕೆ ಏರಿಹೋಗುತ್ತಿರುವವರ ಹಾಡುಗಳ ದನಿಗಳು ಈಗಲೂ ದೂರದಲ್ಲಿ ಮತ್ತು ಹತ್ತಿರದಲ್ಲಿ ಅವನ ಸುತ್ತಲೂ ಕೇಳಿಬರುತ್ತಿದ್ದವು. ಆದರೆ ಈ ದನಿಗಳು ಅವನಿಗೆ ತನ್ನ ಹೃದಯದ ಧಡ್–ಧಡ್‌ನಂತೆ ಅನಿಸುತ್ತಿತ್ತು. ಇಲ್ಲವೆ ತನ್ನ ತೋಳುಗಳಲ್ಲಿ ಮಿಡಿಯುತ್ತಿರುವ ನಾಡಿಯ ಹಾಗೆ ತೋರುತ್ತಿತ್ತು. ಇವುಗಳ ಬದಲಿಗೆ ಅವನಿಗೆ ಯಾವಾಗಲಾದರೂ ತನ್ನ ಕಛೇರಿಯ ಬಾಸ್ ಅನ್ನು ಅಥವಾ ಮನೆಯಾಕೆಯನ್ನು ಸಂಧಿಸಿದ, ರೊಟ್ಟಿಯನ್ನು ಚಹಾವನ್ನು ಅಥವಾ ಮದ್ಯವನ್ನು ಸೇವಿಸಿದ ನೆನಪು ಬಂದು ಬಿಟ್ಟಿತೆಂದರೆ, ಅವನು ಗಾಬರಿಗೊಂಡು ತನ್ನೆರಡೂ ಕಿವಿಗಳ ಮೇಲೆ ಕೈ ಇಟ್ಟುಕೊಳ್ಳುತ್ತಿದ್ದನು. ಈಗ ಅವನು ತನ್ನ ಕಣ್ಣಿದುರಿನಲ್ಲಿ ನಿತ್ಯನೂತನವಾದ ಕನಸುಗಳನ್ನು ಕಾಣುತ್ತಿದ್ದನು. ಈ ಕನಸಿನಲ್ಲಿ ಎಲ್ಲಿಂದಲೋ ಹಾರಿಬಂದು ಕುಳಿತ ಪಕ್ಷಿಗಳಿದ್ದವು. ಮರದ ಕೊಂಬೆಗಳ ಮೇಲೆ ಮೂಡುತ್ತಿದ್ದ ಎಲೆಗಳಿದ್ದವು. ಮುಸುಕಿನ ಜೋಳದ ತೆನೆಗಳಿಂದ ಸಿಡಿದ ಕಾಳುಗಳಿದ್ದವು. ನೆನಪಿನ ಗಿಡಗಂಟೆಗಳಿಂದ ಕುಡಿಯೊಡೆಯುತ್ತಿದ್ದ ಎಲೆಗಳಿದ್ದವು.

ಏಳು ವರ್ಷಗಳು ಕಳೆದು ಹೋದವು, ಶಾಂತಾವಾಗಿ ನಿರ್ವಿಘ್ನವಾಗಿ. ಒಂದು ದಿನ ಹಗಲು ಕಳೆದಿತ್ತು. ಬೆಲ್ಲ ಮತ್ತು ಜೇನುತುಪ್ಪವನ್ನು ನೆಂಚಿಕೊಂಡು ರೊಟ್ಟಿ ತಿಂದು ಒಲೆಯ ಬೆಂಕಿಯ ಹತ್ತಿರ ಕುಳಿತು ದೀಪದ ಬೆಳಕಿನಲ್ಲಿ ಎಂದಿನಂತೆ ಒಂದು ಪುಸ್ತಕವನ್ನು ಓದುತ್ತಿದ್ದನು. ಗುಡಿಸಿಲಿನ ಹೊರಗೆ ಬಾಗಿಲಿನ ಹತ್ತಿರ ಒರಗಿಸಿದ್ದ ಕಟ್ಟಿಗೆಯ ಹಲಗೆಯ ಮೇಲೆ ಖಡಕ್ ಅಂತ ಏನೋ ಶಬ್ದವಾಯಿತು. ಅವನು ಪುಸ್ತಕದಿಂದ ತಲೆಯತ್ತಿ ಕಟ್ಟಿಗೆಯ ಹಲಗೆಯನ್ನು ನೋಡ ತೊಡಗಿದನು....... ಅದು ತನ್ನ ಗುಡಿಸಿಲಿನ ಬಾಗಿಲು, ಅಲ್ಲವೇನೋ, ಇನ್ನು ಯಾರದೋ ಮನೆಯ ಬಾಗಿಲೇನೋ ಎನ್ನುವ ಹಾಗೆ. ಇವನ ಹತ್ತಿರಕ್ಕೆ ಯಾರು ತಾನೆ ಬಂದಾರು?

ಮತ್ತೆ ಎದ್ದು ನಿಂತನು. ಜೊತೆಗೇ ಹಲಗೆಯ ಸಂದುಗಳಿಂದ ಕೆಲವು ದನಿಗಳು ಹೊಮ್ಮಿದವು. ಆದರೆ ಅವನಿಗೆ ಅದರ ಗುರುತು ಹತ್ತಲಿಲ್ಲ. ಅವನು ಎದ್ದು ಬಾಗಿಲ ಹತ್ತಿರ ಇಟ್ಟಿದ್ದ ಹಲಗೆಯನ್ನು ಕೈಯಿಂದ ಎತ್ತಿ ದೂರಕ್ಕಿಟ್ಟನು. ಎದುರಿನಲ್ಲಿ ಹರಯದ ಹುಡುಗನೊಬ್ಬನು ನಿಂತಿದ್ದನು. ಸ್ವಲ್ಪ ಸಂಕೋಚಪಡುತ್ತ "ತಾವು ಕೆ.ಪಿ.ಮದಾನ್ ಕುವರ್ ಸಾಹೇಬರೇ" ಎಂದು ಕೇಳಿದನು.

ಹಲವಾರು ವರ್ಷಗಳ ನಂತರ ತನ್ನ ಹೆಸರನ್ನು ಕೇಳಿದನು. ಅದನ್ನು ಈ ಕಚ್ಚಾ ರಸ್ತೆಯಲ್ಲಿ ಬರುತ್ತಿದ್ದಾಗ ದೂರದಲ್ಲಿ ದಾರಿಯ ಮಧ್ಯದಲ್ಲೇ ಬಿಟ್ಟು ಬಂದಿದ್ದನು. ಆದರೆ ಕೇಳಿದವನಿಗೆ ಉತ್ತರ ಹೇಳಲೇ ಬೇಕಾಗಿತ್ತಲ್ಲ. ಹಾಗಾಗಿ ಹೇಳಿದ. "ಹೌದು"

"ನಾನು ಒಳಗೆ ಬರಲೆ?"

ಅವನು ಬಾಗಿಲಿನಿಂದ ಪಕ್ಕಕ್ಕೆ ಸರಿದು ಒಳಕ್ಕೆ ಬರುವವನಿಗೆ ಜಾಗ ಮಾಡಿಕೊಟ್ಟನು. ಬಂದವನ ಕೈಯಲ್ಲಿ ಒಂದು ಹಳೆಯ ದೊಡ್ಡ ಸೂಟ್‌ಕೇಸು ಇತ್ತು. ಬಂದವನು ಸೂಟ್‌ಕೇಸನ್ನು ಒಳಗಿಟ್ಟು, ತನ್ನ ಭಾರವನ್ನು ಇಳಿಸಿಕೊಳ್ಳುತ್ತ ಒಲೆಯ ಕಡೆ ನೋಡಿ, ಅನಂತರ ಅವನ ಮುಖದ ಕಡೆ ನೋಡುತ್ತಾ – "ನಾನು ಇಂದ್ರ, ನಿಮ್ಮ ತಮ್ಮ" ಎಂದು ಹೇಳಿದನು.

"ಇಂದ್ರ............." ಅವನಿಗೆ ತಾನು ಹಿಂದೆ ಕೇಳಿದ್ದ. ಅರ್ಧ ನೆನಪಿದ್ದ ಮತ್ತು ಅರ್ಧ ಮರೆತುಹೋಗಿದ್ದ ಕಥೆಯ ಪಾತ್ರದ ಹಾಗೆ ಆ ಹೆಸರು ನೆನಪಾಯಿತು. ಅವನ ಗುರುತು ಸ್ವಲ್ಪ ಹತ್ತಿದಂತಾಯಿತು. ಅವರ ಅಪ್ಪ ಬದುಕಿದ್ದಾಗ, ತನ್ನ ಮಲತಾಯಿಯ ಮಗನಾದ ಇವನನ್ನು ನೋಡಿದ್ದನು. ಆಗಿನ್ನೂ ಅವನಿಗೆ ಸ್ಕೂಲಿಗೆ ಹೋಗುವಷ್ಟು ವಯಸ್ಸು ಆಗಿತ್ತೋ ಇಲ್ಲವೋ ಅನ್ನುವಷ್ಟಿದ್ದ.

ಆ ಹಲಗೆಯನ್ನು ಮೊದಲಿದ್ದ ಜಾಗದಲ್ಲೇ ಇಡುತ್ತ ಉದ್ದವಾಗಿ ವಕ್ರವಾಗಿ ಇದ್ದ ಸೌದೆಯ ಕಡ್ಡಿಗಳನ್ನು ಒಲೆಯ ಹತ್ತಿರ ಇಡುತ್ತ ಇಂದ್ರನಿಗೆ ಕುಳಿತು ಕೊಳ್ಳಲು ಹೇಳಿದನು. ಮತ್ತೇನನ್ನೋ ಕೇಳಲು ಅವನ ಕಡೆ ನೋಡಿದ. ಅಪ್ಪನ ಬಗ್ಗೆ ಕೇಳಬೇಕೆಂದರೆ ಅಪ್ಪ ಬದುಕಿರಲಿಲ್ಲ. ಇನ್ನು ಮಲತಾಯಿ ಬಹಳ ಕಾಲದಿಂದ ಅವನ ಸಂಬಂಧವನ್ನು ಕಡದುಕೊಂಡಿದ್ದಳು. ಹೀಗಾಗಿ ಕೇಳುವಂಥದ್ದೇನೂ ಇರಲಿಲ್ಲ.

ಇಂದ್ರ ತಾನೇ ಹೇಳತೊಡಗಿದ. "ನಾನು ನಗರದಲ್ಲಿ ನಿಮ್ಮ ಹಳೇ ಆಫೀಸಿನಿಂದ ನಿಮ್ಮ ವಿಳಾಸವನ್ನು ಸ್ವಲ್ಪ ಮಟ್ಟಿಗೆ ಪತ್ತೆ ಮಾಡಿದೆ. ಆಮೇಲೆ ವಾಹನದಿಂದ ಇಳಿದು ದಾರಿಯಲ್ಲಿ ಸಿಕ್ಕುವಂಥ ಹಳ್ಳಿಗಳಲ್ಲಿ ಕೇಳುತ್ತಾ ಇದ್ದೆ............"

"ಯಾಕಾಗಿ" ಎಂದು ಕೇಳಬೇಕೆಂದು ಅವನ ಮನಸ್ಸಿಗೆ ಬಂತು. ಆದರೆ ಯಾರಾದರೂ ಮನೆಗೆ ಬಂದವರ ಹತ್ತಿರ ಹಾಗೆ ಕೇಳುವುದು ಅವನಿಗೆ ಸರಿ ಕಾಣಲಿಲ್ಲ. ಅದರ ಬದಲು "ಏನಾದರೂ ತಿನ್ನುತ್ತೀಯೇನು ರೊಟ್ಟಿ–ಪಟ್ಟಿ ಚಹಾ" ಎಂದು ಕೇಳಿದನು."

ಇಂದ್ರನು ತಕ್ಷಣ "ನನಗಂತೂ ತುಂಬಾ ಹಸಿವಾಗಿದೆ" ಎಂದನು.

ಅವನು ಒಂದು ಮಣ್ಣಿನ ಗಡಿಗೆಯಲ್ಲಿಟ್ಟಿದ್ದ ಹಿಟ್ಟಿಗೆ ಕೈ ಹಾಕಿ ಹಿಡಿಯಲ್ಲಿ ಹಿಟ್ಟು ತೆಗೆದು ಒಂದು ತಟ್ಟೆಗೆ ಹಾಕಿ ಕಲಸಿ ಚೆನ್ನಾಗಿ ನಾದಿದನು. ಅನಂತರ ತವದ ಮೇಲೆ ತಟ್ಟಿ ಒಲೆಯ ಮೇಲೆ ಬೇಯುವುದಕ್ಕೆ ಇಟ್ಟನು. ಒಲೆಗೆ ಒಂದಷ್ಟು ಹೊಸ ಕಟ್ಟಿಗೆಗಳನ್ನು ಹಾಕಿ ಕೆಲವು ರೊಟ್ಟಿಗಳನ್ನು ಬೇಯಿಸಿದನು. ಆಮೇಲೆ ತಟ್ಟೆಯಲ್ಲಿ ಬೆಲ್ಲ ಮತ್ತು ಜೇನು ಹಾಕಿ ರೊಟ್ಟಿಯನ್ನು ಕೊಟ್ಟನು. ತನಗಾಗಿ ಬೆಳಿಗ್ಗೆ ಎರಡು ಮೊಟ್ಟೆಗಳನ್ನು ಬೇಯಿಸಿ ಇಟ್ಟಿದ್ದು, ತಿನ್ನಲು ಮರೆತದ್ದು ನೆನಪಾಯಿತು. ಅವು ಈಗಲೂ ಅಲ್ಲೇ ಗೂಡಿನಲ್ಲಿದ್ದವು. ಮೊಟ್ಟೆಯನ್ನು ಸುಲಿದುಕೊಟ್ಟು ಒಲೆ ಮೇಲೆ ಚಹಾಗೆ ನೀರಿಟ್ಟನು.

ಇಂದ್ರನಿಗೆ ಬಹುಶಃ ಬಹಳ ಹಸಿವಾಗಿದ್ದಿರಬೇಕು. ಬರಿಯ ಒಣರೊಟ್ಟಿಯನ್ನೇ ಗಪಗಪ ತಿನ್ನುತ್ತಿದ್ದನು. ಇಂದ್ರನು ಈ ರೀತಿ ರೊಟ್ಟಿ ತಿನ್ನುವುದು ನೋಡಿ ಅವನಿಗೆ ಹಿತವಾಯಿತು. ಅದರೊಟ್ಟಿಗೆ ಅವನ ಗಮನ ಇಂದ್ರನ ಸೂಟಕೇಸ್ ಕಡೆ ಹೋಯಿತು.

ಆಗ ಇವನು ರಾತ್ರಿಗೂ ಇಲ್ಲೇ ಇರುತ್ತಾನೆ ಅನ್ನಿಸಿತು. ತನ್ನ ಹಾಸಿಗೆಯಿಂದ ಸ್ವಲ್ಪ ಆ ಕಡೆ ಅವನಿಗೊಂದು ಹಾಸಿಗೆ ಹಾಸುತ್ತಾ ಇದ್ದಾಗ, ಅವನಿಗೆ ಇಡೀ ಗುಡಿಸಲು ಒಂದು ಸ್ವಲ್ಪ ವಿಲಕ್ಷಣವೆಂಬಂತೆ ಕಾಣತೊಡಗಿತು.

ಬಿಸಿಬಿಸಿ ಚಹಾವನ್ನು ಗುಟುಕರಿಸುತ್ತ ಇಂದ್ರನು ತೂಕಡಿಸತೊಡಗಿದನು. ಸದ್ದಿಲ್ಲದೆ ಚಹಾದ ಖಾಲಿ ಕಪ್ಪನ್ನು ಒಂದು ಪಕ್ಕಕ್ಕಿಟ್ಟು ತನ್ನ ಹಾಸಿಗೆಯ ಮೇಲೆ ಮಲಗಿ ಬಿಟ್ಟನು. ಅವನು ಸ್ವಲ್ಪ ಹೊತ್ತು ಅವನ ಮುಖದತ್ತ ನೋಡುತ್ತಿದ್ದನು. ಆಮೇಲೆ ಒಲೆಯೊಳಗಿಂದ ಕಟ್ಟಿಗೆಗಳನ್ನು ಈಚೆಗೆ ತೆಗೆದು ಹಾಕಿ ತಾನೂ ನಿದ್ರಿಸುವ ಯತ್ನ ಮಾಡತೊಡಗಿದನು.

'ಬೆಳಿಗ್ಗೆ ನುಚ್ಚನ್ನು ಒಲೆಯ ಮೇಲೆಟ್ಟು ಕುರಿಯ ಹಾಲು ಕರೆಯುತ್ತಾ ಇದ್ದಾಗ ಆಯಿತು, ಇನ್ನೂ ಚಹಾ ಕುಡಿಸಿ ಇವನನ್ನು ಸಾಗಿಹಾಕಿ ಬಿಡುತ್ತೀನಿ' ಎಂದು ಅಂದುಕೊಂಡನು. ಅಥವಾ ಬಹುಶಃ ಅವನೇ.....

ಹಾಲಿನ ಸಣ್ಣ ತಂಬಿಗೆಯನ್ನು ಎತ್ತಿಕೊಳ್ಳುತ್ತಿದ್ದಾಗ, ಇಂದ್ರನು ನಗರದಲ್ಲಿ ಕಛೇರಿಯಲ್ಲಿ ನಿಮ್ಮ ವಿಳಾಸ ಕೇಳಿದೆ ಅಂತ ಹೇಳಿದ. ಆಮೇಲೆ ಗಾಡಿಯಿಂದ ಇಳಿದು ರಸ್ತೆಯಲ್ಲಿ ಓಡಾಡುತ್ತಿದ್ದ ಹಳ್ಳಿಯವರನ್ನು ಕೇಳುತ್ತಾ ಇದ್ದ, ಹೀಗೆ ಕೇಳಿಕೊಂಡು ಕೇಳಿಕೊಂಡು ಬಂದಿದ್ದಾನೆ. ಯಾತಕ್ಕಾಗಿ ಬಂದಿದ್ದಾನೋ ಏನೋ ಗೊತ್ತಿಲ್ಲ. ಎಷ್ಟು ದಿನ ಇರಲು ಬಂದಿದ್ದಾನೋ ಏನೋ ಎಂಬ ವಿಚಾರ ಮನಸ್ಸಿಗೆ ಬಂತು.

ಹಾಲಿನ ತಂಬಿಗೆಯನ್ನು ತರುತ್ತಾ ಇದ್ದಾಗ, ಇಂದ್ರನು ನಿದ್ರೆ ಮಾಡಿ ಎದ್ದಿರುವುದನ್ನು ಗುಡಿಸಿಲಿನಿಂದ ಹೊರಗಡೆಗೆ ಬಂದಿರುವುದನ್ನು ಹಾಗೂ ದೂರದಲ್ಲಿ ಬೆಟ್ಟದ ಮರೆಯಲ್ಲಿ ಉದಯಿಸುತ್ತಿರುವ ಸೂರ್ಯನನ್ನು ನೋಡಿ ತುಂಬ ಸಂತಸತಾಳಿ ಮೂಕ ವಿಸ್ಮಿತನಾಗಿ ನಿಂತಿರುವುದನ್ನು ನೋಡಿದಾಗ........... ಅವನ ಕೋಪ ಸ್ವಲ್ಪ ಕಡಿಮೆಯಾಯಿತು.

"ಎಲ್ಲೋ ನೀರಿನ ಶಬ್ದ ಕೇಳಿಸುತ್ತಾ ಇದೆ. ಹತ್ತಿರದಲ್ಲೇ ಯಾವುದಾದರೂ ನದಿ ಹರಿಯುತ್ತಾ ಇದೆಯೇನು?" ಎಂದು ಇಂದ್ರನು ಕೇಳಿದನು. ಇಲ್ಲೇ ಈ ಮರಗಳ ಹಿಂದೆ ಅಂತ ಕೈ ಸನ್ನೆ ಮಾಡಿದಾಗ ಅವನು ಜಿಂಕೆಯ ಹಾಗೆ ಹಾರಿಕೊಂಡು ಎಗರಿಕೊಂಡು ಮರಗಳ ಕಡೆಗೆ ಓಡಿದನು.

ಅವನು ಅಕ್ಕಿನುಚ್ಚನ್ನು ಬೇಯಿಸಿ ಬೆಲ್ಲ ಮತ್ತು ಹಾಲನ್ನು ಹಾಕಿ ಆ ಪಾತ್ರೆಯನ್ನು ಒಲೆಯ ಪಕ್ಕಕ್ಕೆ ಇಟ್ಟನು. ಒಲೆಯ ಮೇಲೆ ಟೀಗೆ ನೀರಿಟ್ಟು ಚಿಲುಮೆಯಿಂದ ಗಡಿಗೆಗೆ ನೀರು ತುಂಬಲು ಹೊರಟು ಹೋದನು.

ಅವನು ನೀರು ತುಂಬಿದ ಕೊಡ ಎತ್ತಿಕೊಂಡು ಬರುತ್ತ ಇದ್ದನು. ಅಷ್ಟು ಹೊತ್ತಿಗೆ ನದಿಯಲ್ಲಿ ಸ್ನಾನಮಾಡಿಕೊಂಡು ಬರುತ್ತಿದ್ದ ಇಂದ್ರನು ದೂರದಿಂದಲೇ ಅವನನ್ನು ನೋಡಿದನು ಕೂಡಲೇ ಓಡಿಬಂದು ನಡುದಾರಿಯಲ್ಲೇ ನೀರಿನ ಕೊಡವನ್ನು ತನ್ನ ಕೈಗೆ ತೆಗೆದುಕೊಂಡನು.

ರಾತ್ರಿ ಬಹುಶಃ ಈ ಹುಡುಗನಿಗೆ ದೂರದ ಪ್ರಯಾಣ ಮಾಡಿ ಬಂದು ಆಯಾಸ ವಾಗಿತ್ತೇನೋ, ಬಹುಶಃ ಅಣ್ಣ ಅಂತ ಹೆಸರಿಗೆ ಇದ್ದವನನ್ನು ಅವರಿವರಿಂದ ಕೇಳಿ ತಿಳಿದುಕೊಂಡು ಬಂದು ಭೇಟಿಯಾದ ಗಾಬರಿಯೂ ಇದ್ದಿರಬಹುದು. ಅಥವಾ ಬಹುಶಃ

ರಾತ್ರಿಯ ಕತ್ತಲಿನಲ್ಲಿ ಹೀಗೇ ಕಂಡಿರಬಹುದು ರಾತ್ರಿ ಸ್ವಲ್ಪ ಬೇರೆಯೇ ತರಹದ, ನಗರದ ಕೆಟ್ಟು ಹೋದ ಹುಡುಗನ ಹಾಗೆ ಕಾಣುತ್ತಾ ಇದ್ದ ಎಂದು ಅನ್ನಿಸಿತ್ತು. ಅವನ ಎದುರಿನಲ್ಲಿ ಅಕ್ಕಿ ನುಚ್ಚಿನ ಅನ್ನದ ಬಟ್ಟಲು ಮತ್ತು ಚಹಾದ ಬಟ್ಟಲು ಇಡುತ್ತ, 'ಸ್ನಾನ ಮಾಡಿ ಬಂದಿದ್ದಾನೆ ಅಂದ ಮೇಲೆ ತುಂಬ ಸೊಗಸಾಗಿ ತುಂಬ ಲಕ್ಷಣವಾಗಿ ಕಾಣಿಸುತ್ತ ಇದ್ದಾನೆ. ಬಹುಶಃ ಮನಸ್ಸಿನಿಂದಲೂ ಕೆಟ್ಟವನಿರಲಾರ' ಅನ್ನಿಸಿತು.

ಒಲೆ ಹತ್ತಿರ ಕೂತುಕೊಂಡು ನಿಧಾನವಾಗಿ ಚಹಾ ಕುಡಿಯುತ್ತ ಇದ್ದಾಗ ಕಳೆದುಹೋದ ಇಪ್ಪತ್ತು ವರ್ಷಕ್ಕೂ ಹೆಚ್ಚಿನ ಕಾಲಾವಧಿಯ ತುಣುಕುಗಳು ಸ್ಮೃತಿ ಪಟಲದ ಮೇಲೆ ಚಲಿಸತೊಡಗಿದವು.... ಅಪ್ಪ ಸದಾ ತಮ್ಮ ಬಿಸಿನೆಸ್‌ನಲ್ಲಿ ಮುಳುಗಿರುತ್ತಿದ್ದನು. ಯಾವಾಗಲೂ ಅತ್ಯುತ್ಸಾಹದ ಇಲ್ಲವೆ ಅತಿ ನಿರುತ್ಸಾಹದ ಭಾವದ ಮಾತುಗಳನ್ನಾಡುತ್ತಿದ್ದನು. ಯಾವಾಗಲೂ ಏನೋ ಅರ್ಜೆಂಟ್‌ನಲ್ಲಿ ಎಲ್ಲಿಗೋ ಹೋಗಿರುತ್ತಿದ್ದನು. ಇನ್ನೂ ತಾಯಿ ಯಾವಾಗಲೂ ಕನ್ನಡಿಯ ಮುಂದೆ ನಿಂತುಕೊಂಡು ತಲೆ ಬಾಚಿಕೊಳ್ಳುತ್ತಿದ್ದಳು, ಇಲ್ಲವೆ ಬಜಾರ್‌ನಲ್ಲಿ ಹೊಸ ಬಟ್ಟೆ ಖರೀದಿಸಲು ಹೋಗಿರುತ್ತಿದ್ದಳು...... ಅವನನ್ನು ಎಳವೆಯಲ್ಲೇ ಹಾಸ್ಟೆಲ್‌ನಲ್ಲಿ ಬಿಟ್ಟಿದ್ದರು. ಮತ್ತೆ ಎಷ್ಟೋ ಸಮಯದ ನಂತರ ಗೊತ್ತಾದದ್ದು ಮನೆಯಲ್ಲಿ ತಾಯಿಯ ಹೆಸರಿನಲ್ಲಿ ಇದ್ದ ಹೆಂಗಸು ಅವನ ತಾಯಿ ಆಗಿರಲಿಲ್ಲ. ಅವನ ತಾಯಿ ಅವನು ಹುಟ್ಟಿದ ಕೂಡಲೇ ಸತ್ತುಹೋಗಿದ್ದಳು ಎಂದು.

ಸ್ಕೂಲು ಕಾಲೇಜಿನ ರಜಾ ದಿನಗಳಲ್ಲಿ ನೋಡಿದ್ದ ಮನೆಯ ಕೆಲವು ಪ್ರತಿಬಿಂಬಗಳಂಥವು ಅವನ ಕಣ್ಣುಗಳಲ್ಲಿ ಸುಳಿದಾಡಿದವು. ಆದರೆ ಅವನು ಕಣ್ಣು ಮಿಣುಕಿಸುತ್ತ ಇಂದ್ರನ ಕಡೆ ನೋಡಿದರೆ ಅವನ ಆಕೃತಿಯಲ್ಲಿ ಯಾವುದೇ ನೆನಪನ್ನು ಕಂಡುಕೊಳ್ಳಲಾಗಲಿಲ್ಲ.

ನೀನು ಇಲ್ಲಿಗೆ ಯಾತಕ್ಕೆ ಬಂದಿದ್ದೀಯಾ?– ಇಂಥದೇ ಏನೋ ಒಂದು ಮಾತು ಕೇಳುವುದಿತ್ತು. ಆದರೆ ಇಂದ್ರ ಈ ಸಮಯದಲ್ಲಿ ಸ್ನಾನ ಮಾಡಿ, ತಿಂಡಿ ತಿಂದು, ಒಂದು ಸಂತೃಪ್ತಗೊಂಡ ಬೆಕ್ಕಿನ ಹಾಗೆ ಒಲೆ ಹತ್ತಿರ ಸೋಂಬೇರಿಯ ಹಾಗೆ ಕುಳಿತಿದ್ದನು. ಅವನಿಗೆ ಅವನನ್ನು ಏನನ್ನೂ ಕೇಳಲಾಗಲಿಲ್ಲ.

ಆದರೆ ಒಲೆಯ ತೆಳ್ಳನೆಯ ಉರಿಯ ಮೇಲೆ ಬೇಳೆಯಿದ್ದ ಪಾತ್ರೆಯನ್ನಿಡುತ್ತ ಅವನು ಕೇಳಿದ– "ಕಡಲೆಬೇಳೆ ದಾಲ್ ಅನ್ನು ತಿನ್ನುತ್ತೀಯಲ್ಲ?" ಜೊತೆಯಲ್ಲೇ ಹೇಳಿದ– "ನಿನಗೆ ಇಷ್ಟ ಇದ್ದರೆ ಎದುರುಗಡೆ ಇರುವ ಬೆಟ್ಟದ ಮೇಲೆ ತಿರುಗಾಡಿಕೊಂಡು ಬಾ. ನಾನು ಸ್ವಲ್ಪ ಬಟಾಣಿಯ ಸಸಿ ಮಡಿ ನೋಡಿ ಬರುತ್ತೀನಿ. ಸ್ವಲ್ಪ ಏನಾದರೂ ಕಾಳು ಬಿಟ್ಟಿದ್ದರೆ ಒಂದು ನಾಲ್ಕೈದು ಕಿತ್ತುಕೊಂಡು ಬರ್ತೀನಿ.....?"

ಅವನು ಅಲ್ಲಿಂದ ಎದ್ದು ಹೊರಗಡೆ ಸಸಿ ಮಡಿಯ ಕಡೆ ಹೋಗುತ್ತಿದ್ದಾಗ ಇಂದ್ರನು ಅವನ ಹಿಂದೆ ಅವನ ಜೊತೆಯಲ್ಲೇ ಬರುತ್ತಿರುವುದನ್ನು ನೋಡಿದನು. ಸ್ವಲ್ಪ ಹೊತ್ತು ಇಬ್ಬರೂ ಸದ್ದಿಲ್ಲದೆ ಸುಮ್ಮನೆ ಹೋಗುತ್ತಾ ಇದ್ದರು. ಒಂದು ಸಲ ಅವನು ಹಿಂದುಗಡೆ ಇದ್ದ ಸೀಬೆ ಮರಗಳ ಹತ್ತಿರ ನಿಂತ ಹಾಗೆ ಕಾಣಿಸಿತು, ಅನಂತರ ಇಂದ್ರನು ದೊಡ್ಡ ದೊಡ್ಡ ಹೆಜ್ಜೆ ಹಾಕುತ್ತ ಕಾಯಿಗಳನ್ನು ಸವರುತ್ತ, ಬಟಾಣಿ ಕಾಯಿಗಳನ್ನು ಕೀಳುತ್ತಿದ್ದಲ್ಲಿಗೆ ಅವನ ಹತ್ತಿರಕ್ಕೆ ಬಂದನು.

"ನಿಮ್ಮ ಹೊಲ ಎಷ್ಟಿದ್ದಾವೆ?"

ಅವನನ್ನು ದೂರದಿಂದ ನೋಡುತ್ತಿದ್ದಾಗ ಇಂದ್ರನ ದನಿ ಕೇಳಿಬಂತು. ಅವನು ಚಾಚಿದ್ದ ಬೆಟ್ಟಗಳ ಕಡೆಗೆ ನೋಡುತ್ತ ಹೇಳಿದ. "ಕಣ್ಣೋಟ ಎಲ್ಲಿಯವರೆಗೆ ಹೋಗುತ್ತೋ ಅದಷ್ಟೂ ನನ್ನದೇ, ಇಲ್ಲಿಯ ಝರಿ, ನದಿಯೂ........... ಇಡೀ ಕಾಡೆಲ್ಲವೂ............"

ಇಂದ್ರ ಕಾಡಹೂಗಳ ಹಾಗೆ ನಗತೊಡಗಿದನು. ಸುತ್ತಮುತ್ತ ಎಲ್ಲೂ ಬೀಜ ಬಿತ್ತಿದ್ದ ಅಥವಾ ಉಳುಮೆ ಮಾಡಿದ್ದ ಹೊಲಗಳು ಕಂಡುಬರಲಿಲ್ಲ. ಹೇಳತೊಡಗಿದ, "ಈ ಕಾಡೆಲ್ಲವೂ ಅರಣ್ಯ ಇಲಾಖೆಗೆ ಸೇರಿದ್ದಾಗಿರಬೇಕು"

ಬಟಾಣಿಗಳನ್ನು ಪೊಟ್ಟಣ ಕಟ್ಟಿದ ಹಾಗೆ ಕಟ್ಟುತ್ತ ಸಸಿ ಮಡಿಯ ಹತ್ತಿರದಿಂದ ಇದ್ದವನು ತಲೆಯೆತ್ತಿ ಕಾಡಿನ ಕಡೆ ನೋಡುತ್ತಾ ಹೇಳಿದನು. "ಅವರದ್ದೇನಿದೆ ಯೂನಿಫಾರ್ಮ್ ತೊಟ್ಟುಕೊಂಡು, ವರ್ಷಕ್ಕೊಂದು ಸಲ ಬರುತ್ತಾರೆ. ಮರಗಳ ಮೇಲೆ ನಂಬರ್ ಬರೆದು ಹೊರಟುಹೋಗುತ್ತಾರೆ. ಮರಗಳಿಂದ ಹಿಡಿದು ಕಾಡು ಪ್ರಾಣಿಗಳವರೆಗೆ ಇದೆಲ್ಲವೂ ನನ್ನದೇ ಆಗಿರುತ್ತೆ. ಇಲ್ಲ ಕಾಡುಪ್ರಾಣಿಗಳದಾಗಿರುತ್ತೆ...."

ಇಂದ್ರ ಕೂಡ ಕಾಡ ಹೂಗಳ ಹಾಗೆ ನಗತೊಡಗಿದನು.

ಇತ್ತ ದಾಳಿಂಬೆ ಮತ್ತು ಸೀಬೆ ಮರಗಳ ಕೆಳಗಡೆ ತಾನು ಕುಳಿತುಕೊಳ್ಳಲು ಮಣ್ಣಿನ ಒಂದು ಜಗಲಿ ತರಹದ್ದನ್ನು ಮಾಡಿಸಿಕೊಂಡಿದ್ದನು. ಅವರಿಬ್ಬರೂ ಆ ಜಗಲಿ ಹತ್ತಿರ ಬಂದು ನಿಂತರು. ಒಂದು ಕಡೆ ಸ್ವಲ್ಪ ಇಳಿಜಾರಿನ ಮೇಲೆ ಒಂದು ಸಣ್ಣ ಸಸಿ ಮಡಿ ಇತ್ತು. ಇಂದ್ರ ಅದರ ಕಡೆ ನೋಡಿ ಕೇಳಿದ. "ನಿಮ್ಮದೇನು"?

ಅವನು ಮಣ್ಣಿನ ಜಗಲಿಯ ಮೇಲೆ ಕುಳಿತುಕೊಳ್ಳುತ್ತ ಹೌದು ಎಂದು ತಲೆಯಾಡಿಸಿದ.

"ಇಷ್ಟೇ ಇದೊಂದೇನಾ? ನಾವು ಇನ್ನಷ್ಟು ಬಿತ್ತಬಹುದು"

ಅವನು ಒಂದು ಸಲ ಗಮನವಿಟ್ಟು ಇಂದ್ರನ ಮುಖದ ಕಡೆ ನೋಡಿ ಹೇಳತೊಡಗಿದನು. "ಯಾತಕ್ಕಾಗಿ? ಆಮೇಲೆ ಅದನ್ನು ನಿರರ್ಥಕವಾದ ಮಂಡಿಗೆ ತಗೊಂಡು ಹೋಗಿ ಮಾರಬೇಕಾಗುತ್ತೆ..... ಮುಸುಕಿನ ಜೋಳವನ್ನು ನಾನು ನನಗಷ್ಟೇ ಬಿತ್ತಿದ್ದೇನೆ. ಚಹಾದ ನಾಲ್ಕಾರು ಗಿಡಗಳನ್ನು ನನಗಾಗಿಯೇ....... ಸೊಪ್ಪು, ಸೆದೆ ತರಕಾರೀನೂ ನನಗಾಗಿ"

ಅವನಿಗೆ ಇಂದ್ರನು ಈಗ ತಾನೆ ಹೇಳಿದ ಮಾತು ತನ್ನ ಕಿವಿಗಳಲ್ಲಿ ಸಿಕ್ಕಿಹಾಕಿಕೊಂಡತೆ ಅನಿಸಿತು ಅದಕ್ಕಾಗಿ ಹೇಳಿದನು – "ನಾವು ಇನ್ನಷ್ಟು ಬಿತ್ತನೆ ಮಾಡಬಹುದು.

ಅವನು ತನ್ನ ಕಿವಿಗಳನ್ನು ಉಜ್ಜಿಕೊಂಡನು. 'ನಾವು ಎಂಬ ಶಬ್ದವನ್ನು ಕಿವಿಯ ಕುಗ್ಗಿಯನ್ನು ಹೊರ ತೆಗೆಯುವ ಹಾಗೆ ಹೊರಕ್ಕೆ ತೆಗೆಯುತ್ತಿದ್ದಾನೋ ಎಂಬಂತೆ"

ಇಂದ್ರನು ಅವನ ಪಕ್ಕದಲ್ಲಿ ಜಗಲಿಯ ಮೇಲೆ ಕುಳಿತುಕೊಳ್ಳುತ್ತ ಅತ್ಯಂತ ವಿನಯದಿಂದ – "ನನ್ನನ್ನು ನಿನ್ನ ಹತ್ತಿರ ಇಟ್ಟುಕೋ" ಎಂದನು.

ಅವನು ಜಗಲಿಯ ಮೇಲಿಂದ ಏಳತೊಡಗಿದನು. ಮತ್ತೆ ಸಂಭಾಳಿಸಿಕೊಳ್ಳುತ್ತ ಕುಳಿತುಬಿಟ್ಟನು.

ಇಂದ್ರನು ತಲೆಯನ್ನು ಸ್ವಲ್ಪ ತಗ್ಗಿಸಿ ಹೇಳತೊಡಗಿದನು. "ಅಮ್ಮ ತುಂಬಾ ದಿನದಿಂದ ಕಾಯಿಲೆಯಿದ್ದಳು....... ಅವಳು ಎಲ್ಲ ಹಣವನ್ನು ಮಾವನ ಹತ್ತಿರ ಇಟ್ಟು ಬಿಟ್ಟಿದ್ದಳು..........."

ತನ್ನ ನಂತರ ತನ್ನ ಮಲಮಗನಿಗೆ ಏನೂ ದಕ್ಕಬಾರದೆಂದು ಅಪ್ಪನ ಎಲ್ಲ ಹಣವನ್ನು ಅಮ್ಮ ತನ್ನ ಅಣ್ಣ ತಮ್ಮಂದಿರ ಹತ್ತಿರ ಇಡುತ್ತಾ ಇದ್ದಳು ಎನ್ನುವ ವದಂತಿಯನ್ನು ತಾನು ಕೇಳಿದ್ದೆನೆಂಬುದು ಅವನಿಗೆ ನೆನಪಾಯಿತು...........

ಅವನಿಗೆ ನಗುವ ಹಾಗೆ ಆಯಿತು. ಇಂದ್ರನನ್ನು ಕೇಳಿದ "ಆಮೇಲೆ?"

"ಮಾವ ಏನೂ ಕೊಡಲಿಲ್ಲ. ಅಮ್ಮ ಕಳೆದ ತಿಂಗಳು ತೀರಿಕೊಂಡಳು....." ಇಂದ್ರನ ಮುಖ ಇಳಿದು ಹೋಗಿತ್ತು. ತಲೆತಗ್ಗಿತ್ತು. ದನಿಕುಗ್ಗಿತ್ತು. ಹೇಳಿದ "ನನಗೆ ಇರುವುದಕ್ಕೆ ಬೇರೆ ಇನ್ಯಾವ ಜಾಗವೂ ಇಲ್ಲ........."

ಅವನು ಗಾಬರಿಗೊಂಡು ಜಗಲಿಯ ಮೇಲೆ ನಿಂತುಕೊಂಡನು. "ಇಲ್ಲ, ಇಲ್ಲ, ಖಂಡಿತ ಇಲ್ಲ" ಎಂದು ಜೋರಾಗಿ ಚೀರಿ ಹೇಳ ಬಯಸಿದನು. ಅವನ ದನಿ ಬೆಟ್ಟದ ತಿರುವುಗಳಲ್ಲಿ ಅಡಗಿ ಹೋದಂತೆ ಅವನ ಗಂಟಲಲ್ಲೇ ಅಡಗಿ ಹೋಯಿತು. ಅವನು ಮುಂಗಾಣದವನಂತೆ ತನ್ನ ತೋಳಿನ ಪಕ್ಕದಲ್ಲಿ ಬಂದು ನಿಂತ ಇಂದ್ರನ ಕಡೆ ನೋಡುತ್ತಿದ್ದನು. ಇಂದ್ರನು ಹೇಳುತ್ತಿದ್ದನು. "ಕುವರ್‌ಭೈಯಾ! ನನ್ನವರು ಅಂತ ಬೇರೆ ಯಾರೂ ಇಲ್ಲ....."

ಅವನು ತನ್ನ ಕೈಯಿಂದ ಇಂದ್ರನ ತೋಳನ್ನು ಅತ್ತ ಸರಿಸ ಬಯಸಿದನು. ಆದರೆ ಚಕಿತನಾಗಿ ನೋಡುತ್ತಾನೆ-ಅವನ ಕೈ ಇಂದ್ರನ ಹೆಗಲ ಹತ್ತಿರ ಹೋಗಿ ಹೆಗಲಮೇಲೆ ಊರಿದೆ. ತನ್ನ ಕೈಯಿಂದ ಆಸರೆಯನ್ನಷ್ಟೇ ಅಲ್ಲ ಆಧಾರವನ್ನೂ ಅವನು ನೀಡುತ್ತಿರುವಂತೆ ಕಂಡಿತು.

ಅವನ ಎದುರುಗಡೆ ಬಹುಶಃ ಮಾವಂದಿರ ಮೋಸದಿಂದ ಹೆದರಿ ಇಡೀ ನಾಗರಿಕತೆಯನ್ನು ಬಿಟ್ಟು ದೂರ ಓಡಿ ಬಂದ. ಮುಗ್ಧವೆನ್ನುವಂಥ, ಮತ್ತು ಕೋಮಲವೆನ್ನುವಂಥ ಮುಖವಿತ್ತು. ಅವನು ತನ್ನ ಕೈಯಿಂದ ಅವನ ಭುಜಗಳ ಮೇಲೆ ಕೈಯಾಡಿಸುತ್ತಾ "ಒಳ್ಳೆಯದು, ನೀನು ಈ ಮುಸುಕಿನ ಜೋಳದ ಮಡಿಯ ಪಕ್ಕ ನಿನ್ನ ಕುಟೀರ ಮಾಡಿಕೋ" ಎಂದನು.

ಹುಡುಗ ಮುಸುಕಿನ ಜೋಳದ ಕಾಳಿನ ಹಾಗೆ ಅರಳಿದಂತೆ ಕಂಡ. ಅವನೇ ಅವನ ಜೊತೆ ಸೇರಿಕೊಂಡು ಗಾರೆ-ಗಚ್ಚು ಮಾಡಿಸಿದ. ಕೆಳಗಿನ ಹಳ್ಳಿಯಿಂದ ಛಾವಣಿಗೆ ಕಲ್ಲಿನ ಚಪ್ಪಡಿಯನ್ನು ಹೊರಿಸಿಕೊಂಡು ಬಂದನು. ಅವನು ಹೇಳಿದ್ದರಿಂದ ಅವನ ಮನಸ್‌ತೃಪ್ತಿಗಾಗಿ ಹಳ್ಳಿಯ ಬಡಗಿಯಿಂದ ಬಾಗಿಲುವಾಡ ಮತ್ತು ಬಾಗಿಲನ್ನು ಮಾಡಿಸಿದನು.

ಹಾಗೆ ನೋಡಿದರೆ ಅವನು– ಈ ನಗರದ ಬೀಜಗಳು ನಗರದಲ್ಲಷ್ಟೇ ಮೊಳೆಯುತ್ತವೆ. ಓದಿ ಬರೆದು ಮಾಡಿದವನು, ಗಂಡು ಹುಡುಗ. ತಾನಾಗಿ ತಾನೇ ಎರಡು ಮೂರು ದಿನದಲ್ಲಿ ಬೇಸರ ಬಂದು ನಗರಕ್ಕೆ ಹೊರಟುಹೋಗುತ್ತಾನೆ ಎಂದು ಮನಸ್ಸಿನಲ್ಲಿ ಯೋಚಿಸುತ್ತಿದ್ದನು. ಅವನು ಖರೀದಿಸಿದ ಜಮೀನಿನ ಹದ್ದುಬಸ್ತು ಬರೀ ಕಾಗದದಲ್ಲಷ್ಟೇ ಇತ್ತು. ಅವನು ಅದರ ಬಾಂದುಕಲ್ಲು ಇತ್ಯಾದಿ ಏನೂ ಹಾಕಿಸಿರಲಿಲ್ಲ. ಜಮೀನು ಸಾಕಷ್ಟಿತ್ತು. ಆದರೆ ಅವನು ಯಾವತ್ತೂ ಉತ್ತು-ಬಿತ್ತು. ಮಾಡಿರಲಿಲ್ಲ. ಇಂದ್ರನು ಅವನನ್ನು ಕೇಳಿ ಹೆಚ್ಚು ಕಡಿಮೆ ಎಲ್ಲ ಜಮೀನನ್ನೂ ಮಡಿಗಳಾಗಿ ವಿಂಗಡಿಸಿಬಿಟ್ಟನು. ಮತ್ತೆ ಕೆಳಗಿನ ಹಳ್ಳಿಯಿಂದ ಕೆಲ ಕೂಲಿ ಕಾರ್ಮಿಕರನ್ನು ಕರೆಸಿ ಆ ಹೊಲಗಳ ಉಳುಮೆ ಬಿತ್ತನೆ ಮಾಡಿಸಿಬಿಟ್ಟನು.

ಇಂದ್ರನು ಮಧ್ಯೆ ಮಧ್ಯೆ ಪಟ್ಟಣಕ್ಕೆ ಹೋಗಿ ಬಿಡುತ್ತಿದ್ದನು. ಅವನು ಆ ಕಡೆ ಹೊರಟು ಹೋದಮೇಲೆ ಪ್ರತಿಸಲವೂ, ಈ ಸಲ ಬಹುಶಃ ಅವನಿಗೆ ಯಾವುದಾದರೂ ಕೆಲಸ ಸಿಕ್ಕುತ್ತೆ. ಅವನು ಪಟ್ಟಣದಲ್ಲೇ ಇದ್ದು ಬಿಡುತ್ತಾನೆ ಎಂದು ಅಂದು ಕೊಳ್ಳುತ್ತಿದ್ದನು. ಅವನು ಹೀಗೆ ಯೋಚನೆ ಮಾಡುವುದು ಅವನ ಮನಸ್ಸಿನ ಹಂಬಲಾಗಿತ್ತು. ಆದರೆ ಅದು ಯಾವಸಲವೂ ಈಡೇರುತ್ತಿರಲಿಲ್ಲ. ಇಂದ್ರನು ಐದನೇ ದಿನವೋ ಏಳನೆಯ ದಿನವೋ ಅಥವಾ ಹತ್ತನೆಯ ದಿನವೋ ಮತ್ತೆ ಹಿಂತಿರುಗಿ ಬಂದು ಬಿಡುತ್ತಿದ್ದನು.

ಈಗ ಇಂದ್ರನಿಗೆ ಯಾವಾಗಲಾದರೂ ಪಟ್ಟಣದಿಂದ ಪತ್ರವೂ ಬರುತ್ತಿತ್ತು. ಆದರೆ ಅದು ಯಾರದ್ದೂ ಅಂತ ಗೊತ್ತಿಲ್ಲ. ಅವನು ಎಂದೂ ಕೇಳಿರಲಿಲ್ಲ. ಆದರೆ ಇದ್ದಕ್ಕಿದ್ದ ಹಾಗೆ ಹೀಗೆ ಪೋಸ್ಟ್‌ಮ್ಯಾನ್ ಪ್ರತ್ಯಕ್ಷವಾಗುವುದು ಅವನಿಗೆ ಇಷ್ಟವಾಗುತ್ತಿರಲಿಲ್ಲ.

ಒಂದು ದಿನ ಇದೇ ತರಹ ಒಂದು ಪತ್ರ ಬಂತು. ಅವನ ಎದುರಿಗೆ ಇಂದ್ರನು ಅದನ್ನು ಒಡೆದು ಓದಿದ ಮೇಲೆ ಅವನ ಮುಖದ ಬಣ್ಣ ಇಳಿದು ಹೋಯಿತು.

ಅವನ ಊಹೆಯ ಪ್ರಕಾರ ಆ ಪತ್ರ. ಇಂದ್ರನ ಯಾರೋ ಮಿತ್ರ ಬರೆದದ್ದು. ಅದರಲ್ಲಿ ಇಂದ್ರನ ನೌಕರಿಯ ಭರವಸೆ ಭಗ್ನವಾಗಿರಬೇಕು.

ಇಂದ್ರನು ಉತ್ತ ಬಿತ್ತು ಬೆಳೆಸಿದ ಮಡಿಗಳಲ್ಲಿಯ ಸಸಿಗಳು ಈಗ ಸೊಂಟದೆತ್ತರಕ್ಕೆ ಬೆಳೆದು ನಿಂತಿದ್ದವು. ಆದರೆ ಇಂದ್ರನು ಪತ್ರವನ್ನು ಕೈಯಲ್ಲಿ ಹಿಡಿದುಕೊಂಡು ಮಡಿಗಳ ಕಡೆ ಹ್ಯಾಗೆ ನೋಡುತ್ತಿದ್ದ ಅಂದರೆ ಯಾವುದೋ ದನ ಆ ಮಡಿಗಳನ್ನು ತುಳಿದು ಹಾಕಿಬಿಟ್ಟಿದೆಯೇನೋ ಅನ್ನುವ ಹಾಗೆ.

ಅವನು ಮರದ ಒಂದು ಕೊಂಬೆಯ ಮೇಲೆ ಕೈ ಹಾಕಿ, ಕೈಯಲ್ಲಿದ್ದ ಪುಸ್ತಕವನ್ನು ಕೈಯಲ್ಲೇ ಮುಚ್ಚಿಟ್ಟುಕೊಂಡು ಇಂದ್ರನ ಮುಖದ ಕಡೆಗೆ ನೋಡುತ್ತಾ ಇದ್ದನು. ಇಂದ್ರನು ಹೆದರಿದ ಕಣ್ಣುಗಳಿಂದ ಅವನ ಕಡೆ ನೋಡಿದನು. ಆಮೇಲೆ ಅವನ ತೋಳುಗಳ ಹತ್ತಿರ ನಿಂತು ಕೊಂಡನು. ತೋಳನ್ನು ಮೆಲ್ಲಗೆ ಹಿಡಿದು "ಕುವರ್‌ಭೈಯಾ........... ಆ ಹುಡುಗಿಯ ಕಾಗದ ಬಂದಿದೆ" ಎಂದು ಹೇಳಿದನು ಅವನ ದನಿ ಹೊರಕ್ಕೆ ಬರುವ ಬಂದಲು ಗಂಟಲೊಳಗೇ ಅಡಗಿಬಿಟ್ಟಿತು.

ಅವನು ತನ್ನ ತೋಳನ್ನು ಜೋರಾಗಿ ಬೀಸಿ ಯಾವ ಹುಡುಗಿ ಎಂದು ಕೇಳಬಯಸಿದನು. ಆದರೆ ಅವನ ತೋಳಾಗಲಿ, ನಾಲಗೆಯಾಗಲಿ ಅಲುಗಲಿಲ್ಲ.

"ಅವರಪ್ಪ ಅವಳನ್ನೂ ನನ್ನನ್ನೂ ಇಬ್ಬರನ್ನೂ ಕೊಂದು ಬಿಡ್ತೀನಿ ಅಂತ ಹೇಳ್ತಾನೆ ಅಂತ ಹೇಳ್ತಾಳೆ"

"ಯಾತಕ್ಕೆ?" ಅವನ ಬಾಯಿಂದ ಕಷ್ಟದಿಂದ ಹೊಮ್ಮಿತು.

"ಅವಳು ಕಾಯಿಲೆ ಇದ್ದಾಳೆ.........ಇಲ್ಲ, ಖಾಯಿಲೆ ಅಲ್ಲ.... ಡಾಕ್ಟರು ಹೇಳಿದ್ದಾರೆ... ಅವಳಿಗೆ ಮಗು...." ಇಂದ್ರನ ದನಿ ನಿಂತು ನಿಂತು ಹೊರಬಂದಂತಿತ್ತು.

ಅದನ್ನು ಕೇಳಿ ಅವನ ಹಣೆಯ ಮೇಲಿನ ಹುಬ್ಬು ಗಂಟಿಕ್ಕಿದುವು.

ಕಾವೇರಿದ ದನಿಯಿಂದೆಂಬಂತೆ ಕೇಳಿದನು. "ನಿನ್ನ ಮಗುವೇನು?"

ಇಂದ್ರನು ನಾಚಿದಂತವನಾಗಿ ತಲೆತಗ್ಗಿಸಿದನು. ಅವನು ಅದೇ ಕಾವೇರಿದ ದನಿಯಿಂದ "ಸರಿ ಅವಳು ಏನು ಹೇಳುತ್ತಾಳೆ?"

"ಮದುವೆ" ಇಂದ್ರನಿಗೆ ಅಷ್ಟನ್ನು ಮಾತ್ರ ಹೇಳಲು ಸಾಧ್ಯವಾಯಿತು.

ಅವನು ಒಂದು ಕ್ಷಣ ಮಾತ್ರ ದಾಳಿಂಬೆ ಕಾಯಿಗಳು ಬಿಟ್ಟಿದ್ದ ಕೊಂಬೆಯ ಮೇಲೆ ಬಂದು ಕುಳಿತಿದ್ದ ಹಕ್ಕಿಗಳನ್ನು ನೋಡುತ್ತಿದ್ದನು. ಮತ್ತೆ ನಕ್ಕು "ಹೋಗು ನಗರಕ್ಕೆ ಹೋಗಿ ಅವಳು ಹೇಳಿದ ಹಾಗೆ ಅವಳ ಜೊತೆ ಮದುವೆ ಮಾಡಿಕೊಂಡು ಬಿಡು"

ಇಂದ್ರನ ಮುಖ ದಾಳಿಂಬೆ ಹೂಗಳ ಹಾಗೆ ಅರಳಿತು. ಅವನು ಬಾಯಿಂದ ಏನೂ ಹೇಳಲಿಲ್ಲ. ಆದರೆ ಕಲ್ಲು ಚಪ್ಪಡಿ ಹೊದೆಸಿದ ತನ್ನ ಕುಟೀರದ ಕಡೆ ಹೋದ ರೀತಿ ಹೇಗಿತ್ತೆಂದರೆ ಮದುವೆಯ ಕೆಲಸ ಕಾರ್ಯಗಳನ್ನು ಈಗಲೇ, ಅರ್ಜೆಂಟಾಗಿ ಮಾಡಬೇಕಾಗಿದೆಯೇನೋ ಅನ್ನುವ ಹಾಗೆ.

ಅವನು ತನ್ನ ಜೋಪಡಿಗೆ ವಾಪಸ್ ಬಂದಾಗ, ತನಗೆ ಇಷ್ಟವಿಲ್ಲದೆ ಇದ್ದರೂ ಛಾವಣಿಯ ಸಂಧಿನಲ್ಲಿ ಇರಿಸಿದ್ದ ಪೊಟ್ಟಣವೊಂದನ್ನು ತೆರೆದು ಅದರೊಳಗಿಂದ ಕೆಲವು ನೋಟುಗಳನ್ನು ಹೊರತೆಗೆದು ತನ್ನ ಷರ್ಟಿನ ಜೇಬಿನಲ್ಲಿ ಇಟ್ಟುಕೊಂಡನು.

ನಗರಕ್ಕೆ ಹೋಗುತ್ತಿದ್ದ ಇಂದ್ರನ ಕೈಯಲ್ಲಿ ಆ ನೋಟುಗಳನ್ನು ನಿಧಾನವಾಗಿ ಇರಿಸುತ್ತ "ನಿನಗೆ ಇದರ ಅಗತ್ಯ ಬೀಳುತ್ತೆ" ಎಂದು ಹೇಳಿದನು. ಆಮೇಲೆ ಒಂದೆರೆಡು ಫರ್ಲಾಂಗ್‌ನಷ್ಟು ದೂರ ಸ್ಟೇಷನ್ ಕಡೆಗೆ ಹೋಗುವ ಕಾಲುದಾರಿಯಲ್ಲಿ ನಡೆಯ ತೊಡಗಿದನು. ಒಮ್ಮೆಲೇ ನಿಂತು ಹಿಂದಕ್ಕೆ ತಿರುಗಿ ದಾರಿಯತ್ತ ನೋಡುತ್ತ "ನೀನು ಓದಿ ಬರೆದು ಮಾಡಿದವನು, ನಗರದಲ್ಲಿ ಯಾವುದಾದರೂ ಕೆಲಸ ಹುಡುಕಿಕೋ!" ಎಂದನು.

ಹಾಗೆ ಹೇಳಿ ಆ ಕಾಡು ಇಂದು ರಿಕ್ತವಾಗಿದ್ದು ತನ್ನ ನಿರೀಕ್ಷೆ ಮಾಡುತ್ತಿದೆಯೋ ಎಂಬಂತೆ ಹಿಂದಕ್ಕೆ ವೇಗವಾಗಿ ಹೆಜ್ಜೆ ಹಾಕುತ್ತ ಹಿಂತಿರುಗಿಬಿಟ್ಟನು.

ಅವನು ಮತ್ತು ಅವನ ಏಕಾಂಗಿತನ ಇಬ್ಬರೂ ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡರು.

ಕಾಡಿನ ಇಡೀ ಹವೆ ಮತ್ತೆ ಅವನ ಸ್ವಂತದಾಯಿತು. ಈಗ ಮರಗಳ ಎಲೆಗಳು ಕೇವಲ ಅವನ ಕಣ್ಣುಗಳ ಸಲುವಾಗಿ ಅತ್ತಿತ್ತ ಒಲೆದಾಡತೊಡಗಿವು. ಈಗ ನದಿಯ ನೀರು ಕೇವಲ ಅವನಿಗಾಗಿ ಹರಿಯುತ್ತಿತ್ತು. ಈಗ ಅವನಿಗಾಗಿಯೇ ಬಿಸಿಲೇರುತ್ತಿತ್ತು. ಅವನಿಗಾಗಿಯೇ ರಾತ್ರಿಯಾಗುತ್ತಿತ್ತು.

ಎಂಟು ದಿನಗಳು ಕಳೆದಿದ್ದವು. ಅದೇ ಹೊತ್ತು ಮುಳುಗುವ ಸಮಯ. ಅವನು ಒಲೆಯ ಬೆಂಕಿಯ ಮುಂದೆ ಕುಳಿತು ಯಾವುದೋ ಪುಸ್ತಕ ಓದುತ್ತಿದ್ದನು. ಬಾಗಿಲ ಹತ್ತಿರ ಹಾಕಿದ್ದ ಕಟ್ಟಿಗೆಯ ಗದ್ದುಗೆ ಖಡಖಡ ಎಂದು ಶಬ್ದ ಮಾಡಿತು.

ಅವನು ಗಾಬರಿಗೊಂಡು ಹಲಗೆಯನ್ನು ಅತ್ತ ಇಟ್ಟನು. ಎದುರುಗಡೆ ಇಂದ್ರನು ನಗುತ್ತಾ ನಿಂತಿದ್ದನು. ಅವನಿನ್ನೂ ಆಶ್ಚರ್ಯದಿಂದೆಂಬಂತೆ ಅವನ ಮುಖದ ಕಡೆ ನೋಡುತ್ತಿದ್ದನು. ಆಗ ಅವನ ಹಿಂದೆ ನಿಂತಿದ್ದ ಒಬ್ಬ ಹುಡುಗಿ ಮುಂದೆ ಬಂದು ಗುಡಿಸಿಲಿನ ಹೊಸ್ತಿಲ ಬಳಿ ನಿಂತು ಅವನ ಪಾದ ಸ್ಪರ್ಶಿಸಿದಳು. ಕಾಲುಗಳತ್ತ ತಲೆ ಬಾಗಿಸಿ, ಅವಳು ನಿಂತಿದ್ದ ಭಂಗಿ ಅವನ ಆಶೀರ್ವಾದವನ್ನು ಬೇಡುತ್ತಿರುವಂತಿತ್ತು. ಕ್ಷಣ

ಹೊತ್ತಿನ ಶೂನ್ಯವೆಂಬಂಥ ಮೌನದ ಬಳಿಕ ಅವನು ಹುಡುಗಿಯ ತಲೆಯ ಮೇಲೆ ಪ್ರೀತಿಯಿಂದ ಕೈಯಾಡಿಸಿ ಹೇಳಿದ. "ಬಾ, ಬಾ, ಒಳಕ್ಕೆ ಬಾ"

ಬೆಳಗಿನ ದಾಲ್ ಹಾಗೇ ಇತ್ತು. ಒಲೆಯ ಮೇಲೆ ಅವನು ಹೆಂಚನ್ನು ಇಟ್ಟಾಗ, ಹುಡುಗಿ ತಾನೇ ಮುಂದೆ ನುಗ್ಗಿ ಹಿಟ್ಟಿನ ಮಣೆ, ಲಟ್ಟಣಿಗೆಯನ್ನು ಕೈಗೆ ತೆಗೆದುಕೊಂಡು ರೊಟ್ಟಿಗಳನ್ನು ಬೇಯಿಸತೊಡಗಿದಳು.

ಹುಡುಗಿಯ ಕೈಯಲ್ಲಿ ಗಾಜಿನ ಬಳೆಗಳಿದ್ದವು. ಅವಳು ರೊಟ್ಟಿಯನ್ನು ಲಟ್ಟಿಸುತ್ತಿದ್ದಾಗ ಬಳೆಗಳು ಗಲ್‌ಗಲ್ ಎಂದು ಸದ್ದು ಮಾಡುತ್ತಿದ್ದವು. ಇಂದ್ರನು ರೊಟ್ಟಿಯನ್ನು ತಿನ್ನುತ್ತಿದ್ದನು. ಅವನು ಕೂಡ ರೊಟ್ಟಿ ತಿನ್ನುತ್ತಿದ್ದನು. ಆದರೆ ಅವನ ಗಮನ ಕೇವಲ ಬಳೆಗಳ ಗಲ್‌ಗಲ್ ಕಡೆಗಿತ್ತು. ಅದು ದೂರದವರೆಗೂ ಹಬ್ಬಿದ್ದ ಮರಗಳ ಶ್-ಶ್ ಸದ್ದಿಗಿಂತ ಪೂರ್ತಿ ವಿಭಿನ್ನವಾಗಿತ್ತು. ವಿಭಿನ್ನವೂ, ಅಪರಿಚತವೂ ಅಲ್ಲದೆ ಕರ್ಕಶವೂ ಆಗಿರುವಂತೆ ಅನಿಸುತ್ತಿತ್ತು.

ಮರುದಿನ ಆಸ್‌ಬೆಸ್ಟಾಸ್ ಛಾವಣಿಯ ಅವನ ಕುಟೀರದ ಪಕ್ಕ ಒಂದು ಹೊಸ ಕುಟೀರ ನಿರ್ಮಾಣವಾಗುತ್ತಿತ್ತು. ಅದು ಅವರಿಬ್ಬರ ಅಡುಗೆಯ ಸಲುವಾಗಿ. ಕೆಳಗಿನ ಹಳ್ಳಿಯಿಂದ ಎರಡು ಹೊಸ ಮಂಚಗಳು, ಹೊಸ ರಜಾಯಿಗಳು, ದಿಂಬುಗಳು ಮತ್ತು ಪಾತ್ರೆಗಳೂ ಬಂದವು.

ಹಳ್ಳಿಯಿಂದ ಬೇರ್ಪಟ್ಟ ಜಮೀನಿನ ಈ ತುಣುಕು ಹಳ್ಳಿಯ ಒಂದು ಭಾಗವಾಗುತ್ತಿದೆಯೇನೋ ಎಂಬಂತೆ ಕಾಣುತ್ತಿತ್ತು. ಹಳ್ಳಿಯಿಂದ ಕೆಲಸಗಾರರು, ಬಡಗಿಗಳು ಕಟ್ಟಡ ಕೆಲಸದವರು, ದಿನವೂ ಬಂದು ಹೋಗುತ್ತಾ ಇದ್ದರು. ಒಬ್ಬ ಕೆಲಸಗಾರ ನದಿಯಿಂದ ಡಬ್ಬದಲ್ಲಿ ನೀರು ತುಂಬಿಕೊಂಡು ತರುತ್ತಾ ಇದ್ದ.

ತಗ್ಗಿನಿಂದ ಆಚೆಗೆ ಎದುರುಗಡೆ ಕಾಣುತ್ತಿರುವ ಬೆಟ್ಟದವರೆಗೂ, ಎಲ್ಲಿಯವರೆಗೆ ಕಣ್ಣಿನೋಟ ಪಕ್ಷಿಗಳ ಹಾಗೆ ಹಾರಿಯುತ್ತಿತ್ತೋ ಅಲ್ಲಿಯವರೆಗೂ ಒಂದು ದೊಡ್ಡ ಚಪ್ಪರ ಸಿದ್ದವಾಗತೊಡಗಿದಾಗ ಅವನ ದೇಹದಿಂದ ರೆಕ್ಕೆಗಳನ್ನು ತರಿದು ಬಿಟ್ಟರೇನೋ ಎನ್ನುವ ಹಾಗೆ ಅವನು ವೇದನೆಯಿಂದ ಚಡಪಡಿಸಿದನು.

ಇಂದ್ರನು ವಿನೀತನಾಗಿ ಹೇಳಿದ "ನೀನು ಓದಿದವನು, ಏನಾದರೂ ಕೆಲಸ ಮಾಡು ಅಂತ ನೀವು ಹೇಳುತ್ತಾ ಇದ್ದಿರಲ್ಲ, ಅದಕ್ಕೆ ಇಲ್ಲಿ ಮಕ್ಕಳದೊಂದು ಸ್ಕೂಲ್ ತೆಗೆಯೋಣ. ಅಂತ ಯೋಚನೆ ಮಾಡಿದೆ. ಕೆಳಗಡೆ ಯಾವ ಹಳ್ಳಿಯಲ್ಲೂ ಒಂದು ಸ್ಕೂಲಿಲ್ಲ..... ಎಂಟು ಆಣೆನೋ ಒಂದು ರೂಪಾಯೋ ಒಂದು ತಿಂಗಳಿಗೆ ಫೀಸ್ ಇಡುತ್ತೀನಿ. ಇಷ್ಟು ಹಣಾನಂತೂ ಯಾರು ಬೇಕಾದರೂ........"

ಅವನ ಎರಡೂ ಕಿವಿಗಳಲ್ಲಿ ಗುಳ್ಳೆಗಳಾಗಿ ಬಿಟ್ಟಿವೆಯೇನ್ನೋ ಎನ್ನುವಂತಾಯಿತು.

ಮುಂದಿನ ತಿಂಗಳು ಇಂದ್ರ ಹೇಳುತ್ತಾ ಇದ್ದ- "ಸ್ಟೇಷನ್ ಹತ್ತಿರದ ಹಳ್ಳಿಯಲ್ಲಿ ನಾಡಿದ್ದು ಒಬ್ಬ ಮಿನಿಷ್ಟ್ರು ಬರುತ್ತಾ ಇದ್ದಾನೆ. ನೀವು ಹಿರಿಯರು. ಅವನ ಹತ್ತಿರ ಹೋಗಿ ನಮಗೆ ನಮ್ಮ ಜಮೀನಿನ ತನಕ ಪಕ್ಕಾ ರಸ್ತೆ ಮಾಡಿಸಿಕೊಡಿ; ಜೊತೆಯಲ್ಲೇ ಇಲ್ಲಿ ಎಲೆಕ್ಟ್ರಿಸಿಟಿಯನ್ನು ಕೊಡಿಸಿಬಿಡಿ, ಸ್ಟೇಷನ್ ತನಕ ಹೇಗೂ ಬಂದೇ ಇದೆ ಅಂತ ಹೇಳಿ".

ಅವನ ಕಿವಿಯಲ್ಲಿನ ಗುಳ್ಳೆಗಳಲ್ಲಿ ಕೀವು ತುಂಬಿಕೊಂಡುಬಿಟ್ಟಿದೆಯೇನೋ ಎನ್ನುವಷ್ಟು ಮಟ್ಟಿಗೆ ಕಿವಿ ನೋಯತೊಡಗಿತು.

ಅದರ ಮುಂದಿನ ತಿಂಗಳು ಎರಡು ದಿನ ಇಂದ್ರ ನಗರಕ್ಕೆ ಹೋದ. ಅವನು ವಾಪಸ್ ಬರುತ್ತಿದ್ದುದು ದೂರದಿಂದಲೇ ಕೇಳಿಸುತ್ತಿತ್ತು. ಅವನ ಕೈಯಿನ ಟ್ರಾನ್ಸಿಸ್ಟರ್‌ನ ದನಿ ಎದುರುಗಡೆಯ ಬೆಟ್ಟಕ್ಕೆ ತಾಗುತ್ತಿತ್ತು. ಕೆಳಗಿನ ಹಳ್ಳಿಯ ಅದೆಷ್ಟೋ ಹುಡುಗರು ಹುಡುಗಿಯರ ದಂಡನ್ನೇ ಹಿಂದೆ ಹಾಕಿಕೊಂಡು ಬರುತ್ತಿದ್ದನು. ಹತ್ತಿರ ಬರುತ್ತಾ ನಗುನಗುತ್ತಾ ಹೇಳಿದ– "ನೋಡು ಕುವರ್‌ಭೈಯಾ ಇಲ್ಲಿ ಯಾವುದೂ ನ್ಯೂಸ್‌ಪೇಪರ್–ಗೀಸ್‌ಪೇಪರ್ ಬರಲ್ಲ. ಈಗ ನಾವು ದಿನವೂ ನ್ಯೂಸ್ ಕೇಳೋಣ ಮತ್ತು ಡ್ರಾಮಾಗಳನ್ನು ಕೂಡ ಕೇಳೋಣ"

ಅದರ ಮುಂದಿನ ತಿಂಗಳು ಕೆಳಗಿನ ಹಳ್ಳಿಯಿಂದ ಬಂದಿದ್ದ ಸೂಲಗಿತ್ತಿ ಅವನ ಹತ್ತಿರ ಹೇಳುತ್ತಾ ಇದ್ದಳು– "ದೇವರು ಕಾಪಾಡಲಿ. ಇನ್ನೇನು ದಿನಗಳು ಹತ್ತಿರ ಬಂದುವು. ಮಗುವಿಗೋಸ್ಕರ ದನ ಕರು ಕೊಂಡುಕೊಳ್ಳಿ... ಮನೆಮಠ ಸುಖದಿಂದ ತುಂಬಿರುತ್ತೆ"

ಯಾವುದು ಮಸುಕು ಮಸಕಾಗಿ ಕಾಣುತ್ತಿತ್ತೋ ಅದು ಈಗ, ಬೆಟ್ಟಗಳ ಮರೆಯಿಂದ ಉದಿಸುತ್ತಿರುವ ಸೂರ್ಯನ ಹಾಗೆ ಪ್ರತ್ಯಕ್ಷವಾಗಿ ಕಾಣತೊಡಗಿತು..... ಮತ್ತೆ ಏಳು ವರ್ಷಗಳ ನಂತರ ಅವನಿಗೆ ತಾನು ಇನ್ನೊಬ್ಬರ ಕನಸನ್ನು ಕಾಣುತ್ತಿದ್ದೇನೇನೋ ಎಂಬಂತೆ ಅನಿಸಿತು.

ಆ ಇನ್ನೊಬ್ಬರು

ಸಂಪಿಗೆ ಮರದ ಟೊಂಗೆ ಟೊಂಗೆಯಲ್ಲೂ ಹೂ ಅರಳಿತ್ತು. ಆದರೆ ಪ್ರತಿ ಟೊಂಗೆಯೂ 'ಕನೂಳ' ತಲೆಗಿಂತ ಎತ್ತರದಲ್ಲಿತ್ತು. ಮೆಟ್ಟಿನಗಾಲ ಮೇಲೆ ನಿಂತುಕೊಂಡರೂ ಅವಳ ಕೈಗೆ ಯಾವ ಟೊಂಗೆಯೂ ಎಟುಕುತ್ತಿರಲಿಲ್ಲ. "ಈ ಮರಕ್ಕೆ ಎಷ್ಟು ವಯಸ್ಸಾಗಿದೆಯೋ ಅಷ್ಟೇ ನಿನಗೂವಯಸ್ಸಾಗಿದೆ ಕನೂ" ಅಂತ ಅಮ್ಮ ಹೇಳುತ್ತಾ ಇದ್ದದ್ದು 'ಕನೂಗೆ' ನೆನಪಾಯಿತು. "ಹಾಗಿದ್ದರೆ ಇದು ನನ್ನಷ್ಟು ಎತ್ತರಕ್ಕೆ ಏಕಿಲ್ಲ? ನಾನು ನೋಡಿದರೆ ಚಿಕ್ಕವಳಾಗಿದ್ದೀನಿ. ಇದು ಇಷ್ಟೊಂದು ದೊಡ್ಡದು ಹೇಗಾಗಿ ಬಿಟ್ಟಿತು?" ಎಂದು ಯೋಚಿಸ ತೊಡಗಿಳು. ಮನೆಯ ಕಾಂಪೌಂಡ್ ಗೋಡೆ ಮರದ ಕೆಳಗಡೆ ಇತ್ತು. ತಾನೊಂದು ವೇಳೆ ಗೋಡೆ ಮೇಲೆ ಹತ್ತಿದರೆ ಅಲ್ಲಿಂದ ಕೊಂಬೆ ಹಿಡಿದುಕೊಂಡು ಯಾವುದಾದರೂ ಹೂವಿನ ಗೊಂಚಲು ಕಿತ್ತುಕೊಳ್ಳಬಹುದು ಅಂತ ಕನೂಗೆ ಅನ್ನಿಸಿತು. ಹಾಗೆ ಅನ್ನಿಸಿದ್ದೇ ತಡ, ಗೋಡೆ ಮೇಲೆ ಹತ್ತುವುದಕ್ಕೆ ಕಾಲ ಕೆಳಗೆ ಎತ್ತರ ಮಾಡಿಕೊಳ್ಳಲು ಬೇಕಾದ ಸಣ್ಣಪುಟ್ಟ ಕಲ್ಲುಗಳನ್ನು ಒಟ್ಟು ಹಾಕತೊಡಗಿದಳು.

ಅವಳು ಸಣ್ಣ ಸಣ್ಣ ಕಲ್ಲುಗಳ ರಾಶಿಯೊಂದನ್ನು ಮಾಡಿ ಅದರ ಮೇಲೆ ಹತ್ತಿನಿಂತರೂ ಅವಳ ಕೈ ಬಹಳ ಕಷ್ಟದಿಂದ ಹಾಗೂ ಹೀಗೂ ಗೋಡೆಯ ತನಕ ಹೋಯಿತು. ಗೋಡೆಯ ಮೇಲೆ ಹತ್ತುವುದಕ್ಕೆ ಅವಳ ಕೈಯಲ್ಲಾಗಲಿಲ್ಲ.

ಶ್ರೀ ಕೃಷ್ಣನು ಮನೆಯ ಹೊರಬಾಗಿಲಿನಿಂದ ಒಳಗೆ ಬರುವಾಗ ಬಲಗಡೆ ಗೋಡೆ ಹತ್ತಿರ ಇದ್ದ 'ಕನೂ'ಳನ್ನು ನೋಡಿದನು. ಆಗ ಕನೂ ಗೋಡೆಯನ್ನು ಕೈಯಿಂದ ಹಿಡಿದುಕೊಂಡು ಅದರಿಂದ ನೇತು ಬಿದ್ದಂತಿದ್ದಳು. ಅವಳು ಆಗ ಮೇಲೆ ಹತ್ತುವುದಕ್ಕೂ ಆಗದ, ಕೆಳಗೆ ಇಳಿಯುವುದಕ್ಕೂ ಆಗದ ಸ್ಥಿತಿಯಲ್ಲಿದ್ದಳು. ಶ್ರೀ ಕೃಷ್ಣನು ಓಡಿ ಬಂದು ಕನೂಳನ್ನು ಗೋಡೆಯ ಮೇಲಿನಿಂದ ಇಳಿಸಿಕೊಂಡನು. ಅನಂತರ ತನ್ನ ತೋಳುಗಳಿಂದ ಎತ್ತಿ ಹಿಡಿದುಕೊಂಡನು. ಆಗ 'ಕನೂ' ಒಂದು ಕೊಂಬೆಯಿಂದ ಹೂವಿನ ಗೊಂಚಲನ್ನು ಕಿತ್ತುಕೊಂಡಳು.

ಹೂಗೊಂಚಲಿನ ಟೊಂಗೆಯನ್ನು ತೃಪ್ತಿಯಿಂದ ಕೈಯಲ್ಲಿ ಹಿಡಿದು ಕೊಂಡಳು. ಶ್ರೀ ಕೃಷ್ಣನ ತೋಳಿನಿಂದ ಬಿಡಿಸಿಕೊಂಡು ಕೆಳಗೆ ಇಳಿಯುವಾಗ ಕೇಳಿದಳು– "ಅಂಕಲ್ ಸಂಪಿಗೆ ಮರಾನೂ ನನ್ನಷ್ಟೇ ವಯಸ್ಸಿನದು ಅಂತ ಅಮ್ಮ ಹೇಳ್ತಾಳೆ. ಅಂದ ಮೇಲೆ ನಾನು ಹೇಗೆ ಚಿಕ್ಕವಳಾಗಿ ಬಿಟ್ಟೆ?"

ಕನೂ ಇಷ್ಟಪಟ್ಟು ಖುಷಿಯಿಂದ ಹಾಲು ಕುಡಿಯಲ್ಲ. ಅವಳ ತಾಯಿ ಅವಳಿಗೆ ಕುಡಿಸುವುದಕ್ಕೆ ಯಾವಾಗ ಲೋಟದಲ್ಲಿ ಹಾಲು ತಂದರೂ ಕನೂ ಕಣ್ಣಾಮುಚ್ಚಾಲೆ ಆಟ ಆಡಲು ಶುರುಮಾಡಿ ಬಿಡುತ್ತಾಳೆ. ಒಂದೊಂದು ಸಲ ಬಾಗಿಲ ಹಿಂದೆ ಬಚ್ಚಿಟ್ಟು ಕೊಂಡರೆ, ಒಂದೊಂದು ಸಲ ಮಂಚದ ಹಿಂದೆ ಬಚ್ಚಿಟ್ಟು ಕೊಳ್ಳುತ್ತಿದ್ದಳು ಎನ್ನುವುದು ಶ್ರೀಕೃಷ್ಣನಿಗೆ ಗೊತ್ತಿತ್ತು. ಅದಕೋಸ್ಕರ ಶ್ರೀ ಕೃಷ್ಣನು– "ಮಕ್ಕಳು ಮಾವಿನಮರದ ಥರ ನಿಧಾನಕ್ಕೆ ದೊಡ್ಡವರಾಗುತ್ತಾರೆ. ಆದರೆ ಹಾಲು ಕುಡೀತು ಅಂದರೆ ಬಹಳ ಬೇಗ ದೊಡ್ಡವರಾಗಿಬಿಡುತ್ತಾರೆ" ಎಂದನು.

"ಆದರೆ ಮಾವಿನ ಮರ ಹಾಲು ಕುಡಿಯುತ್ತ?" ಎಂದು ಕನೂ ಕೇಳಿದಾಗ, ಶ್ರೀಕೃಷ್ಣನು ಅವಳ ಕೈ ಹಿಡಿದುಕೊಂಡು ಕೊಠಡಿಯ ಕಡೆಗೆ ಕರೆದುಕೊಂಡು ಬರುತ್ತ – "ನಾನು ನಿನಗೆ ಒಂದು ಮಾವಿನ ಮರದ ಚಿತ್ರ ತೋರಿಸುತ್ತೀನಿ. ಅದು ಹಾಲು ಕುಡಿಯೋದಕ್ಕೆ ಶುರುಮಾಡಿದ ಮೇಲೆ ಬಹಳ ಬೇಗ ದೊಡ್ಡದಾಗಿಬಿಟ್ಟಿತು" ಎಂದನು.

"ಈ ಹೊತ್ತು ನಾನೂ ಹಾಲು ಕುಡೀತೀನಿ.........." ಎನ್ನುತ ಕನೂ ಶ್ರೀ ಕೃಷ್ಣನ ಕೈಬಿಡಿಸಿಕೊಂಡು ಕೊಠಡಿಯ ಕಡೆಗೆ ಅದೆಷ್ಟು ಜೋರಾಗಿ ಓಡಿದಳೆಂದರೆ ಈ ಹೊತ್ತು ಅವಳಿಗೆ ಜೀವನದ ಗುಟ್ಟು ಗೊತ್ತಾಗಿ ಹೋಯಿತೇನೋ ಅನ್ನುವ ಹಾಗೆ..........

ಡ್ರಾಯಿಂಗ್ ರೂಮ್‌ನಲ್ಲಿದ್ದ ಮೇಜಿನ ಮೇಲೆ ಆ ಹೂದಾನಿ ಅಲ್ಲೇ ಬಿದ್ದಿತ್ತು. ಅದರಲ್ಲಿ ಕನೂಳ ತಾಯಿ ದಿನವೂ ಹೊಸ ಹೂವು ಇಡುತ್ತಿದ್ದಳು. ಆದರೆ ಈಚೆಗೆ ಆರು ತಿಂಗಳಿನಿಂದ ಒಂದು ಹೂವನ್ನೂ ಇಟ್ಟಿರಲಿಲ್ಲ. ಮೇಜಿನ ಹತ್ತಿರ ನಿಂತು ಕೈನಲ್ಲಿದ್ದ ಹೂಗುಚ್ಛವನ್ನು ಹೂದಾನಿಯಲ್ಲಿಡಲು ಹೋದಾಗ ಅವಳ ಇಡೀ ಅಂಗೈ ತುಂಬ ಬಿಳೀ ಬಣ್ಣದ ನೀರಿನ ಥರದ್ದು ಅಂಟಿಕೊಂಡಿತ್ತು ಹಾಗೂ ಹೂಗುಚ್ಛದ ಬುಡದಿಂದ ಈಗಲೂ ನೀರು ತೊಟ್ಟಿಕ್ಕುತ್ತಿತ್ತು............

"ಅಮ್ಮಾ ! ಹೂವು ಅಳುತ್ತಾ ಇದೆ" ಎಂದು ಹೇಳುತ್ತ ಕನೂ ಕೈಯಲ್ಲಿ ಹಿಡಿದಿದ್ದ ಹೂಗುಚ್ಛವನ್ನು ಅಲ್ಲೇ ಟೇಬಲ್ ಮೇಲಿಟ್ಟು ಬಿಟ್ಟು ಕುರ್ಚಿಯ ಮೇಲೆ ಕುಳಿತಿದ್ದ ತನ್ನ ಅಮ್ಮನತ್ತ ನೋಡತೊಡಗಿದಳು.

ತಾಯಿ ಒಮ್ಮೆ ಕನೂಳತ್ತ ನೋಡಿದಳು. ಇನ್ನೊಮ್ಮೆ ಹೂಗುಚ್ಛದತ್ತ ನೋಡಿದಳು. ಆಮೇಲೆ ಒಂದು ವಿಧವಾದ ಯಾತನೆಯಿಂದ ಕಣ್ಣುಮುಚ್ಚಿ ಕೊಂಡಂತಿದ್ದಳು............

ಶ್ರೀ ಕೃಷ್ಣನು ಕನೂಳ ಹಿಂದೆ ಹಿಂದೆ ಬರುತ್ತಿದ್ದನು. ಅವನ ಹೆಜ್ಜೆಯ ಸಪ್ಪಳ ಕೇಳಿಸಿ ಕನೂಳ ತಾಯಿ ತುಂಬಿ ಬಂದ ಕಣ್ಣು ತೆರೆದಳು. ತಾನೂ ಕೂತಿದ್ದ ಕುರ್ಚಿಯಿಂದ ಸ್ವಲ್ಪ ಮೇಲೆದ್ದು ಇನ್ನೊಂದು ಕುರ್ಚಿಯ ಕಡೆ ಕೈತೋರಿಸಿ ಶ್ರೀ ಕೃಷ್ಣನಿಗೆ ಕುಳಿತುಕೊಳ್ಳಲು ಹೇಳುತ್ತ ಸೋತು ಹೋದಂತಾಗಿ ಕುರ್ಚಿಯಲ್ಲಿ ಕುಸಿದು ಕುಳಿತಳು. ನಿಧಾನವಾಗಿ

ಹೇಳಿದಳು– "ಒಂದು ದೇವರ, ಹೊಡೆತ, ಇನ್ನೊಂದು ಈ ಮಕ್ಕಳ ಮಾತು......... ಈ ಹೂಗುಚ್ಛ ಕಿತ್ತುಕೊಂಡು ಬಂದು 'ಅಮ್ಮಾ ಈ ಹೂವು ಅಳುತ್ತಾ ಇದೆ' ಅಂತ ಹೇಳ್ತಿದ್ದಾಳೆ."

ತಾಯಿಯ ಕಂಠ ತುಂಬಿ ಬಂದಿತು. ಆದರೆ ಶ್ರೀಕೃಷ್ಣನು ಆರು ತಿಂಗಳಿನಿಂದ ಮನೆಯ ಒಳಗೆ ಹೊರಗೆ ಹಬ್ಬಿಕೊಂಡಿರುವ ಶೋಕವನ್ನು ಇಂದು ಬಹಳ ಕಷ್ಟದಿಂದ ತಡೆದುಕೊಂಡು "ಕನೂ, ಅಮ್ಮನಿಗೆ ಆ ವಿಷಯ ಹೇಳಲ್ಲವೇನು?" ಎಂದನು.

"ಯಾವ ವಿಷಯ?" ಎಂದು ಹೇಳಿ ಮತ್ತೆ ತಾನೇ ನೆನಪಿಸಿಕೊಂಡು – "ಅಮ್ಮಾ ಅಂಕಲ್ ಹೇಳ್ತಾರೆ, ಮಕ್ಕಳು ಮಾವಿನ ಮರ ಇದ್ದ ಹಾಗೆ. ಅವರೊಂದು ವೇಳೆ ಹಾಲು ಕುಡಿದರು ಅಂದರೆ ಬಹಳ ಬೇಗ ದೊಡ್ಡವರಾಗಿ ಬಿಡುತ್ತಾರೆ ಅಂತ. ನಾನೂ ಹಾಲು ಕುಡೀತೀನಿ ಎಂದಳು.

ತಾಯಿಯ ತುಟಿಗಳು ಸ್ವಲ್ಪ ಅರಳಿದವು. ಕನೂ ಕಡೆ ನೋಡುತ್ತ, ಶ್ರೀ ಕೃಷ್ಣನ ಉಪಕಾರವನ್ನು ಕಣ್ಣಿನಲ್ಲೇ ತುಂಬಿಕೊಂಡು ಬಿಟ್ಟಿದ್ದಾಳೇನೋ ಎನ್ನುವ ಹಾಗೆ ಅವನತ್ತ ನೋಡಿದಳು.

"ನಾನು ನಿನಗೆ ಹಾಲು ತರಲೇನು?" ತಾಯಿ ತನ್ನ ದೇಹದಲ್ಲಿ ಸ್ವಲ್ಪ ಧೈರ್ಯ ತಂದುಕೊಂಡ ಹಾಗೆ ಮಾಡಿ ಕುರ್ಚಿಯಿಂದ ಏಳುತ್ತ ಕನೂಳನ್ನು ಕೇಳಿದಳು.

"ಹೂಂ, ತಗೊಂಡು ಬಾ. ಜೊತೆಗೆ ಹೂಗಳಿಗೆ ನೀರು ತಗೊಂಡು ಬಾ" ಎಂದು ಕನೂ ಹೇಳುತ್ತಾ ಇದ್ದಳು. ಆಗ ಶ್ರೀಕೃಷ್ಣನು– "ನಡೀ ಕನೂ, ನೀರನ್ನು ನಾವೇ ತರೋಣ. ಹೂದಾನಿಯನ್ನೂ ನಾವೇ ತೊಳೆದು ಬಿಡೋಣ" ಎಂದನು.

ಹೋಗುತ್ತಾ ಹೋಗುತ್ತಾ ತಾಯಿ ಹೊಸಿಲ ಮೇಲೆ ನಿಂತವಳ ಹಾಗೆ ಒಮ್ಮೆ ಗೋಡೆಗೆ ತಗುಲಿ ಹಾಕಿದ್ದ ಕನೂಳ ತಂದೆಯ ಭಾವಚಿತ್ರದತ್ತ, ತನ್ನ ಬದುಕಿನ ಭಗ್ನವೃಕ್ಷದತ್ತ ನೋಡಿದಳು. ಅನಂತರ ಕೊಂಬೆಯಿಂದ ಕಿತ್ತ ಹೂವಿನ ಕಡೆ ನೋಡುತ್ತಿದ್ದಾಳೇನೋ ಎನ್ನುವಂತೆ ಕನೂಳತ್ತ ನೋಡಿದಳು....

ಕನೂ ಟೇಬಲ್ ಮೇಲಿಂದ ಹೂಗುಚ್ಛವನ್ನು ಎತ್ತಿಕೊಂಡಳು. ಶ್ರೀಕೃಷ್ಣನು ಆ ಹೂದಾನಿಯನ್ನು ತೆಗೆದನು. ಕಾರಣ ಅದರಲ್ಲಿದ್ದ ಹೂಗಳ ಅದೃಷ್ಟ ಕಳೆದ ಆರು ತಿಂಗಳಿಂದ ಮುರುಟಿ ಹೋಗಿತ್ತು. ಆಮೇಲೆ ಶ್ರೀಕೃಷ್ಣನು ಅಡಿಗೆ ಮನೆಯ ಗೋಡೆಗೆ ಲಗತ್ತಾಗಿದ್ದ ಹೊರಗಿನ ನಲ್ಲಿಯಲ್ಲಿ ಹೂದಾನಿಯನ್ನು ತೊಳೆದು ಅದರಲ್ಲಿ ಹೂಗಳನ್ನಿಟ್ಟನು. ಅದೇ ಸಮಯದಲ್ಲಿ ಒಳಗಡೆ ಅಡಿಗೆ ಮನೆಯಲ್ಲಿ ಕನೂಗೆ ಹಾಲು ಬಿಸಿ ಮಾಡುತ್ತ ಇದ್ದ ತಾಯಿಗೆ, ಶ್ರೀ ಕೃಷ್ಣನೆಂದರೆ ನಿಜಕ್ಕೂ ಟೊಂಗೆಯಿಂದ ಕಿತ್ತಿದ್ದ ಹೂವನ್ನು ಒಂದೆರಡು ಗಂಟೆಗಳ ಕಾಲ ನಳನಳಿಸುತ್ತಾ ಇರುವಂತೆ ಮಾಡುವ ಜೀವ ಜಲ ಎನ್ನಿಸಿತು.

ಕನೂಗೆ ಹಾಲು ಬಿಸಿಮಾಡುತ್ತ ಇದ್ದಾಗಲೇ ಶ್ರೀ ಕೃಷ್ಣನಿಗೆ ಚಹಾ ತಯಾರಿಸ ತೊಡಗಿದಳು. ನೀರಿನ ಹಾಗೆ ಅವಳ ಅಂತರಂಗವೂ ಕುದಿಯತೊಡಗಿತು.– "ಸಾವಿನ ದುಃಖವನ್ನು ಕೆಲವರು ಒಂದು ದಿನ ಹಂಚಿಕೊಂಡರೆ, ಇನ್ನು ಕೆಲವರು ಹತ್ತುದಿನ ಹಂಚಿಕೊಂಡಾರು. ಆದರೆ ಅಷ್ಟೆಲ್ಲಾ ದಿನ ಕಳೆದ ಮೇಲೆ ಯಾರು ಕೇಳ್ತಾರೆ. ಈ ಶ್ರೀ ಕೃಷ್ಣ ನಮಗೆ ಏನೂ ಆಗಬೇಕಾದ್ದಿಲ್ಲ. ಕೇವಲ ಸತ್ತವನ ಸ್ನೇಹಿತ ಅಷ್ಟೇ. ಇವನೇ

ಇದುವರೆತನಕ ನಮ್ಮನ್ನೆಲ್ಲಾ ವಿಚಾರಿಸಿಕೊಳ್ತಾ ಇದ್ದಾನೆ......" ಆಗಲೇ ಕುದಿಯುತ್ತಿರುವ ನೀರಿನಿಂದ ಹೊರಗೆ ಹಾರಿ ಬಿದ್ದ ಹನಿಯಂತೆ- "ಆದರೆ ಎಲ್ಲಿಯವರೆಗೆ" ಎಂಬ ವಿಚಾರ ಮನಸ್ಸಿನಲ್ಲಿ ಸುಳಿಯಿತು.

ಅವಳು ಹಾಲಿನ ಗ್ಲಾಸ್ ಮತ್ತು ಎರಡು ಕಪ್ ಚಹಾ ತೆಗೆದುಕೊಂಡು ಕೊಠಡಿಯೊಳಕ್ಕೆ ಬಂದಳು. ಕೊಠಡಿಯ ಒಳಗಡೆ ಒಂದು ತೆಳುವಾದ ಸುಗಂಧ ಹರಡಿತ್ತು; ಕಳೆದುಹೋದ ದಿನಗಳ- ಅದೂ ಕನೂಳ ತಂದೆ ಜೀವಂತವಾಗಿದ್ದಾಗಿನ ದಿನಗಳ ಸುಗಂಧವೇನೋ ಎಂಬಂತೆ. ಇದೇ ಮೊದಲನೆ ಸಲ ಕನೂ ಹಾಲಿನ ಲೋಟವನ್ನೂ ಬೇಗ ಖಾಲಿಮಾಡಿ ಹೇಳತೊಡಗಿದಳು.... "ಅವ್ಮಾ ಅವ್ಮಾ! ನೀವು ಯಾವತ್ತೂ ನನ್ನ ಜೊತೆ ಇಸ್ಪೀಟಾಡಲ್ಲವಾ...... ಅಪ್ಪ ಆಡ್ತಾ ಇದ್ದರು........... ಅಂಕಲ್ ಇವತ್ತು ನನ್ನ ಜೊತೆ ಆಡ್ತೀನಿ ಅಂತ ಹೇಳ್ತಾ ಇದ್ದಾರೆ........."

ತಾಯಿ ಕಳೆದು ಆರು ತಿಂಗಳಿನಿಂದ ತಿನ್ನೋದು ಉಣ್ಣೋದೆಲ್ಲಾ ಮರೆತೇ ಬಿಟ್ಟಿದ್ದಳು. ಆದರೆ ಈ ಹೊತ್ತು ಕೈಯಲ್ಲಿದ್ದ ಚಹಾದ ಕಪ್ಪಿನಿಂದ ಮೊದಲ ಗುಟುಕನ್ನು ಹೀರಿದಳು...... ಚಹಾದ ಒಂದು ಗುಟುಕು ತನಗೆ ತೀರಾ ಅಗತ್ಯವಾಗಿತ್ತೇನೋ ಎನ್ನುವ ಹಾಗೆ.........

ಕನೂಗೆ ಗೊತ್ತಿದ್ದದ್ದು ಒಂದೇ ಆಟ. ಅದು ಅವರ ಅಪ್ಪನ ಜೊತೆ ಆಡುತ್ತಾ ಇದ್ದ ಮೂರೆಲೆ ಆಟ. ಆದರೆ ಕನೂ ಆಡುವ ಆಟದಲ್ಲಿ ಅವಳು ಗೆಲ್ಲಲೇ ಬೇಕಾಗಿತ್ತು. ಮತ್ತು ಅವರ ಅಪ್ಪ ಸೋಲಲೇ ಬೇಕಾಗಿತ್ತು. ಕನೂಗೆ ತಿಳಿದಿದ್ದೆಂದರೆ, ಇಸ್ಪೀಟ್ ಆಟ ಆಡುವುದು ತನ್ನನ್ನು ಗೆಲ್ಲಿಸುವುದಕೋಸ್ಕರವೇ ಎಂದು. ಅವಳು ಇಸ್ಪೀಟಿನ ಎಲೆ ಕೈಯಲ್ಲಿ ಹಿಡಿದುಕೊಂಡು ಅಪ್ಪನಿಗೆ ಹೇಳುತ್ತಿದ್ದರೆ, ಅವರ ಅಪ್ಪ ಮುಂದೆ ಮುಂದೆ ಓಡುತ್ತ "ಇಲ್ಲಪ್ಪಾ, ನಾನು ಆಡಲ್ಲ, ನಾನು ಸೋತು ಬಿಡ್ತೀನಿ" ಎಂದು ಹೇಳುತ್ತಿದ್ದರು. ಕೊನೆಗೆ ಇಸ್ಪೀಟ್ ಆಡಲು ಅವರ ಅಪ್ಪನನ್ನು ಒಪ್ಪಿಸಿದ ಮೇಲೆ, ಸೋಲುವುದಕೋಸ್ಕರ ಅಪ್ಪನನ್ನು ಒಪ್ಪಿಸಿದ ಖುಷಿ ಆಗುತ್ತಿತ್ತು ಅವಳಿಗೆ............

ಈ ದಿನ 'ಕನೂ' ಅಂಕಲ್ ಜೊತೆ ಇಸ್ಪೀಟಾಡ ತೊಡಗಿದಳು. ಆಗ ತನ್ನ ಇಸ್ಪೀಟೆಲೆಗಳು ಚಿಕ್ಕವಾಗಿಯೂ ಶ್ರೀಕೃಷ್ಣ ಅಂಕಲ್ ಎಲೆಗಳು ದೊಡ್ಡವಾಗಿಯೂ ಇರುವುದನ್ನು ನೋಡಿ ಅವಳು ತಾನು ಒಂದು ವಿಲಕ್ಷಣ ಸಂಗತಿಯನ್ನು ನೋಡಿದೆನೇನೋ ಎನ್ನುವಂತೆ ದಿಗ್‌ಭ್ರಾಂತಳಾಗಿಬಿಟ್ಟಳು.... ಅವಳ ಎಳೆಯ ಮುಗ್ಧ ಮುಖ ಕೋಪದಿಂದ ಅಳು ಮುಖದಂತಾಗಿ ಬಿಟ್ಟಿತು.. ಶ್ರೀ ಕೃಷ್ಣನಿಗೆ ವಿಷಯ ಏನು ಅಂತ ಅರ್ಥವಾಯಿತು. ಮತ್ತೆ ಎಲೆ ಹಾಕತೊಡಗಿದನು. ಎಕ್ಕ, ರಾಜ, ರಾಣಿಯ ಎಲೆಗಳನ್ನು ಕನೂಗೆ ಹಂಚಿ ಚಿಕ್ಕ ಎಲೆಗಳನ್ನು ತನಗೆ ಹಾಕಿಕೊಂಡನು........

ಕನೂವಿನ ಕಳೆದು ಹೋದ ನಂಬಿಕೆ ಮರಳಿ ಬಂದಿತು. ಮತ್ತೆ ಒಂದೇ ಕ್ಷಣದಲ್ಲಿ ಅವಳು ಅದೇ ಹಿಂದಿನ ದಿನಗಳ ಕನೂ ಆಗಿಬಿಟ್ಟಳು. ಹತ್ತಿರವೇ ಕುಳಿತಿದ್ದ ತಾಯಿಯೂ ಕನೂಳನ್ನು ಈಗ್ಗೆ ಆರು ತಿಂಗಳ ನಂತರ ನೋಡುತ್ತಿದ್ದಾಳೇನೋ ಅನ್ನುವ ಹಾಗೆ ಅವಳ ಅಂತರಂಗದಲ್ಲಿ ಒಂದು ಆಶ್ಚರ್ಯಕರವಾದ ಸಂತಸದ ಅನುಭವ ಉಂಟಾಯಿತು. ಅದೆಂದರೆ ಕನೂಳ ಅಪ್ಪ ಅವಳಿಗೆ ಯಾವಾಗಲೂ ದೊಡ್ಡ ದೊಡ್ಡ ಎಲೆಗಳನ್ನು

ಕೊಡುತ್ತಿದ್ದರೆಂದು ಶ್ರೀ ಕೃಷ್ಣನಿಗಂತೂ ಗೊತ್ತಿರಲಿಲ್ಲ. ಹಾಗಿದ್ದ ಮೇಲೆ ಅದು ಹೇಗೆ ಅವರಿಗೆ ಈ ಸಂಗತಿ ಗೊತ್ತಾಯಿತು..........?

"ಅಂಕಲ್ ಸೋತು ಬಿಟ್ಟರು............" ಎಂದು ಕನೂ ಪ್ರತಿಸಲವೂ ತನ್ನ ಎಲೆಗಳನ್ನು ತೋರಿಸುತ್ತ ಜೋರು ಜೋರಾಗಿ ನಗತೊಡಗಿದಳು. ಆಗ ಆರು ತಿಂಗಳಿನಿಂದ ದುಃಖಿತಗೊಂಡು ನಿಂತಿದ್ದ ಮನೆಯ ಗೋಡೆಗಳೂ ಕೊಂಚ ಮುಗುಳ್ನಕ್ಕವು.............

ಮುಂದಿನ ದಿನಗಳಲ್ಲಿ ಶ್ರೀ ಕೃಷ್ಣ ಅಂಕಲ್ ಜೊತೆ ಒಂದು ಸಲ ಸರ್ಕಸ್ ನೋಡಲು ಹೋದರೆ, ಇನ್ನೊಂದು ಸಲ ಐಸ್ ಕ್ರೀಂ ತಿಂದಳು. ಮತ್ತೊಂದು ಸಲ ಹೊಸ ಚಪ್ಪಲಿ ತಗೊಂಡಳು. ಹೀಗಾಗಿ ಅಮ್ಮ ಸ್ಕೂಲಿಗೆ ಸೇರಿಸಲು ಕನೂಳನ್ನು ಕರೆದುಕೊಂಡು ಹೊರಟಾಗ, ತಾನು ಶ್ರೀಕೃಷ್ಣ ಅಂಕಲ್ ಜೊತೆ ಸ್ಕೂಲ್‌ಗೆ ಹೋಗುವುದಾಗಿ ಹಠ ಹಿಡಿದುಬಿಟ್ಟಳು.

ಹೀಗಿದ್ದಾಗ ಒಂದು ದುರ್ಘಟನೆ ನಡೆದು ಹೋಯಿತು. ಮನೆಯಿಂದ ಸ್ವಲ್ಪವೇ ದೂರದಲ್ಲಿ ಒಂದು ಸರ್ಕಾರಿ ಉದ್ಯಾನವನ ಇತ್ತು. ಅಲ್ಲಿ ನೆರೆಯ ಹುಡುಗಿಯರೊಂದಿಗೆ ಕನೂ ಆಟವಾಡುತ್ತಿದ್ದಳು. ಅಲ್ಲಿ ಪಾರ್ಕ್‌ನ ಮೂಲೆಯಲ್ಲಿದ್ದ ಬುರುಜಿನ ಮೇಲೆ ಹತ್ತುತ್ತಿರುವಾಗ ಅದರ ಮೆಟ್ಟಿಲ ಮೇಲಿಂದ ಕೆಳಗೆ ಬಿದ್ದು ಕಾಲಿನ ಮೂಳೆ ಮುರಿದು ಹೋಯಿತು. ಅದೊಂದು ಚಿಕ್ಕ ಪಟ್ಟಣ. ಹಾಗಾಗಿ ತಕ್ಷಣಕ್ಕೆ ಬೇಕು ಅಂದರೆ ಕೇವಲ ಹಕೀಮರನ್ನು ಕರೆಸಬಹುದಾಗಿತ್ತು ಅಷ್ಟೇ. ಅವನು ಅಂದಾಜಿನ ಮೇಲೆ ಮೂಳೆ ಕೂಡಿಸುತ್ತಾ ಇದ್ದಾಗ, ಅವನ ಸಹಾಯಕ್ಕೆ ಇದ್ದದ್ದು ಶ್ರೀ ಕೃಷ್ಣ ಮಾತ್ರ. ಜೋರಾಗಿ ಕಿರುಚುತ್ತಿದ್ದ ಕನೂಳ ಕಾಲನ್ನು ಅವನು ಹಿಡಿದುಕೊಂಡಿದ್ದನು.

"ಅಂಕಲ್ ನನ್ನ ಕಾಲು ಬಿಟ್ಟುಬಿಡಿ" ಎಂದು ಕನೂ ಜೋರಾಗಿ ಚೀರುತ್ತಿದ್ದಳು. ಆದರೆ ಅವಳು ಹೇಳಿದ್ದಕ್ಕೆ ವಿರುದ್ಧವಾಗಿ ಶ್ರೀ ಕೃಷ್ಣನು ಕಾಲು ಬಿಡದೆ ಇದ್ದಾಗ, ಕನೂ ತಾನು ಕೇಳಿದ್ದ ಬೈಗುಳಗಳನ್ನೆಲ್ಲಾ ಅವನ ಮೇಲೆ ಪ್ರಯೋಗಿಸಿಬಿಟ್ಟಳು... ಅವಳು ನೋವು ಮತ್ತು ಸಿಟ್ಟಿನಿಂದಾಗಿ ಅಳುತ್ತಿದ್ದಳು ಮತ್ತು ಬೈಗುಳಗಳನ್ನೆಲ್ಲಾ ಖಾಲಿ ಮಾಡಿದಳು.

ಮೂಳೆ ಸರಿಯಾಗಿ ಕೂತುಕೊಂಡು ಬಿಟ್ಟಿತು. ಪಟ್ಟಿ ಕಟ್ಟಲಾಯಿತು. ಕನೂ ನಿದ್ದೆ ಮಾಡಿ ಎದ್ದ ಮೇಲೆ ಅವಳ ಕಾಲಿನಲ್ಲಿ ನೋವಿರಲಿಲ್ಲ. ಇದು ಕನೂಗೆ ಏನೋ ಒಂದನ್ನು ಕೊಟ್ಟ ಘಟನೆಯಾಗಿತ್ತು. ಮಾರನೇ ದಿನ ಶ್ರೀ ಕೃಷ್ಣನ ತೊಡೆಯ ಮೇಲೆ ಕುಳಿತುಕೊಂಡು ಕನೂ ಮೆಲುದನಿಯಲ್ಲಿ ಕೇಳಿದಳು– 'ಅಂಕಲ್ ! ನೀವು ಈಗ ನನ್ನ ಪಪ್ಪಾ ಅಲ್ಲವಾ?"

ಶ್ರೀ ಕೃಷ್ಣನು ನಿಧಾನವಾಗಿ ಕನೂಳ ಹಣೆಗೆ ಮುತ್ತಿಟ್ಟನು. ಯಾವ ಮಾತನ್ನು ಅವನಿಗೆ ಹೇಳಲು ಸಾಧ್ಯವಾಗಿರಲಿಲ್ಲವೋ ಆ ಮಾತನ್ನು ಕನೂ ಹೇಳಿಬಿಟ್ಟಿದ್ದಳು.......... ಈ ಮಾತಿಗೆ ಉತ್ತರಿಸಲು ಅವನು ಕನೂಳ ತಾಯಿಯ ಕಡೆಯಿಂದ ಧೈರ್ಯ ಪಡೆದುಕೊಳ್ಳಲು ಅವಳ ಕಡೆಗೊಂದು ತುಂಬಿದ ನೋಟ ಬೀರಿದನು..............

ಕನೂಳ ಪ್ರಶ್ನೆಯಿಂದ ಕನೂಳ ತಾಯಿ ಬಹುಶಃ ತೀರಾ ಕಸಿವಿಸಿಗೊಂಡಿದ್ದಳು. ತಕ್ಷಣ ಕನೂಗೆ ಹೇಳತೊಡಗಿದಳು– "ಮಗೂ ಇವರು ಅಂಕಲ್ಲು............. ನಿಮ್ಮ ತಂದೆ ಅವರು ಕಣಪ್ಪಾ...." ಹಾಗೆ ಹೇಳುತ್ತ ಗೋಡೆಯ ಮೇಲೆ ತೂಗುಹಾಕಿದ್ದ ಭಾವ ಚಿತ್ರದ ಕಡೆ ನೋಡಲು ಕನೂಗೆ ಸಂಜ್ಞೆ ಮಾಡಿದಳು.

ಕನೂ ಆ ಕಡೆಗೂ ನೋಡಿದಳು... ಅನಂತರ ಶ್ರೀ ಕೃಷ್ಣನ ಹೆಗಲಿಗೆ ಒರಗಿಕೊಂಡು– "ಇವರೂ ಪಪ್ಪಾನೇ...." ಎಂದಳು. ಶ್ರೀ ಕೃಷ್ಣನು ಮಗುವನ್ನು ಮಗುವನ್ನು ಬಿಗಿಯಾಗಿ ಅಪ್ಪಿಕೊಂಡನು.

ಯುದ್ಧದಲ್ಲಿ ಭಾಗವಹಿಸಿದ ಸೇನೆಯ ಅಧಿಕಾರಿಗಳ ವಿಧವೆಯರಿಗೆ ಸರಕಾರ ನೆರವು ನೀಡುತ್ತಿದೆ ಎಂದು ತಿಳಿದುಬಂತು. ಜಮೀನು, ಜಮೀನಿನಲ್ಲಿ ಮನೆಕಟ್ಟಿ ಕೊಳ್ಳಲು ಹಣ ಕೂಡ ಕೊಡುತ್ತಾರೆ. ಎಂದು ತಿಳಿದುಬಂತು. ಕನೂಳ ತಾಯಿ ಪಟ್ಟಣಕ್ಕೆ ಹೋಗಿ ಕೆಲವು ಫಾರಮ್‌ಗಳನ್ನು ತುಂಬಬೇಕಾಗಿತ್ತು. ಅದಕ್ಕಾಗಿ ಹೋದಳು. ಆದರೆ ವಾಪಸ್ ಬಂದಾಗ ಒಬ್ಬಳೇ ಇರಲಿಲ್ಲ. ಅವಳ ಜೊತೆಯಲ್ಲಿ ಕನೂಳ ತಂದೆಯ ರ‍್ಯಾಂಕಿನ ಒಬ್ಬ ಆಫೀಸರ್ ಇದ್ದನು. ಆ ಫಾರಂಗಳನ್ನು ತುಂಬುವಲ್ಲಿ ಹಾಗೂ ಇನ್ನಿತರ ಸರ್ಕಾರಿ ವಿವರಗಳನ್ನು ನೀಡುವಲ್ಲಿ ಅವಳಿಗೆ ಸಹಾಯ ಮಾಡುವ ಸಲುವಾಗಿ ಅವಳ ಜೊತೆ ಬಂದಿದ್ದನು........

ಶ್ರೀ ಕೃಷ್ಣನು ಮೊದಲಿನ ಹಾಗೇ ಬರುತ್ತಿದ್ದನು. ಕನೂಳೊಂದಿಗೆ ಇಸ್ಪೀಟ್ ಆಡುತ್ತಿದ್ದನು. ಆದರೆ ಕೆಲ ದಿನಗಳ ನಂತರ ಒಂದು ದಿನ ಅವನು ಇದ್ದಕ್ಕಿದ್ದಂತೆ 'ನಾವು ಇಲ್ಲಿ ಬೇಡ, ಹೊರಗಡೆ ಪಾರ್ಕನಲ್ಲಿ ಇಸ್ಪೀಟ್ ಆಡೋಣ" ಎಂದು ಕನೂಗೆ ಹೇಳಿದನು. ಹಾಗೂ ಅದೇ ರೀತಿ ಇಸ್ಪೀಟೆಲೆಗಳನ್ನು ಅವಳಿಗೆ ಹಂಚುತ್ತಿದ್ದನು. ಕನೂ ಗೆಲ್ಲುತ್ತಿದ್ದಳು ಮತ್ತು ನಗುತ್ತಿದ್ದಳು. ಆದರೆ ಶ್ರೀ ಕೃಷ್ಣನು ಈಗ ಮೊದಲಿನ ಹಾಗೆ ಅವಳೊಂದಿಗೆ ಸೇರಿ ನಗುತ್ತಿರಲಿಲ್ಲ. ಕನೂ ಇದ್ದಕ್ಕಿದ್ದಂತೆ ಆಡುವುದು ನಿಲ್ಲಿಸಿ" ಅಂಕಲ್ ! ನೀವು ನಗೋದಿಲ್ಲವೇ? ನೀವು ಸೋತು ಹೋಗ್ತೀರಲ್ಲಾ, ಅದಕ್ಕೆ ಅಲ್ವಾ" ಎಂದು ಕೇಳಿದಳು.

ಶ್ರೀಕೃಷ್ಣನಿಗೆ, ಕನೂಳ ಪ್ರಶ್ನೆಗಳನ್ನು ಕೇಳಿ ಕಣ್ಣುಗಳು ಒದ್ದೆಯಾದಂತಾಯಿತು. ಬಹುಶಃ ಒಳಗಿನಿಂದ ಉಕ್ಕಿ ಕಣ್ಣುಗಳು ತುಂಬಿಬಂದಿರಬೇಕು. ಅವನು ಕನೂಳನ್ನು ಬಿಗಿಯಾಗಿ ಅಪ್ಪಿಕೊಂಡನು. ಅವನ ಬಾಯಿಂದ – " ಕನೂ ಮರಿ, ನಾವಿಬ್ಬರೂ ಸೋತು ಹೋದೆವು ಅಂತ ಅನ್ನಿಸುತ್ತೆ" ಎಂಬ ಮಾತುಗಳು ಹೊರಬಿದ್ದವು.

ಕನೂಳ ತಾಯಿ ಆ ಆಫೀಸರ್‌ನೊಂದಿಗೆ ಮದುವೆ ಮಾಡಿಕೊಂಡಿದ್ದಾಳೆಂಬ ಸುದ್ದಿ ಪಟ್ಟಣದ ಒಂದು ಮೂಲೆಯಿಂದ– ಅಂದರೆ ಕಛೇರಿಯಿಂದ ಹೊರಬಿತ್ತು.

ಆದರೆ ಯಾವ ಸುದ್ದಿ ಕಛೇರಿಯಿಂದ ಎಷ್ಟೋ ದಿನಗಳ ನಂತರ ಹೊರಬಿತ್ತೋ ಅದನ್ನು ಶ್ರೀಕೃಷ್ಣನ ಮನಸ್ಸು ಅವನಿಗೆ ಅದೆಷ್ಟೋ ದಿನಗಳ ಮುನ್ನವೇ ನೀಡಿತ್ತು. ಈಗ ಕಛೇರಿಯೂ ಅದನ್ನು ನೀಡಿದ ಮೇಲೆ ಶ್ರೀಕೃಷ್ಣನು ಕಣ್ಣು ಕೆಳಗೆ ಹಾಕಿದನು........

ಇನ್ನೂ ಕೆಲವೇ ದಿನಗಳು ಕಳೆದಿದ್ದವು. ಒಂದು ಸಲ ಸಂಜೆ ಆಗಲೇ ತುಂಬ ಹೊತ್ತಾಗಿತ್ತು. ಶ್ರೀ ಕೃಷ್ಣನು ಕನುವಿನ ಮನೆಯ ಹತ್ತಿರ ಇದ್ದ ಪೇಟೆ ಕಡೆ ಹೋಗುತ್ತಿದ್ದನು. ಆಗ ಕನೂ ಒಬ್ಬಳೇ ಆ ಬಜಾರಿನಲ್ಲಿ ತಿರುಗಾಡುತ್ತಾ ಇದ್ದುದನ್ನು ಕಂಡನು. ಅವನಿಗೆ ಸುಮ್ಮನಿರಲು ಆಗಲಿಲ್ಲ. ಹತ್ತಿರ ಹೋಗಿ ಕನೂಳನ್ನು ಎತ್ತಿಕೊಂಡು "ನೀನು ಇಷ್ಟು ಹೊತ್ತಿನಲ್ಲಿ ಈ ಥಂಡಿಯಲ್ಲಿ ಏನು ಮಾಡ್ತಾ ಇದ್ದೀಯಾ?" ಎಂದು ಕೇಳಿದನು.

ಕನೂ ತನ್ನ ಕೈಯಲಿದ್ದ ಒಂದು ರೂಪಾಯಿ ನೋಟನ್ನು ಅವನಿಗೆ ತೋರಿಸುತ್ತ – "ಆ ಪಪ್ಪಾ ಇದ್ದಾರಲ್ಲ, ಅವರು ಇದನ್ನು ಕೊಟ್ಟು ಈ ದುಡ್ಡು ತಗೊಂಡು ಹೋಗಿ

ಹೊರಗಡೆ ಆಟ ಆಡು. ಬಜಾರ್‌ಗೆ ಹೋಗಿ ಗೋಲಿ ತಗೋ ಅಂತ ಹೇಳಿದರು"– ಎಂದಳು..............

ಶ್ರೀಕೃಷ್ಣನು ಒಂದು ಅಂಗಡಿಯಿಂದ ಚಾಕಲೇಟ್ ಖರೀದಿಸಿ ಕನೂಗೆ ಕೊಟ್ಟನು. ಆಮೇಲೆ ಅವಳನ್ನು ಎತ್ತಿಕೊಂಡು ಹೋಗಿ ಅವರ ಮನೆಯ ಬಾಗಿಲ ಹತ್ತಿರ ಬಿಟ್ಟನು. ಆದರೆ ಶ್ರೀಕೃಷ್ಣನು ಎಷ್ಟೋ ಹೊತ್ತು ಕತ್ತಲೆಯಲ್ಲಿ ನಿಂತುಕೊಂಡಿದ್ದು– "ನಾನು ನಿನಗೆ ಹೇಳುತ್ತಾ ಇದ್ದೆನಲ್ಲ ಕನೂ, ನಾವಿಬ್ಬರೂ ಸೋತು ಹೋದೆವು ಅಂತ" ಎಂದು ಕನೂಗೆ ಹೇಳುತ್ತಿದ್ದನೆಂದು ಅವಳಿಗೆ ತಿಳಿದಿರಲಿಲ್ಲ.

ಅದರ ನಂತರ ಯಾರ ದನಿಯೂ ಯಾರ ಬಳಿಗೂ ತಲುಪಲಿಲ್ಲ.

ಒಂದು ದಿನ ಕನೂಗೆ ತುಂಬ ಜ್ವರ ಬಂದು "ಪಪ್ಪಾ ಎಲ್ಲಿ" ಎಂಬ ಒಂದೇ ಮಾತನ್ನು ಮತ್ತೆ ಮತ್ತೆ ಹೇಳುತ್ತಾ ಇದ್ದಳು ಅನ್ನುವ ವಿಚಾರ ಹಾಗೂ ಅವಳ ತಾಯಿ ಅವರ ಕಡೆ ಕೈ ತೋರಿಸಿ "ಇವರೇ ನಿನ್ನ ಪಪ್ಪಾ" ಎಂದು ಹೇಳಿದರೆ ಕನೂ ತಲೆ ಅಲ್ಲಾಡಿಸುತ್ತಾ "ಇವರಲ್ಲ, ಆ ಇನ್ನೊಬ್ಬರು......" ಎಂದು ಹೇಳುತ್ತಿದ್ದಳೆಂಬುದು ಶ್ರೀ ಕೃಷ್ಣನಿಗೆ ಗೊತ್ತಿರಲಿಲ್ಲ.

ಅಪರಿಚಿತ

ಏಕೋ ಏನೋ ಲೋಕನಾಥನಿಗೆ ತನ್ನ ಬದುಕಿನ ಪ್ರತಿಯೊಂದು ಸಂಗತಿಯೂ ಯಾವುದಾದರೂ ಪ್ರಾಣಿಯ ಆಕೃತಿಯಲ್ಲಿ ನೆನಪಾಗುತ್ತಿತ್ತು. ಬಾಲ್ಯದ ಎಷ್ಟೋ ಕ್ಷಣಗಳು, ತೃಪ್ತಗೊಂಡ ಬೆಕ್ಕಿನ ಹಾಗೆ ಮಿಯಾಂವ್ ಮಿಯಾಂವ್ ಎನ್ನುತ್ತ ಅವನ ಬಳಿ ಸುಳಿದು ಹೋಗುತ್ತಿದ್ದವು. ಆ ಕ್ಷಣಗಳಾದರೋ, ಅವನ ತಾಯಿ ಈಗ ತಾನೇ ಹಾಲು ತುಂಬಿದ ಗಿಂಡಿಯಿಂದ ಹಾಲು ಕುಡಿಸಿದ್ದಾಳೇನೋ ಎನ್ನುವಂಥ, ಮೈಮೇಲಿನ ರೋಮಗಳನ್ನು ಅವನ ತಂದೆ ತಮ್ಮ ಕೈಗಳಿಂದ ನೇವರಿಸಿದ್ದಾರೇನೋ ಎನ್ನುವಂಥ ಕ್ಷಣಗಳು.

ಲೋಕನಾಥನ ತಮ್ಮ ಪ್ರೇಮನಾಥ ಈಗ ನೇವಿಯಲ್ಲಿದ್ದ. ಕಟ್ಟು ಮಸ್ತಾದ ದೇಹದ ಸುಂದರ ನವ ಯುವಕ. ಆದರೆ ಬಾಲ್ಯದಲ್ಲಿ ಅವನು ದೇಹದಿಂದ ಎಷ್ಟು ದುರ್ಬಲನಾಗಿದ್ದನೋ ಓದಿನಲ್ಲೂ ಅಷ್ಟೇ ದುರ್ಬಲನಾಗಿದ್ದನು. ಲೋಕನಾಥನು ಎಂದಾದರೂ ಪಾಠ ಹೇಳಿಕೊಡಲು ಪಕ್ಕದಲ್ಲಿ ಕೂಡಿಸಿಕೊಂಡರೆ, ಪುಸ್ತಕದ ಅಕ್ಷರಗಳ ಮೇಲೆ ನಿರಿಗೆಗಟ್ಟಿದ ಅವನ ಕಣ್ಣುಗಳು ಒಮ್ಮೆಗೇ ಒಟ್ಟಾಗಿ ಅರಳಿ ಲೋಕನಾಥನ ಮುಖದ ಕಡೆ ನೋಡ ತೊಡಗುತ್ತಿದ್ದವು. ಲೋಕನಾಥನು ಅವನಿಗೆ ಧೈರ್ಯತುಂಬುತ್ತಿದ್ದಾಗ. ಅವನ ಕಣ್ಣುಗಳು ವಿನಂತಿಸುತ್ತ ಕರಗತೊಡಗುತ್ತಿದ್ದುವು. ಈಗ ನೇವಿಯಲ್ಲಿ ಆಫೀಸರ್ ಆಗಿ ಹೊಸ ಹೊಸ ಬಂದರುಗಳಿಗೆ ಹೋಗುತ್ತಿದ್ದನು ಮತ್ತು ಅಲ್ಲಿ ಫೋಟೋಗಳನ್ನು ತೆಗೆದು ಲೋಕನಾಥನಿಗೆ ಕಳಿಸುತ್ತಿದ್ದನು. ಆಗ ಲೋಕನಾಥನಿಗೆ ಅವನೊಂದಿಗೆ ಕಳೆದ ಕ್ಷಣಗಳು ನೆನಪಾಗುತ್ತಿದ್ದುವು. ಯಾವ ರೀತಿ ಎಂದರೆ ಒಂದು ಸಣ್ಣ ನಾಯಿ ಮರಿ ಬಾಲ ಅಲ್ಲಾಡಿಸುತ್ತ ತನ್ನ ಒದ್ದೆ ನಾಲಿಗೆಯನ್ನು ಚಾಚಿ ಅಂಗೈಯನ್ನು ನೆಕ್ಕುತ್ತಿದೆಯೇನೋ ಎನ್ನುವಂತೆ.

ಅವನು ಯಾವುದಾದರೊಂದು ರಾಜಕೀಯ ಪಕ್ಷವನ್ನು ಸೇರಿಕೊಳ್ಳಬೇಕೆಂದಿದ್ದನು. ಅನುಭವ ಗಳಿಸಬೇಕೆಂಬ ಅವನ ಹಸಿವು ಅವನನ್ನು ಯಾವುದಾದರೊಂದು ಮೀಟಿಂಗಿಗೆ

ಎಳೆದೊಯ್ಯುತ್ತಿತ್ತು. ಗುಪ್ತಚರ ವಿಭಾಗದ ಪೋಲಿಸಿನವನು ಅದು ಯಾವಾಗ ಇವನ ಹೆಸರನ್ನು ತನ್ನ ಪಟ್ಟಿಯಲ್ಲಿ ಸೇರಿಸಿಕೊಂಡು ಇವನ ಬಗ್ಗೆ ಒಂದು ಉದ್ದವಾದ ವರದಿಯನ್ನು ಸಿದ್ಧಪಡಿಸಿದ್ದನೋ ಇವನಿಗೇ ಗೊತ್ತಿರಲಿಲ್ಲ. ಒಂದು ವೇಳೆ ಅವನ ಹೆಸರಿನ ಮುಂದಿರುವ ಡಿಗ್ರಿಗಳನ್ನು ನೋಡಿ ಗಾಬರಿಗೊಂಡು ಯಾವುದಾದರೂ ಒಂದು ಸರ್ಕಾರಿ ಕಛೇರಿ ಅವನಿಗೆ ನೌಕರಿಯ ಆಶ್ವಾಸನೆ ನೀಡಿತೆಂದರೆ, ಪೋಲಿಸರ ಈ ವರದಿ ಒಂದೇ ಏಟಿಗೆ ಅದನ್ನು ತಲೆಕೆಳಗು ಮಾಡಿಬಿಡುತಿತ್ತು. ಈಗೇನೋ ಲೋಕನಾಥ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದು ತನಗೊಂದು ಖಾಯಂ ಸ್ಥಾನವನ್ನು ಗಳಿಸಿಕೊಂಡಿದ್ದನು. ಆದರೆ, ಹದ್ದು, ಕೋತಿಗಳ ಮುಖ ನೋಡಿದ ಕೂಡಲೇ ಅವನಿಗೆ ಅವು ಅದೆಲ್ಲಿಂದಲೋ ಇದ್ದಕ್ಕಿದ್ದಂತೆ ಧಾವಿಸಿ ಬಂದು ಬಾಯಿ ಹಾಕಿ ಅವನ ಕೈಯಿಂದ ರೊಟ್ಟಿಯನ್ನು ಕಿತ್ತುಕೊಂಡು ಓಡಿಹೋದಂಥ ಚಿಂತೆಯ ಕ್ಷಣಗಳು ನೆನಪಾಗಿಬಿಡುತ್ತಿದ್ದುವು.

ಸರ್ಕಾರಿ ಕಛೇರಿಗಳ ನಿಧಾನಗತಿ ಅವನಿಗೆ ಜಂತುಹುಳುಗಳ ಹಾಗೆ ತೋರುತ್ತಿತ್ತು. ಯಾವುದಾದರೂ ಯಶಸ್ಸಿನ ಹಾದಿಯಲ್ಲಿ ಎದುರಾಗುವ ಅಸೂಯೆ ಅವನಿಗೆ ಹಾವಿನ ಬುಸುಗುಡುವಿಕೆಯ ಹಾಗೆ ತೋರುತ್ತಿತ್ತು. ಅನೇಕರ ಅಸೂಯೆ ಮತ್ತು ಹೊಟ್ಟೆಯ ಕಿಚ್ಚನ್ನು, ಎಮ್ಮೆ ತನ್ನ ದೇಹದ ಮೇಲೆ ಕೋಡುಗಳನ್ನು ಸಹಿಸಿರುವ ಹಾಗೆ ಇವನು ತನ್ನ ದೇಹದ ಮೇಲೆ ಸಹಿಸಿದ್ದನು. ತನ್ನ ರಕ್ತಸಂಬಂಧಿಗಳ ವ್ಯರ್ಥ ಕುಹಕ ಮತ್ತು ಕೋಪದ ಕ್ಷಣಗಳು ಅವನಿಗೆ ಬೀರುವಿನೊಳಕ್ಕೆ ನುಗ್ಗಿ ಅತಿಮುಖ್ಯವಾದ ಕಾಗದ ಪತ್ರಗಳನ್ನು ಹಲ್ಲಿನಿಂದ ಕಡಿಯುತ್ತಿರುವ ಇಲಿಗಳಂತೆ ತೋರುತ್ತಿತ್ತು.

ಲೋಕನಾಥನಿಗೆ ತನ್ನ ಹೆಂಡತಿಯೆಂದರೆ ತುಂಬ ಅಚ್ಚುಮೆಚ್ಚು. ಲೋಕನಾಥನ ಹೃದಯ ಹೇಳುತ್ತಿದ್ದುದೆಂದರೆ, ಈ ಹೆಂಡತಿಯನ್ನು ಅವನು ಕಥೆ ಕಾದಂಬರಿಗಳಲ್ಲಿ ಕಂಡುಬರುವ ಪ್ರೀತಿಗಿಂತ ಹೆಚ್ಚು ಪ್ರೀತಿಸಿದ್ದನು ಎಂದು. ಅವಳೊಂದಿಗೆ ಕಳೆದ ಮತ್ತು ಕಳೆಯುತ್ತಿರುವ ಗಂಟೆಗಳೆಂದರೆ, ಲೋಕನಾಥನ ದೃಷ್ಟಿಯಲ್ಲಿ ಎಳೆಯ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿರುವಂತೆ, ಲತಾ ಕುಂಜಗಳ ಒಂದು ಸಾಲು ಮೋಡಗಳನ್ನು ಸೀಳುತ್ತಾ ಹೋದಂತೆ, ಗೂಬೆಗಳ ಕೆಲ ಜೋಡಿಗಳು ಅವನ ಕಿಟಕಿಯಲ್ಲಿ ಬಂದು ಕುಳಿತು ಬಿಟ್ಟಂತೆ. ಗಿಳಿವಿಂಡು ಅವನ ಮನೆಯ ಅಂಗಳದ ಮರದ ಮೇಲೆ ಬಂದು ಕುಳಿತಂತೆ. ಅವನ ಹೆಂಡತಿ ಬರೆದ ಪತ್ರಗಳು ಮತ್ತು ಅವನು ಹೆಂಡತಿಗೆ ಬರೆದ ಪತ್ರಗಳು ಅವನಿಗೆ ಗೋಡೆಯ ಮರೆಯಲ್ಲಿ ಗೂಡು ಕಟ್ಟಲು ಹುಲ್ಲುಕಡ್ಡಿಗಳನ್ನು ಜೋಡಿಸುತ್ತಿರುವ ಪಾರಿವಾಳಗಳಂತೆ ತೋರುತ್ತಿದ್ದುವು.

ಮದುವೆಗೆ ಮುನ್ನ ಲೋಕನಾಥ, ತನ್ನ ಹೆಂಡತಿಗೆ ಅವಳ ಜನ್ಮದಿನದಂದು ಒಂದು ಪುಸ್ತಕವನ್ನು ಉಡುಗೊರೆಯಾಗಿ ನೀಡುತ್ತಿದ್ದನು. ಮದುವೆಯಾದ ಮೇಲೆ, ಪ್ರತಿವರ್ಷ ಅವಳ ಹುಟ್ಟು ಹಬ್ಬದಂದು ಅವಳ ತುಟಿಗಳನ್ನು ಚುಂಬಿಸಿ ನನ್ನ ಆಯಸ್ಸಿನ ಈ ವರ್ಷ ಒಂದು ಪುಸ್ತಕದ ಹಾಗೆ ನಿನಗೆ ನನ್ನ ಕಾಣಿಕೆ' ಎಂದು ಹೇಳುತ್ತಿದ್ದನು. ಹೀಗೆ ಲೋಕನಾಥ ತನ್ನ ಹೆಂಡತಿಗೆ ಇದುವರೆಗೆ ತನ್ನ ಆಯಸ್ಸಿನ ಇಪ್ಪತ್ತೈದು ವರ್ಷಗಳನ್ನು ಇಪ್ಪತ್ತೈದು ಪುಸ್ತಕಗಳಾಗಿ ಕಾಣಿಕೆಯಾಗಿ ನೀಡಿದ್ದನು. ತಾನು ಜೀವಂತವಾಗಿ ಇರುವವರೆಗೂ ತನ್ನ

ಬದುಕಿನ ಪ್ರತಿಯೊಂದು ವರ್ಷವನ್ನೂ ತೆರೆದ ಪುಸ್ತಕದ ಹಾಗೆ ಅವಳ ಪ್ರತಿ ಹುಟ್ಟುಹಬ್ಬದಂದು ಕಾಣಿಕೆಯಾಗಿ ನೀಡಿಯೇ ನೀಡುತ್ತೇನೆ ಎಂಬ ವಿಶ್ವಾಸ ಅವನಿಗಿತ್ತು.

ಒಂದೇ ಒಂದು ಸಲ ಮಾತ್ರ ಹೀಗಾಗಿತ್ತು: ಇಪ್ಪತ್ತೆರಡು ವರ್ಷಗಳ ಹಿಂದಿನ ಮಾತು. ಒಂದು ದಿನ ಬೆಳಿಗ್ಗೆ ಲೋಕನಾಥನು ಮಂಚದಿಂದ ಎದ್ದಾಗ ಶರೀರ ಸುಡುತ್ತಿತ್ತು, ರಾತ್ರಿ ಅವನು ಒಳ್ಳೆ ನಿದ್ದೆ ಮಾಡಿದ್ದ. ಅವನು ಒಂದು ಕೊಬರಿ ಕೇಕ್ ತಂದು ತನ್ನ ಅಲಮಾರಿ ನಲ್ಲಿಟ್ಟಿದ್ದ. ಈ ಸಲ ಅವನ ಹೆಂಡತಿಗೆ ಅದು ಹೇಗೋ ಏನೋ ಗೊತ್ತಿಲ್ಲ ಅವಳ ಜನ್ಮದಿನದ ನೆನಪಿರಲಿಲ್ಲ. ಬಹುಶಃ ಅದು ಈ ಕಾರಣಕ್ಕಿರಬೇಕು– ಬಹಳ ಹಳೆಯ ಗೆಳತಿಯೊಬ್ಬಳು ಅನೇಕ ವರ್ಷಗಳ ನಂತರ ಅಂದು ವಿದೇಶದಿಂದ ವಾಪಸ್ ಬರುತ್ತಿದ್ದಳು. ಹಾಗಾಗಿ ಅವಳಿಗೆ ತನ್ನ ಗೆಳತಿಯನ್ನು ಭೇಟಿಮಾಡಲು ಹೋಗುವುದಿತ್ತು. ಲೋಕನಾಥನು, ತನ್ನ ಹೆಂಡತಿಗೆ ಸರ್‌ಪ್ರೈಸ್ ಕೊಡಲು ಕೇಕ್ ತಂದು ಅಲಮಾರಿ ನಲ್ಲಿಟ್ಟಿದ್ದನು. ಆದರೆ ಬೆಳಿಗ್ಗೆ ಎದ್ದಾಗ ಹಣೆ ತುಂಬಾ ಜೋರಾಗಿ ನೋಯುತ್ತಾ ಇತ್ತು. ಹೆಂಡತಿಯೊಂದಿಗೆ ಚಾ ಕುಡಿದ. ಕೇಕನ್ನು ತಿಂದ. ಸರ್‌ಪ್ರೈಸ್‌ನ್ನೂ ಮಾಡಿದನು. ಅವಳ ತುಟಿಗಳನ್ನು ಮುತ್ತಿಟ್ಟು ತನ್ನ ಆಯುಸ್ಸಿನ ಒಂದು ವರ್ಷವನ್ನು ಪುಸ್ತಕದ ಹಾಗೆ ಕಾಣಿಕೆಯಾಗಿಯೂ ಕೊಟ್ಟ. ಆದರೆ ಆ ದಿನ ಇಡೀ ಹಗಲು ಮಂಚದಿಂದ ಏಳಲಾಗಲೇ ಇಲ್ಲ. ಆ ದಿನ ಅವನು ಯೋಚನೆ ಮಾಡುತ್ತಾ ಇದ್ದದ್ದು ಈ ಬಾರಿ ತನ್ನ ಹೆಂಡತಿಗೆ ಕೊಟ್ಟ ಪುಸ್ತಕದ ಒಂದು ಹಾಳೆ ಹರಿದಿದ್ದರ ಬಗ್ಗೆ. ಆ ರಾತ್ರಿ ಆ ಹರಿದ ಹಾಳೆ ಯಾವುದೋ ಪ್ರಾಣಿಯ ಮುರಿದು ಹೋದ ರೆಕ್ಕೆಗಳ ಹಾಗೆ ಅವನ ಎದೆಯಲ್ಲಿ ಅಲುಗಾಡುತ್ತಿತ್ತು.

ಲೋಕನಾಥನ ಜೀವನದಲ್ಲಿ ಕೆಲವು ಕ್ಷಣಗಳು ಹಾರಾಡುತ್ತಿರುವ ಮುಗ್ಧ ಪಾರಿವಾಳಗಳ ಹಾಗಿದ್ದವು. ಕೆಲವು ಸಾಕಿದ ಪಾರಿವಾಳಗಳಂತಿದ್ದವು. ಇನ್ನು ಕೆಲವು ಕಾಡು ಪ್ರಾಣಿಗಳ ಹಾಗಿದ್ದವು. ಆದರೆ ಯಾವುದೇ ಕ್ಷಣದಲ್ಲೂ ಅವನು ಎಂದು ಹೆದರಿರಲಿಲ್ಲ. ಬೆದರಿಯೂ ಇರಲಿಲ್ಲ. ಆದರೆ ಒಂದು– ಲೋಕನಾಥನ ಜೀವನದಲ್ಲಿ ಅಂಥದೊಂದು ಗಳಿಗೆಯೂ ಬಂದಿತ್ತು. ಅದು ಹೆಚ್ಚೆಂದರೆ, ಹದಿನೈದು ನಿಮಿಷದವರೆಗೆ ಅಷ್ಟೆ. ಒಂದು ಸಲ ಒಂದು ತೊಗಲು ಬಾವಲಿಯ ಹಾಗೆ ಅವನ ಮನಸ್ಸಿನಲ್ಲಿ ಅದು ಹಾರಿ ಬಂದಿತ್ತು. ಹಾಗೂ ಎಚ್ಚರಿಕೆಯ ಎಲ್ಲ ಕಿಟಕಿಗಳೂ ನಿಸ್ಸಂದೇಹವಾಗಿ ತೆರೆದಿದ್ದುವು. ಆದರೆ ಆ ಗಳಿಗೆ ಕುರುಡು ಬಾವಲಿಯ ಹಾಗೆ ಮತ್ತೆ ಮತ್ತೆ ಗೋಡೆಗಳಿಗೆ ತಾಗುತ್ತ, ಮತ್ತೆ ಮತ್ತೆ ಲೋಕನಾಥನ ಕಿವಿಗಳ ಮೇಲೆ ಎರಗುತ್ತಲೇ ಇತ್ತು. ಲೋಕನಾಥನು ಗಾಬರಿಗೊಂಡು ಕಿವಿಗಳ ಮೇಲೆ ಕೈಯಿಟ್ಟುಕೊಂಡು ಬಿಟ್ಟಿದ್ದನು. ಅದರಿಂದ ಕೆಲವು ನಿಮಿಷಗಳವರೆಗೆ ದನಿಗಳು ಕೇಳಿಸಿರಲಿಲ್ಲ. ಅವನ ಜಮೀರನ ದನಿಯೂ ಕೇಳಿಸಿರಲಿಲ್ಲ. ಆದರೆ ಒಂದು ದನಿ ಮಾತ್ರ ಈಗಲೂ ಕಿವಿದೆರೆಗಳ ಮೂಲಕ ಅವನಿಗೆ ಕೇಳಿಸುತ್ತಲೇ ಇತ್ತು. ಅಲ್ಲದೆ ರಕ್ತದ ಈ ದನಿಯಿಂದ ಬಿಡುಗಡೆ ಪಡೆಯಲು ಅವನು...

ಇಪ್ಪತ್ತೆರಡು ವರ್ಷಗಳು ಕಳೆದುಹೊಗಿದ್ದವು. ಆದರೆ ಆ ಗಳಿಗೆ; ಹತ್ತಿರ ಹತ್ತಿರ ಹದಿನೈದು ನಿಮಿಷಗಳ ಆ ಗಳಿಗೆ ಲೋಕನಾಥನಿಗೆ ಯಾವಾಗಲಾದರೂ ನೆನಪಾಯಿತೆಂದರೆ ಸಾಕು, ನೆನಪಾಗುವುದಲ್ಲ, ತೊಗಲು ಬಾವಲಿಯ ಹಾಗೆ ಅವನ ತಲೆಯ ಮೇಲೆ

ಹಾರಾಡುತ್ತಿತ್ತು.- ಲೋಕನಾಥನು ಗಾಬರಿಗೊಂಡು ಅದನ್ನು ಬೇಗನೆ ಹೊರಗೆ ಓಡಿಸಲು ಅದರ ಹಿಂದೆ ಓಡುತ್ತಿದ್ದನು.

ಈ ಬಾವಲಿಯಂಥ ಗಳಿಗೆ ಬರುವುದಕ್ಕೆ ನಿಶ್ಚಿತವಾದ ಸಮಯವೇನೂ ಇರುತ್ತಿರಲಿಲ್ಲ. ಯಾವಾಗಲಾದರೊಮ್ಮೆ ಫ್ರಾಯ್ಡ್‌ನ ಪುಸ್ತಕದ ಹಾಳೆ ತಿರುವಿಹಾಕುತ್ತಿದ್ದಾಗ ಅದು ಇದ್ದಕ್ಕಿದ್ದಂತೆ ಬಂದು ಬಿಡುತ್ತಿತ್ತು. ಇನ್ನು ಕೆಲವೊಮ್ಮೆ ಒಂದು ಒಳ್ಳೆಯ ಕವಿತೆಯನ್ನು ಓದುತ್ತಿರುವಾಗಲೂ ಅದು ಕಾಣಿಸಿಕೊಳ್ಳುತ್ತಿತ್ತು. ಒಮ್ಮೆ ಹೊಸದಾಗಿ ಜನಿಸಿದ ಮಗನ ಕುತ್ತಿಗೆಯ ಬಳಿ ಹಾಲಿನ ಸುವಾಸನೆಯನ್ನು ಹೀರುತ್ತಿರುವಾಗಲೂ ಲೋಕನಾಥನಿಗೆ ಆ ಬಾವಲಿ ಕಾಣಿಸಿಕೊಳ್ಳುತ್ತಿತ್ತು. ಇನ್ನು ಈಗ ಲೋಕನಾಥನ ದೊಡ್ಡಮಗಳು ಸುಚೇತ ತೌರುಮನೆಯಲ್ಲಿ ಬಾಣಂತನ ಮುಗಿಸಿಕೊಂಡು ಮಾವನ ಮನೆಗೆ ಹೊರಟಿದ್ದಳು. ಎಳೆಯ ಮುಗ್ಧ ಮಗುವನ್ನು ಜೋಲಿಯಲ್ಲಿ ಹಾಕಿಕೊಂಡು ತನ್ನ ತಂದೆಯ ಹತ್ತಿರ ಬಂದು ತನ್ನ ಚಿಕ್ಕ ತಂಗಿ ರೀಟಾಳನ್ನು ಕೆಲವು ದಿನಗಳ ಮಟ್ಟಿಗೆ ತನ್ನ ಜೊತೆ ತನ್ನ ಮಾವನ ಮನೆಗೆ ಕಳಿಸಿಕೊಡಬೇಕೆಂದು ಕೇಳಿದಳು. ಕಾರಣ, ಚಿಕ್ಕ ಮಗುವಿನ ನಿಗಾ ಮಾಡಲು ತನಗೊಬ್ಬಳಿಗೇ ಸಾಧ್ಯವಾಗದೇ ಹೋಗಬಹುದೆಂದು. ಹಾಗೇ ಹೇಳಿದಾಗ ಲೋಕನಾಥನ ಮುಖದ ಬಣ್ಣ ಇಳಿದು ಹೋಯಿತು. ಒಂದು ಬಾವಲಿ ಅವನ ತಲೆಯ ಮೇಲೆ ಹಾರಾಡತೊಡಗಿತ್ತು. ಅಂಗಳದಲ್ಲಿ ಕುಳಿತಿದ್ದ ಅವನ ಹೆಂಡತಿ, ಅವನ ಮಗಳು, ಅವಳನ್ನು ಕರೆದುಕೊಂಡು ಹೋಗಲು ಬಂದ ಅವಳ ಗಂಡ, ಜೋಲಿಯಲ್ಲಿ ಮಲಗಿದ್ದ ಮಗು, ಸ್ವಲ್ಪ ದೂರದಲ್ಲಿ ಕುಳಿತಿದ್ದ ಅವನ ಎರಡನೆಯ ಮಗಳು, ಅಂಗಳದಲ್ಲಿ ಕೇರಂ ಆಡುತ್ತಿದ್ದ ಅವನ ಮಗ ಎಲ್ಲರೂ ಮರೆಯಾಗಿ ಬಿಟ್ಟರು. ಎಚ್ಚರಿಕೆಯ ಎಲ್ಲ ಕಿಟಕಿಗಳೂ ತೆರೆದಿದ್ದುವು. ಆದರೆ ಗೋಡೆಗಳಿಗೆ ತನ್ನ ತಲೆ ತಾಗಿಸುತ್ತಿದ್ದ ಒಂದು ಕುರುಡು ಬಾವಲಿ ಲೋಕನಾಥನ ಕಿವಿಗಳ ಮೇಲೆ ಎರಗುತ್ತಿತ್ತು. ಮತ್ತು ಲೋಕನಾಥನು ಅದನ್ನು ಬೇಗ ಹೊರಗೆ ಓಡಿಸುವ ಸಲುವಾಗಿ ತನ್ನ ಮನಸ್ಸಿನ ನಾಲ್ಕು ಮೂಲೆಗಳತ್ತ ಓಡತೊಡಗಿದನು.

ಈ ಬಾವಲಿ ಒಂದು ನೆನಪು. ಇಪ್ಪತ್ತೆರಡು ವರ್ಷಗಳ ಹಿಂದಿನ ಸಂಗತಿ. ಲೋಕನಾಥನ ಮನೆಯಲ್ಲಿ ಮೊದಲ ಮಗುವಾದ ಇದೇ ಸುಚೇತಾ ಹುಟ್ಟಿದ್ದ ಸಮಯ. ಲೋಕನಾಥನ ಹೆಂಡತಿ ತೀರಾ ನಿಶಕ್ತಳಾಗಿದ್ದಳು. ತನ್ನ ಹೆಂಡತಿಯನ್ನು ತೌರುಮನೆಯಿಂದ ತನ್ನ ಮನೆಗೆ ಕರೆದುಕೊಂಡು ಹೋಗಿದ್ದನು. ಚಿಕ್ಕಮಗುವನ್ನು ಅವನಾಗಲಿ ಅವನ ಹೆಂಡತಿಯಾಗಲಿ ನೋಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಹದಿನೈದು ವರ್ಷದ ಉರ್ಮಿ ಅವನಿಗೆ ತದ್ವತ್ ತನ್ನ ತಂಗಿಯ ಹಾಗೆ ಅಥವಾ ಕೆಲವರ್ಷಗಳ ನಂತರ ಅವಳದೇ ವಯಸ್ಸಿನವಳಾಗಲಿರುವ ತನ್ನ ಮಗಳ ಹಾಗೆ ಕಾಣಿಸುತ್ತಿದ್ದಳು. ಕೆಲವೊಂದು ಸಲ ನಿದ್ರೆ ಮಾಡುತ್ತಿದ್ದಾಗ, ಉರ್ಮಿಯನ್ನು ಸುತ್ತಾಡಿಸಿಕೊಂಡು ಬರಲು ತನ್ನೊಂದಿಗೆ ಕರೆದೊಯ್ಯುತ್ತಿದ್ದನು. ಅವನ ಹೆಂಡತಿ ಇನ್ನೂ ಓಡಾಡುವ ಸ್ಥಿತಿಯಲ್ಲಿರಲಿಲ್ಲ. ಎಲ್ಲಾದರೂ ಎತ್ತರವಾದ ಮರಗಳ ಕೆಳಗೆ, ಹುಲ್ಲುಹಾಸಿನ ಮೇಲೆ ಕುಳಿತುಕೊಳ್ಳುತ್ತಿದ್ದಳು. ಉರ್ಮಿ ಓಡುತ್ತಾ ಇದ್ದರೆ, ಲೋಕನಾಥ್, ಅವಳು ಜಾರುವುದನ್ನು ತಪ್ಪಿಸಲು ಅವಳ ಕೈ ಹಿಡಿದುಕೊಳ್ಳುತ್ತಿದ್ದನು. ಈ ಉರ್ಮಿಗೆ ತನ್ನ ಕೈಯಿಂದ ಯಾವಾಗಲಾದರೂ ಪೆಟ್ಟು ಬೀಳಬಹುದು. ಎಂದು ಎಂದೂ

ಅಂದುಕೊಂಡಿರಲಿಲ್ಲ. ಒಮ್ಮೆ ಹೊರಗಡೆ ಸಂಚಾರಕ್ಕೆ ಹೋಗುವ ಹೊತ್ತಿನಲ್ಲಿ ತನ್ನ ಮಗುವಿನ ಕೊರಳನ್ನು ಮುತ್ತಿಟ್ಟನು. ನಿದ್ರೆ ಮಾಡುತ್ತಿದ್ದ ಮಗುವಿನ ಹತ್ತಿರ ಬಡೇಸೋಪು ಬೆರಸಿದ ಹಾಲಿನ ಮತ್ತು ಪೌಡರಿನ ವಿಚಿತ್ರ ವಾಸನೆ ಬರುತ್ತಿತ್ತು. ಮಗುವಿನ ತಾಯಿಯೂ ಮಗುವಿನ ಹತ್ತಿರ ಮಲಗಿದ್ದಳು. ಲೋಕನಾಥ ಅವಳ ಕಿವಿಯ ಹತ್ತಿರ ಹೋಗಿ ಮೆಲ್ಲಗೆ ತನ್ನ ತುಟಿಯನ್ನು ಸ್ಪರ್ಶಿಸಿದನೋ ಇಲ್ಲವೋ ಮಗುವಿನ ಹತ್ತಿರ ಬರುತ್ತಿದ್ದ ವಾಸನೆ ತನ್ನ ಹೆಂಡತಿಯ ಕೂದಲಿನಿಂದಲೂ ಬಂದಿತು. ಮತ್ತೆ ಅದೇ ದಿನ ನಡೆದ ಸಂಗತಿ. ಹೊರಗಡೆ ತಿರುಗಾಡುತ್ತ ಇರುವಾಗ, ಉರ್ಮಿಯ ಕೈ ಹಿಡಿದುಕೊಂಡು, ಜಾರು ಬಂಡೆಯ ಮೇಲೆ ಹತ್ತುತ್ತಿರುವಾಗ ಮೇಲೆ ಹತ್ತಲು ಅವಳಿಗೆ ಆಧಾರವಾಗಿ ನೆರವು ನೀಡಿದಾಗ, ಅವನ ಹೆಗಲನ್ನು ಸ್ಪರ್ಶಿಸುತ್ತಿದ್ದ ಅವಳ ಉಸಿರಿನಲ್ಲೂ ಅದೇ ವಾಸನೆ ಬಂದಿತು. ಲೋಕನಾಥ ತನ್ನ ಹೆಂಡತಿಯನ್ನು ತಮಾಷೆ ಮಾಡುತ್ತ ಬರುತ್ತಿದ್ದವನು– 'ಮಗುವಿಗೆ ಹಾಕುವ ಬಡೇ ಸೋಪಿನ ಹಾಲು ನಿಮ್ಮಿಬ್ಬರಿಗೂ ಚೆನ್ನಾಗಿ ಹಿಡಿಸಿರುವ ಹಾಗಿದೆ.' ಎಂದು ಉರ್ಮಿಯ ಹತ್ತಿರವೂ ಹೇಳಿದನು.

ಇಲ್ಲಿಂದ ಮುಂದಕ್ಕೆ ಏನಾಯಿತು, ಹೇಗಾಯಿತು ಅಂತ ಲೋಕನಾಥನಿಗೆ ಗೊತ್ತಾಗಲಿಲ್ಲ. ಬಡೇ ಸೋಪಿನ ಹಾಲಿನ ಪೌಡರಿನ, ಮಾಂಸಲವಾದ ಚರ್ಮದ ಹೆಣ್ಣಿನ ಅಂಗಗಳ ಹಾಗೂ ಎತ್ತರದ ಮರಗಳ ವಾಸನೆ ಅವನ ಗಂಟಲನ್ನು ಒತ್ತತೊಡಗಿತು. ಕಾಡಿನ ಮುಕ್ತ ವಾತಾವರಣದಲ್ಲೂ ಅವನಿಗೆ ಉಸಿರುಕಟ್ಟಿದ ಹಾಗೆ ಆಗತೊಡಗಿತು. ಈ ವಾಸನೆ ಮಂಜಿನ ಹಾಗೆ ಮೇಲೆದ್ದು ಅವನ ಗಂಟಲಿನ ಮೂಲಕ ಸಾಗಿ ಹಣೆಯ ಮೆಲೆಲ್ಲಾ ವ್ಯಾಪಿಸಿಕೊಂಡಿತು. ಮತ್ತೆ ಎಲ್ಲರ ಆಕೃತಿಗಳೂ – ಉರ್ಮಿಯ ಆಕೃತಿ ಅವನ ಹೆಂಡತಿಯ ಆಕೃತಿ ಅವನ ಮಕ್ಕಳ ಆಕೃತಿಗಳು – ಹೀಗೆ ಎಲ್ಲರ ಆಕೃತಿಗಳೂ ಆ ಮಂಜಿನ ಮರೆಯಲ್ಲಿ ಅಡಗಿಹೋದವು. ಆಕೃತಿಗಳು ಇರುವುದು ಗೊತ್ತಾಗುತ್ತಿತ್ತು. ಆದರೆ ಗುರುತು ಹಿಡಿಯಲಾಗುತ್ತಿರಲಿಲ್ಲ. ಹತ್ತಿರದಲ್ಲೆಲ್ಲೂ ವಾಸದ ಮನೆಗಳಿಲ್ಲ ಎಂದು ಲೋಕನಾಥನಿಗನ್ನಿಸಿತು.

ಎಲ್ಲಿಯವರೆಗೆ ಕಣ್ಣು ಹಾಯುತ್ತಿತ್ತೋ ಅಲ್ಲಿಯವರೆಗೂ ಬರೀ ಭಗ್ನಾವಶೇಷಗಳೇ ಇದ್ದವು. ನಂತರ ಯಾವುದೋ ಭಗ್ನಾವಶೇಷದಲ್ಲಿ ಬಾವಲಿಗಳ ತೀಕ್ಷ್ಣವಾಸನೆ ಹೊಮ್ಮಿ ಅದು ಅವನ ತಲೆಗೆ ವ್ಯಾಪಿಸಿತು. ಆಮೇಲೆ ಯಾವುದೋ ಗೋಡೆಯ ಮರೆಯಿಂದ ಹಾರಿದ ಬಾವಲಿಯೊಂದು, ಅವನ ಕಿವಿಗಳ ಮೇಲೆ ಎರಗಲಿತ್ತು. ಅವನು ಗಾಬರಿಗೊಂಡು ಎರಡೂ ಕೈಗಳನ್ನು ಕಿವಿಯ ಮೇಲೆ ಇಟ್ಟುಕೊಂಡು ಬಿಟ್ಟನು. ಕೆಲವು ನಿಮಿಷಗಳವರೆಗೆ ಅವನಿಗೆ ಯಾವುದೇ ಧ್ವನಿ ಕೇಳಿಬರಲಿಲ್ಲ. ಜಮೀರನದೂ ಕೂಡ. ಆದರೆ ಒಂದು ದನಿ ಮಾತ್ರ ಅವನಿಗೆ ಈಗಲೂ ಕೇಳಿ ಬರುತ್ತಿತ್ತು. ಕೇಳಿ ಬರುತ್ತಿದ್ದದ್ದು ಕಿವಿಗಳಿಂದಲ್ಲ. ಆದರೆ ರಕ್ತದ ಕಣಕಣದಿಂದ ದನಿ ಹೊರಹೊಮ್ಮುತ್ತಿರುವಂತೆ ತೋರುತ್ತಿತ್ತು.

ಇದೊಂದು ರೀತಿಯಲ್ಲಿ ಬಹುದೊಡ್ಡ ಒಳಸಂಚಿನತ್ತಿತ್ತು. ಜಮೀರನ ದನಿಗೆ ವಿರುದ್ಧವಾಗಿ ರಕ್ತದ ದನಿಯ ಒಳಸಂಚಿತ್ತು. ಆಕೃತಿಯ ಪ್ರತಿ ಗುರುತಿಗೆ ವಿರುದ್ಧವಾಗಿ ಒಂದು ರಕ್ತದ ಬಿಂದುವಿನ ಒಳಸಂಚು. ಕಾಡಿನ ಮುಕ್ತ ವಾತಾವರಣದ ವಿರುದ್ಧ ಒಂದು ವಾಸನೆಯ ಒಳ ಸಂಚಾಗಿತ್ತು. ಪ್ರತಿಯೊಂದು ಜನವಸತಿಗೆ ವಿರುದ್ಧವಾಗಿ ಪ್ರತಿಯೊಂದು ಭಗ್ನಾವಶೇಷದ ಒಳಸಂಚಾಗಿತ್ತು.

ಲೋಕನಾಥನಿಗೆ ಯಾರ, ಯಾವ ಒಳಸಂಚನ್ನೂ ಅರ್ಥಮಾಡಿಕೊಳ್ಳಲಾಗಲಿಲ್ಲ. ಹದಿನೈದು ನಿಮಿಷಗಳ ಆ ಸಮಯ ಅವನ ವಯಸ್ಸಿನಿಂದ ಕಳಚಿಕೊಂಡು ಬಂದು ಬೇರ್ಪಟ್ಟ ಅಂಗದ ಹಾಗೆ ದೂರ ಹೋಗಿ ಬಿದ್ದಾಗ, ಲೋಕನಾಥನಿಗೆ ತನ್ನ ಇಡೀ ಜೀವನವೇ ವಿಕಲಾಂಗವಾಗಿ ಬಿಟ್ಟಿದ್ದಿತು.

ಆ ಸಂಜೆ ಅವನು ಮನೆಗೆ ಹಿಂತಿರುಗಿದಾಗ, ಅವನ ಹೆಂಡತಿಯ ಕೋಣೆಯಲ್ಲಿ ಒಂದು ಮೇಣದ ಬತ್ತಿ ಉರಿಯುತ್ತಿತ್ತು. ಆ ಮೇಣದ ಬತ್ತಿಯ ಜ್ವಾಲೆ ಅವನ ಮುಖದ ಕಡೆಗೆ ನೋಡಿ, ಬೇಗ ಆರಿಹೋಗಲು ಬಯಸುತ್ತಿದೆಯೇನೋ ಎನ್ನುವಂತೆ, ಥರಗುಟ್ಟುತ್ತಿರುವಂತೆ ತೋರಿತು.

ರಾತ್ರಿ ಆವರಿಸಿಕೊಂಡಾಗ, ಕತ್ತಲೆ ಲೋಕನಾಥನಿಗೆ ತುಂಬ ಹಿತವೆನಿಸಿತು. ಆಮೇಲೆ ತನ್ನ ಎದೆಯಲ್ಲೂ ಒಂದು ಕತ್ತಲೆ ಕವಿಯುತ್ತಿದೆ ಎನಿಸಿತು. ಕತ್ತಲೆಯ ಒಂದು ತುಣುಕು ರಾತ್ರಿಯ ಕತ್ತಲೆಯಿಂದ ಕಡಿದುಕೊಂಡು ಬೇರೆ ಹೋಗಿ ಬಿದ್ದಿತ್ತು. ರಾತ್ರಿಯ ಕತ್ತಲೆ ಕೆರೆಯ ನೀರಿನಂತೆ ಹರಡಿಕೊಂಡು ನಿಂತಿತ್ತು. ಆದರಿಂದ ಒಂದು ವಾಸನೆ ಹೊರಡುತ್ತಿತ್ತು. ಆ ರಾತ್ರಿ ಲೋಕನಾಥನಿಗೆ ಏನೇನೋ ವಿಚಾರಗಳು ಬಂದವು. ಆ ಎಲ್ಲ ವಿಚಾರಗಳು ಈ ಕೆರೆಯಲ್ಲಿ ಈಜುತ್ತಿರುವ ಸೊಳ್ಳೆಗಳಂತಿದ್ದವು.

ಮರುದಿನ ಅವನು ಬೆಟ್ಟದಿಂದ ವಾಪಸ್ ಬಂದು ಬಿಟ್ಟನು. ಊರ್ಮಿಯನ್ನು ಅವಳ ತಂದೆ ತಾಯಿಗಳ ಹತ್ತಿರ ಬಿಟ್ಟು ಬಂದಿದ್ದನು. ಮತ್ತೆ ಊರ್ಮಿಯನ್ನು ಅವಳ ವಿವಾಹದ ದಿನ ತುಂಬಿದ ಕಲ್ಯಾಣ ಮಂಟಪದಲ್ಲಿ ಭೇಟಿಮಾಡಿದ್ದು ಬಿಟ್ಟರೆ ಮತ್ತೆಂದೂ ಭೇಟಿಯಾಗಿರಲಿಲ್ಲ. ಇದೊಂದು ರೀತಿಯಲ್ಲಿ ತನ್ನ ಇಡೀ ಜೀವಮಾನ ಪರ್ಯಂತ ತಾನು ಗೈರು ಹಾಜರಾಗಿದ್ದುಕೊಂಡು ಅವಳ ಕ್ಷಮೆ ಯಾಚಿಸುವ ರೀತಿ.

'ಅಪ್ಪಾಜಿ' ತನ್ನ ಒಂದು ಕೋರಿಕೆಯಿಂದ ಸುಚೇತ ಲೋಕನಾಥನ ಮೌನವನ್ನು ಮುರಿಯ ಬಯಸಿದಳು. ಮೆಲ್ಲಗೆ ಹೇಳಿದಳು – "ಏನು ಯೋಚನೆ ಮಾಡುತ್ತಿದ್ದೀರಿ ಅಪ್ಪಾಜಿ? ನೀವು ಇಲ್ಲ ಅಂತ ಹೇಳುವುದಿಲ್ಲ. ಅಂತ ನನಗೆ ಗೊತ್ತೇ ಇದೆಯಲ್ಲ"

"ಏನು?" ಲೋಕನಾಥ್ ಅತ್ಯಂತ ಆಶ್ಚರ್ಯದಿಂದ ತನ್ನ ಮಗಳ ಕಡೆ ನೋಡಿದ. ಈ ಮಗಳು ಅವನ ಅತ್ಯಂತ ಮುದ್ದಿನ ಮಗಳು. ಅವಳ ಮಾತನ್ನು ಅವನು ಎಂದೂ ತಳ್ಳಿಹಾಕಿರಲಿಲ್ಲ. ಆದರೆ ಅವನಿಗೆ ಆಶ್ಚರ್ಯವೆನಿಸಿದ್ದು ಯಾವುದಾದರೂ ಒಂದು ಭವಿತವ್ಯವು ಕಾಲದೊಂದಿಗೆ ಸೇರಿಕೊಂಡು, ಒಂದು ಒಳಸಂಚು ಹೂಡಲು ಹೊರಟಿದ್ದರೆ, ತನ್ನ ಮಗಳಿಗೆ ಈ ಒಳಸಂಚಿನ ತಿಳಿವು ಏಕೆ ಹತ್ತುತ್ತಿಲ್ಲ ಎಂದು.

ಸುಚೇತಾ ಮತ್ತೆ ಹೇಳಿದಳು " ರೀಟಾಳನ್ನು ನಾನು ಸ್ವಲ್ಪ ದಿನ ನನ್ನ ಜೊತೆ ಕರೆದುಕೊಂಡು ಹೋಗಲೇ? ಈ ಸೋನಿಯನ್ನು ನೋಡಿಕೊಳ್ಳಲು ನನ್ನ ಕೈಯಲ್ಲಿ ಆಗುವುದಿಲ್ಲ" ಅವಳ ಜೊತೆಗೆ ಅವರಮ್ಮನೂ ದನಿಗೂಡಿಸಿದಳು– "ಒಂದು ತಿಂಗಳು ತಾನೆ, ರಾಜೇಂದ್ರ ಕೂಡ ಹೆಚ್ಚು ಒತ್ತಾಯ ಮಾಡುತ್ತಾ ಇದ್ದಾರೆ"

'ರಾಜೇಂದ್ರ ಬಹಳ ಲಕ್ಷಣವಾಗಿದ್ದಾನೆ' ಲೋಕನಾಥನ ಮನಸ್ಸಿಗೆ ಈ ವಿಚಾರ ಬಂತು. ಮತ್ತೆ ತನ್ನ ಹರೆಯದ ಆಕೃತಿಯ ಕಡೆ ನೋಡಿಕೊಳ್ಳುತ್ತ ಅವನಿಗನ್ನಿಸಿದ್ದೆಂದರೆ,

ಯಾವುದೋ ಭವಿತವ್ಯ ಒಂದು ಹುಚ್ಚುನಾಯಿಯ ಹಾಗೆ ಈ ಒಳ್ಳೆಯ ಹುಡುಗನನ್ನು ಕಚ್ಚುವುದಕ್ಕೆ ಚಡಪಡಿಸುತ್ತ ಇತ್ತು. ಹುಚ್ಚುನಾಯಿಯಿಂದ ಅವನನ್ನು ತಾನು ಉಳಿಸ ಬಲ್ಲೆನೇನೋ ಎನ್ನುವಂತೆ ಅವನು ಸೆಟೆದು ನಿಂತನು. ರಾಜೇಂದ್ರನು – "ಮುಂದಿನ ತಿಂಗಳು ಸ್ವತಃ ನಾನೇ ಬಂದು ರೀಟಾಳನ್ನು ಕರೆದುಕೊಂಡು ಇಲ್ಲಿ ಬಿಟ್ಟುಹೋಗ್ತೀನಿ" ಎಂದು ನಿಧಾನವಾಗಿ ಹೇಳಿದನು.

"ಇಲ್ಲ, ಖಂಡಿತಾ ಸಾಧ್ಯವಿಲ್ಲ" ಎಂದು ಲೋಕನಾಥನು ಜೋರು ದನಿಯಿಂದ ಹೇಳಿದನು. ಎಲ್ಲರೂ ಗಾಬರಿಯಿಂದ ಲೋಕನಾಥನ ಕಡೆ ನೋಡಿದರು. ಅನಂತರ ಒಬ್ಬರ ಮುಖ ಒಬ್ಬರು ನೋಡಿಕೊಂಡರು– ತಾವು ಕೇಳಿದ್ದು ಲೋಕನಾಥನ ದನಿ ಯನ್ನಲ್ಲವೇನೋ, ಯಾರೋ ಒಬ್ಬ ಭಾರೀ ಅಪರಿಚಿತನ ದನಿಯನ್ನೇನೋ ಎನ್ನುವಂತೆ.

ರಂಧ್ರಗಳು

ಶೀನಾ ತನ್ನ ಎದೆಯಲ್ಲೊಂದು ರಂಧ್ರವನ್ನು ಅಡಗಿಸಿಕೊಂಡಿದ್ದಾಳೆಂದು ಯಾರಿಗೂ ಗೊತ್ತಿಲ್ಲ. ಅದು ದೇವರಿಗೆ ಮತ್ತು ಡಾ.ರಾವ್ ಅವರಿಗೆ ಮಾತ್ರ ಗೊತ್ತಿದ್ದ ಸಂಗತಿ.

ಡಾ.ರಾವ್ ಅವರು ವೀರೇಂದ್ರನ ಎಕ್ಸ್-ರೇ ಮುಂದಿಟ್ಟುಕೊಂಡು ಅವನ ಹೆಂಡತಿ ಶೀನಾ ಒಬ್ಬಳನ್ನೇ ಕರೆದು ಕೂಡಿಸಿಕೊಂಡು ಹೇಳಿದ್ದರು– "ವೀರೇಂದ್ರ ಇನ್ನು ಎಷ್ಟು ದಿನ ಬದುಕಿರುತ್ತಾನೆ ಅಂತ ಹೇಳಕ್ಕಾಗಲ್ಲ. ಇನ್ನು ಕೆಲವು ತಿಂಗಳು ಕಳೆಯಬಹುದು. ಆದರೆ ಏನೇ ಆದರೂ ಕೆಲವು ದಿನಗಳು ಮಾತ್ರ. ಹೃದಯದ ನಾಲ್ಕು ಭಾಗಗಳಿಗಿರುವ ಕನೆಕ್ಟಿಂಗ್ ವಾಲ್ವ್‌ಗಳಲ್ಲಿ ಒಂದರಲ್ಲಿ ಒಂದು ರಂಧ್ರ ಇದೆ. ಈಗ್ಗೆ ಕೆಲವು ವಾರಗಳ ಹಿಂದೆ ತೆಗೆಯಲಾದ ಎಕ್ಸ್-ರೇಯಲ್ಲಿ ಅದು ಇದೆಯೋ ಇಲ್ಲವೋ ಎನ್ನುವಷ್ಟು ಸೂಕ್ಷ್ಮವಾಗಿ ಇತ್ತು. ಆದರೆ ಈ ಸಲದ ಎಕ್ಸ್-ರೇಯಲ್ಲಿ ಅದು ತುಂಬಾ ದೊಡ್ಡದಾಗಿ ಬಿಟ್ಟಿದೆ" ಸ್ವಲ್ಪ ಹೊತ್ತಿನ ನಂತರ, ಡಾ.ರಾವ್ ತಣ್ಣನೆಯ ವ್ಯಾವಹಾರಿಕ ದನಿಯಲ್ಲಿ ಹೇಳಿದರು– ಒಂದು ವೇಳೆ ಈ ರಂಧ್ರ ಸಣ್ಣದಾಗೇ ಇದ್ದಿದ್ದರೆ, ಅವರಿಗೆ ಸುಸ್ತಂತೂ ಇದ್ದೇ ಇರುತ್ತೆ, ಇನ್ನೊಂದಷ್ಟು ವರ್ಷ ಬದುಕಬಹುದು ಅನ್ನೋ ಹಾಗಿರುತ್ತಿತ್ತು. ಆದರೆ..........ಎಂದು ನಿಲ್ಲಿಸಿದರು.

ಡಾ.ಅವರು 'ಆದರೆ'ಯ ನಂತರ ಮುಂದಕ್ಕೆ ಏನೂ ಹೇಳಬೇಕಾಗಿರಲಿಲ್ಲ. ತನ್ನ ಗಂಡನ ಹೃದಯದ ರಂಧ್ರ ದೊಡ್ಡದಾಗುತ್ತಾ ಇದೆ ಮತ್ತು ಈ ರಂಧ್ರದ ಮೂಲಕ ಅವನ ಆಯಸ್ಸು ಸೋರಿ ಹೋಗುತ್ತಿದೆ ಎಂದು ಶೀನಾಳಿಗೆ ಅರ್ಥವಾಯಿತು. "ಅದೃಷ್ಟ ಹೀಗಿದೆ ಅಂದ ಮೇಲೆ, ದಯವಿಟ್ಟು ನೀವೊಂದು ಕೆಲಸ ಮಾಡಿ. ಇಷ್ಟು ದಿನ ಅದು ಹೇಗಿತ್ತೋ ಇನ್ನು ಮುಂದೆಯೂ ಹಾಗೇ ಇರೋದಕ್ಕೆ ಬಿಟ್ಟುಬಿಡಿ. ನೀವು ವೀರೇಂದ್ರರಿಗೆ ಏನೂ ಹೇಳಬೇಡಿ. ಕೆಲವು ತಿಂಗಳಾಗಬಹುದು, ಕೆಲವೇ ದಿನ ಆಗಬಹುದು. ನಾನು ಅವರ ಉಸಿರು ಇರೋವರೆಗೂ ಅವರ ಜೊತೇಲಿ ನಾವಿಬ್ಬರೂ ಜೀವಮಾನದ ಕೊನೆ ತನಕ ಜೊತೆಯಲ್ಲೇ ಇರುತ್ತೇವೇನೋ ಎನ್ನುವ ಹಾಗೆ ಇದ್ದುಬಿಡುತ್ತೀನಿ" ಎಂದು ಡಾಕ್ಟರಿಗೆ

ಹೇಳಿದಳು. ಅವಳ ಮಾತನ್ನು ಕೇಳಿದ ಮೇಲೆ, ಡಾ.ರಾವ್ ಅವರಿಗೆ ಶೀನಾ ತನ್ನ ಎದೆಯಲ್ಲಿ ಆ ರಂಧ್ರವನ್ನು ಬಚ್ಚಿಟ್ಟುಕೊಂಡಿದ್ದಾಳೆ. ಜಗತ್ತಿನ ಯಾವುದೇ ಎಕ್ಸ್-ರೇ ಅದನ್ನು ಭೇದಿಸಲಾರದು ಎನ್ನಿಸಿತು.

ಸಾವು ತನ್ನ ಮನೆಯ ವಿಳಾಸವನ್ನು ಕೇಳುತ್ತಿದೆ ಎನ್ನುವುದು ಶೀನಾಳಿಗೆ ಮನದಟ್ಟಾಯಿತು. ಇನ್ನು ಎಷ್ಟು ದಿನಗಳವರೆಗೆ ಅದಕ್ಕೆ ನಮ್ಮ ಮನೆ ಗೊತ್ತಾಗೋಲ್ಲವೋ, ಇನ್ನು ಎಷ್ಟು ದಿನಗಳವರೆಗೆ ಅದು ನಮ್ಮ ಮನೆಯ ಬಾಗಿಲು ತಟ್ಟುವುದಿಲ್ಲವೋ ಅಲ್ಲಿಯವರೆಗೂ ಮನೆಯನ್ನು ಸಜ್ಜುಗೊಳಿಸಿಕೊಂಡು, ಅದು ಯಾವ ರೀತಿ ವೀರೇಂದ್ರನ ಜೊತೆ ಇರಬೇಕೆಂದರೆ, ಒಬ್ಬ ಪುರುಷ ಮತ್ತು ಒಬ್ಬ ಮಹಿಳೆ ಮೊದಲನೇ ಸಲಕ್ಕೆ ಈ ಜಗತ್ತಿನಲ್ಲಿ ಸಂಸಾರ ಹೂಡುತ್ತಿದ್ದಾರೇನೋ ಎನ್ನುವ ಮಟ್ಟಿಗೆ ಇರಬೇಕು ಎಂದು ಶೀಲಾ ಮನಸ್ಸಿನಲ್ಲಿ ಯೋಚಿಸಿದಳು–

"ಮೃತ್ಯು ಅವಸರ ಮಾಡುತ್ತಿದೆ ಎಂದು ವೀರೇಂದ್ರರಿಗೆ ಖಂಡಿತಾ ಗೊತ್ತಿರಲಿಲ್ಲ. ಆದರೂ ಅವರ ಮನಸ್ಸಿಗೆ ಅದೇನೆನ್ನಿಸಿತೋ ಇರೋ ಬರೋ ದುಡ್ಡೆಲ್ಲಾ ಒಟ್ಟುಗೂಡಿಸಿ, ನನಗೋಸ್ಕರ ಈ ಮನೆ ತಗೊಂಡರು" ಅವಳಿಗೆ ಹಳೆಯ ಸಣ್ಣ ಪುಟ್ಟ ಸಂಗತಿಗಳೆಲ್ಲಾ ಒಂದೊಂದೇ ನೆನಪಾದುವು. 'ಐದು ವರ್ಷ ಆಗಿತ್ತಷ್ಟೆ ಕೆಲಸಕ್ಕೆ ಸೇರಿ. ಅಷ್ಟರಲ್ಲಿ ಉಳಿಸಿದ್ದ ಅಲ್ಪಸ್ವಲ್ಪ ಹಣ, ಅವರ ಅಪ್ಪ ಅಮ್ಮನಿಂದ ಸ್ವಲ್ಪ ಹಣ ಸಹಾಯ ತೆಗೆದುಕೊಂಡು, ಇನ್ನು ಆಫೀಸಿನ ಸಹೋದ್ಯೋಗಿಗಳ ಕಡೆಯಿಂದ ಸ್ವಲ್ಪ ತೆಗೆದುಕೊಂಡು ನನಗೋಸ್ಕರ ಈ ಪುಟ್ಟ ಮನೆ ಖರೀದಿಸಿದರು. ವೀರೇಂದ್ರರಿಗೆ ರೇಷ್ಮೆ ಬಣ್ಣದ ಪರದೆಗಳೆಂದರೆ ಇಷ್ಟ. ಆದರೆ ಅವುಗಳನ್ನು ಕೊಳ್ಳಲು ಹಣ ಉಳಿಯಲಿಲ್ಲ. ಮನೆ ಎರಡು ಕೊಠಡಿಗಳದ್ದೇ ಆಗಿದ್ದರೂ ಅದರಲ್ಲಿರುವ ಇಪ್ಪತ್ತು ಅಡಿಗಳಷ್ಟು ಸಣ್ಣ ತೋಟದಲ್ಲಿ ಕಲ್ಕತ್ತಾ ಲಾನ್ ಬೆಳೆಸಬೇಕು ಅಂತ ಇದ್ದರು. ಅದರಲ್ಲೇ ಕ್ರಾಸ್ ಮಾಡಿದ ಎರಡು ಬಣ್ಣದ ಬೋಗನ್‌ವಿಲ್ಲಾ ಬಳ್ಳಿ ಹಬ್ಬಿಸಬೇಕು ಎಂದು ಆಸೆ. ಅದರ ಒಂದು ಕಡೆಯ ಮೂಲೆಯಲ್ಲಿ ರಾತ್ರಿ ರಾಣಿ ಇನ್ನೊಂದು ಮೂಲೆಯಲ್ಲಿ ಸಂಪಿಗೆ ಗಿಡಹಾಕಬೇಕು ಎಂದು, ಜೊತೆಗೆ ಸೂರ್ಯಕಾಂತಿ ಗಿಡ.......ಹೀಗೆ...........'

ಶೀನಾ ತನ್ನ ಟ್ರಂಕಿನಲ್ಲಿಟ್ಟಿದ್ದ ಎರಡು ಚಿನ್ನದ ಬಳೆ ಮಾರಿ ಹಳದಿ ರೇಷ್ಮೆ ಪರದೆ ಕೊಂಡುಕೊಂಡು ಬಂದಳು. ವೀರೇಂದ್ರ ಕೇಳಿದ್ದಕ್ಕೆ, ಡೆಕೋರೇಷನ್‌ಗೆ ಅಮ್ಮ ಏನೂ ಕೊಟ್ಟಿರಲಿಲ್ಲ. ಆದರಿಂದ ಯಾರೋ ಹೋಗೋರು ಬರೋರ ಕೈಯಲ್ಲಿ ಐದುನೂರು ರೂಪಾಯಿ ಕಳಿಸಿದ್ದಳು–ಅದರಿಂದ ಖರೀದಿಸಿದ್ದು ಎಂದು ಹೇಳಿದ್ದಳು.

ಕೆಲವೊಂದು ಸುಳ್ಳುಗಳೂ ಸತ್ಯದಷ್ಟೇ ಪವಿತ್ರವಾಗಿ ಬಿಡುವಂಥ ಮನಸ್ಸಿನ ಆ ನೆಲೆಯಲ್ಲಿ ಶೀಲಾ ಈಗ ನಿಂತಿದ್ದಳು.

ಐದು ತಿಂಗಳ ಹಿಂದೆ ಬ್ಯಾಡ್‌ಮಿಂಟನ್ ಆಡುತ್ತಿದ್ದಾಗ, ವೀರೇಂದ್ರನಿಗೆ ಇದ್ದಕ್ಕಿದ್ದ ಹಾಗೆ ಮೇಲುಸಿರು ಬಂದುಬಿಟ್ಟಿತು. ಅದರ ನಂತರ, ಪ್ರತಿದಿನ ಸಂಜೆ ಆಟ ಆಡುವಾಗ ಅವನಿಗೆ ವಿಚಿತ್ರ ರೀತಿಯ ಆಯಾಸದ ಅನುಭವ ಆಗುತ್ತಿತ್ತು. ಎಲ್ಲೂ ಏನೂ ನೋವಿರಲಿಲ್ಲ. ಆದರೆ ಮೂಳೆಗಳಿಂದ ದಿನವೂ ಏನೋ ಕಳಚಿ ಬೀಳುತ್ತಿರುವ ಹಾಗೆ ಅನಿಸುತ್ತಿತ್ತು.........ಈಗ್ಗೆ ಒಂದು ತಿಂಗಳಿನಿಂದಂತೂ ಆಫೀಸಿಗೂ ರಜೆ ಹಾಕಿಬಿಟ್ಟಿದ್ದ.

ಶೀನಾ ನರ್ಸರಿಯಿಂದ ದಿನವೂ ಒಂದು ಸಣ್ಣ ಗಿಡ ಕೊಂಡುತಂದು, ಬೆಳಿಗ್ಗೆ ವೀರೇಂದ್ರನ ಕೈಗಳಿಂದ ಅದನ್ನು ತೋಟದಲ್ಲಿ ಹಾಕಿಸುತ್ತಿದ್ದಳು.

ವೀರೇಂದ್ರನ ಒಂದು ಸಣ್ಣ ಅಂಶವನ್ನು ತನ್ನ ಗರ್ಭದಲ್ಲೂ ಧರಿಸಬೇಕೆಂದು ಶೀನಾಳ ಮನಸ್ಸು ಆಶಿಸುತ್ತಿತ್ತು. ಆದರೆ ಈಗಂತೂ ತೀರಾ ತಡವಾಗಿಬಿಟಿತ್ತು. ಈಗಂತೂ ವೀರೇಂದ್ರ ಮದುವೆ ಆಗದೇ ಇದ್ದಿದ್ದರೆ ತುಂಬಾ ಚೆನ್ನಾಗಿರುತ್ತಿತ್ತು ಎಂದು ಡಾಕ್ಟರ್ ಹೇಳಿಬಿಟ್ಟಿದ್ದರು. ಇಂಥ ಹೃದ್ರೋಗಿಗೆ ಶರೀರ ಸ್ವಲ್ಪ ಉದ್ರಿಕ್ತಗೊಂಡರೂ ಅದೇ ಮೃತ್ಯುವಿನ ಅಘಾತವಾಗಿ ಬಿಡಬಹುದು. 'ಒಂದು ವೇಳೆ ಗೊತ್ತಾಗಿದ್ದರೆ' ಎಂದು ಶೀನಾಳ ಮನಸ್ಸಿನಲ್ಲಿ ಆಸೆ ಆಗುತ್ತಿತ್ತು. ಆದರೆ ಈಗ ಎಂಥ ಆಸೆಯಾದರೂ, ಕಳೆದುಕೊಳ್ಳಲು ಅರ್ಹವಾದ ಗಳಿಗೆ ಇರಲಿಲ್ಲ. ಈಗೇನಿದ್ದರೂ ವೀರೇಂದ್ರನ ಮೊಗದ ಕಡೆ ನೋಡುತ್ತಿರುವುದಷ್ಟೇ ಆಗುತ್ತಿತ್ತು. ಶೀನಾ ಎಚ್ಚೆತ್ತಿರುವ ವಿರೇಂದ್ರನನ್ನು ನಿಟ್ಟಿಸಿ ನೋಡುವುದಷ್ಟೇ ಅಲ್ಲದೇ, ನಿದ್ರಿಸುತ್ತಿರುವ ವೀರೇಂದ್ರನನ್ನೂ ನಿಟ್ಟಿಸಿ ನೋಡುತ್ತಿದ್ದಳು.

ಶೀನಾಳ ಮನೆಗೆ ಅಂಟಿಕೊಂಡಿದ್ದ ಮನೆ ಬಹಳ ದಿನಗಳಿಂದ ಖಾಲಿ ಬಿದ್ದಿತ್ತು. ಅದರಲ್ಲಿ ಯಾರೂ ವಾಸವಿಲ್ಲದೆ ಇದ್ದುದರಿಂದ ಎಷ್ಟೋಸಲ ರಾತ್ರಿ ಹೊತ್ತು ಶೀನಾಳಿಗೆ ತುಂಬಾ ಹೆದರಿಕೆಯಾಗುತ್ತಿತ್ತು. ಇತ್ತೀಚೆಗಷ್ಟೇ ಆ ಮನೆಗೆ ಯಾವುದೋ ಒಂದು ಸಂಸಾರ ಬಂದಿತ್ತು. ಒಬ್ಬ ಹೆಂಗಸು, ಒಬ್ಬ ಗಂಡಸು ಮತ್ತು ಎರಡು ಮಕ್ಕಳ ಸಂಸಾರವಾಗಿತ್ತದು. ಶೀನಾಳಿಗೆ ಗೋಡೆಯ ಆ ಬದಿಯಿಂದ ಕೇಳಿಬರುತ್ತಿದ್ದ ದನಿಗಳು ಇಷ್ಟವಾದವು. ಈ ದನಿಗಳಲ್ಲಿ ಮಕ್ಕಳ ಕಿಲ ಕಿಲ ನಗುವಿನ ದನಿಯ ಜೊತೆಗೆ, ಹಠಮಾರಿತನದ ಚೀರು ದನಿಗಳು. ಗಂಡಹೆಂಡತಿ ಒಬ್ಬರನ್ನೊಬ್ಬರು ಕರೆಯುವ ದನಿಗಳು ಹಾಗೂ ಅವರ ಪರಸ್ಪರ ಕಿತ್ತಾಟದ ದನಿಗಳೂ ಇರುತ್ತಿದ್ದವು. ಈ ತುಂಬಿದ ಮನೆಯ ಈ ತಂಟೆ ತರ್ಲೆಗಳನ್ನು ನೋಡುತ್ತ ಶೀನಾ ಬಹಳ ಕಷ್ಟದಿಂದ ಇನ್ನೇನು ಮುಗಳ್ನಗುವಷ್ಟರಲ್ಲಿ, ಆ ಮನೆಯ ಶೂನ್ಯತೆ ಇಷ್ಟಿಷ್ಟೇ ಸರಿಯುತ್ತಾ ಗೋಡೆಯ ಮೇಲಿನಿಂದ ಇಳಿದು ಈ ಕಡೆಗೆ.....ಅವಳ ಮನೆಯತ್ತ ಸಾಗಿಬರುತ್ತಿದೆ.

ಸಂಜೆಯ ಸಮಯ. ಶೀನಾಳ ಮನೆಯ ಬಾಗಿಲನ್ನು ಯಾರೋ ತಟ್ಟುವ ಶಬ್ದ. ಶೀನಾ ತನ್ನ ಈಗಿನ ಸ್ಥಿತಿಯ ಒಂದು ಹಾರಿಕೆಯ ಸುದ್ದಿಯ ಸುಳಿವೂ ತನ್ನ ತಂದೆ ಮತ್ತು ಅಣ್ಣನಿಗೂ ಸಿಗದ ಹಾಗೆ ನೋಡಿಕೊಂಡಿದ್ದಳು. ತನ್ನ ಸ್ಥಿತಿಗತಿ ಹೇಗಿದೆಯೆಂದು ವಿಚಾರಿಸಲು ಬೇರೊಬ್ಬರು ಬರುವುದು ಅವಳಿಗೆ ಇಷ್ಟವಿರಲಿಲ್ಲ. ವೀರೇಂದ್ರ ಸಾಯುವುದಕ್ಕಿಂತ ಮುಂಚೆ ಬೇರೆ ಯಾರೂ ಅವನನ್ನು ಸಾಯುವ ಸ್ಥಿತಿಯಲ್ಲಿ ಕಾಣುವುದು ಅವಳಿಗೆ ಇಷ್ಟವಿರಲಿಲ್ಲ. ಸಾಗಾಗಿ ಡಾ.ರಾವ್ ಅವರೊಬ್ಬರನ್ನು ಬಿಟ್ಟು ಆ ಹೊತ್ತಿನಲ್ಲಿ ಬೇರಿನ್ನಾರೂ ಬರುವ ಸಂಭವ ಇರಲಿಲ್ಲ. ಅವರು ಮಾತ್ರ ಈಗ್ಗೆ ಕೆಲವು ದಿನಗಳ ಹಿಂದೆ ಈ ಕಡೆ ಓಡಾಡುವಾಗ ಒಂದು ಸಲ ವೀರೇಂದ್ರನನ್ನು ನೋಡಿ ಹೋಗಿದ್ದರು.

ಅವರು ಇನ್ನೊಮ್ಮೆ ಬರುವುದು ವೀರೇಂದ್ರನ ಮನಸ್ಸಿನಲ್ಲಿ ಸಂದೇಹ ಹುಟ್ಟಿಸಬಹುದಾಗಿತ್ತು. ಹಾಗಾಗಿಯೇ ಈ ಬಾಗಿಲನ್ನು ತಟ್ಟುವ ಶಬ್ದ ಶೀನಾಳಿಗೆ ಇಷ್ಟವಾಗಲಿಲ್ಲ.

ಹಿಂಜರಿಯುತ್ತಲೇ ಶೀನಾ ಬಾಗಿಲು ತೆರೆದು ನೋಡುತ್ತಾಳೆ. ಬಂದವರು ಡಾ.ರಾವ್ ಆಗಿರಲಿಲ್ಲ. ಆದರೆ ಇತ್ತೀಚೆಗೆ ತಾನೆ ವಾಸಕ್ಕೆ ಬಂದಿದ್ದ ನೆರೆಮನೆಯ ಹೆಂಗಸು.

ಹೆಂಗಸು ಸ್ವಲ್ಪ ಸಂಕೋಚಗೊಂಡಂತಿತ್ತು. "ಬಹುಶಃ ನಿಮ್ಮ ಮನೆಯಲ್ಲಿ ಟೆಲಿಫೋನ್ ಇದೆ ಅನ್ನಿಸುತ್ತೆ. ನಾನು ಫೋನ್ ಮಾಡಬಹುದಾ? ನಾನು ನಿಮ್ಮ ಪಕ್ಕದ ಮನೆಯ ಮಿಸೆಸ್ ಕಪೂರ್" ಎಂದಳು.

ಶೀನಾ ವೀರೇಂದ್ರನ ಕೊಠಡಿಯ ಬಾಗಿಲನ್ನು ಮುಂದೆ ಮಾಡುತ್ತ, "ಅವರು ನಿದ್ದೆ ಮಾಡುತ್ತಿದ್ದಾರೆ ಮಿಸೆಸ್ ಕಪೂರ್. ನೀವು ಫೋನ್ ಮಾಡಿ, ಆದರೆ ಸ್ವಲ್ಪ ಮೆಲ್ಲಗೆ ಮಾತಾಡಿ. ಅವರಿಗೆ ಎಚ್ಚರ ಆಗಬಾರದಲ್ಲ" ಎಂದಷ್ಟೇ ಹೇಳಿದಳು. ಅದೊಂದು ಸಾಮಾನ್ಯ ಫೋನ್ ಕರೆ. ಆ ಹೆಂಗಸು ತನ್ನ ಯಜಮಾನರ ಆಫೀಸಿನ ನಂಬರ್ ಡಯಲ್ ಮಾಡಿ, ಅವರು ಆಫೀಸಿನಲ್ಲಿದ್ದಾರೋ ಇಲ್ಲ ಅಲ್ಲಿಂದ ಹೊರಟರೋ ಎಂದು ಕೇಳಿದಳು. ಆದರೆ ಫೋನ್ ಮಾಡಿದ ಮೇಲೆ ಅವಳೆಷ್ಟು ಸೋತು ಹೋದಂತಾದಳೆಂದರೆ, ಶೀನಾ ಅವಳನ್ನು ಕುರ್ಚಿಯ ಮೇಲೆ ಕೂಡಿಸಿ, "ನೀರು ಬೇಕೆ?" ಎಂದು ಕೇಳಿದಳು. ಅಷ್ಟೇ ಅಲ್ಲ. ಅವರ ಮನೆಯಲ್ಲಿ ಗಾಬರಿ ಪಡುವಂಥದ್ದೇನಾದರೂ ಆಗಿದೆಯೇ, ತನ್ನಿಂದ ಏನಾದರೂ ಸಹಾಯ ಆಗಬೇಕೆ ಎಂದು ಕೇಳಿದಳು.

ಆ ಹೆಂಗಸು ಇಳಿವಯಸ್ಸಿನವಳೇನಾಗಿರಲಿಲ್ಲ. ಆದರೆ ಅದೇಕೋ ಮುದುಡಿಹೋದ ಹೂವಿನಂತಾಗಿಬಿಟ್ಟಿದ್ದಳು. ಹಾಗೆ ನೋಡಿದರೆ, ಆಕೆ ಒಳ್ಳೆ ಲಕ್ಷಣವಾದ ಹೆಣ್ಣೇ. ಆದರೆ ತನ್ನ ವಯಸ್ಸಿಗಿಂತ ಹೆಚ್ಚು ಗಂಭೀರವಾಗಿದ್ದಳು. "ಇಲ್ಲ ಅದೇನೂ ಬೇಡ. ಆದರೆ ಈಗಾಗಲೇ ತುಂಬಾ ಹೊತ್ತಾಗಿ ಹೋಯಿತಲ್ಲ. ಅವರು ಇನ್ನೂ ಮನೆಗೆ ಬಂದಿಲ್ಲ. ಅದಕ್ಕೇ ಆಫೀಸಿಗೆ ಫೋನ್ ಮಾಡಿ ತಿಳಿದುಕೊಳ್ಳೋಣ ಎಂದು ಯೋಚನೆ ಮಾಡಿ ಬಂದೆ" ಎಂದಳು.

ಆ ಹೆಂಗಸಿನ ಇಂಥ ತೀರಾ ಸಾಧಾರಣವಾದ ಮಾತಿನ ಧಾಟಿಯಿಂದ ಉಂಟಾದ ಚಿಂತೆ ತೀರಾ ಸಾಧಾರಣವಾದದ್ದೇನಾಗಿರಲಿಲ್ಲ. ಆದರೆ ಶೀನಾ ಇದಕ್ಕಿಂತ ಹೆಚ್ಚೇನೂ ಕೇಳಲಿಲ್ಲ. ಕೇಳುವುದು ಸರಿಯಲ್ಲ ಎಂದು ಭಾವಿಸಿದಳು.

ಹೆಂಗಸು ಹೊರಟು ಹೋದಳು. ಆದರೆ ರಾತ್ರಿ, ಹೊತ್ತಾದ ಮೇಲೆ, ಆ ಮನೆಯಲ್ಲಿ ಮೊದಲು ಗಂಡಸು ಜೋರು ಜೋರಾಗಿ ಮಾತನಾಡುವ ಹಾಗೂ ಹೆಣ್ಣು ಮೆಲ್ಲ ಮೆಲ್ಲಗೆ ಅಳುವ ಶಬ್ದ ಕೇಳಿಸಿತು. ಶೀನಾಳಿಗೆ ಸಂಜೆ ಆ ಹೆಂಗಸನ್ನು ನೋಡಿದಾಗ ಅನ್ನಿಸಿದ್ದು ಸರಿ ಎನ್ನಿಸಿತು. ಆ ಹೆಂಗಸಿನ ವ್ಯಥೆ ಬಹುಶಃ ಒಂದು ದಿನದ್ದಲ್ಲ; ಅನೇಕ ದಿನಗಳದ್ದಿರಬೇಕು ಎನ್ನಿಸಿತು.

ವೀರೇಂದ್ರನ ನಿಃಶಕ್ತಿ ಹೆಚ್ಚುತ್ತಾ ಹೋಯಿತು. ಸ್ವಲ್ಪ ಎದ್ದು ಕೈ ತೋಟದ ತನಕ, ಇಲ್ಲ ಹತ್ತಿರದ ಬಚ್ಚಲಮನೆ ತನಕ ಹೋಗುವಷ್ಟರಲ್ಲಿ ಅವನ ಹಣೆಯ ಮೇಲೆ ಬೆವರ ಹನಿಗಳು ಕಾಣಿಸಿಕೊಳ್ಳುತ್ತಿದ್ದವು ಮತ್ತು ಅವನು ಸುಸ್ತಾಗಿ ಚಾಪೆಯ ಮೇಲೆ ಕಣ್ಣು ಮುಚ್ಚಿಕೊಂಡು ಮಲಗಿಬಿಡುತ್ತಿದ್ದನು. ಇದರಿಂದ ಅವನು ಎಚ್ಚರವಾಗಿದ್ದಾನೋ ನಿದ್ದೆ ಹೋಗುತ್ತಿದ್ದಾನೋ ಎನ್ನುವುದು ಗೊತ್ತಾಗದಷ್ಟು ಸೋತು ಮಲಗಿಬಿಡುತ್ತಿದ್ದನು. ಶೀನಾಳಂತೂ ತನ್ನ ಹೆಜ್ಜೆಯ ಶಬ್ದದಿಂದ ಅವನಿಗೆ ಎಲ್ಲಾದರೂ ಎಚ್ಚರ ಆಗಿಬಿಟ್ಟೀತೆಂದು

ಹೆಜ್ಜೆಯ ಸಪ್ಪಳ ಮಾಡದೆ ಮನೆಯ ಎಲ್ಲ ಕೆಲಸ ಕಾರ್ಯ ಮಾಡುತ್ತಿದ್ದಳು.

ಮಾರನೇ ದಿನ ಮಧ್ಯಾಹ್ನ, ಮಿಸೆಸ್ ಕಪೂರ, ತರಕಾರಿ ಕೊಂಡುಕೊಂಡು ಬಂದು ಮನೆಯಲ್ಲಿಟ್ಟು ತಮ್ಮ ಮನೆಯ ಕಡೆ ಬರುತ್ತಿರುವುದನ್ನು ಶೀನಾ ಕಿಟಕಿಯಿಂದ ನೋಡಿದಳು.

ಅವಳು ತಮ್ಮ ಮನೆಯ ಬಾಗಿಲು ತಟ್ಟುವುದಕ್ಕೆ ಮುಂಚೆಯೇ ಶೀನಾ ಬಾಗಿಲು ತೆಗೆದಳು. ಮಿಸೆಸ್ ಕಪೂರ್, ತೀರಾ ಸಂಕೋಚದ ದನಿಯಿಂದ, ಫೋನ್ ಮಾಡಲು ಅನುಮತಿ ಕೇಳಿದಳು. ಮತ್ತೆ ಅದೇ ನಂಬರ್, ಅದೇ ಆಫೀಸು, ಅದೇ ಪ್ರಶ್ನೆ ಹಾಗೂ ಫೋನ್ ರಿಸೀವರ್ ಇಡುತ್ತಾ ಹನಿಗಣ್ಣಾಗಿ ನಿಲ್ಲಲಾರದವಳಂತೆ ಕುರ್ಚಿಯ ಮೇಲೆ ಕುಕ್ಕರಿಸಿದ್ದಳು.

ಶೀನಾ ತನಗಾಗಿ ಟೀ ಮಾಡಿಟ್ಟುಕೊಂಡಿದ್ದಳು. ಅದರಲ್ಲೇ ಸ್ವಲ್ಪ ಟೀಯನ್ನು ಇನ್ನೊಂದು ಲೋಟಕ್ಕೆ ಹಾಕಿ ಅವಳ ಮುಂದಿಟ್ಟಳು.

ಮಿಸೆಸ್ ಕಪೂರ್ ಟೀಯನ್ನು ನಿರಾಕರಿಸಲಿಲ್ಲ. ಬಹುಶಃ ಅವಳಿಗೆ ಕುಡಿಯಲು ಒಂದು ಬಿಸಿಯಾದ ಗುಟುಕು ಖಂಡಿತ ಬೇಕಾಗಿತ್ತು. ಒಂದು ಬಿಸಿ ಗುಟುಕು ಮತ್ತು ಸ್ನೇಹ ತುಂಬಿದ ಒಂದು ದನಿಯೂ ಅವಳಿಗೆ ಅಗತ್ಯವಿತ್ತು.

"ಶೀನಾ ಅಕ್ಕ; ನಿಮಗೆ ನಾನು ಈಗ, ಹೊತ್ತಲ್ಲದ ಹೊತ್ತಿನಲ್ಲಿ ತೊಂದರೆ ಕೊಡುತ್ತಾ ಇದ್ದೀನಿ" ಎಂದು ತನ್ನ ಕಥೆ ಹೇಳತೊಡಗಿದ್ದಳು.........

ಸಜ್ಜನಳಂತೆ ಕಾಣುತ್ತಿದ್ದ ಶೀನಾಳ ಎದುರು ಮಿಸೆಸ್ ಕಪೂರ್ ತನ್ನ ಮನಸ್ಸನ್ನು ತೆರೆದಿಟ್ಟಳು. ನನ್ನ ಗಂಡನ ಬದುಕಿನಲ್ಲಿ ಅದೆಷ್ಟು ಹೆಣ್ಣುಗಳಿದ್ದಾರೋ..... ಈ ಹೊತ್ತು ತರಕಾರಿ ತರಲು ಹೋಗಿದ್ದಾಗ, ದೂರದಲ್ಲಿ ಒಂದು ಕಾರು ನೋಡಿದೆ. ಅದರಲ್ಲಿ ಅವರು ಕುಳಿತಿರಬಹುದು ಎನಿಸಿತು. ಮತ್ತೆ ಅವರ ಪಕ್ಕ ಒಬ್ಬ ಹೆಂಗಸು ಇರಬಹುದು. ಆ ಮೇಲೆ ಇದು ನನ್ನ ಮನಸ್ಸಿನ ಭ್ರಮೆ ಇರಬೇಕು. ಅವರು ಖಂಡಿತಾ ಆಫೀಸಿನಲ್ಲಿ ಕುಳಿತಿರಬಹುದು ಅನ್ನಿಸಿತು. ಅದಕ್ಕೋಸರವೇ ಫೋನ್ ಮಾಡಿದೆ..... ಆದರೆ ಅವರು ನಿಜವಾಗಿಯೂ ಆಫೀಸಿನಲ್ಲಿ ಇಲ್ಲ. ಅದು ಅವರೇ....... ಅಲ್ಲದೆ ಅವರ ಜೊತೆ ಅದಿನ್ಯಾರಿದ್ದಳೋ........" ಮಿಸೆಸ್ ಕಪೂರ್ ಹೇಳಿದ್ದು "ಅವರು ಈ ಮುಂಚೆ ವಾಸವಾಗಿದ್ದ ಪಕ್ಕದ ಮನೆಯ ಹೆಂಗಸಿನ ಜೊತೆ ಮಿ.ಕಪೂರ್ ಸಂಬಂಧ ಬೆಳೆಸಿಕೊಂಡು ಬಿಟ್ಟರು. ಈ ಮನೆ ಬದಲಾಯಿಸಿದರೆ, ಆ ಸಂಬಂಧ ಕೊನೆಗೊಳ್ಳಬಹುದೆನಿಸಿ ಇಲ್ಲಿಗೆ ಬಂದರೆ, ಇಲ್ಲೂ... ಅದ್ಯಾರೋ ಗೊತ್ತಿಲ್ಲ..... ಹೊಸಬಳಿರಬೇಕು ಅನ್ನಿಸುತ್ತೆ" ಎಂದು ಮತ್ತೆ ಮಿಸೆಸ್ ಕಪೂರ್ ಕಣ್ಣಿನಲ್ಲಿ ನೀರು ತುಂಬಿಕೊಂಡು ಹೇಳತೊಡಗಿದಳು. "ಸಾಯಂಕಾಲ ಅದರೂ ನನ್ನ ಗಂಡ ಮನೆಗೆ ಬರಲಿಲ್ಲ ಅಂದರೆ.... ಈ ಹೊತ್ತಿನಲ್ಲಿ ಅದು ಯಾರ ಜೊತೆ ಇದ್ದಾರೋ ಅಂತ ಅಂದುಕೊಳ್ತೇನೆ....ಅವರ ಹಾದಿ ಕಾಯುತ್ತಾ ಅಳೋದಕ್ಕೆ ಪ್ರಾರಂಭಿಸುತ್ತೀನಿ........ ಮತ್ತೆ ಅವರು ಬಂದ ಮೇಲೂ ಅಳೋದಕ್ಕೆ ಶುರುಮಾಡ್ತಿನಿ."

ಆಗ ಶೀನಾಳ ಮನ ತುಂಬಿ ಬಂತು. ಈಕೆಯ ಗಂಡ ಅದು ಯಾರ್‍ಯಾರ ಮನೆಗೆ ಹೋಗ್ತಾನೋ ಏನೋ ಗೊತ್ತಿಲ್ಲ.... ಆದರೆ ರಾತ್ರಿ ಆಯಿತು ಅಂದ್ರೆ ಮನೆಗಂತೂ ವಾಪಸ್ ಬರ್ತಾನೆ. ತನ್ನ ಹೆಂಡತಿ ಹತ್ತಿರಕ್ಕೆ.... ಆದರೆ ನನ್ನ ಗಂಡನಾದರೋ ಬೇಗ

ಬಹುಬೇಗ ಮತ್ತೆ ಹಿಂತಿರುಗಿಬಾರದೆ ಇರುವ ಕಡೆಗೆ ಹೊರಟುಹೋಗ್ತಾನೆ..... ದಾರಿ ಕಾಯ್ತಾ ಕೂತೂಕೊಳ್ಳೋದಕ್ಕೆ ನನಗೆ ಏನೂ ಇರೋದಿಲ್ಲ.

ಶೀನಾಳ ಮುಖದ ಮೇಲೆ ಅಳು ಆವರಿಸಿದಾಗ; ಮಿಸೆಸ್ ಕಪೂರ್ ಆತ್ಮೀಯತೆಯಿಂದ ಕೇಳಿದಳು– "ಶೀನಾ ಅಕ್ಕ ನಿಮ್ಮ ಯಜಮಾನರಿಗೆ ಕಾಯಿಲೇನಾ? ಬಹಳ ದಿನಗಳಿಂದ ನೋಡ್ತಾ ಇದ್ದೀನಿ. ಅವರು ಆಫೀಸ್‌ಗೆ ಹೋಗಲ್ಲ, ಎಲ್ಲೂ ಹೊರಗಡೇನೂ ಹೋಗಲ್ಲ" ಶೀನಾಳ ಕಂಠ ತುಂಬಿ ಬಂತು. ಯಾರಿಗೂ ತೋರಿಸದೆ ಇದ್ದ ಮನಸ್ಸಿನ ಆ ರಂಧ್ರವನ್ನು ಶ್ರೀಮತಿ ಕಪೂರಳಿಗೆ ತೋರಿಸಿಬಿಟ್ಟಳು.

ಶ್ರೀಮತಿ ಕಪೂರ್ ಏನೂ ಹೇಳಲಿಲ್ಲ. ಆದರೆ ಅವಳ ಮನಸ್ಸಿನಲ್ಲಿ ಒಂದು ತೆರನ ಅಸೂಯೆ ಮೂಡಿತು.

'ಈ ಹೆಣ್ಣು ಎಷ್ಟೊಂದು ಅದೃಷ್ಟಶಾಲಿ! ಇವಳ ಗಂಡ ತನ್ನ ಕೊನೆಯ ಉಸಿರಿನವರೆಗೂ ಇವಳ ಪತಿಯೇ ಆಗಿರುತ್ತಾನೆ. ಅವನು ಸತ್ತರೂ ಇವಳ ಪಾಲಿಗೆ ಬದುಕಿಯೇ ಇರುತ್ತಾನೆ. ಈಕೆ ಅವನ ಒಂದೊಂದೂ ನೆನಪಲ್ಲೂ ಮತ್ತೆ ಬದುಕುತ್ತಾಳೆ. ಅವನು ಹಾಕಿದ ಗಿಡಗಳಲ್ಲಿ ಹೂವು ಮೂಡಿದಾಗ ಇವಳಿಗೆ ಪ್ರತಿ ಎಲೆಯಲ್ಲೂ ಪ್ರತಿಯೊಂದು ಬಣ್ಣದಲ್ಲೂ ತನ್ನ ಪತಿಯ ಸುವಾಸನೆ ತೇಲಿಬರುತ್ತದೆ'.

ಕಣ್ಣು ತುಂಬ ನೀರು ತುಂಬಿಕೊಂಡು ಶೀನಾ, ಹೋಗುತ್ತಿರುವ ಶ್ರೀಮತಿ ಕಪೂರಳ ಬೆನ್ನಿನ ಕಡೆ ನೋಡುತ್ತ. "ನನಗಿಂತಲೂ ಈಕೆಯ ಅದೃಷ್ಟ ತುಂಬ ಚೆನ್ನಾಗಿದೆ. ಈಕೆಯ ಗಂಡ ಮನೆಗೆ ವಾಪಸ್ ಬಂದಾಗ ಅವನೊಂದಿಗೆ ಜಗಳ ಆಡಬಹುದು. ಅವನೆದುರು ಅಳಬಹುದು...... ಆದರೆ ನಾನು ಯಾರ ಜೊತೆ ಜಗಳ ಆಡಲಿ......ಯಾರ ಮುಂದೆ ಅಳಲಿ?.." ಎಂದುಕೊಂಡಳು.

ಮತ್ತೆ ಶೀನಾಳ ಕಿವಿಗಳಲ್ಲಿ ತನ್ನ ಮತ್ತು ವೀರೇಂದ್ರನ 'ಆ' ಮಾತುಗಳು ತುಂಬಿಬಿಟ್ಟವು. ವೀರೇಂದ್ರ ಹೊರಗಿನಿಂದ ಬಂದಾಗ ಅವಳಿಗಾಗಿ ಹೂವು ತರುತ್ತಾ ಇದ್ದ... ಆಗೆಲ್ಲ ಹೇಳುತ್ತಿದ್ದ. "ಓ ನನ್ನ ಏಕಮಾತ್ರ ಪ್ರಿಯೆ! ನೋಡು..." ಮತ್ತು ಶೀನಾ ಅವನ ಹೆಗಲ ಮೇಲೆ ತಲೆ ಇಡುತ್ತ. "ನನ್ನ ಏಕಮಾತ್ರ ಸ್ವಾಮಿ... ನೀವೇ ನಿಮ್ಮ ಕೈಯಾರೆ ನನ್ನ ತಲೆಗೆ ಮುಡಿಸಿಬಿಡಿ" ಎನ್ನುತ್ತಿದ್ದಳು.

ಇಂದಾದರೋ ಮನೆಯ ಕೈ ತೋಟದಲ್ಲಿ ಆಗತಾನೆ ಅರಳಿದ ಹೂವನ್ನು ಕಿತ್ತು ವೀರೇಂದ್ರನ ಕೋಣೆಯಲ್ಲಿಡುವಾಗ ಶೀನಾಳಿಗೆ ತನ್ನ ಎದೆಯ ರಂಧ್ರ ತುಂಬಾ ದೊಡ್ಡದಾಗಿ ಬಿಟ್ಟಿದೆ ಎನ್ನಿಸಿತು.

ಋಣ

ಅವಳು ಒಂದು ಕಡಿದುಹೋದ ಮಾತಿನಂತಿದ್ದಳು. ಅವಳು ಯಾರು, ಎಲ್ಲಿಂದ ಬಂದಿದ್ದಳು. ಯಾವಾಗ ಬಂದಿದ್ದಳು ಎನ್ನುವುದು ಯಾರಿಗೂ ಗೊತ್ತಿರಲಿಲ್ಲ. ಬಹುಶಃ ಅವಳು ಅವಿವಾಹಿತೆ, ಅಥವಾ ವಿಧವೆಯಾಗಿದ್ದಿರಬಹುದು. ಕಾರಣ ಅವಳ ಗುಡಿಸಿನಲ್ಲಿ ಗಂಡು ಅಂತ ಹೇಳಬಹುದಾಗಿ ಇದ್ದುದ್ದು ಸುಮಾರು ಎರಡು ವರ್ಷದ ಒಂದು ಮಗು ಮಾತ್ರ. ಅದು ಅವಳದ್ದೂ ಆಗಿರಬಹುದು. ಅಥವಾ ಅವಳಿಗಿಂತ ಸ್ವಲ್ಪ ಹೆಚ್ಚು ವಯಸ್ಸಿನ ಆ ಇನ್ನೊಬ್ಬ ಹೆಂಗಸಿನದ್ದೂ ಆಗಿದ್ದಿರಬಹುದು.

ಹೊಸದಾಗಿ ಆಗುತ್ತಾ ಇದ್ದ ಬಡಾವಣೆಯಲ್ಲಿ ಎಲ್ಲವೂ ಹೊಸದೇ ಆಗಿತ್ತು. ತಮ್ಮ ಮನೆಗಳ ಪಾಯ ತೋಡಿಸುತ್ತಾ ಇದ್ದವರು, ಇಟ್ಟಿಗೆ ಸುಣ್ಣ ಹೊತ್ತುಕೊಂಡು ಬಂದು ಗೋಡೆಗಳನ್ನು ಎಬ್ಬಿಸುತ್ತಾ ಇದ್ದವರು, ಎಲ್ಲರೂ ಹೊಸಬರೇ. ಬೇವಿನ ಮರಗಳ ಕೆಳಗಡೆ ನಿರ್ಮಿಸಲಾಗಿದ್ದ ಅವಳ ಚಹಾದ ಗುಡಿಸಿಲಿನ ಆಯುಷ್ಯ ಆ ಬೇವಿನ ಮರಗಳದ್ದೋ ಇಲ್ಲ ಈಗ ತಾನೆ ತೋಡಿಸಿದ್ದ ಪಾಯಗಳದ್ದೋ ಗೊತ್ತಿಲ್ಲ.

ಜನಗಳಿಗೆ ಗೊತಿದ್ದದ್ದು ಅವಳ ಹೆಸರು ಮೂರ್ತಿ ಎಂದು ಹಾಗೂ ಅವಳ ಗುಡಿಸಿಲಿನಲ್ಲಿ ಬೆಳಿಗ್ಗೆಯಿಂದ ಸಂಜೆತನಕ, ಕೆಲಸಗಾರರು ಕೆಲಸ ಮುಗಿಸುವ ತನಕ ಬಿಸಿ ಬಿಸಿ ಮಸಾಲೆ ಟೀ ಸಿಗುತ್ತೆ ಅನ್ನುವುದಷ್ಟೆ.

ಅವಳು ಸಾಮಾನ್ಯವಾಗಿ ದಪ್ಪನಾದ ಒಂದು ಕೆಂಪು ದಟ್ಟಿಯನ್ನು ಸುತ್ತಿಕೊಂಡಿರುತ್ತಿದ್ದಳು. ಒಲೆಯಲ್ಲಿ ಉರಿಯುತ್ತಿರುವ ಸೌದೆ ಹತ್ತಿರ ಕುಳಿತಿರುತ್ತಿದ್ದ ಅವಳೂ ಒಲೆಯಲ್ಲಿನ ಬೆಂಕಿಯ ಹಾಗೆಯೇ ಕಂಡು ಬರುತ್ತಿದ್ದಳು.

ಆ ಇನ್ನೊಬ್ಬಳು ಅವಳಿಗಿಂತ ಸ್ವಲ್ಪ ಹೆಚ್ಚು ವಯಸ್ಸಾದವಳು. ಸ್ವಲ್ಪ ಬಿಸಿಲೇರಿದ ಮೇಲೆ ಮಗುವಿಗೆ ಊಟ ತಿನ್ನಿಸುತ್ತಾ ಹೊರಗಡೆ ಬೇವಿನ ಮರಗಳ ಕೆಳಗಡೆ ಕುಳಿತಿರುವುದು ಕಾಣಿಸುತ್ತಿತ್ತು. ಸಾಯಂಕಾಲ ತಂಪಾಗುತ್ತಿದ್ದ ಹಾಗೆ ಮಗುವನ್ನು ಸೀರೆಯ ಸೆರಗಿನಲ್ಲಿ

ಸುತ್ತಿಕೊಂಡು ಗುಡಿಸಿಲಿನೊಳಕ್ಕೆ ಹೋಗುತ್ತಾ ಇರುವುದು ಕಾಣಿಸುತ್ತಿತ್ತು. ಚಹಾ ತಯಾರು ಮಾಡಿ ಬಂದವರಿಗೆ ಕೊಡುತ್ತಾ ಇದ್ದುದ್ದು ಮೂರ್ತಿ ಮಾತ್ರ.

ರಾಜ್ ಬಕ್ಷಿಯವರ ಮನೆಗೆ ಆರ್.ಸಿ.ಸಿ ಹಾಕಿದ್ದಾಗ ಸ್ವಲ್ಪ ದಿವಸ ಕೆಲಸ ನಿಂತಿತ್ತು. ಆದರೆ ಬಕ್ಷಿ ಸಾಹೇಬರು ಮಾತ್ರ ಆಗಲೂ ಯಥಾ ಪ್ರಕಾರ ಬರುತ್ತಾ ಇದ್ದರು. ಮತ್ತು ಕಾವಲುಗಾರನನ್ನು ಕಳಿಸಿ, ಚಹಾದ ಗೂಡಂಗಡಿಯಿಂದ ಚಹಾ ತರಿಸಿಕೊಳ್ಳುತ್ತಿದ್ದರು. ಅಲ್ಲದೆ ಅಲ್ಲಿ ಒಬ್ಬರೇ ಸ್ವಲ್ಪ ಹೊತ್ತು ಕುರ್ಚಿ ಮೇಲೆ ಕುಳಿತಿರುತ್ತಿದ್ದರು.

ಒಂದು ದಿನ ಅವರು ಸ್ವಲ್ಪ ತಡವಾಗಿ ಬಂದರು. ಅಲ್ಲಿ ಸಿದ್ದವಾಗುತ್ತಿದ್ದ ಮನೆಗಳ ಕಾವಲುಗಾರರು ತಮ್ಮ ತಮ್ಮ ಗುಡಿಸಿಲಿನಲ್ಲಿ ಒಲೆ ಹತ್ತಿಸಿ ಏನೋ ಸ್ವಲ್ಪ ಬೇಯಿಸೋದು ಗೀಯಿಸೋದು ಮಾಡುತ್ತಾ ಇದ್ದರು.

ಮೂರ್ತಿಯ ಗುಡಿಸಿಲಿನಲ್ಲೂ ಚಹಾದ ಪಾತ್ರೆಗಳನ್ನೆಲ್ಲಾ ತೊಳೆದಿಡಲಾಗಿತ್ತು. ಆಗ ಬಕ್ಷಿಯವರು ಚಹಾ ತರಲು ವಾಚ್‌ಮನ್‌ನನ್ನು ಕಳಿಸಿದರು.

ಮೂರ್ತಿ ಹೊಸದಾಗಿ ಟೀಗೆ ಒಲೆ ಮೇಲೆ ನೀರಿಟ್ಟಳು. ಕಾವಲುಗಾರ ಬಹುಶಃ ಅವರಿಗೆ ಸಿಗರೇಟ್ ತರಲು ಹೊರಟು ಹೋಗಿದ್ದ. ಮೂರ್ತಿ ಚಹಾ ಸಿದ್ದಪಡಿಸಿ ಅವನು ಬರುತ್ತಾನೇನೋ ಎಂದು ಕಾದಳು. ಆಮೇಲೆ ತಾನೇ ಚಹಾ ತೆಗೆದುಕೊಂಡು ಹೋಗಿ ಬಕ್ಷಿ ಸಾಹೇಬರಿಗೆ ಕೊಟ್ಟಳು.

ಬೇವಿನ ಮರದಿಂದ ಉದುರಿದ ಎಲೆಗಳು ನೆಲದ ಮೇಲೆ ಮಿಸುಗಾಡುತ್ತಿದ್ದುವು. ಅದು ಹೇಗೆಂದರೆ ಅವು ನೆಲವನ್ನು ತಡಕಿ ತಡಕಿ ತಮ್ಮ ಬುಡವನ್ನು ಹುಡುಕುತ್ತಿವೆಯೇನೋ ಎನ್ನುವ ಹಾಗೆ. ರಾಜಬಕ್ಷಿಯವರು ಚಹಾದ ಕಪ್ಪನ್ನು ಕೈಗೆ ತೆಗೆದುಕೊಳ್ಳುತ್ತ ಮೂರ್ತಿಯ ಕಡೆ ನೋಡಿದರು. ಆದರೆ ಮತ್ತೆ ಬೇರೆ ಕಡೆಗೆ ಕಣ್ಣುಹೊರಳಿಸಿದರು. ಆದರೂ ಕಣ್ಣಿಂದ ಏನೋ ಒಂದು ಇಳಿದು ಮೂರ್ತಿಯ ಮುಖದ ಮೇಲೆ ಅಲುಗಾಡುತ್ತಿತ್ತು.......

ಅವರು ಚಹಾ ಕುಡಿಯುತ್ತಿದ್ದರು. ಮೂರ್ತಿ ಸ್ವಲ್ಪ ದೂರದಲ್ಲಿ ಆ ಕಡೆ ಪಕ್ಕ ಸಾಯಂಕಾಲದ ಹುದುಗುತ್ತಿರುವ ಪ್ರಕಾಶದ ಹಾಗೆ ನಿಂತಿದ್ದಳು.

"ಮೂರ್ತಿ!" ಗಾಳಿಯ ಒಂದು ಹೊಡೆತಕ್ಕೆ ಬೇವಿನ ಮರದ ಎಲೆಗಳೆಲ್ಲ ಕೆಳಗೆ ಉದುರಿ ಬಿಟ್ಟವೇನೋ ಎನ್ನುವ ಹಾಗೆ ಅವರ ದನಿ ಇದ್ದಕ್ಕಿದ್ದಂತೆ ಕೇಳಿಬಂತು.

"ಜೀ" ಏಕೋ ಏನೋ ತನ್ನ ದನಿ ಅರಳಿಯ ಎಲೆಗಳ ಹಾಗೆ ಕಂಪಿಸುತ್ತಿದೆಯೆಂದು ಮೂರ್ತಿಗೆ ಅನ್ನಿಸಿತು. ಬಹುಶಃ ಅದು ಅವರ ತನಕ ಹೋಗಲೇ ಇಲ್ಲ. ತುಟಿಗಳಲ್ಲೇ ಕಂಪಿಸುತ್ತಿತ್ತು.

"ನೀನು ಇಲ್ಲಿಗೆ ಯಾವಾಗ ಬಂದೆ? ಹೇಗೆ ಬಂದೆ"?

ಮೂರ್ತಿ ಹೊರಗೆ ಶೂನ್ಯದತ್ತ ನೋಡಿದಳು.... ಹೊರಗೆ ತನ್ನ ಕಣ್ಣೋಟದ ಮಿತಿಯನ್ನು ದಾಟಿ ನಂತರ ಹೇಳಿದಳು– "ನಿರಾಶ್ರಿತರ ಜೊತೆ, ಎಲ್ಲ ಜನರೂ ಬಂದರಲ್ಲ ಆಗ".

ರಾಜ್‌ಬಕ್ಷಿ ಕಣ್ತುಂಬಿ ಅವಳ ಕಡೆ ನೋಡಿದರು. ಗೋಧೂಳಿಯ ಈ ಸಮಯದಲ್ಲಿ ಕಂಚಿನ ಮೂರ್ತಿಯ ಹಾಗೆ ಅವಳು ಕದಲದೆ ನಿಂತಿದ್ದಳು.

ಕಳೆದ ವರ್ಷ ಈ ದೇಶ ವಿಭಜನೆಯು ಇನ್ನೊಂದು ಗಜ಼ನೀ ಮಹಮ್ಮದನ ದಾಳಿಯ ಹಾಗೆ ಬಂದಿತ್ತು. ಅದೆಷ್ಟು ಮೂರ್ತಿಗಳನ್ನು ಅದು ಭಗ್ನಗೊಳಿಸಿತ್ತೋ! ಮತ್ತು ಈ ಮೂರ್ತಿಯನ್ನು ಅದ್ಯಾವ ದೇವಾಲಯದಿಂದ ಎತ್ತಿಕೊಂಡು ಬಂದು ಇಲ್ಲಿ ಈ ಒಂದು ಗುಡಿಸಿಲಿನಲ್ಲಿ ಸ್ಥಾಪನೆ ಮಾಡಿಬಿಟ್ಟಿತೋ ಎನ್ನುವ ವಿಚಾರ ಅವರ ಮನಸ್ಸಿಗೆ ಬಂತು.

ಅದರೊಂದಿಗೇ ಮುಳುಗುತ್ತಿರುವ ಸೂರ್ಯನ ಆ ಅರುಣ ವರ್ಣದ ತೀಕ್ಷ್ಣತೆ ಅವರ ಅನುಭವಕ್ಕೆ ಬಂದಿತು. ಜನಗಳನ್ನು ಯಾವಾಗಲೂ ಅವರ ಮನೆ ಮಠ, ಕೆಲಸ–ಬದುಕು, ರೀತಿ ನೀತಿಗಳಿಂದಲೇ ಗುರುತಿಸಲಾಗುತ್ತದೆ. ಈ ಎಲ್ಲವನ್ನೂ ಅವರು ಕಳೆದುಕೊಂಡಾಗ ಅವರ ಆಕೃತಿಗಳೂ ಕಳೆದು ಹೋಗುತ್ತವೆ ಎನಿಸಿತು. ಹಿಂದಿನ ವರ್ಷ ಅವರು ಅನೇಕ ಕ್ಯಾಂಪ್ ಹಾಗೂ ನಿರಾಶ್ರಿತರ ಗುಂಪುಗಳನ್ನು ನೋಡಿದ್ದರು. ಅವರುಗಳು ತಮ್ಮ ಸಂಪತ್ತಿನ ಜೊತೆಗೆ ತಮ್ಮ ಆಕೃತಿಗಳನ್ನೂ ಕಳೆದುಕೊಂಡಿದ್ದರು. ಎಲ್ಲವೂ ಭಟ್ಟಿಯಲ್ಲಿ ಕರಗಿ ಏಕೀಭವಿಸಿಬಿಟ್ಟಂತೆ ಅನಿಸುತ್ತಿತ್ತು. ಆಕೃತಿಗಳು, ದನಿಗಳು ವಿಚಾರಗಳು ಕೂಡಾ..........

'ಆದರೆ ಈ ಮೂರ್ತಿ ಸದೃಢವಾಗಿ ಅಖಂಡವಾಗಿಯೇ ಇದ್ದಾಳೆ'....... ರಾಜ್ ಬಕ್ಷಿಯವರಿಗೆ ಮೂರ್ತಿಯ ಮನೆ ಮಠ, ಅವಳ ಸ್ಥಿತಿ–ಗತಿಗಳ ಬಗ್ಗೆ ಏನೂ ಗೊತ್ತಿರಲಿಲ್ಲ.

'ಅವಳು ಏನಾಗಿದ್ದಳೋ ಅದೇ ಆಗಿದ್ದಾಳೆ. ಯಾವುದೋ ಭವ್ಯ ದೇಗುಲದಲ್ಲೋ ಅರಮನೆಯಲ್ಲೋ ಇರಬೇಕಾದಂಥ ಅವಳ ಸೌಂದರ್ಯ ಈ ಗುಡಿಸಿಲಿನಲ್ಲೂ ಇದೆ' ಎಂಬುದು ಅವರ ಆಳವಾದ ಅನುಭವವಾಗಿತ್ತು.

ಮೂರ್ತಿ ಅದೇ ರೀತಿ ದೂರದಲ್ಲಿ ನಿಂತಿದ್ದಳು. ರಾಜ್‌ಬಕ್ಷಿಯವರು ಚಹಾದ ಕಪ್ಪನ್ನು ಅದೇ ರೀತಿ ಕೈಗಳಲ್ಲಿ ಹಿಡಿದುಕೊಂಡಿದ್ದರು. ಬಹುಶಃ ಅವಳು ಅವರ ಕಡೆಯಿಂದ ಖಾಲಿ ಕಪ್ಪನ್ನು ಈಸಿಕೊಳ್ಳಲು ನಿಂತಿದ್ದಳು. ಆದರೆ ಹೆಜ್ಜೆಗಳ ಮುಂದೆ ಚಾಚಿದ್ದ ಮೌನವನ್ನು ಅವಳಿಗೆ ಮುರಿಯಲಾಗಲಿ ಅಥವಾ.......

ಇದ್ದಕ್ಕಿದ್ದಂತೆ ಮೌನ ಮುರಿಯಿತು. ವಾಚ್‌ಮನ್‌ನ ಹೆಜ್ಜೆ ಸಪ್ಪಳ ಅದನ್ನು ಮುರಿದಿತ್ತು. ರಾಜ್‌ಬಕ್ಷಿ ಚಹಾದ ಕಪ್ಪನ್ನು ಕಾವಲುಗಾರನ ಕೈಗೆ ಕೊಟ್ಟರು. ಕಾವಲುಗಾರನಿಂದ ಮೂರ್ತಿ ಈಸಿಕೊಂಡಳು. ಮತ್ತೆ ತನ್ನ ಗುಡಿಸಿಲಿನತ್ತ ತಿರುಗುತ್ತಿದ್ದ ಮೂರ್ತಿಯ ಕೈಗೆ ಅವನು ಎರಡು ಆಣೆ ನಾಣ್ಯ ನೀಡಿದನು. ಮುರಿದ ಮೌನದಿಂದ ಇನ್ನಷ್ಟು ಹರಳುಗಳು ಉದುರಿದವೇನೋ ಎನ್ನುವಂತೆ ಆ ನಾಣ್ಯಗಳು ಪಿಂಗಾಣಿ ತಟ್ಟೆಯಲ್ಲಿ ಠಣ್ ಠಣ್ ಎಂದು ಶಬ್ದ ಮಾಡಿದವು.....

ರಾಜ್‌ಬಕ್ಷಿ ಮಾರನೇ ದಿನವೂ ಬಂದರು, ಅದರ ಮಾರನೇ ದಿನವೂ ಬಂದರು. ಮತ್ತೆ ಅದರ ಮರುದಿನವೂ ಬಂದರು. ಆದರೆ ಸ್ವತಃ ಅವರೇ ಗುಡಿಸಿಲಿನ ಹತ್ತಿರ ಹೋಗಿ ಚಹಾ ಕೇಳಿ ಕುಡಿದರು. ಆಗ ಎರಡು ತುಣುಕುಗಳಾಗಿ ಮುರಿದುಹೋಗಿದ್ದ ಮೌನ ಮತ್ತೆ ಒಂದೇ ಅಖಂಡ ತುಣುಕೆಂಬಂತೆ ಅನಿಸತೊಡಗಿತು.

ಕೆಲವು ದನಿಗಳು ಮೌನ ಶರೀರದಲ್ಲಿಯ ರಕ್ತನಾಳಗಳಂತಿರುತ್ತವೆ. ಅದರಿಂದಾಗಿ ಆ ಮೌನ ಅತ್ಯಂತ ಸಜೀವವಾಗಿರುವಂತೆ ಭಾಸವಾಗುತ್ತದೆ. ಒಂದು ದಿನ ಚಹಾ ಮಾಡುತ್ತಿರುವಾಗ ಮೂರ್ತಿಯ ಹತ್ತಿರ ಆಡುತ್ತಿದ್ದ ಮಗುವಿನ ದನಿಯೂ ಹೀಗೇ ಇತ್ತು.

"ಈ ಮಗು?"

"ನನ್ನದು"

ಈ ಪ್ರಶ್ನೆ ಮತ್ತು ಉತ್ತರ ಕೂಡ ರಕ್ತದ ವ್ಯವಹಾರದ ಹಾಗೇ ಇತ್ತು. ತಣ್ಣಗಿನ ಮೌನ ಕೆಂಡದ ಬಣ್ಣ ತಾಳಿತ್ತು. ರಾಜ್‌ಬಕ್ಷಿಯವರು ಗುಡಿಸಿಲಿನ ಒಳಗಡೆ ಕುಳಿತಿರುವ ಇನ್ನೊಬ್ಬ ಹೆಂಗಸಿನ ಕಡೆ ನೋಡುತ್ತ "ಆಕೆ?"ಎಂದರು.

ಅದಕ್ಕೆ ಉತ್ತರವಾಗಿ ಮೂರ್ತಿ ಆ ಮಗುವಿಗೆ ಹೇಳಿದಳು– "ಹೋಗು, ಒಳಗಡೆ ಅಮ್ಮನ ಹತ್ತಿರ ಹೋಗು". ಮತ್ತೆ ಬಕ್ಷಿಯತ್ತ ತಿರುಗಿ "ಅವಳು ನನ್ನ ಮಗುವಿನ ತಾಯಿ" ಎಂದಳು.

ಮೌನ ಥಡ್ ಥಡ್ ಎಂದು ಸದ್ದು ಮಾಡಿದಂತಾಯಿತು.

ಮುಂದಿನ ಎರಡು ದಿನ ರಾಜ್‌ಬಕ್ಷಿಯ ಕಿವಿಗಳಲ್ಲಿ ಮೂರ್ತಿಯ ದನಿ ಎಲೆಗಳ ಶ್...ಶ್ ಸದ್ದಿನ ಥರ ಕೇಳತೊಡಗಿತು. ಅವರು ದಿನವೂ ಅವಳ ಗುಡಿಸಿಲಿನಲ್ಲಿ ಚಹಾ ಕುಡಿದರು. ಆದರೆ ಮತ್ತೇನೂ ಕೇಳಲಿಲ್ಲ.

ಮೂರ್ತಿಯ ಶಬ್ದಗಳು ನೇರವಾಗಿದ್ದವು. "ಇದು ನನ್ನ ಮಗು, ಅವಳು ನನ್ನ ಮಗುವಿನ ತಾಯಿ" ಆದರೆ ಅವುಗಳ ಅರ್ಥ ಎಲೆಗಳ ಸರ–ಸರ ಸದ್ದಿನಂತೆ ಹಿಡಿತಕ್ಕೆ ಸಿಗುತ್ತಿರಲಿಲ್ಲ.

ಹೊಸದಾಗಿ ಆಗುತ್ತಿದ್ದ ಈ ಬಡಾವಣೆ ನಗರದಿಂದ ಎಂಟು ಮೈಲಿ ದೂರ ಇತ್ತು. ಅದರ ಸುತ್ತ ಮುತ್ತ ಹತ್ತಿರದಲ್ಲಿ ಎಲ್ಲೂ ಇನ್ನೂ ಅಂಗಡಿ ಮುಂಗಟ್ಟುಗಳ್ಯಾವುದೂ ಆಗಿರಲಿಲ್ಲ. ನಗರದಿಂದ ಈ ಬಡಾವಣೆಗೆ ಒಂದು ಬಸ್ ಓಡುತ್ತಾ ಇತ್ತು. ಅದೂ ದಿನದಲ್ಲಿ ಬಹುಶಃ ಮೂರು ಸಲ ಮಾತ್ರ. ಈ ಬಸ್ ಸಿಕ್ಕಲಿಲ್ಲ ಅಂದರೆ ಎಂಟು ಮೈಲಿ ನಡೆದುಕೊಂಡು ಹೋಗುವುದು ಬಿಟ್ಟರೆ ಬೇರೆ ಉಪಾಯವಿರಲಿಲ್ಲ.

ಇದೇ ದಾರಿಯಲ್ಲಿ ಒಂದು ದಿನ ಮೂರ್ತಿ ನಗರದಿಂದ ಬಡಾವಣೆ ಕಡೆಗೆ ನಡೆದುಕೊಂಡು ಬರುತ್ತಿರುವುದನ್ನು ರಾಜ್‌ಬಕ್ಷಿ ನೋಡಿದರು. ಮೂರ್ತಿಯ ಎರಡೂ ಕೈಗಳಲ್ಲಿ ಒಂದಷ್ಟು ಗಂಟು ಮೂಟೆಗಳಿದ್ದವು. ರಾಜ್‌ಬಕ್ಷಿ ತಮ್ಮ ಗಾಡಿನಿಲ್ಲಿಸಿದರು.

"ಬರೀ ಎರಡು ನಿಮಿಷಕ್ಕೆ ಮುಂಚೆ ಒಂದು ಗಾಡಿ ಹೊರಟು ಹೋಗಿದೆ! ಚಹಾದ ಎಲೆ, ಸಕ್ಕರೆ, ಇನ್ನೊಂದಿಷ್ಟು ಸಣ್ಣಪುಟ್ಟ ಸಾಮಾನು ತರೋದಕ್ಕೆ ಅವಾಗ ಅವಾಗ ಸಿಟಿಗೆ ಹೋಗಬೇಕಾಗುತ್ತಿರುತ್ತೆ." ಎಂದು ಹೇಳುತ್ತ ಮೂರ್ತಿ ಗಾಡಿಯಲ್ಲಿ ಗಂಟು ಮೂಟೆಗಳನ್ನಿಟ್ಟಳು.

ರಾಜ್‌ಬಕ್ಷಿ ಗಾಡಿಯನ್ನು ಫಸ್ಟ್‌ಗೇರ್‌ನಿಂದ ಎರಡನೇ ಗೇರ್‌ಗೆ ಮತ್ತೆ ಮೂರನೇ ಗೇರ್‌ಗೆ ಹಾಕುತ್ತ ನಿಧಾನವಾಗಿ ಹೇಳಿದರು. "ಬಹಳ ಕಷ್ಟ ಪಡಬೇಕಾಗುತ್ತ?"

ಬಳಕುತ್ತ ಬೀಸುವ ಸಾಯಂಕಾಲದ ತಂಗಾಳಿಯಂತೆ ಮೂರ್ತಿ ಸುಮ್ಮನೆ ನಕ್ಕಳು. ಏನೂ ಮಾತಾಡಲಿಲ್ಲ.

"ಮೂರ್ತಿ! ನಿನ್ನ ಮಗುವಿನ ತಂದೆ?" ರಾಜ್‌ಬಕ್ಷಿಯ ಬಾಯಿಂದ ಅರ್ದಂಬರ್ಧವಾಕ್ಯ ಹೊಮ್ಮಿತು. ಆ ಮಾತು ಸ್ವಲ್ಪ ತಪ್ಪಾಯಿತೇನೋ ಎಂದು ಅವರಿಗೆ ಅನ್ನಿಸಿತು. ಆ ವಾಕ್ಯವನ್ನು ಸ್ವಲ್ಪ ಸರಿಪಡಿಸುತ್ತ ಹೇಳಿದರು.

ನಿನ್ನ ಯಜಮಾನ ಈ ಗಲಾಟೆ ಸಮಯದಲ್ಲಿ ಏನಾದರೂ...."

"ಹೌದು ಬಂಡುಕೋರರು ಸಾಯಿಸಿಬಿಟ್ಟರು"

ಮುಂದಿನ ಮೌನದಲ್ಲಿ ಆ ದಿನದ ಮೂರ್ತಿಯ ಶಬ್ದಗಳು ರಾಜ್‌ಬಕ್ಷಿಯ ಕಿವಿಗಳಲ್ಲಿ 'ಶ್' 'ಶ್' ಸದ್ದುಮಾಡತೊಡಗಿದವು

ಸ್ವಲ್ಪ ಹೊತ್ತಿನ ನಂತರ – "ಜನ ಚಿತ್ರ ವಿಚಿತ್ರವಾಗಿ ಮಾತಾಡ್ತಾರೆ" ಅಂದರು.

"ನನ್ನ ವಿಷಯದಲ್ಲಿ?" ಎಂದು ಮೂರ್ತಿ ಕೇಳಿದಳು. ಆದರೆ ಅವಳ ದನಿಯಲ್ಲಿ ಚಿಂತೆಯೇನೂ ಇದ್ದ ಹಾಗೆ ಕಾಣಲಿಲ್ಲ.

"ಆ ಇನ್ನೊಬ್ಬ ಹೆಂಗಸು?"

"ಅವಳ ಹೆಸರು ರುಕ್ಮಿಣಿ. ಅವಳು ನನ್ನ ಅಕ್ಕ 'ರುಕ್ಕೀ'

"ಈ ಮಗು ಅವಳದಾ?"

"ಹೌದು"

"ನಿನ್ನದಲ್ಲವ?"

"ನನ್ನದೂ"

ರಾಜ್ ಬಕ್ಷಿ ನಕ್ಕುಬಿಟ್ಟರು. 'ಹೆಚ್ಚಾಗಿ ಯಾರ ಮಗು?'

"ಹೆಚ್ಚಾಗಿ ಅವಳ ಮಗು" ಮೂರ್ತಿಯೂ ನಕ್ಕಂತೆ ಮಾಡಿದಳು. ಒಂದು ಕ್ಷಣದ ಮೌನದ ನಂತರ ರಾಜ್‌ಬಕ್ಷಿಯವರು ಗಂಭೀರ ದನಿಯಲ್ಲಿ ಹೇಳತೊಡಗಿದರು – ನಿಜ ಹೇಳಬೇಕೆಂದರೆ ನಿಮ್ಮಿಬ್ಬರಲ್ಲಿ ಯಾರಾದರೂ ಒಬ್ಬರು ಹೆಣ್ಣಾಗಿರಬೇಕಾಗಿತ್ತು, ಇನ್ನೊಬ್ಬರು ಗಂಡಾಗಿರಬೇಕಾಗಿತ್ತು.

"ಹೌದು, ಆದರೆ ಈ ವಿಚಾರ ನಿಮ್ಮ ಬದಲು ಆ ದೇವರಿಗೆ ಹೊಳೆಯಬೇಕಾಗಿತ್ತು" ಎಂದು ಮೂರ್ತಿ ಹೇಳಿದಾಗ ರಾಜ್ ಬಕ್ಷಿ ಸ್ವಲ್ಪ ಚಕಿತರಾಗಿ ಮೂರ್ತಿಯ ಕಡೆ ನೋಡಿ ಮತ್ತೆ ಹೇಳಿದರು.– " ಜನ ಏನು ಹೇಳ್ತಾರೆ ಅಂತ ಗೊತ್ತಿದೆಯೇನು?"

"ಏನು ಹೇಳ್ತಾರೆ"?

"ಒಂದು ದಿನ ನನ್ನ ಕಂಟ್ರಾಕ್ಟರ್ ಗುಮಾಸ್ತ ಯಾರ ಹತ್ತಿರಾನೋ ಹೇಳ್ತಾ ಇದ್ದ....."

"ಏನು ಹೇಳ್ತಾ ಇದ್ದ?"

"ಏನು ಹೇಳ್ತಾ ಇದ್ದ ಅಂದರೆ............ ಮತ್ತೆ ಮದುವೆ ಆಗೋದಕ್ಕೆ ನಿನ್ನದೇನೂ ಅಭ್ಯಂತರ ಇಲ್ಲ..... ಒಂದು ವೇಳೆ..........." ರಾಜ್ ಬಕ್ಷಿ ಈ "ಒಂದು ವೇಳೆ" ಯಿಂದ ಮುಂದಕ್ಕೆ ಏನೊಂದು ಶಬ್ದವನ್ನೂ ಹೇಳದಾದರು.

ಮೂರ್ತಿಯೇ ಹೇಳಿದಳು– "ಜನ ಹೇಳ್ತಾ ಇರೋದು ಸರಿಯಾಗೇ ಇದೆ, ನಾನೇ ಹೇಳಿದ್ದೆ ಒಂದು ವೇಳೇ ಯಾರಾದರೂ ನನ್ನನ್ನು ಮತ್ತು ರುಕ್ಕಿಯನ್ನು ಇಬ್ಬರನ್ನೂ ಮದುವೆ ಆಗುವುದಾದರೆ ನಾನು ಮದುವೆ ಮಾಡಿಕೊಳ್ತೀನಿ"

"ವಿಚಿತ್ರವಾದ ಷರತ್ತು"

"ಇಲ್ಲ ವಿಚಿತ್ರವಾದ್ದಲ್ಲ" ಮೂರ್ತಿ ಎದುರಿಗಿನ ಖಾಲಿ ರಸ್ತೆಯ ಕಡೆ ನೋಡುತ್ತಿದ್ದಳು. ಆಮೇಲೆ "ಸಾಹೇಬರೇ! ಈಗ ತಾನೇ ನೀವು ನಮ್ಮಿಬ್ಬರಲ್ಲಿ ಒಬ್ಬರು ಹೆಣ್ಣಾಗಬೇಕಿತ್ತು.

ಇನ್ನೊಬ್ಬರು ಗಂಡಾಗ ಬೇಕಾಗಿತ್ತು ಅಂತ ಹೇಳಿದಿರಲ್ಲ. ನೀವು ಸತ್ಯವಾದ ಮಾತನ್ನೇ ಹೇಳಿದ್ದಿರಿ ನನಗೆ ರುಕ್ಕಿಯಂಥ ಗಂಡು ಬೇಕಾಗಿತ್ತು." ಎಂದಳು.

"ಆದರೆ, ನೀನು ಈಗ ಅವಳಿಗೋಸ್ಕರ ಕೆಲಸ ಮಾಡ್ತೀ ಸಂಪಾದನೆ ಮಾಡ್ತೀ, ಒಬ್ಬ ಗಂಡಸಿನ ಥರ.........."

"ನಾನು ಹೀಗೇ ಚೆನ್ನಾಗಿದ್ದೀನಿ"

"ಆದರೆ ಆ ವಿಷಯ?"

"ನಾನು ಗಂಡಂತೂ, ಅಲ್ಲ, ಗಂಡಿನ ಜಾಗದಲ್ಲಿದ್ದೀನಿ. ಗಂಡಿನ ಥರ"

ಮೂರ್ತಿ ಜೊತೆ ಮಾತಾಡಿದ ಮೇಲೆ ತಮಗೆ ಇಷ್ಟೊಂದು ಆಶ್ಚರ್ಯವಾದೀತು ಎಂದು ರಾಜ್‌ಬಕ್ಷಿಯವರು ಯೋಚಿಸಿರಲಿಲ್ಲ. ಅವರು ನಕ್ಕ ಹಾಗೆ ಮಾಡಿದರು. ನಗುವಿನಿಂದ ಆಶ್ಚರ್ಯವನ್ನು ಮುಚ್ಚಿ ಹಾಕುತ್ತಿದ್ದಾರೇನೋ ಎನ್ನುವ ಹಾಗೆ.

ಮೂರ್ತಿ ಹೇಳಿದಳು– "ವಾಸ್ತವದಲ್ಲಿ ಗಂಡು ನನಗೂ ಸಿಗಲಿಲ್ಲ ಅವಳಿಗೂ ಸಿಗಲಿಲ್ಲ"

"ಅಂದರೆ ಅವಳ ಗಂಡನೂ ದೇಶವಿಭಜನೆಯ ದಂಗೆಯ ಸಮಯದಲ್ಲಿ........"

"ಆ ಬಂಡುಕೋರರು ಸಾಯಿಸಿಬಿಟ್ಟರಲ್ಲ ಅದು ಅವನೇ" "ಮೂರ್ತಿ!"

ರಾಜ್‌ಬಕ್ಷಿಯವರು ಎಲೆಗಳೆಲ್ಲಾ ಉದುರಿ ಬೋಳಾದ ಮರದ ಕೊಂಬೆಯ ಹಾಗೆ ಶೂನ್ಯ ನೋಟದಿಂದ ಮೂರ್ತಿಯತ್ತ ನೋಡತೊಡಗಿದರು. ಮತ್ತೆ ಹೇಳಿದರು– " ಆ ಮನುಷ್ಯ ನಿನ್ನವನೂ ಹೌದು, ಆಕೆಯವನೂ, ಹೌದು......? ಈ ಮಗು ನಿನ್ನದೂ ಹೌದು ಅವಳದೂ..........." ?

"ಹೌದು ಸಾಹೇಬರೆ" ಮೂರ್ತಿ ನಗತೊಡಗಿದಳು. "ದೇವರು ಒಂದು ವಿಷಯದಲ್ಲಿ ತಪ್ಪು ಮಾಡಿದ್ದರಿಂದ ಮತ್ತೆ ತಪ್ಪು ಮಾಡುತ್ತಲೇ ಹೋದ"

ರಾಜ್‌ಬಕ್ಷಿಯವರು ಗಾಡಿಯ ವೇಗವನ್ನು ತಗ್ಗಿಸಿ ಹೇಳಿದರು– "ಬಡಾವಣೆ ಹತ್ತಿರ ಬರುತ್ತಾ ಇದೆ ಮೂರ್ತಿ! ಒಂದು ವೇಳೆ ನಿನ್ನದೇನೂ ವಿರೋಧವಿಲ್ಲ ಅಂದರೆ ನಾನು ಇಲ್ಲಿ ಸ್ವಲ್ಪ ಹೊತ್ತು ಗಾಡಿ ನಿಲ್ಲಿಸಲೇನೂ?"

ಮೂರ್ತಿಯ ಮೌನ ಬಕ್ಷಿ ಸಾಹೇಬರಿಗಿಂತ ಮೂರ್ತಿಗೇ ವಿಚಿತ್ರವೆನ್ನಿಸಿತು.– ಹೇಳಿದಳು– "ಆಗಲಿ ಸಾಹೇಬರೇ! ನೀವು ಒಳ್ಳೆಯ ಮನುಷ್ಯ ಅಂತ ಕೇಳಿದ್ದೀನಿ"

"ಇನ್ನೇನು ಕೇಳಿದ್ದೀಯಾ?" ರಾಜ್‌ಬಕ್ಷಿ ಗಾಡಿನಿಲ್ಲಿಸಿ ಕೇಳಿದರು.

"ಮತ್ತೆ..... ನಿಮಗೆ ಮಕ್ಕಳಿಲ್ಲ ಅಂತ"

"ಮಗುವಿನ ತಾಯಿಯೂ ಇಲ್ಲ!" ರಾಜ್‌ಬಕ್ಷಿ ನಗತೊಡಗಿದರು.

"ಹೌದು ಯಾರೂ ಇಲ್ಲ"

"ಎಲ್ಲಿ ಕೇಳಿದ್ದೆ?"

"ನಿಮ್ಮ ಕಂಟ್ರ್ಯಾಕ್ಟರು, ವಾಚ್‌ಮನ್ ಎಲ್ಲರೂ ಚಹಾ ಕುಡಿಯಲು ನನ್ನ ಹತ್ತಿರ ಬರುತ್ತಾರೆ"

"ಅವರು ಈ ಮಾತುಗಳನ್ನು ಆಡುತ್ತಾರೇನು?"

"ಅವತ್ತು ಮಾತ್ರ – ನಿಮ್ಮ ಮನೆ ಪಾಯ ಹಾಕಿಸಿದಿರಲ್ಲ. ಅವತ್ತು ಮಾತ್ರ ಮಾತಾಡ್ತಿದ್ದರು. ಆ ಹೊತ್ತು ನೀವು ಹವನ –ಹೋಮ ಮಾಡಲಿಲ್ಲ, ಬೂಂದಿಕಾಳು ಹಂಚಲಿಲ್ಲ. ಅವರೆಲ್ಲರೂ ನಿಮ್ಮನ್ನು ತುಂಬಾ ಗೌರವಿಸುತ್ತಾರೆ....... ನಿಮ್ಮವರು ಅಂತ ಯಾರೂ ಇಲ್ಲ, ಹಾಗಾಗಿ ನಿಮಗೆ ಹೊಸಮನೆ ಕಟ್ಟಿಸುವ ಖುಷಿ ಇಲ್ಲ ಅಂತ ಅಂದುಕೊಳ್ತಾರೆ"

ರಾಜ್‌ಬಕ್ಷಿ ಬಹಳ ಹೊತ್ತು ಮೌನವಾಗಿದ್ದರು. ಅವರಲ್ಲಿ ಮೂರ್ತಿಯ ಜೊತೆ ಮಾತನ್ನು ಮುಂದುವರಿಸುವ ದಾರಿ ಕಡಿದು ಹೋಗಿದೆ ಎನಿಸಿತು.

ಆದರೆ ಈ ದಾರಿ ಬಹುಶಃ ರಾಜ್‌ಬಕ್ಷಿಯವರ ವೈಯಕ್ತಿಕ ಬದುಕಿನ ಕಡೆಗೆ ಹೊರಳುವ ದಾರಿಯಾಗಿತ್ತು. ಅವರು ಅಲ್ಲಿಂದ ಹೊರಳಿ ಮೂರ್ತಿಯ ಬದುಕಿನತ್ತ ಸಾಗುವ ದಾರಿಯ ಕಡೆಗೆ ನೋಡತೊಡಗಿದರು. "ಒಳ್ಳೇದು ಮೂರ್ತಿ! ಆ ಇನ್ನೊಬ್ಬ ಹೆಂಗಸು ಪುರುಷನಾಗಿರಲಿಲ್ಲ. ಹಾಗಾಗಿ ನೀನು ಬೇರೆಯವರನ್ನು ಮದುವೆ ಮಾಡಿಕೊಳ್ಳಬೇಕಾಗಿ ಬಂತು....." ಎಂದರು.

"ಹೌದು ಸಾಹೇಬರೇ !" ಮೂರ್ತಿ ನಕ್ಕಂತೆ ಮಾಡಿದಳು. "ನನ್ನ–ಅವಳ ಅದೃಷ್ಟ ಒಂದೇ ಆಗಿತ್ತು. ಹಾಗಾಗಿ ನಮ್ಮ ಮದುವೇನೂ ಒಬ್ಬನೇ ವ್ಯಕ್ತಿಯೊಂದಿಗೆ ಆಯಿತು. ಮತ್ತು ನಮ್ಮಿಬ್ಬರ ಮಗೂನೂ ಒಂದೇ"

ಹೊರಗಡೆ ಸ್ವಲ್ಪ ತುಂತುರು ಮಳೆ ಬಿಳತೊಡಗಿತ್ತು. ರಾಜ್ ಬಕ್ಷಿಯವರು ಮಬ್ಬಾಗುತ್ತಿರುವ ವಿಂಡ್‌ಸ್ಕ್ರೀನ್ ಕಡೆ ನೋಡಿ ವೈಪರ್ ಆನ್ ಮಾಡಿದರು. ಆಮೇಲೆ ಹೇಳಿದರು– "ಇಬ್ಬರ ಮದುವೇನೂ ಒಬ್ಬ ವ್ಯಕ್ತಿಯ ಜೊತೆಯಲ್ಲಿ ಆಗೋಕೆ ಸಾಧ್ಯ. ಆದರೆ ಮಗು ಯಾವ ಥರಾ...........?"

ದೇಹ ಮನಸ್ಸುಗಳಲ್ಲಿ ಎಷ್ಟು ಮಹಾ ವ್ಯತ್ಯಾಸ ಇರತ್ತೇ ಸಾಹೇಬರೇ? ಇಷ್ಟಂತೂ ತಿಳಿದುಕೊಳ್ಳಿ–ಮನಸ್ಸು ಮಾತ್ರ ಅವಳದ್ದಾಗಿತ್ತು. ನನ್ನದಾಗಿರಲಿಲ್ಲ. ದೇಹಮಾತ್ರ ನನ್ನದಾಗಿತ್ತು.

ರಾಜ್‌ಬಕ್ಷಿಯವರು ಬಹುಶಃ ಹೂಂ ಅಂತೇನೋ ಹೇಳಿರಬೇಕು. ಆಮೇಲೆ ಅದೆಷ್ಟೋ ಹೊತ್ತು ಮೌನವಾಗಿದ್ದರು. ಇದ್ದಕ್ಕಿದ್ದ ಹಾಗೆ "ಆಗಂತೂ ಒಬ್ಬನೇ ವ್ಯಕ್ತಿಯ ಜೊತೆ ಮದುವೆ ಮಾಡಿಕೊಳ್ಳುವಂಥದ್ದೇನೋ ಒಂದು ಅನಿವಾರ್ಯ ಇತ್ತು. ಅದೂ ತೀರಾ ಅಗತ್ಯವೂ ಆಗಿತ್ತು. ಆದರೆ ಈಗ ಯಾಕೆ?"

"ಈಗಲೂ ಅಗತ್ಯ ಇದೆ.... ಅವನಿಲ್ಲ, ಆದರೆ ಅಗತ್ಯ ಇದೆ"

"ಅದು ಯಾವ ರೀತಿಯ ಅಗತ್ಯತೆ?"

"ಆ ಅಗತ್ಯತೆ ಕೇವಲ ಹಣದ್ದು, ಆ ಮನುಷ್ಯ ತುಂಬಾ ಶ್ರೀಮಂತನಾಗಿದ್ದ. ಅವರ ಕಡೆ ಅನೇಕ ಭಟ್ಟಿಗಳಿದ್ದವು. ಅವರ ಭಟ್ಟಿಗಳಲ್ಲಿ ಸುಡುತ್ತಾ ಇದ್ದದ್ದು ಮಣ್ಣಿನ ಇಟ್ಟಿಗೆಗಳಲ್ಲ. ಚಿನ್ನದ ಇಟ್ಟಿಗೆಗಳು ಅಂತ ಜನ ಹೇಳ್ತಾ ಇದ್ದರು."

"ಆಮೇಲೆ"

"ಅವರ ಮೊದಲನೇ ಹೆಂಡತಿ ರುಕ್ಕಿ. ಇಲ್ಲ ಇಲ್ಲ ಮೊದಲನೆಯವಳಲ್ಲ. ಮೊದಲನೆಯವಳು ಸತ್ತು ಹೋಗಿದ್ದಳು. ಬಹುಶಃ ಅವರು ಅವಳನ್ನು ಓಡಿಸಿಬಿಟ್ಟಿದ್ದರು. ನಾನು ಅವಳನ್ನು ನೋಡಲಿಲ್ಲ. ಅವಳು ಸುಂದರವಾಗಿರಲಿಲ್ಲ ಅಂತ ಕೇಳಿದ್ದೆ. ಅದಕ್ಕಾಗಿ....."

"ಸುಂದರವಾಗಿರಲಿಲ್ಲ, ಅದರಿಂದಾಗಿ ಸತ್ತು ಹೋದಳೋ? "ರಾಜ್‌ಬಕ್ಷಿ ನಕ್ಕು ಹೇಳಿದರು.

"ಹೌದು ಸಾಹೇಬರೆ, ಯಾರಿಗಾದರೂ ಅವಮಾನ ಮಾಡುತ್ತಾ ಇದ್ದರೆ ಅವರು ಸತ್ತಂತಾಗಿ ಬಿಡುತ್ತಾರೆ. ಆಮೇಲೆ ಎಂದಾದರೂ ಸತ್ತೂ ಹೋಗುತ್ತಾರೆ"

"ಆಮೇಲೆ"

"ಆಮೇಲೆ ಅವರು ರುಕ್ಕಿಯನ್ನು ಮದುವೆ ಮಾಡಿಕೊಂಡರು. ರುಕ್ಕಿ ತನ್ನ ಯೌವನದ ದಿನಗಳಲ್ಲಿ ತುಂಬ ಸುಂದರವಾಗಿದ್ದಳು. ಅನೇಕ ವರ್ಷಗಳು ಕಳೆದವು....."

"ರುಕ್ಕಿಗೆ ಮಕ್ಕಳಾಗಲಿಲ್ಲ ಅಲ್ಲವಾ?"

"ಹೌದು ಸಾಹೇಬರೆ! ಭಟ್ಟಿಯ ಯಜಮಾನನಿಗೆ ಮೊದಲನೆ ಹೆಂಡತಿಯ ಶಾಪ ತಟ್ಟಿದೆ ಅಂತ ಜನ ಹೇಳುತ್ತಾ ಇದ್ದರು. ಮೊದಲನೆಯವಳು ಸತ್ತಾಗ ಅವಳಿಗೆ ಮಗು ಆಗುವುದು ಖಚಿತವಿತ್ತು. ಆದರೆ ಈ ಮನುಷ್ಯ ಅವಳನ್ನು ಅದೆಷ್ಟು ಹೊಡೆದ ಅಂದರೆ ಅವಳೂ ಅವಳ ಮಗು ಇಬ್ಬರೂ............" ಮೂರ್ತಿ ಹಳೆಯ ವಿಷಯವನ್ನು ನೆನಪಿಸಿಕೊಂಡು ಈಗ ನಡುಗಿದಂತೆ ಮಾಡಿದಳು.

"ಹಾಗಾಗಿ ಮಗುವಿನ ಸಲುವಾಗಿ ನಿನ್ನನ್ನ ಮದುವೆಯಾದನೆ?"

"ಹೌದು ಸಾಹೇಬರೆ ಮಗುವಿನ ಸಲುವಾಗಿ ! ನನ್ನ ತಂದೆ ತಾಯಿಗಳ ಕಡೆಯಿಂದ ನನ್ನನ್ನು ಒಂದು ಥರದಲ್ಲಿ ಬೆಲೆಗೆ ಕೊಂಡು ಕೊಂಡುಬಿಟ್ಟಿದ್ದ."

"ಮತ್ತೆ ಆಮೇಲೆ ಆ ಶಾಪ ಕೊನೆಯಾಯಿತೇ?"

"ಇಲ್ಲ... ಇಲ್ಲ ಮೂರ್ತಿಯ ದನಿ ನಡುಗಿತು. ಅನಂತರ ನಡುಗುತ್ತಿರುವ ದನಿಯನ್ನು ಸಂಭಾಳಿಸಿಕೊಳ್ಳುತ್ತ ಹೇಳಿದಳು. ಆದರೆ ಸಾಹೇಬರೆ, ನೀವು ಇದನ್ನೆಲ್ಲ ಯಾತಕ್ಕೆ ಕೇಳುತ್ತಿದ್ದೀರಿ? ನಾನು ನಿಮಗೆ ಇದನ್ನೆಲ್ಲ.... ಇದನ್ನೆಲ್ಲ ಯಾಕೆ ಹೇಳಲಿ?"

ರಾಜ್‌ಬಕ್ಷಿ ನೆಟ್ಟ ನೋಟದಿಂದ ಮೂರ್ತಿಯ ಮುಖದತ್ತ ನೋಡುತ್ತಿದ್ದರು. ಮತ್ತೆ ಹೇಳತೊಡಗಿದರು. "ನಾನು ನಿನ್ನನ್ನು ಆರು ತಿಂಗಳಿನಿಂದ ನೋಡುತ್ತಾ ಇದ್ದೀನಿ ಅದು ಯಾಕೋ ಏನೋ..... ನಾನು ಬರೀ ಮನೆ ಕೆಲಸದ ಸಲುವಾಗಿ ದಿನವೂ ಇಲ್ಲಿಗೆ ಬರುತ್ತಾ ಇಲ್ಲ... ಬಹುಶಃ..."

'ಬಹುಶಃ......' ರಾಜ್‌ಬಕ್ಷಿಯವರ ಬಲಗೈ ನಿಂತಿದ್ದ ಗಾಡಿಯ ಸ್ಟೀರಿಂಗ್‌ವ್ಹೀಲ್ ಮೇಲಿತ್ತು. ಅವರು ಎಡಗೈಯನ್ನು ಮೂರ್ತಿಯ ಹೆಗಲಮೇಲಿರಿಸಿದರು– "ನಾನು ನಿನ್ನನ್ನು ಮದುವೆ ಮಾಡಿಕೊಳ್ಳಬಹುದೇ?"

"ಸಾಹೇಬರೆ! ನೀವು?" ಮುರ್ತಿಯ ಪ್ರಶ್ನೆಯಲ್ಲಿ ಎಷ್ಟೊಂದು ವಿಸ್ಮಯವಿತ್ತೋ ದನಿಯಲ್ಲಿ ಅಷ್ಟೊಂದು ವಿಸ್ಮಯವಿರಲಿಲ್ಲ. ನಿಧಾನವಾಗಿ ಹೇಳಿದಳು. "ನನ್ನನ್ನು ನಾನು ತಡೆಯಬಹುದು. ಆದರೆ ಕನಸುಗಳನ್ನಲ್ಲ. ನಾನು ಮೂರು ಸಲ ಬೆಳಿಗೆ ಎದ್ದು ನನ್ನನ್ನು ನಾನೇ ಬಯ್ದುಕೊಂಡಿದ್ದೀನಿ. ಸಾಹೇಬರೆ... ಮೂರು ರಾತ್ರಿ ನನಗೆ ನಿಮ್ಮ ಕನಸು ಬೀಳ್ತಾ ಇತ್ತು..."

"ನನ್ನನ್ನು ಸಾಹೇಬರೆ ಅಂತ ಕರೆಯಬೇಡ. ಇನ್ನೇನಾದರೂ ಹೇಳು".

ಮೂರ್ತಿ ಸುಮ್ಮನಿದ್ದಳು.

"ಒಳ್ಳೇದು, ಈಗ ಹೇಳು ನನ್ನ ಯೋಚನೆ ಹೀಗಿದೆಯಲ್ಲ, ನೀನು ನನಗೂ ಅದೇ ಷರತ್ತು ಹಾಕ್ತೀಯೇನು?"

"ಅದೇ, ರುಕ್ಕೀನೂ ಮದುವೆಯಾಗಬೇಕು ಅನ್ನುವುದು ತಾನೇ"?

"ಹೌದು"

ರಾಜ್‌ಬಕ್ಷಿಯವರು ಮೂರ್ತಿಯ ಹೆಗಲ ಮೇಲಿನಿಂದ ಕೈ ತೆಗೆದು ಅದನ್ನು ಸ್ಟಿಯರಿಂಗ್ ವ್ಹೀಲ್ ಮೇಲೆ ಇರಿಸಿದರು.

ಹೊರಗಡೆ ಮಳೆ ಹನಿ ಜೋರಾಗಿ ಬೀಳುತ್ತಿತ್ತು. ವ್ಹಿಂಡ್ ಸ್ಕ್ರೀನ್ ಮೇಲೆ ಮಸುಕು ಇನ್ನು ದಟ್ಟವಾಗುತ್ತಾ ಇತ್ತು. ಆದರೆ ವೈಪರ್ ವೇಗವಾಗಿ ಮಬ್ಬನ್ನು ಒರೆಸುತ್ತಾ ಇತ್ತು.

"ಸಾಹೇಬರೆ! ಬಕ್ಷಿ ಸಾಹೇಬರೆ ಈ ಮಾತಂತೂ ಖಂಡಿತಾ ನಾನೆಲ್ಲಿರುತ್ತೇನೋ ರುಕ್ಕಿ ಅಲ್ಲೇ....... ನಾನು ಯಾವ ಸ್ಥಿತಿಯಲ್ಲಿರುತ್ತೇನೋ ಅದೇ ಸ್ಥಿತಿಯಲ್ಲಿ ಅವಳು.........." ಮೂರ್ತಿ ಇನ್ನೂ ಹೇಳುತ್ತಾ ಇದ್ದಳು. ಬಕ್ಷಿ ಸಾಹೇಬರು ಮಾತನ್ನು ತುಂಡರಿಸಿ ಮಧ್ಯದಲ್ಲೇ ಹೇಳಿದರು. "ಇದಕ್ಕೆ ನಾನೇನೂ ಬೇಡ ಅನ್ನಲ್ಲ. ಅವಳು ತುಂಬಾ ಸುಖವಾಗಿ ತುಂಬಾ ಅರಾಮವಾಗಿ ಇರುತ್ತಾಳೆ"

ಮೂರ್ತಿ ನಕ್ಕಂತೆ ಮಾಡಿದಳು– "ಯಾವ ಥರ"

ಬಕ್ಷಿ ಸಾಹೇಬರಿಗೆ ಮೂರ್ತಿ ಕೇಳಿದ "ಯಾವ ಥರ" ಎನ್ನುವ ಮಾತು ಅರ್ಥ ಹೀನವೆಂಬತೆ ಕಂಡಿತು. ಹೇಳಿದರು– "ಪೂರ್ಣಗೌರವದೊಂದಿಗೆ ಆರಾಮವಾಗಿ ಮನೆಯ ತಾಯಿಯ ತರಹ, ಸೋದರಿಯ ತರಹ,

ಮೂರ್ತಿ, ಎದುರಿನ ವಿಂಡ್‌ಸ್ಕ್ರೀನ್ ಕಡೆಗೆ ನೋಡಿದಳು. ವೈಪರ್ ಚಲಿಸುತ್ತಿತ್ತು. ಆದರೂ ತನ್ನ ಅಂಗೈಗಳಿಂದ ಅದರ ತೇವವನ್ನು ಒರೆಸುತ್ತ ಹೇಳಿದಳು. "ಇಷ್ಟೇ ವಿಷಯ ಬಕ್ಷಿ ಸಾಹೇಬರೇ! ನೀವು ಎಷ್ಟೇ ಶ್ರೀಮಂತರಾಗಿರಬಹುದು, ಅವಳು ತಾಯಿಯ ತರಹ ಇರುತ್ತಾಳೆ ಅಂದರೆ ತಾಯಿಯಾಗಿ ಅಲ್ಲ, ಕೇವಲ ತಾಯಿತರಹ ಇರುತ್ತಾಳೇ ಅಷ್ಟೆ, ಸೋದರಿಯಾಗಿ ಇರಲ್ಲ, ಸೋದರಿತರಹ ಇರುತ್ತಾಳೆ. ಈ 'ತರಹ' ಬಹಳ ದಿವಸ ನಡೆಯಲ್ಲ."

ರಾಜ್‌ಬಕ್ಷಿಯವರಿಗೆ ಈಗ ಅನ್ನಿಸಿದ್ದು ಬಹುಶಃ ಮೂರ್ತಿಯ ಹೆಗಲಿಗೆ ಅವರ ಕೈನ ಅಗತ್ಯವಿಲ್ಲ. ಆದರೆ, ಅವರ ಕೈಗೆ ಮೂರ್ತಿಯ ಹೆಗಲಿನ ಅಗತ್ಯವಿದೆ ಎಂದು. ಅವರು ತಮ್ಮ ನಡುಗುತ್ತಿರುವ ಎಡಗೈಯನ್ನು ಮೂರ್ತಿಯ ಹೆಗಲಮೇಲಿಟ್ಟರು.

ಮೂರ್ತಿ ಹೇಳತೊಡಗಿದಳು – "ಯಾವುದೇ ಹೆಂಗಸು ಯಾರಿಗಾದರೂ ಹೆಂಡತಿ ಆದಳು ಅಂದರೆ ಅವಳು ಹೆಂಡತಿ ಆಗ್ತಾಳೆಯೇ ಹೊರತು ಹೆಂಡತಿ ತರಹ ಅಲ್ಲ"

"ಹೌದು ಮೂರ್ತಿ!" ರಾಜ್‌ಬಕ್ಷಿಯವರು ಅವಳ ತರ್ಕವನ್ನು ಒಪ್ಪಿದರು. ಆದರೆ ಹೇಳಿದರು. "ನಿನ್ನ ಜೀವನದಲ್ಲಿ ಮೊದಲನೇ ಸಲವೂ ನಿನಗೆ ಏನು ಸಿಕ್ಕಿತೋ ಅದನ್ನು ಅವಳ ಜೊತೆ ಹಂಚಿಕೊಳ್ಳಬೇಕಾಯಿತು. ಈಗ ಎರಡನೇ ಸಲ ನೀನು ಗೊತ್ತಿದ್ದೂ ಗೊತ್ತಿದ್ದೂ.........."

"ಇದು ಯಾವುದೇ ಹೆಂಗಸಿಗೆ ಸಹಜವಲ್ಲ. ಅಲ್ಲವೇ?"

"ಅಲ್ಲ"

"ಆದರೆ ಅವಳು ನನ್ನ ಜೊತೆಯಲ್ಲಿ ಏನನ್ನು ಹಂಚಿಕೊಂಡಳೋ ಅದೂ ಸಹಜವಾಗಿರಲಿಲ್ಲ."

"ಅದು ವಿಧಿಯಿಲ್ಲದೆ"

"ಸವತಿ ಅಂತ ಅನ್ನಿಸಿಕೊಳ್ಳುತ್ತಾಳಲ್ಲ. ಅಂಥವಳು ಮಾಡುವ ಹಂಚಿಕೆಯ ಬಗ್ಗೆ ನಾನು ಮಾತಾಡ್ತಾ ಇಲ್ಲ."

"ಹಾಗಿದ್ದ ಮೇಲೆ?"

ಏನಾದರೋ ಹೇಳಬೇಕೋ ಹೇಳಬಾರದೋ ಎಂಬುದನ್ನು ನಿರ್ಧರಿಸುತ್ತಿದ್ದಾಳೇನೋ ಎನ್ನುವ ಹಾಗೆ ಮೂರ್ತಿ ಎಷ್ಟೋ ಹೊತ್ತು ಸುಮ್ಮನಿದ್ದಳು. ಅನಂತರ ಒಂದು ಆಳ ನೋಟದಿಂದ ಬಕ್ಷಿ ಸಾಹೇಬರ ಮುಖದ ಕಡೆ ನೋಡಿದಳು. ಈ ಮುಂಚೆ ಯಾವತ್ತೂ ಯಾವುದೇ ಪುರುಷನ ಮುಖದ ಮೇಲೆ ತಾನು ಕಾಣದೇ ಇರುವಂಥ ಸತ್ಯ ಅವರ ಮುಖದ ಮೇಲೆ ಇದೆ ಅಂತ ಅನ್ನಿಸಿತು. ತನ್ನ ಸ್ವಂತ ಸತ್ಯ, ಅದು ಎಂಥದ್ದೇ ಆಗಿದ್ದರೂ, ಸತ್ಯಕ್ಕೆ ಪ್ರತಿಯಾಗಿ ಸತ್ಯವನ್ನೇ ನೀಡಬೇಕು ಎಂದು ಅಂದುಕೊಂಡಳು.

ಹೇಳತೊಡಗಿದಳು "ನನ್ನನ್ನು ಭಟ್ಟಿಯವನು ಬಹಳ ದಿವಸದಿಂದ ಕೇಳುತ್ತಿದ್ದನು. ಆದರೆ ನನ್ನ ತಂದೆ ತಾಯಿಗಳು ನನ್ನನ್ನು ಮಾರದ ಹೊರತು ಜೀವನ ನಡೆಯಲ್ಲ ಅನ್ನುವಷ್ಟು ಬಡವರಲ್ಲ. ನನಗೆ ಹಿಡಿಸಿದ್ದ ಯುವಕ ನನ್ನನ್ನು ಮದುವೆಯಾಗಲು ಒಂದು ಷರತ್ತು ಹಾಕಿದ್ದ. ಬಡವ, ಆದರೆ ಯುವಕ...." ಮೂರ್ತಿ ಒಂದು ಕಹಿಯಾದದ್ದೆನ್ನುವಂಥ ನಗುವಿನ ಗುಟುಕು ನುಂಗಿ ಮತ್ತೆ ಹೇಳಿದಳು– "ಅವನಿಂದಲೇ ನಾನು ಬಸಿರಾಗಿಬಿಟ್ಟಿದ್ದೆ"

ರಾಜ್‌ಬಕ್ಷಿ ಮೌನವಾಗಿದ್ದರು. ಮೂರ್ತಿಯೂ ಮೌನತಾಳಿದಂತೆ ಇದ್ದಳು. ಮತ್ತೆ ಹೇಳತೊಡಗಿದಳು 'ನಮ್ಮ ಹೆಂಗಸರ ನಾಲಿಗೆ ನಿಮಗೆ ಗೊತ್ತಲ್ಲ?"

ರಾಜ್‌ಬಕ್ಷಿಯವರು "ಹೂಂ" ಎಂಬ ಭಾವದಲ್ಲಿ ತಲೆ ಗುಣುಕು ಹಾಕಿದರು. ಮೂರ್ತಿ ಮುಂದುವರಿಸಿದಳು 'ಆದರೆ ಈ ವಿಷಯ ಗೊತ್ತಾದ ಕೂಡಲೇ ಅವನು ಮದುವೆಯಾಗಲು ನಿರಾಕರಿಸಿದನು. ಸರಿ ನಾನು ಒಬ್ಬ ಗಂಡಸಿನ ಕೃತ್ಯಕ್ಕೆ ಇನ್ನೊಬ್ಬ ಗಂಡಸಿನ ಮೇಲೆ ಸೇಡು ತೀರಿಸಿಕೊಳ್ಳಲು ಭಟ್ಟಿಯವನನ್ನು ನಾನು ಮದುವೆಯಾಗಲು ಸಿದ್ಧ ಎಂದು ತಂದೆ ತಾಯಿಗಳಿಗೆ ಹೇಳಿಬಿಟ್ಟೆ."

"ಹಾಗಾದರೆ ಈ ಮಗು......"

"ಈ ಮಗು ಭಟ್ಟಿಯವನದಲ್ಲ. ಅಂತೂ ಕೊನೆಗೂ ಅವನ ಶಾಪ ಅಂತ್ಯವಾಯಿತು ಅಂತ ನೀವು ಹೇಳಿದ್ದೀರಿ. ಆಗ ನನ್ನ ಬಾಯಿಂದ 'ಇಲ್ಲ' ಎಂಬ ಶಬ್ದ ಹೊರಹೊಮ್ಮಿತ್ತು. ಅನಂತರ ಹೌದು ಅಂತಲೂ ಹೇಳಿದ್ದೆ. ಆದರೆ ಮೊದಲು ನನ್ನ ಬಾಯಿಂದ ಹೊರಬಿದ್ದದ್ದೇ ಸತ್ಯವಾಗಿತ್ತು.

"ಈ ವಿಷಯ ರುಕ್ಕಿಗೆ ಗೊತ್ತಿದೆಯಾ?"

"ಅವಳಿಗೆ ಮಾತ್ರ ಗೊತ್ತಿದೆ. ಬೇರೆ ಯಾರಿಗೂ ಇಲ್ಲ"

"ಆದರೆ.... ಅವಳು...." ಆ ಹೊತ್ತಿನಲ್ಲಿ ಮೂರ್ತಿಗೂ ರುಕ್ಕಿಗೂ ಇದ್ದ ಸಂಬಂಧವನ್ನು

ಅದನ್ನು ಎಲ್ಲ ರೀತಿಯಲ್ಲೂ ಗುಟ್ಟಾಗಿ ಉಳಿಸುವುದು ಮೂರ್ತಿಗೆ ಖಂಡಿತವಾಗಿಯೂ ಸಹಜವಾಗಿರಲಿಲ್ಲ ಎಂದು ರಾಜ್‌ಬಕ್ಷಿಯವರು ಭಾವಿಸಿದರು.

ಮೂರ್ತಿ ಹೇಳುತ್ತಾ ಇದ್ದಳು "ಈ ಮಗುವನ್ನು ನಾನು ಪೂರ್ತಿ ತಿರಸ್ಕಾರದ ಭಾವದಿಂದ ಹೆತ್ತಿದ್ದೆ. ಆದರೆ ರುಕ್ಕಿ ಮನಃಪೂರ್ವಕವಾದ ಪ್ರೀತಿಯಿಂದ ಇದನ್ನು ಸಾಕಿದ್ದಾಳೆ. ಆ ಹೊತ್ತಿನವರೆಗೂ ರುಕ್ಕಿಗೆ ಏನೇನೂ ಗೊತ್ತಿರಲಿಲ್ಲ. ಅವಳ ಮನಸ್ಸು ತುಂಬಾ ಒಳ್ಳೆಯದು. ಅವಳು ತನ್ನ ದೇಹದ ಆಕಾಂಕ್ಷೆಯನ್ನು ನನ್ನ ದೇಹದ ಮೂಲಕ... ಮೂರ್ತಿಯ ದನಿ ಹೊರಗಡೆ ದೂರದಲ್ಲಿ ಸುರಿಯುತ್ತಿದ್ದ ಮಳೆ ಹನಿಗಳಲ್ಲಿ ನೆನೆದು ಹೋಗಿದೆಯೇನೋ ಎನ್ನುವಂತಿತ್ತು.

"ಆಮೇಲೆ"

"ಆಮೇಲೆ ಈ ಮಗುವಿನ ತಂದೆ ಅನ್ನಿಸಿಕೊಂಡ ಆ ಲುಚ್ಚಾ ಇನ್ನೂ ಕೆಳಮಟ್ಟಕ್ಕೆ ಇಳಿದ. ನನ್ನನ್ನು ಬೆದರಿಸಿ ಎರಡೆರೆಡು ಸಲ ಐನೂರು ರೂಪಾಯಿ ಕಿತ್ತುಕೊಂಡ. ನಾನು ತೀರಾ ರೋಸಿ ಹೋಗಿ ನಾನೂ ಬದುಕಿರುವುದು ಬೇಡ, ಅವನ ಮಗುವನ್ನೂ ಬದುಕಲು ಬಿಡಬಾರದು ಅಂತ ಯೋಚನೆ ಮಾಡಿದೆ. ಇನ್ನೊಂದು ಸಲ ಅವನ ಕಡೆಯಿಂದ ಬೆದರಿಕೆ ಬಂದಿತ್ತು. ನಾನು ಹುಚ್ಚಿಯಂತಾಗಿ ಬಿಟ್ಟಿದ್ದೆ. ಒಂದು ದಿನ ಅರ್ಧರಾತ್ರಿ ಹೊತ್ತಿನಲ್ಲಿ ಮಗುವನ್ನು ಎತ್ತಿಕೊಂಡು ಹೊರಗಡೆ ಬಾವಿಯ ಹತ್ತಿರಕ್ಕೆ ಹೋದೆ. ಮಗು ರುಕ್ಕಿ ಹತ್ತಿರ ಮಲಗಿಕೊಳ್ಳುತ್ತಿತ್ತು. ನಾನು ನಿದ್ರಿಸುತ್ತಿದ್ದ ಮಗುವನ್ನು ಎತ್ತಿಕೊಂಡಿದ್ದೆ. ಹಾಗಾಗಿ ರುಕ್ಕಿಗೆ ಎಚ್ಚರವಾಗಿತ್ತು. ಅದರೂ ನನಗೆ ಗೊತ್ತಾದದ್ದು ಅವಳೂ ನನ್ನ ಹಿಂದೆಯೇ ಓಡೋಡುತ್ತಾ ಬಾವಿಯ ಹತ್ತಿರಕ್ಕೆ ಬಂದಾಗ. ಅಲ್ಲಿ ನಾನು ನನ್ನ ಬಾಯಿಂದಲೇ ಎಲ್ಲವನ್ನೂ ಹೇಳಿಬಿಟ್ಟೆ. ಆದರೆ ಅವಳು ಅಪ್ಪನಿಗೆ ಹುಟ್ಟಿದ ಮಗಳಾಗಿದ್ದಳು. ನನ್ನನ್ನು ತಬ್ಬಿಕೊಂಡು ಅಲ್ಲಿಂದ ವಾಪಸ್ ಕರೆದುಕೊಂಡು ಬಂದಳು."

"ಅವಳು ಆ ಮನುಷ್ಯನಿಗೆ ಏನೂ ಹೇಳಲಿಲ್ಲವೆ? ಅದೇ ಆ ಭಟ್ಟಿಯವನಿಗೆ?" ರಾಜ್‌ಬಕ್ಷಿ ವಿಸ್ಮಿತರಾಗಿ ಕೇಳಿದರು.

"ಖಂಡಿತಾ ಹೇಳಲಿಲ್ಲ. ಅವಳಿಗೆ ನಿಜಕ್ಕೂ ಮಗುವಿನ ಬಗ್ಗೆ ತುಂಬಾ ಪ್ರೀತಿ ಉಂಟಾಗಿ ಬಿಟ್ಟಿತು....ಅಷ್ಟೇ ಅಲ್ಲ ಯಾರಿಗೂ ಕಾಣದ ಹಾಗೆ ನನಗೆ ಧಮಕಿಹಾಕುತ್ತಿದ್ದವನಿಗೆ ಹೇಳಿ ಕಳಿಸಿ ಕರೆಸಿಕೊಂಡಳು. ಭಟ್ಟಿಯ ಯಜಮಾನವನಿಗೆ ಎಲ್ಲಾ ಗೊತ್ತಿದೆ. ಈಗ ಬೆದರಿಕೆ ಹಾಕುವುದರಿಂದ ಏನೂ ಪ್ರಯೋಜನ ಇಲ್ಲ, ಅದಕ್ಕೆ ವಿರುದ್ಧವಾಗಿ ಭಟ್ಟಿಯವನು ಅವನನ್ನು ಕೊಲ್ಲಿಸುವ ಏರ್ಪಾಡು ಮಾಡಿದ್ದಾನೆ. ಒಂದು ವೇಳೆ ಅವನಿಗೆ ತನ್ನ ಪ್ರಾಣ ಉಳಿಸಿಕೊಳ್ಳಬೇಕು ಅಂತಿದ್ದರೆ, ಇನ್ನು ಯಾವತ್ತೂ ಈ ಹಳ್ಳಿ ಕಡೆ ತಲೆ ಹಾಕಕೂಡದು ಎಂದು ಹೇಳಿದಳು"

ರಾಜ್‌ಬಕ್ಷಿಯವರ ಕಣ್ಣುಗಳಲ್ಲಿ ನೀರು ತುಂಬಿದಂತಾಯಿತು. ಅವರು ಗುಡಿಸಿಲಿನ ಮಸುಕು ಕತ್ತಲೆಯಲ್ಲಿ ಕುಳಿತಿರುತ್ತಿದ್ದ ರುಕ್ಕಿಯನ್ನು ದೂರದಿಂದ ನೋಡಿದ್ದರು. ಆದರೆ ಅವಳ ಗುರುತು ಹತ್ತಿರಲಿಲ್ಲ. ಅವರು ಮೂರ್ತಿಯ ಕಡೆ ನೋಡಿದರು. ಮೂರ್ತಿಯ ಮುಖದ ಮೇಲೆ ಏನೊಂದು ಕಳೆ ಇದೆ, ಅದು ಕೇವಲ ಅವಳ ಯೌವನದ್ದಲ್ಲ. ಅದು

ತಾವು ನೋಡಿರದ ಆ ರುಕ್ಕಿಯದೂ ಹೌದು ಎನ್ನಿಸಿತು. ಮೂರ್ತಿಯು "ಈ ಮಗುವಂತೂ ನಿಜಕ್ಕೂ ಅವಳದೇ, ನನ್ನದು ಅಂತ ಹೇಳುವುದು ಒಂದು ನೆಪ ಅಷ್ಟೆ" ಎಂದಳು.

ರಾಜ್‌ಬಕ್ಷಿಯವರು ತಮ್ಮ ಅಂಗೈಯನ್ನು ಮೂರ್ತಿಯ ಹೆಗಲಮೇಲೆ ಭದ್ರವಾಗಿ ಊರಿದರು. "ನನ್ನ ವಯಸ್ಸು ಚಿಕ್ಕದು ಅಂತ ನನಗೆ ಗೊತ್ತಿದೆ. ಹಾಗಾಗಿ ಎಲ್ಲರೂ ನನ್ನ ಕಡೆ ನೋಡ್ತಾರೆ, ಆದರೆ ಅವಳಿಗೆ ಯಾವ ಹಕ್ಕು ಸಿಗುವುದಿಲ್ಲವೋ ಅದನ್ನು ನಾನೂ ತೆಗೆದುಕೊಳ್ಳಲ್ಲ" ಎಂದು ಮೂರ್ತಿ ಹೇಳಿದಳು.

ರಾಜ್‌ಬಕ್ಷಿಯವರು ಬಹಳ ಹೊತ್ತಿನವರೆಗೂ ಮೌನವಾಗಿದ್ದರು. ಅನಂತರ ತಮ್ಮ ಅಂಗೈಗಳಿಂದ ಮೂರ್ತಿಯ ಮುಖವನ್ನು ತಮ್ಮತ್ತ ತಿರುಗಿಸಿಕೊಂಡು ಮುಖಾಮುಖಿಯಾಗಿ ಹೇಳತೊಡಗಿದರು. –"ಜೀವನದಲ್ಲಿ ನಿನಗೂ ಒಂದು ಋಣ ತೀರಿಸುವುದಿದೆ.... ನನಗೂ ಒಂದು ಋಣ ತೀರಿಸುವುದಿದೆ......" ಮೂರ್ತಿ ಮೌನದಿಂದ ಅವರತ್ತ ನೋಡುತ್ತಿದ್ದಳು. ರಾಜ್‌ಬಕ್ಷಿಯವರು ಒಂದು ದೀರ್ಘವಾದ ಉಸಿರೆಳೆದುಕೊಂಡು ಹೇಳತೊಡಗಿದರು. "ನನಗೆ ನನ್ನ ಒಡಹುಟ್ಟಿದ ಅಣ್ಣನ ಋಣ ತೀರಿಸುವುದಿದೆ..... ನನ್ನ ಅತ್ತಿಗೆ... ನನ್ನ ಜೊತೆ ಸಂಬಂಧ ಬೆಳೆಸಿದಾಗ ನನಗೆ ಇನ್ನೂ ಸರಿಯಾಗಿ ಬುದ್ಧಿ ಬಂದಿರಲಿಲ್ಲ. ನನಗೆ ಏನೇನೂ ತಿಳುವಳಿಕೆ ಇರಲಿಲ್ಲ. ನನಗೆ ಏನೂ ಗೊತ್ತಾಗುತ್ತಿರಲಿಲ್ಲ. ಕೇವಲ ಶರೀರ ಹತ್ತಿಕೊಂಡು ಉರಿಯುತ್ತಿತ್ತು. ನಾನು ದಿನದಿನಕ್ಕೂ ಮಂಕಾಗುತ್ತಾ ಇದ್ದೆ."

ಮೂರ್ತಿಗೆ ಅರ್ಥಮಾಡಿಕೊಳ್ಳಲಿಕ್ಕೆ ಆಯಿತೋ ಇಲ್ಲವೋ ಗೊತ್ತಿಲ್ಲ. ರಾಜ್‌ಬಕ್ಷಿ ಗಮನವಿಟ್ಟು ಅವಳ ಕಡೆ ನೋಡಿ ಹೇಳಿದರು. "ಅವಳಿಗೆ ಮದುವೆಯಾದ ವರ್ಷವೇ ಏನೋ ಒಂದು ಕಾಯಿಲೆಯಾಗಿ ಬಿಟ್ಟಿತು... ಈ ವಿಷಯ ನನಗೆ ಎಷ್ಟೋ ವರ್ಷಗಳ ನಂತರ ತಿಳಿದುಬಂತು. ಆದರೆ ಅವಳಿಗೆ ಆಗಿನಿಂದಲೇ ಇದು ಗೊತ್ತಿತ್ತು. ಹಾಗಾಗಿ ಅವಳು ಮಗುವಿನ ಆಸೆಯನ್ನು ಬಿಟ್ಟು ಬಿಟ್ಟಿದ್ದಳು... ತುಂಬಾ ಸಣ್ಣ ಮನೆತನದಿಂದ ಬಂದಿದ್ದಳು... ಎಲ್ಲವನ್ನೂ ತನ್ನ ಹತ್ತಿರ ಇಟ್ಟುಕೊಳ್ಳಬೇಕು ಎಂದು ಯೋಚಿಸುತ್ತಿದ್ದಳು. ಅದರಿಂದಾಗಿ ನಾನು ಅವಳ ವಶದಲ್ಲೇ ಇರಬೇಕು ಅಂತ ಅವಳಿಗೆ ಇತ್ತು... ನಾನು ಅನೇಕ ವರ್ಷಗಳ ತನಕ ಒಂದು ನಿಂತು ಹೋಗಿದ್ದ ಗಡಿಯಾರದಲ್ಲಿ ಗಂಟೆ ನೋಡ್ತಾ ಇದ್ದೆ... ನನಗೆ ಅರ್ಥ ವಾಗಲಿಲ್ಲ. ಅಣ್ಣನ ದುಃಖವನ್ನೂ ನೋಡಿದೆ... ಆದರೆ ಅದನ್ನು ನಾನು ಅರ್ಥ ಮಾಡಿ ಕೊಳ್ಳಲಿಲ್ಲ.... ನನಗೆ ನನ್ನ ಅಣ್ಣನ ಬಹುದೊಡ್ಡ ಋಣವನ್ನು ತೀರಿಸುವುದಿದೆ ಮೂರ್ತಿ!"

ದಿನವೂ ಕಂಚಿನ ಮೂರ್ತಿಯ ಹಾಗೆ ಕಾಣುತ್ತಿದ್ದ ಮೂರ್ತಿ ಇಂದು ರಕ್ತ ಮಾಂಸಗಳಿಂದ ಕೂಡಿದ ಹೆಣ್ಣಿನ ಹಾಗೆ ನಡುಗಿಬಿಟ್ಟಳು.

ರಾಜ್ ಬಕ್ಷಿ ಹೇಳುತ್ತಿದ್ದರು. "ಈಗ ಅವಳ ಜೊತೆ ಯಾವ ಸಂಬಂಧವೂ ಇಲ್ಲ. ಆದರೆ ನನ್ನ ಅಣ್ಣನ ಸಂಶಯ ಮಾತ್ರ ಹಾಗೇ ಇದೆ..... ನಾನು ಕಳೆದುಹೋದ ವರ್ಷಗಳನ್ನು ವಾಪಸ್ ತಂದುಕೊಡಲಾರೆ ಆದರೆ ಇನ್ನು ಮುಂದೆ.......

"ಆದರೆ ಇನ್ನು ಮುಂದೆ" ಮೂರ್ತಿಯ ತುಟಿಗಳು ಮೆಲ್ಲಗೆ ಅಲುಗಿದವು.

ಮಳೆ ಸುರಿದಿದ್ದರಿಂದ ಸುತ್ತ ಮಬ್ಬು ಕವಿದಿತ್ತು. ರಾಜ್ ಬಕ್ಷಿಯವರು ಕಾರಿನ ಒಳಗಡೆಯ ಮಬ್ಬು ಬೆಳಕಿನಲ್ಲಿ ಮೂರ್ತಿಯ ಮುಖದತ್ತ ನೋಡುತ್ತಿದ್ದರು. ನಂತರ

ಹೇಳಿದರು. "ಬಾ ಮೂರ್ತಿ ನಾವಿಬ್ಬರೂ ನಮ್ಮ ನಮ್ಮ ಋಣಭಾರವನ್ನು ಇಳಿಸಿಕೊಳ್ಳೋಣ.

"ನೀವು.........." ಮೂರ್ತಿ ಅವರ ಕಡೆ ನೋಡಿದಳು. ನಂತರ ಆಶ್ಚರ್ಯದಿಂದೆಂಬಂತೆ ಅವರ ಕಣ್ಣುಗಳಿಂದ ತನ್ನನ್ನು ತಾನೇ ನೋಡಿಕೊಳ್ಳುತ್ತಿದ್ದಾಳೇನೋ ಎನ್ನುವಂತೆ ತನ್ನ ಕಡೆ ನೋಡಿಕೊಳ್ಳತೊಡಗಿದಳು.

ರಾಜ್‌ಬಕ್ಷಿಯವರು ಹೌದೆನ್ನುವಂತೆ ತಲೆ ಆಡಿಸಿದರು. ಮೂರ್ತಿಗೆ ಬಹುಶಃ ಈ "ಹೌದ"ನ್ನು ಇನ್ನೊಮ್ಮೆ ಕೇಳಬೇಕೆನಿಸಿರಬೇಕು. ಹಾಗಾಗಿ ಅವಳ ಬಾಯಿಂದ "ಅಂದರೆ ರುಕ್ಕಿಯನ್ನೂ...........?"

ರಾಜ್‌ಬಕ್ಷಿಯವರು ಮೂರ್ತಿಯ ಹಣೆಯ ಸನಿಹಕ್ಕೆ ತಮ್ಮ ತಲೆಯನ್ನು ತಂದು ಅವಳ ಹಣೆಯನ್ನು ಯಾವ ರೀತಿ ಚುಂಬಿಸಿದರೆಂದರೆ ಅವರ 'ಹೌದು' ಅವಳ ನಂಬಿಕೆಯೇ ಆಗಿಬಿಟ್ಟಿದೆ ಎನಿಸಿತು.

ಜನವರಿ ಇಪ್ಪತ್ತೈದು, ಇಪ್ಪತ್ತಾರು ಮತ್ತು ಇಪ್ಪತ್ತೇಳು

ನಾನು ನನ್ನ ವ್ಯವಹಾರದ ಸಂಬಂಧದಲ್ಲಿ ಬಹುಮಟ್ಟಿಗೆ ವರ್ಷದಲ್ಲಿ ಎರಡು ಬಾರಿ ಮುಂಬಯಿಯಿಂದ ದೆಹಲಿಗೆ ಹೋಗಬೇಕಾಗುತ್ತಿತ್ತು. ಯಾವಾಗಲೂ ನನ್ನ ಗೆಳೆಯನಲ್ಲಿ ತಂಗುತಿದ್ದೆ. ಗೆಳೆಯನ ಹೆಸರು ಹೇಳುವುದಿಲ್ಲ. ಅವನೊಬ್ಬ ಡಾಕ್ಟರ್ ಎನ್ನುವದಷ್ಟೇ ಸಾಕು.

ಹೊರಡುವುದಕ್ಕೆ ಮುಂಚೆ ಅವನಿಗೆ ಪತ್ರ ಬರೆದು ಬಿಡುತ್ತಿದ್ದೆ. ಆದರೆ ಒಂದು ವರ್ಷ ಜನವರಿಯಲ್ಲಿ ನಾನು ಪತ್ರ ಬರೆದಾಗ, ತಾನು ಇಪ್ಪತ್ತೈದು ಇಪ್ಪತ್ತಾರು ಮತ್ತು ಇಪ್ಪತ್ತೇಳನೇ ತಾರೀಕುಗಳಂದು ಅಲ್ಲಿರುವುದಿಲ್ಲ. ಹಾಗಾಗಿ ಈ ತಾರೀಕುಗಳಿಗೆ ಮುಂಚೆಯೋ ಅಥವಾ ಆಮೇಲೋ ನೀನು ಬರುವುದು ಎಂದು ಅವನು ತಂತಿ ಮೂಲಕ ಉತ್ತರಿಸಿದ್ದನು. ಈ ತಂತಿ ನೋಡಿದಾಗ ನನಗೆ, ಇದಕ್ಕೆ ಮುಂಚೆಯೂ ನನ್ನ ಪತ್ರಕ್ಕೆ ಬರೆದ ಉತ್ತರದಲ್ಲಿ ಅವನು ಈ ತಾರೀಕುಗಳಲ್ಲಿ ತಾನು ದೆಹಲಿಯಲ್ಲಿ ಇರುವುದಿಲ್ಲವೆಂದು ತಿಳಿಸಿದ್ದನು. ಬಹುಶಃ ಆಗಲೂ ಅದು ಇದೇ ಜನವರಿ ತಿಂಗಳಾಗಿತ್ತು.

ನಾನು ಹಳೆಯ ಪತ್ರಗಳ ಫೈಲ್ ನೋಡಿದೆ. ಅವನ ಪತ್ರವನ್ನು ಹುಡುಕಿ ತೆಗೆದೆ. ನಿಸ್ಸಂದೇಹವಾಗಿ ಇದೇ ಜನವರಿ ತಿಂಗಳು ಮತ್ತು ಇದೇ ತಾರೀಕುಗಳು. ವಿಷಯ ಸ್ವಲ್ಪ ವಿಚಿತ್ರವೆಂಬಂತೆ ತೋರಿತು. ಆದರೆ ಈಸಲ ನಾನು ಹೋಗುವ ದಿನಾಂಕಗಳನ್ನು ಬದಲಾಯಿಸಲಿಲ್ಲ. ಬದಲಾಯಿಸಬಹುದಾಗಿತ್ತು. ಎರಡು ಮೂರು ದಿನ ಮುಂಚೆ ಅಥವಾ ಎರಡು ಮೂರು ದಿನ ನಂತರ ಹೋಗಬಹುದಾಗಿತ್ತು. ಆದರೆ ನಾನು ಈ ತಾರೀಕುಗಳಲ್ಲೇ ದೆಹಲಿಗೆ ಹೊರಟುಹೋದೆ. ಆದರೆ ನಾನು ಮಾಡಿದ್ದಿಷ್ಟೆ. ಸೀದಾ ಮಿತ್ರನ ಮನೆಗೆ ಹೋಗಲಿಲ್ಲ. ಅಲ್ಲಿಗೆ ತಲುಪಿದ ಮೇಲೆ ಒಂದು ಹೋಟೆಲ್‌ನಲ್ಲಿ ಉಳಿದುಕೊಂಡೆ.

ಅವನ ಮನೆಗೆ ಟೆಲಿಫೋನ್ ಮಾಡುವುದರಿಂದ ಏನೂ ಉಪಯೋಗ ಆಗುತ್ತಿರಲಿಲ್ಲ. ಕಾರಣ ಅವನು ಹೇಳಿದ ಪ್ರಕಾರ ದೇಹಲಿಯಲ್ಲಿರಲಿಲ್ಲ. ಆದರೆ ಸುಮ್ಮನೆ ಇರಲಾಗಲಿಲ್ಲ.

ಅವನ ಆಸ್ಪತ್ರೆಗೆ ಫೋನ್ ಮಾಡಿ ಅವನು ತನ್ನ ಊರಿಗೆ ತಂದೆ ತಾಯಿಗಳ ಹತ್ತಿರ ಕ್ಷೇಮವಾಗಿ ಹೋಗಿದ್ದಾನೋ ಅಥವಾ ಏನಾದರೂ ಪರ್ಸನಲ್ ವಿಷಯ ಇದೆಯೋ ಎಂಬುದನ್ನಷ್ಟು ಮಾತ್ರ ಕೇಳಲೇ ಎಂದು ಮನಸ್ಸಾಯಿತು.

ನಾನು ಫೋನ್ ಮಾಡಿದೆ. ಬೇರೆ ಯಾರಾದರೂ ಡಾಕ್ಟರು ಮಾತನಾಡಬಹುದು. ಎಂದು ಭಾವಿಸಿದ್ದೆ. ಅವನ ಕ್ಷೇಮ ಸಮಾಚಾರವನ್ನು ಕುರಿತು ವಿಚಾರಿಸುವ ಶಬ್ದಗಳನ್ನು ಇನ್ನೂ ಬಾಯಲ್ಲಿ ಮೆಲುಕು ಹಾಕುತ್ತಾ ಇದ್ದೆ, ಅಷ್ಟರಲ್ಲಿ ಅವನದ್ದೇ ದನಿಕೇಳಿಸಿತು. ಬಹುಶಃ ನನ್ನ ದನಿಯಲ್ಲಿದ್ದ ಆಶ್ಚರ್ಯದ ಕಾರಣವೋ ಏನೋ ಅವನ ದನಿಯಲ್ಲಿ ಉತ್ಸಾಹ ಸ್ವಲ್ಪ ಕಮ್ಮಿ ಇದ್ದಂತೆ ನನಗೆ ತೋರಿತು. ಅದೇ ಸಮಯದಲ್ಲಿ ಯಾವುದೋ ಕಾರಣಕ್ಕೆ ಅವನು ಹೋಗುವುದು ನಿಂತಿರಬಹುದು. ಹೋಗಬೇಕಾಗಿದ್ದರೂ, ಹೋಗಲು ಸಾಧ್ಯವಾಗಿಲ್ಲದೆ ಇರಬಹುದು. ಮತ್ತೆ ಈಗ ನನ್ನ ಮುಂದೆ ಅವನಿಗೆ ನಾಚಿಕೆ ಅನ್ನಿಸಿರಬೇಕು. ಇತ್ಯಾದಿಯಾಗಿ ನನ್ನ ದನಿಯಲ್ಲಿನ ವಿಸ್ಮಯಕ್ಕೆ ತರ್ಕವನ್ನೂ ಹೂಡುತ್ತಿದ್ದೆ........

ಆಮೇಲೆ ನನ್ನದೇ ಆದ ಲೆಕ್ಕಾಚಾರದ ಆಧಾರದ ಮೇಲೆ ಹೇಳಿದೆ – "ಈಗ ಎಷ್ಟು ಹೊತ್ತಿಗೆ ಭೇಟಿಯಾಗಬಹುದು."? ಅವನು ಕೊಡಬಹುದಾದ ಉತ್ತರವನ್ನು ಮನಸ್ಸಿನಲ್ಲೆ ಯೋಚಿಸಿದ್ದೆ "ನೀನು ಹೋಟೆಲ್‌ನಿಂದ ಸಾಮಾನು ತೆಗೆದುಕೊಂಡು ನೇರವಾಗಿ ಮನೆಗೆ ಬಂದು ಬಿಡು, ನಾನು ಈಗಲೇ ಮನೆಗೆ ಬರುತ್ತಾ ಇದ್ದೀನಿ". ಆದರೆ ನನ್ನ ಕಿವಿಗಳೇ ನನಗೆ ಸುಳ್ಳು ಹೇಳುತ್ತಿವೆ ಅನ್ನಿಸಿತು. ಅವನ ಉತ್ತರ– "ಈಗ ನಾಲ್ಕು ಗಂಟೆ. ಇನ್ನು ಅರ್ಧಗಂಟೆಯಲ್ಲಿ ಇಲ್ಲಿಂದ ಬಿಡುಗಡೆಯಾಗಿ ಸೀದಾ ನೀನಿರುವ ಹೋಟೆಲ್‌ಗೆ ಬಂದು ಬಿಡುತ್ತೀನಿ"

ಸರಿಯೆ. ತರ್ಕ ಇನ್ನೂ ಒಂದು ಸ್ವಲ್ಪ ಬಾಕಿ ಉಳಿದಿತ್ತು. ಇಲ್ಲಿಗೆ ಬಂದ ಕೂಡಲೇ ತಾನೇ ನನ್ನ ಸಾಮಾನನ್ನು ಎತ್ತಿಕೊಂಡು ನನ್ನನ್ನು ಮನೆಗೆ ಕರೆದುಕೊಂಡು ಹೋಗ್ತಾನೆ ಅಂತ ಅಂದುಕೊಂಡೆ. ಆದರೆ ಐದು ಗಂಟೆಯ ಸುಮಾರಿಗೆ ಅವನು ಬಂದ ಮೇಲೆ ಅದೆಷ್ಟೋ ಹೊತ್ತು ನನ್ನ ಕೆಲಸದ ಬಗ್ಗೆ ಜನರಲ್ ಆಗಿ ಮಾತಾಡ್ತಾ ಇದ್ದ. ಆಮೇಲೆ ಚಹಾ ಕುಡಿದ. ಸಾಯಂಕಾಲ ಆಗೋಕೆ ಬಂತು. ಅವನು ಏನೋ ಹೇಳಬೇಕು ಅಂತ ಇದ್ದಾನೆ, ಆದರೆ ಆ ಗಳಿಗೆಯನ್ನು ತಪ್ಪಿಸುತ್ತಾ ಇದ್ದಾನೇನೋ ಅಂತ ಅನ್ನಿಸುತ್ತಾ ಇತ್ತು.

ಅವನು ನನ್ನ ಹಳೇ ಸ್ನೇಹಿತ. ಅಧಿಕಾರದಿಂದ ನಾನು ಅವನನ್ನು ಕೇಳಬಹುದಾಗಿತ್ತು. ಆದರೆ ಅವನ ಮುಖದ ಮೇಲೆ ಎಂಥ ಸಂಕೋಚ ಇತ್ತು ಅಂದರೆ ನನಗೆ ಏನನ್ನೂ ಕೇಳಲಾಗಲಿಲ್ಲ. ಸ್ವಲ್ಪ ಹೊತ್ತು ಆದ ಮೇಲೆ ಹೊರಟು ನಿಂತ. ನಾನು ಏನು ತಾನೆ ಹೇಳಬಲ್ಲೆ. ಕೆಳಗಡೆ ಹೊಟೆಲ್‌ನ ಹೊರಬಾಗಿಲವರೆಗೂ ಅವನನ್ನು ಕಳಿಸಲು ಹೊರಟೆ. ನೋಡಿದರೆ ಅಲ್ಲಿ ಅವನ ಕಾಲುಗಳು ಸ್ವಲ್ಪ ಗಕ್ಕನೆ ನಿಂತ ಹಾಗೆ ಆಯಿತು. ಆದರೆ ಅವನು ಏನೂ ಹೇಳಲಿಲ್ಲ.

ನಾನು ನನ್ನ ರೂಮಿಗೆ ಬಂದು ಸುಮಾರು ಒಂದು ಗಂಟೆ ಹೊತ್ತು ಆಗಿದ್ದಿರಬಹುದು. ಅವನ ಫೋನ್ ಬಂತು. "ಸಾರಿ ಐ ಕಾಂಟ್ ಎಕ್ಸ್‌ಪ್ಲೈನ್ ಎನಿಥಿಂಗ್"! ಅದಕ್ಕೆ ಉತ್ತರವಾಗಿ ನಾನು ನಕ್ಕೆ. "ಆಯಿತು ಕ್ಷಮಿಸಿದ್ದೀನಿ ಎಂಜಾಯ್ ಯುವರ್ ಸೆಲ್ಫ್" ಅಂದೆ. ತಕ್ಷಣ

ಅನ್ನಿಸಿದ್ದೆಂದರೆ ಏನೇ ಆದರೂ ಈಗ ಅವನ ಜೊತೇಲಿ ಖಂಡಿತಾ ಯಾರೋ ಹುಡುಗಿ ಇದ್ದಾಳೆ. ಆದರೆ ಈ ಆಲೋಚನೆಯೂ ಮರೆಯಾಯಿತು. ಕಾರಣ, ಅವನ ದನಿಯಲ್ಲಿ ಏನೋ ಒಂದು ವಿಷಾದ ಭಾವ ಇತ್ತು.

ಆ ವರ್ಷ ಸೆಪ್ಟೆಂಬರ್‌ನಲ್ಲಿ ನಾನು ದೆಹಲಿಗೆ ಹೋಗಬೇಕಾಗಿ ಬಂತು. ಆದರೆ ನಾನು ಅವನಿಗೆ ಕಾಗದ ಬರೆಯಲಿಲ್ಲ. ದೆಹಲಿಗೆ ಹೋಗಿ ಒಂದು ಹೋಟೆಲ್‌ನಲ್ಲಿ ಉಳಿದುಕೊಂಡೆ. ಹೋಟೆಲ್‌ನಿಂದ ಫೋನ್ ಮಾಡಿದೆ. ಅವನ ದನಿಯಲ್ಲಿ ಅದೇ ಹಿಂದಿನ ಉತ್ಸಾಹ ತುಂಬಿತ್ತು. ಕೂಡಲೇ ಅವನು ಆಸ್ಪತ್ರೆಗೆ ರಜಾ ಹಾಕಿ ಹೋಟೆಲ್‌ಗೆ ಬಂದ. ನಾನು ಬೇಡ ಬೇಡ ಅಂದರೂ ನನ್ನ ಲಗೇಜನ್ನು ಎತ್ತಿಕೊಂಡು ತನ್ನ ಮನೆಗೆ ಕರೆದುಕೊಂಡು ಹೋದ.

ಒಬ್ಬ ಸ್ನೇಹಿತನಾಗಿ ನಾನು ಈ ಕೆಲಸ ಮಾಡಬಹುದಾಗಿತ್ತೋ ಇಲ್ಲವೋ ಗೊತ್ತಿಲ್ಲ. ಅವನ ಒಬ್ಬ ಕೆಲಸದವನ ಹತ್ತಿರ ಏಕಾಂತವಾಗಿ ಈ ಜನವರಿ ಇಪ್ಪತ್ತೈದು ಇಪ್ಪತ್ತಾರು ಇಪ್ಪತ್ತೇಳರ ವಿಷಯವನ್ನು ಸ್ವಲ್ಪ ಸುತ್ತಿ ಬಳಸಿ ಕೇಳಿದೆ. ಹಳೇ ನೌಕರನಾದ್ದರಿಂದ ಡಾಕ್ಟರಿಗೆ ಕೊಟ್ಟಷ್ಟೇ ಗೌರವವನ್ನು ನನಗೂ ಕೊಡುತ್ತಿದ್ದ–ಹಾಗಾಗಿ ಗೌರವದಿಂದ ಹೇಳಿದ– "ನನಗಂತೂ ಜನವರಿ ಇಪ್ಪತ್ತಾರರ ಉತ್ಸವ ನೋಡಲು ಸಾಹೇಬರು ಮೂರು ದಿನದ ರಜೆ ಕೊಟ್ಟು ಬಿಡುತ್ತಾರೆ."

ಹಾಗಾದರೆ ಅದೇ ಮೂರು ದಿನ: ಇಪ್ಪತ್ತೈದು ಇಪ್ಪತ್ತಾರು ಮತ್ತು ಇಪ್ಪತ್ತೇಳರ ಜನವರಿ: ಅವನ ಮಾತಿನಿಂದ ನನಗೆ ತಿಳಿದುಬಂದ ವಿಷಯವೆಂದರೆ ಈ ರಜೆಯಲ್ಲಿ ಕೇವಲ ಹಗಲು ಮಾತ್ರ ಅಲ್ಲ ರಾತ್ರಿಯೂ ಸೇರಿರುತ್ತದೆ. ಅವನು ಮೂರು ರಾತ್ರಿ ಹೊರಗಡೆ ನೌಕರರ ಡೇರೆಯಲ್ಲಿ ಅವನ ಹಳ್ಳಿಯ ಇತರೆ ಜನರ ಜೊತೆ ಇರುತ್ತಿದ್ದನು.

ಕೆಲಸದವನಿಗೆ ವರ್ಷದ ಇದೇ ಮೂರು ದಿನಗಳಂದು ರಜೆ ಕೊಡುವುದು ಅಸ್ವಾಭಾವಿಕ ಎಂದು ನನಗನ್ನಿಸಿತು. ಇಲ್ಲೇನೋ ಒಂದು ಗುಟ್ಟಿದೆ, ನನ್ನಮಿತ್ರ ಅದನ್ನು ಗುಟ್ಟಾಗಿಯೇ ಇಡಲು ಬಯಸುತ್ತಿದ್ದಾನೆಂದು ಅನ್ನಿಸಿತು.

ನಾಲ್ಕು ತಿಂಗಳ ನಂತರ ಮತ್ತೆ ಜನವರಿ ಬಂದಾಗ ನಾನು ದೆಹಲಿಗೆ ಹೋಗುವುದನ್ನು ಇನ್ನೂ ಒಂದು ತಿಂಗಳು ಮುಂದಕ್ಕೆ ಹಾಕಬಹುದಾಗಿದ್ದರೂ ಇಪ್ಪತ್ತೈದನೇ ತಾರೀಕು ದೆಹಲಿಗೆ ಬರಬೇಕಾಗುತ್ತೆ ಎಂದು ನನ್ನ ಸ್ನೇಹಿತನಿಗೆ ಪತ್ರ ಬರೆದೆ. ಆ ಪತ್ರಕ್ಕೆ ಉತ್ತರವಾಗಿ ಬಂದ ಪತ್ರದಲ್ಲಿ "ಈ ತಾರೀಕಿನೊಂದಿಗೆ ನಿನ್ನದ್ಯಾವುದಾದರೂ ಕೆಲಸ ಲಗತ್ತಾಗಿದೆಯೇನು? ನೀನು ಎರಡು ಮೂರು ದಿನ ಮುಂಚೆನೋ ಇಲ್ಲ ಆಮೇಲೋ ಯಾಕೆ ಬರಬಾರದು?" ಎಂದು ಕೇಳಿದ್ದನು.

ಅಂದ ಮೇಲೆ ಖಂಡಿತವಾಗಿಯೂ ಅವನು ಹೇಳಕ್ಕಾಗದೆ ಇರುವ ಮತ್ತು ನಾನು ಕೇಳಕ್ಕಾಗದೆ ಇರುವಂಥದ್ದೇನೋ ವಿಷಯ ಇದೆ. ನಾನು ಆ ತಿಂಗಳು ದೆಹಲಿಗೆ ಹೋಗಲಿಲ್ಲ. ಅನಂತರ ಮಾರ್ಚನಲ್ಲಿ ಹೋದೆ. ಅವನ ಹತ್ತಿರವೇ ಉಳಿದುಕೊಂಡೆ. ಆ ಸಲ ನಾನು ದೆಹಲಿಯಲ್ಲಿ ಐದು ಎಕರೆಗಳ ಒಂದು ಫಾರ್ಮ್ ಖರೀದಿಸಿದೆ. ಅಲ್ಲಿ ವರ್ಷದಲ್ಲಿ ಕನಿಷ್ಠ ಪಕ್ಷ ಒಂದು ತಿಂಗಳು ಇದ್ದು ಬರಬೇಕೆಂಬ ಕನಸು ಯಾವಾಗಲೂ ನನ್ನನ್ನು ಸೆಳೆಯುತ್ತಿತ್ತು.

ಇದೆಲ್ಲ ನನ್ನ ಸ್ನೇಹಿತನ ಪರಿಶ್ರಮದ ಫಲ. ಫಾರ್ಮ್‌ಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನೆಲ್ಲ ಅವನೇ ನೋಡಿ ಮಾಡಿ ಇಟ್ಟಿದ್ದ. ಅದನ್ನು ನೋಡಿಕೊಳ್ಳಲು ಇಬ್ಬರು ಮಾಲಿಗಳ ವ್ಯವಸ್ಥೆ ಮಾಡಿದ್ದ. ಫಾರಮ್‌ನಲ್ಲೇ ಇರಲು ಅನುಕೂಲವಾದ ಒಂದು ಚಿಕ್ಕದಾದ ಕೊಠಡಿಯ ಬ್ಲೂ ಪ್ರಿಂಟನ್ನೂ ಅವನೇ ಮಾಡಿಸಿದ್ದ. ನಾನು ಅಲ್ಲಿ ಕಟ್ಟಡ ಶುರುಮಾಡಿಸಿ ವಾಪಸ್ ಮುಂಬಯಿಗೆ ಹೊರಟು ಹೋಗಿದ್ದೆ. ಆಮೇಲೆ ಅವನೇ ಅದನ್ನು ನೋಡಿಕೊಳ್ಳುವುದು ಮಾಡುವುದು ಮಾಡಿದ್ದ. ಅದನ್ನು ಪೂರ್ಣಗೊಳಿಸಿ ನನಗೆ ಅದರ ಬೀಗದ ಕೈಗಳನ್ನು ಕಳಿಸಿಕೊಟ್ಟಿದ್ದ.

ಮತ್ತೆ.... ಇದ್ದಕ್ಕಿದ್ದ ಹಾಗೆ ತಾನು ಮದುವೆಯಾಗಿದ್ದೀನಿ ಎಂದು ತಿಳಿಸುವ ಪತ್ರ ಬಂದಿತ್ತು. ಪತ್ರದ ತುಂಬ ಸಂತೋಷ ತುಂಬಿತುಳುಕುತ್ತಿತ್ತು. ಹಾಗಾಗಿ ನಾನೂ ಸಂತೋಷ ವಾಗಿದ್ದೆ. ಆದರೆ ತನ್ನ ಮದುವೆಗೆ ನನ್ನನ್ನು ಯಾತಕ್ಕೆ ಕರೆಯಲಿಲ್ಲ ಎಂದು ಲಘುವಾಗಿ ಆಕ್ಷೇಪಣೆ ಥರ ಮಾಡಿ ಕಾಗದ ಬರೆದೆ. ಅದಕ್ಕೆ ಅವನು "ಮದುವೆ ನಿಶ್ಚಿತವಾದ ಕ್ಷಣದಲ್ಲೇ ಮದುವೆ ಮಾಡಿಕೊಂಡುಬಿಡಬೇಕೆಂದು ಬಯಸಿದ್ದೆ. ಹಾಗೆ ಮಾಡಿಕೊಳ್ಳದೆ ಹೋಗಿದ್ದರೆ ಎಂದೂ ಮದುವೆಯೇ ಆಗುತ್ತಿರಲಿಲ್ಲ. ಹೀಗಾಗಿ ನಿನ್ನನ್ನು ಕರೆಯಲು ಟೈಮೇ ಇರಲಿಲ್ಲ. ಆ ಮುಹೂರ್ತ ಕಳೆದು ಹೋದರೆ ಆಮೇಲೆ ಮದುವೆ ಯಾತಕ್ಕೆ ಆಗಲು ಸಾಧ್ಯವಿರಲಿಲ್ಲ. ಎನ್ನುವ ಬಗ್ಗೆ ಪತ್ರದಲ್ಲಿ ಏನೂ ಬರೆದಿರಲಿಲ್ಲ. ಆದರೆ "ನಾನು ಬಹಳ ಸಂತೋಷವಾಗಿದ್ದೇನೆ. ನಾನು ನಿನ್ನ ಅತ್ತಿಗೆಯನ್ನು ಅಪಾರವಾಗಿ ಪ್ರೀತಿಸುತ್ತೇನೆ." ಎನ್ನುವುದನ್ನಂತೂ ಬರೆದಿದ್ದನು. ಅದರಿಂದ ಅವನ ಮದುವೆಯಲ್ಲಿ ನಾನು ಪಾಲ್ಗೊಳ್ಳಲಿಲ್ಲವಲ್ಲ ಎನ್ನುವುದರಿಂದ ಉಂಟಾದ ಬೇಸರಿಕೆ, ಬೇಸರಿಕೆ ಎಂದು ಅನ್ನಿಸಲಿಲ್ಲ. ನಾನು ಈಗ ದೆಹಲಿಗೆ ಯಾವಾಗ ಹೋದೇನು ಎನ್ನುವುದು ನಿಜಕ್ಕೂ ಒಂದು ಗುಂಗಿನಂತೆ ಕಾಡುತ್ತಿತ್ತು. ಇದರಲ್ಲಿ ಇನ್ನೂ ಒಂದು ಕಾರಣವೂ ಸೇರಿತ್ತು. ಅದೆಂದರೆ ನಾನು ಇನ್ನೂ ನನ್ನ ಫಾರಮ್‌ನಲ್ಲಿದ್ದ ಮನೆಯಲ್ಲಿ ವಾಸ ಮಾಡಿ ನೋಡಿರಲಿಲ್ಲ. ಅಲ್ಲಿ ಇದ್ದ ಮಾಲಿಗಳಲ್ಲದೆ ಪ್ರತಿ ಭಾನುವಾರ ಫಾರಮ್ ಹತ್ತಿರ ಹೋಗಿ, ಫಾರಮ್ಮಿನ ಕೆಲಸ ಕಾರ್ಯ ನೋಡಿ ನನಗೆ ಲೆಕ್ಕ ಪತ್ರ ಬರೆದು ತಿಳಿಸುವಂಥ ಒಬ್ಬ ವ್ಯಕ್ತಿಯನ್ನು ಗೊತ್ತು ಮಾಡಿದ್ದೆ. ನನ್ನ ಕಣ್ಣುಗಳಲ್ಲಿ ನನ್ನ ಫಾರಮ್‌ನ ಹಸಿರು ಪ್ರತಿವಾರವೂ ಒಂದೊಂದು ಗೇಣು ಎತ್ತರವಾಗುತ್ತಾ ಇತ್ತು...

ಇದ್ದಕ್ಕಿದ್ದಂತೆ ನನ್ನ ಸ್ನೇಹಿತನು, ನಾನು ಫಾರಮ್ ಹೌಸಿನ ಬೀಗದ ಕೈಯನ್ನು ಅವನಿಗೆ ಕಳಿಸಿಕೊಡುವುದಾದರೆ ತಾನು ಮೂರು ದಿನ ಅಲ್ಲಿದ್ದು ಬರಲಿಚ್ಛಿಸುತ್ತೇನೆ ಎಂದು ಫೋನ್ ಮಾಡಿ ಹೇಳಿದನು. ಇದು ಜನವರಿ ತಿಂಗಳಾಗಿತ್ತು. ಜನವರಿಯ ಅದೇ ಮೂರು ದಿನಗಳಾದ ಇಪ್ಪತ್ತೈದು ಇಪ್ಪತ್ತಾರು ಮತ್ತು ಇಪ್ಪತ್ತೇಳರೊಂದಿಗೆ ಈ ಮಾತು ತಳುಕು ಹಾಕಿಕೊಂಡಿರುತ್ತೆ ಎಂದು ನನಗನ್ನಿಸಿತು. "ನಾನು ನಾಳೆ ಬೀಗದ ಕೈ ಕಳಿಸಿಕೊಡುತ್ತೇನೆ. ಹಾಗೆ ಹೇಳಬೇಕು. ಅಂದರೆ, ನಾನು ದೆಹಲಿಗೆ ಬರಬೇಕು ಅಂತ ಇದ್ದೀನಿ. ನೀನೊಂದುವೇಳೆ ಒಬ್ಬನೇ ಇರಬೇಕು ಅಂತ ಇಷ್ಟಪಟ್ಟಿದ್ದರೆ, ನಾನು ಈ ತಿಂಗಳು ಬಿಟ್ಟು ಮುಂದಿನ ತಿಂಗಳು ಬರುತ್ತೀನಿ" ಎಂದು ಹೇಳಿದೆ. ಅದಕ್ಕೆ ಉತ್ತರವಾಗಿ

“ನಾನು ಇಪ್ಪತ್ತೈದು, ಇಪ್ಪತ್ತಾರು ಮತ್ತು ಇಪ್ಪತ್ತೇಳರಂದು ಕೇವಲ ಮೂರುದಿನ ಅಲ್ಲಿರುತ್ತೇನೆ. ನೀನೂ ಬಂದು ಬಿಡು. ಜೊತೆಯಲ್ಲಿರೋಣ” ಎಂದು ಹೇಳಿದನು.

ಬಹಳ ವಿಲಕ್ಷಣವಾದ ಸಂಗತಿ. ತಾರೀಕುಗಳು ಮಾತ್ರ ಅವೇ. ಆದರೆ ಈ ಸಲ ನಾನು ಈ ತಾರೀಕುಗಳಲ್ಲಿ ಅಲ್ಲಿಗೆ ಬರಬಾರದು ಎನ್ನುವಂಥ ನಿಷೇಧವಿರಲಿಲ್ಲ. ಸುಖಮಯವಾದ ವಿವಾಹದ ನಂತರವೂ ಅವನಿಗೆ ಈ ತಾರೀಕುಗಳಂದು ಏಕಾಂತದ ಅವಶ್ಯಕತೆ ಇರಲಿಲ್ಲವೆ? ಏಕೆ? “ಅತ್ತಿಗೆ ಸ್ಥಿತಿ ಹೇಗಿದೆ” ಎಂದು ನಾನು ಕೇಳಿದೆ. ಅವನ ಮಾತಿನಲ್ಲಿ ಎಲ್ಲೂ ಸಂಕೋಚ ಅನ್ನುವಂಥದ್ದೇನೋ ಇರಲಿಲ್ಲ. “ಬಹಳ ಒಳ್ಳೆಯ ಹುಡುಗಿ. ನೀನು ಅವಳನ್ನು ಭೇಟಿಯಾದರೆ ಬಹಳ ಸಂತೋಷಪಡುತ್ತೀಯಾ. ಇಪ್ಪತ್ತೆಂಟನೇ ತಾರೀಖು ನಾವೆಲ್ಲ ಜೊತೇಲಿ ಮನೆಗೆ ಹೋಗೋಣ” ಎಂದು ಅವನು ಹೇಳಿದ.

ಏನೂ ಅರ್ಥವೇ ಆಗುತ್ತಿರಲಿಲ್ಲ. ಆದರೆ ಅವನ ವಿವಾಹ ಒಳ್ಳೇದಾಗಿತ್ತು. ಇದೇ ಬೇಕಾದಷ್ಟಾಯಿತು. ‘ನಾನು ಇಪ್ಪತ್ತೈದನೇ ತಾರೀಖು ಬೆಳಿಗ್ಗೆ ಅಲ್ಲಿಗೆ ಬರುತ್ತೀನಿ. ಸೀದಾ ಫಾರಮ್‌ಗೆ ಹೋಗಿಬಿಟ್ಟು ನಿನಗೋಸ್ಕರ ಕಾಯುತ್ತಾ ಇರುತ್ತಿನೀ’ ಎಂದು ಅವನಿಗೆ ಹೇಳಿದೆ.

ನಾನು ಅವನ ಹೆಂಡತಿಗೋಸ್ಕರ ಮುಂಬಯಿಯಿಂದ ಒಂದು ತುಂಬ ಸೊಗಸಾದ ಸೀರೆ ಖರೀದಿಸಿದೆ. ಇಪ್ಪತ್ತೈದನೇ ತಾರೀಖು ಬೆಳಿಗ್ಗೆ ದೆಹಲಿ ತಲುಪಿದೆ. ಫಾರಮ್‌ನ ಹಸಿರು ನಾನು ಕಲ್ಪಿಸಿಕೊಂಡ ಹಾಗೇ ಇತ್ತು. ನನ್ನ ಮನೋಭೂಮಿಯಲ್ಲೂ ಹೂವು ಚಿಗುರು ಮೂಡಿದ್ದವು. ಫಾರಂನ ಭಾನುವಾರದ ಕೆಲಸಗಾರ ಅಲ್ಲಿಗೆ ಆಗಲೇ ಬಂದಿದ್ದ. ನಾನು ಹೇಳಿದ ಪ್ರಕಾರವೇ ಅವನು ಅಲ್ಲಿಗೆ ಅಗತ್ಯವಿದ್ದ ಸಾಮಾನುಗಳನ್ನು ತಂದಿಟ್ಟಿದ್ದ. ಮಾಲಿಗಳು ಕಾಟೇಜಿನ ಮಹಾದ್ವಾರವನ್ನು ಒರೆಸಿ ಒಪ್ಪ ಮಾಡಿ ಹೂವುಗಳಿಂದ ಅಲಂಕರಿಸಿದ್ದರು.

ನನ್ನ ಸ್ನೇಹಿತ ಬಂದಾಗ ಆಗಲೇ ತೀರಾ ಸಂಜೆಯಾಗಿ ಬಿಟ್ಟಿತ್ತು. ಈ ಸಲ ಅವನಿಗಾಗಿ ಮುಂಬೈಯ ಒಬ್ಬ ಮಿತ್ರನಿಂದ ಫ್ರೆಂಚ್‌ಕೋನಯಾಕ್ ಚಹಾ ಪುಡಿ ತಂದಿದ್ದೆ. ಬಹಳ ದಿನಗಳ ಹಿಂದೆ ನನಗೆ ಅವನು ಕೊನಯಾಕ್ ಟೀ ಕೊಡಿಸಿದ್ದನು. ಅಲ್ಲದೆ ಅವನು ತನಗೆ ಸಾಧ್ಯಾವಾಗುವುದಾದರೆ ಯಾವಾಗಲೂ ಕೋನಯಾಕ್ ಟೀಯನ್ನೇ ಕುಡಿಯುವುದಾಗಿ ಹೇಳಿದ್ದನು. ಈ ಬಾರಿ ಮೂರು ದಿನದಲ್ಲಿ ಅವನಿಗೆ ನಾನು ಕೋನಯಾಕ್ ಟೀ ಕುಡಿಸ ಬಯಸಿದ್ದೆ. ಡಬ್ಬಿಗಳಲ್ಲಿ ಸೀಲು ಮಾಡಿದ ಹಣ್ಣುಗಳು ಮತ್ತು ತರಕಾರಿಗಳನ್ನು ನಾನು ಮುಂಬೈನಿಂದ ತಂದಿದ್ದೆ; ನನ್ನ ಫಾರಂನಲ್ಲಿ ಬೆಳೆದಿದ್ದ ಹೂಕೋಸನ್ನು ನನ್ನ ಕೈಗಳಿಂದಲೇ ಹುರಿದಿದ್ದೆ. ಮುಂಬೈ ಜೀವನದಿಂದ ದೂರವಾಗಿರುವ ಈ ದಿನ ನನಗೆ ಬಹಳ ಇಷ್ಟವಾದ ದಿನವಾಗಿತ್ತು...

ಆ ರಾತ್ರಿ ಮೊದಲನೇ ಸಲ, ಕೋನಯಾಕ್ ವಾಲೀ ಚಹಾ ಮತ್ತು ನೀಟ್ ಕೋನಯಾಕ್ ಕುಡಿಯುತ್ತಾ ನನ್ನ ಮಿತ್ರ ಹೇಳ ತೊಡಗಿದ “ಅನೇಕ ವರ್ಷಗಳಿಂದ ನೀನು ಏನೋ ಕೇಳಬೇಕು ಅಂತ ಇದ್ದೆ. ಅಲ್ಲವೇ? ನಾನೂ ಕೆಲವು ವರ್ಷಗಳಲ್ಲಿ ನಿನಗೆ ಕೆಲವು ವಿಷಯ ಹೇಳಬೇಕು ಅಂತ ಇದ್ದೆ.”

ಇದು ಬಹುಶಃ ಮಣ್ಣಿನೊಳಗಿನಿಂದ ಹಸಿರು ಮೊಳಕೆ ಮೊಳೆದೋರುವ ಸಮಯ. ನಾನು ಅವನ ಮುಖದ ಕಡೆ ನೋಡ ತೊಡಗಿದೆ. ಅವನು ನಕ್ಕು ಬಿಟ್ಟನು. "ಈ ಜನವರಿ ಇಪ್ಪತ್ತೈದು, ಇಪ್ಪತ್ತಾರು ಮತ್ತು ಇಪ್ಪತ್ತೇಳು ಈ ಮೂರು ದಿನ ನನ್ನ ತಿಳುವಳಿಕೆಯ ಆಚೆಗಿನದು. ಪ್ರಾರಂಭದಿಂದಲೇ ಹೇಳುತ್ತೀನಿ. ಪೂರ್ತಿ ಐದು ವರ್ಷ ಆಯಿತು. ನನ್ನ ಒಬ್ಬ ಸ್ನೇಹಿತ ಈ ಹೊತ್ತಿನ ದಿನ ಅಂದರೆ ಇಪ್ಪತ್ತೈದನೇ ತಾರೀಕು ನನ್ನ ಮನೆಗೆ ಬಂದಿದ್ದ. ಈ ಹಾಳಾದವನು ಯುವಕ, ತುಂಬ ಸ್ಫುರದ್ರೂಪಿ ಬೇರೆ. ಜೊತೆಗೆ ತುಂಬಾ ಒಳ್ಳೆಯ ಕವಿ ಕೂಡ. ದೆಹಲಿಯಲ್ಲಿ ಜನವರಿ ಇಪ್ಪತ್ತೈದನೆಯ ತಾರೀಖು ಸರ್ವಭಾಷಾ ಕವಿ ಸಮ್ಮೇಳನ ನಡೆಯುತ್ತದಲ್ಲವೆ. ಅವನನ್ನು ಅದೇ ಕವಿ ಸಮ್ಮೇಳದಲ್ಲಿ ಭಾಗವಹಿಸಲು ಸರಕಾರದ ಕಡೆಯಿಂದ ಆಹ್ವಾನಿಸಲಾಗಿತ್ತು. ಆದರೆ ಅವನೊಬ್ಬನೇ ಬಂದಿರಲಿಲ್ಲ. ಅವನ ಜೊತೆ ಒಬ್ಬ ಅತ್ಯಂತ ಸುಂದರವಾದ ಹುಡುಗಿ ಇದ್ದಳು. ಅವರ ಊರಿನಲ್ಲಿ ಅವನು ಆ ಹುಡುಗಿಯನ್ನು ಭೇಟಿ ಮಾಡಲಾಗುತ್ತಿರಲಿಲ್ಲ....... ಅದರಿಂದ ಇಲ್ಲಿಗೆ ಕರೆದುಕೊಂಡು ಬಂದಿದ್ದ. ಬಹುಶಃ ಅಲ್ಲಿಂದ ಅವಳ ಜೊತೆ ಬಂದಿರಲಿಲ್ಲ. ಆದರೆ ಇಲ್ಲಿ ಸ್ಟೇಷನ್‌ನಿಂದ ಅವಳನ್ನು ಜೊತೆಯಲ್ಲಿ ಕರೆದುಕೊಂಡು ಬಂದಿದ್ದ. ಅವರಿಬ್ಬರೂ ಮೂರು ದಿನ ನಮ್ಮ ಮನೆಯಲ್ಲಿದ್ದರು. ಇಪ್ಪತ್ತೈದನೇ ತಾರೀಕು ಕವಿಗೋಷ್ಠಿ ಇತ್ತು. ಇಪ್ಪತಾರರಂದು ಎಲ್ಲ ಕವಿಗಳಿಗೂ ಸರಕಾರದ ಕಡೆಯಿಂದ ಔತಣಕೂಟ ಏರ್ಪಡಿಸಲಾಗಿತ್ತು. ಆದರೆ ಇಪ್ಪತ್ತೇಳನೇ ತಾರೀಖು ರಾತ್ರಿ ಅವರಿಬ್ಬರೂ ಮತ್ತೆ ಬೇರೆ ಬೇರೆ ಗಾಡಿಗಳಲ್ಲಿ ವಾಪಸ್ ಹೊರಟು ಹೋಗಿದ್ದರು..."

ಈ ಮಾತನ್ನು ಕೇಳುತ್ತಿದ್ದಾಗ ನನಗೆ ಅನ್ನಿಸಿದ್ದೆಂದರೆ ನಾನು ಎಂಥ ಒಂದು ಬಾಗಿಲನ್ನು ನೋಡುತ್ತಾ ಇದ್ದೆನೆಂದರೆ ಹಲವರು ವರ್ಷಗಳ ಹುಡುಕಾಟದ ನಂತರ ಈ ಬಾಗಿಲ ಹತ್ತಿರ ಬರೋದೇನೋ ಬಂದು ಬಿಟ್ಟಿದ್ದೇನೆ, ಆದರೆ ಆ ಬಾಗಿಲು ತೆಗೆದರೆ ಅದರ ಒಳಗಡೆ ಏನಿದೆ ಅನ್ನುವುದನ್ನು ಯೋಚನೆ ಕೂಡ ಮಾಡಲಾರೆ.

ಯಾವುದೋ ಒಂದು ಕಥೆ ಐದು ವರ್ಷದಿಂದ ನಡೆದುಕೊಂಡು ಬಂದಿತ್ತು. ನನ್ನ ಸ್ನೇಹಿತನೂ ಐದು ವರ್ಷ ಅದರ ಜೊತೆ ಸಾಗಿಬಂದಿದ್ದ. ಅವನ ಮುಖದ ಮೇಲೆ ದೀರ್ಘವಾದ ದಾರಿಯನ್ನು ಕ್ರಮಿಸಿಬಂದ ಅನುಭವವಿತ್ತು. ಸ್ವಲ್ಪ ಹೊತ್ತು ಉಸಿರು ತೆಗೆದುಕೊಂಡು ಹೇಳಿದ್ದ– "ದೆಹಲಿಯಲ್ಲಿ ಮೂರು ದಿನ ಇದ್ದ ವಿಷಯವನ್ನು ಅವನ ಮನೆಯವರಿಂದಾಗಲಿ ಆ ಹುಡುಗಿಯ ಮನೆಯವರಿಂದಾಗಲಿ ಮುಚ್ಚಿಡಲಾಗಲಿಲ್ಲ. ಅವನ ಹೆಂಡತಿ ತುಂಬಾ ದುಃಖಿತಳಾಗಿದ್ದಳು. ಮತ್ತು ಆ ಹುಡುಗಿಯ ತಂದೆ ತಾಯಿಗಳು ಕೂಡ ದುಃಖಿತರಾಗಿದ್ದರು. ಒಂದೇ ಊರು. ಹಾಗೆ ನೋಡಿದರೆ ಚಿಕ್ಕ ನಗರ.... ಎರಡೂ ಮನೆಗಳ ನಡುವಿನ ವೈರದ ವಿಷಯ ಇಡೀ ಪಟ್ಟಣದಲ್ಲೆಲ್ಲಾ ಹಬ್ಬಿತ್ತು. ಒಬ್ಬರ ಪ್ರಾಣಕ್ಕೆ ದುರ್ಗತಿ ಬಂದಿದ್ದರೆ, ಇನ್ನೊಬ್ಬರ ಪ್ರಾಣಕ್ಕೆ ಅಪಾಯ ಕಾದಿತ್ತು. ಇನ್ನೂ ಆರು ತಿಂಗಳಾಗಿತ್ತು ಅಷ್ಟೆ. ಎಲ್ಲವೂ ಫೈಸಲಾಗಿ ಹೋಯಿತು. ಆ ದುರ್ದೈವಿ ಇಡೀ ಹಗಲೂ ರಾತ್ರಿ ದಿನವೂ ಶರಬೂ ಕುಡಿಯುತ್ತಾ ಇದ್ದ. ಆರು ತಿಂಗಳಲ್ಲಿ ಅಂತ್ಯ ಕಂಡ....."

"ಏನು ಹಾಗಂದರೆ?" ನಾನು ನಡುಗಿದಂತಾದೆ.

ಅಕಾಲ ಮರಣ........." ನನ್ನ ಮಿತ್ರನ ದನಿ ಅವನ ಕಂಠದಲ್ಲಿ ಅಡಗಿಹೋಯಿತು. ಕೋನಯಾಕ್ ಟೀಯನ್ನು ವೇಗವಾಗಿ ಐದಾರು ಗುಟುಕು ಕುಡಿದು ಹೇಳಿದ. "ಮತ್ತೆ ಮುಂದಿನ ಜನವರಿ ಇಪ್ಪತ್ತೈದನೇ ತಾರೀಕು ಬಂದಾಗ ನನ್ನ ಹೆಸರಿಗೆ ಆ ಹುಡುಗಿಯ ಶೋಕಭರಿತ ಪತ್ರ ಬಂದಿತು. ಅದರಲ್ಲಿ ಆಕೆ ಯಾವ ಕೊಠಡಿಯಲ್ಲಿ ಹಿಂದಿನ ವರ್ಷ ಅವರಿಬ್ಬರೂ ಉಳಿದುಕೊಂಡಿದ್ದರೋ ಆ ಕೊಠಡಿಯನ್ನು ಪ್ರವೇಶಿಸಲು ಬೇರೆ ಯಾರಿಗೂ ನಾನು ಬಿಡಕೂಡದು ಎಂದು ಕೋರಿದ್ದಳು. ಅವಳು ಪತ್ರದೊಂದಿಗೆ ಲಕೋಟೆಯಲ್ಲಿ ಎರಡು ಚೆಂಡು ಹೂವನ್ನು ಕಳಿಸಿ ನಾನು ಆ ಹೂಗಳನ್ನು ಆ ಕೊಠಡಿಯಲ್ಲಿ ಅವಳ ಪ್ರಣಯ ಶಯ್ಯೆಯಾಗಿದ್ದ ಆ ಮಂಚದ ಮೇಲೆ ಇಟ್ಟು ಬಿಡಬೇಕೆಂದು ತಿಳಿಸಿದ್ದಳು. ಅವರಿಬ್ಬರ ಆತ್ಮಗಳು ಮೂರು ದಿನಗಳ ಕಾಲ ಆ ಕೊಠಡಿಯಲ್ಲಿರುತ್ತವೆಂದೂ ಬರೆದಿದ್ದಳು.

ನಾನು ಈ ಮಾತುಗಳನ್ನು ಕೇಳುತ್ತಿದ್ದ ಹಾಗೆ ನಾನು ನಾನಾಗಿರಲಿಲ್ಲ. ಕೇವಲ ಆಶ್ಚರ್ಯವೇ ಆಗಿಬಿಟ್ಟೆ. 'ಈ ಮಾತನ್ನು ನೀನು ನಂಬಿಬಿಟ್ಟೆಯಾ' ಎಂದು ಮಿತ್ರನನ್ನು ಕೇಳಬೇಕೆಂದುಕೊಂಡೆ. ನಾನು ಕೇಳುವುದಕ್ಕೆ ಮುಂಚೆ ಅವನೇ ಹೇಳತೊಡಗಿದ. "ಅವಳ ಪತ್ರ ನನಗೆ ಕೇವಲ ಅವಳ ಹುಚ್ಚುತನ ಎನಿಸಿತು. ಅವಳ ಹುಚ್ಚುತನ–ಬಹುಶಃ ಹುಚ್ಚುತನದ್ದೂ ಏನೋ ಒಂದು ಜಾದೂ ಇರಬೇಕು ಎನಿಸಿತು. ನಾನು ಅವಳ ಪತ್ರವನ್ನು ಆ ಕಡೆ ಇಟ್ಟೆ. ಆದರೆ ಆ ಹೂವುಗಳನ್ನು ನನಗೆ ಎಸೆಯಲಾಗಲಿಲ್ಲ. ಜೊತೆಗೆ ಆ ದುರ್ದೈವಿಯು ಅವಳನ್ನು 'ಚೆಂಡೂ ಹೂ' ಎಂದು ಕರೆದು ಇಲ್ಲಿಯೇ ಒಂದು ಕವಿತೆ ಬರೆದಿದ್ದನೆಂಬುದು ನೆನಪಾಯಿತು. ಸರಿ ನಾನು ಆ ಎರಡೂ ಹೂಗಳನ್ನು ಆ ಕೊಠಡಿಯಲ್ಲಿನ ಮಂಚದ ಮೇಲೆ ಇಟ್ಟು ಬಾಗಿಲು ಭದ್ರಪಡಿಸಿದೆ. ಆದರೆ ಆ ರಾತ್ರಿ ಒಂದು ವಿಚಿತ್ರ ಘಟನೆ ನಡೆಯಿತು."

ನಾನು ಇಡೀಯಾಗಿ ನನ್ನದೇ ಕಣ್ಣುಗಳಲ್ಲಿ ತಲ್ಲೀನನಾಗಿ ಬಿಟ್ಟಿದ್ದೆ. ಮಿತ್ರನ ಮುಖದ ಕಡೆಗೆ ನೋಡುತ್ತಿದ್ದೆ. ಅವನು ಹೇಳಿದ. "ಸುಮಾರು ಅರ್ಧರಾತ್ರಿ ಕಳೆದಿರಬಹುದು. ನನಗೆ ಆ ಕೊಠಡಿಯಿಂದ ಯಾರದ್ದೋ ಹೆಜ್ಜೆಯ ಸಪ್ಪಳ ಕೇಳಿಬಂತು. ಅನಂತರ ಹೆಜ್ಜೆಗಳ ಸದ್ದು ಕೊಠಡಿಯಿಂದ ಹೊರಟು ಹೊರಗಡೆ ಅಡುಗೆಮನೆಯಲ್ಲಿ ನೀರಿನ ಬಿಂದಿಗೆ ಇಟ್ಟಿದ್ದ ಜಾಗದವರೆಗೂ ಹೋಗುತ್ತಾ ಇರುವ ಹಾಗೆ ಅನ್ನಿಸಿತು. ಆಮೇಲೆ ಬಿಂದಿಗೆಯಿಂದ ನೀರು ತೆಗೆದುಕೊಳ್ಳುವ ಸದ್ದು ಕೇಳಿ ಬಂತು. ಜೊತೆಗೆ ಯಾರದ್ದೋ ಕೈ ಬಳೆಗಳ ಗಲ್ ಗಲ್ ಶಬ್ದ ಕೂಡಾ..."

"ಇಂಪಾಸಿಬಲ್..........." ನನ್ನ ಬಾಯಿಂದ ಹೊರಟಿತು.........

ಆದರೆ ದನಿ ನಡುಗಿದಂತಿತ್ತು.

ನನ್ನ ಮಿತ್ರ ಹೇಳತೊಡಗಿದ "ನಾನು ಕೂಡಾ ಬೆಳಿಗ್ಗೆ ಎದ್ದ ಮೇಲೆ ಇದೆಲ್ಲ ನನ್ನ ನೆನಪುಗಳ ಭ್ರಮೆ ಇರಬೇಕು. ಹಿಂದಿನ ವರ್ಷ ಆ ಹುಡುಗಿ ಎರಡೂ ಕೈಗಳ ತುಂಬ ಹಸಿರು ಬಣ್ಣದ ಗಾಜಿನ ಬಳೆ ತೊಟ್ಟುಕೊಂಡಿದ್ದಳು...... ಅದೆಲ್ಲವೂ ಆ ನೆನಪಿನಿಂದಾಗಿ ನನಗೆ ಕೇಳಿಬಂದಿರಬೇಕು. ಎಂದೇ ಅಂದುಕೊಂಡೆ. ಆದರೆ ಮರುದಿನ ರಾತ್ರಿ ಕೂಡ ಹೀಗೇ ಆಯಿತು............"

"ಮತ್ತೆ ಮುಂದಿನ ವರ್ಷ?"

"ಮುಂದಿನ ವರ್ಷವೂ ಇಪ್ಪತ್ತೈದನೇ ತಾರೀಕು ಆ ಹುಡುಗಿಯ ಪತ್ರ ಬಂತು. ಅದೇ ಕೋರಿಕೆ ಮತ್ತು ಅದೇ ಚೆಂಡು ಹೂಗಳು.............. ಮತ್ತೆ ಅದೇ ತರಹ ಮೂರು ರಾತ್ರಿಗಳಂದು ಸದ್ದುಗಳು......."

ಈಗ ನಾನು ಏನನ್ನೂ ಹೇಳುವ ಸ್ಥಿತಿಯಲ್ಲಿರಲಿಲ್ಲ. ಕೊಠಡಿಯಲ್ಲಿ ನಾನು ಸೌದೆ ಉರಿ ಹಾಕಿದ್ದೆ. ಉರಿಯುತ್ತಾ ಇದ್ದದ್ದು ಅದು ಮಾತ್ರ..... ನಾನು ಆರಿ ಹೋದಂತಾಗಿದ್ದೆ.

ಮಿತ್ರನ ಮುಖ ನೋಡಿದೆ. ಬೆಂಕಿಯ ಜ್ವಾಲೆಯಿಂದ ಅವನ ಮುಖ. ತಪ್ತಗೊಂಡಿತ್ತು

ಉರಿಯುತ್ತಿರುವ ಸೌದೆಗಳ ಮೇಲೊಂದು ಸೌದೆ ಕಡ್ಡಿ ಇಡುತ್ತ ನನ್ನ ಮಿತ್ರ ಹೇಳಿದ.... "ಪೂರ್ತಿ ಮೂರು ವರ್ಷ ಇದೇ ರೀತಿ ಆಗುತ್ತಿತ್ತು. ಅವರ ವಾಸ್ತವದ ಮಿಲನವನ್ನು ಕಣ್ಣಾರೆ ನೋಡಿದ್ದವನು ಕೂಡಾ ನಾನು ಒಬ್ಬನೇ ಹೇಗೋ, ಅವರ ಆತ್ಮಗಳ ಮಿಲನವನ್ನು ನೋಡಿದವನು ಕೂಡಾ ಈ ಪ್ರಪಂಚದಲ್ಲಿ ನಾನೊಬ್ಬನೇ ಆಗಿದ್ದೆ. ಆದ್ದರಿಂದ ಈ ವಿಚಿತ್ರ ಸತ್ಯಸಂಗತಿಯನ್ನು ನಾನು ನನ್ನಲ್ಲಿಯೇ ಇಟ್ಟು ಕೊಳ್ಳಬಯಸಿದೆ. ಈ ಕಾರಣದಿಂದಲೇ ಈ ದಿನಗಳಲ್ಲಿ ನೀನು ಬರುವುದು ಬೇಡವೆಂದು ಕಾಗದ ಬರೆಯುತ್ತಾ ಇದ್ದೆ......"

"ಆದರೆ ಈ ಹೊತ್ತು ಮತ್ತೆ ಜನವರಿ ಇಪ್ಪತ್ತೈದು.........."

ಅಷ್ಟು ಮಾತ್ರ ಹೇಳಿದೆ. ಅದರರ್ಥ – "ಈ ಹೊತ್ತು ನೀನು ಅಲ್ಲಿ ಯಾಕೆ ಇಲ್ಲ ಈ ಹೊತ್ತು ಅಲ್ಲಿ ಚೆಂಡು ಹೂವನ್ನು ಯಾರು ಇಡುತ್ತಾರೆ?" ಅನ್ನುವುದು ಸ್ಪಷ್ಟವಿತ್ತು.

ಅವನು ಬೆಂಕಿಯ ಜ್ವಾಲೆಯ ಹಾಗೆ ನಗತೊಡಗಿದ. ಸ್ವಲ್ಪ ಹೊತ್ತು ನನ್ನತ್ತ ನೋಡುತ್ತಿದ್ದು ಆಮೇಲೆ ನಕ್ಕು ಹೇಳಿದ. "ಹಿಂದಿನ ವರ್ಷ ಜುಲೈ ತಿಂಗಳಲ್ಲಿ ನಡೆದ ಸಂಗತಿ. ನಮ್ಮ ಆಸ್ಪತ್ರೆಯಲ್ಲಿ ನಮ್ಮ ಸೈಕಿಯಾಟ್ರಿಸ್ಟ್ ಕಡೆ ಒಂದು ಕೇಸು ಬಂತು. ಅವನು ಆ ಕೇಸನ್ನು ನನ್ನ ಹತ್ತಿರ ಡಿಸ್ಕಸ್ ಮಾಡಿದ. ಯಾವುದೋ ಒಂದು ನಗರದ ಹುಡುಗಿಯ ಒಂದು ವಿಚಿತ್ರ ಕೇಸ್ ಬಂದಿದೆ. ಅದು ಏನೆಂದರೆ ಆ ಹುಡುಗಿ ವರ್ಷದಲ್ಲಿ ಮೂರು ದಿನ ಪೂರಾ ನಿರ್ಜೀವಳಾಗಿ ಬಿಡುತ್ತಾಳೆ. ಅಲ್ಲದೆ ಪ್ರತಿವರ್ಷ ಮೂರುದಿನ. ನನಗೆ ಇದು ಖಂಡಿತ ಆ ಹುಡುಗಿಯ ಕೇಸೇ ಇರಬೇಕು ಅನ್ನಿಸಿತು. ನಾನು ಅವನನ್ನು ಆ ತಾರೀಕುಗಳು ಯಾವು ಅಂತ ಕೇಳಿದಾಗ ಅವು ಅದೇ ಜನವರಿ ಇಪ್ಪತ್ತೈದು, ಇಪ್ಪತಾರು ಮತ್ತು ಇಪ್ಪತ್ತೇಳು ಎಂದು ತಿಳಿಯಿತು. ಅವಳ ತಂದೆ ತಾಯಿಗಳು ಎಲ್ಲಾ ಡಾಕ್ಟರುಗಳನ್ನು ಕಡೆಗಣಿಸಿ ಅವಳನ್ನು ಇಲ್ಲಿ ದೆಹಲಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು....."

"ನೀನು ಅವಳನ್ನು ಭೇಟಿಯಾಗಲಿಲ್ಲವೆ" 'ಆಹ್! ನಾನು ಒಂದು ಸಲ ಆ ಹುಡುಗಿಯನ್ನು ನೋಡಲು ಸಾಧ್ಯವೇ? ವಾಸ್ತವದಲ್ಲಿ ಇಂಥ ಒಬ್ಬಳು ಹುಡುಗಿ ಯಾರಾದರೂ ಇರುವುದಕ್ಕೆ ಸಾಧ್ಯವೇ?' ಎಂದು ಆರಿಹೋಗುತ್ತಿರುವ ಸೌದೆಯಿಂದ ಏಳುವ ಹೊಗೆಯ ಹಾಗೆ ನನ್ನೊಳಗಿನಿಂದ ಒಂದು ಆಕಾಂಕ್ಷೆ ಜಾಗೃತವಾಯಿತು.

ನನ್ನ ಮಿತ್ರ "ಹೌದು" ಎಂದು ತಲೆ ಆಡಿಸಿದ. ಮತ್ತೆ ಜೋರಾಗಿ ನಕ್ಕ. "ಭೇಟಿಯಾಗುವುದಂತೂ ಇದ್ದೇ ಇತ್ತು. ಭೇಟಿಯಾದೆ. ಅವಳೇ ಆಗಿದ್ದಳು. ಅವಳೇ ಆಗಿರಲು ಸಾಧ್ಯ. ನನ್ನನ್ನು ನೋಡಿ ಅತ್ತು ಬಿಟ್ಟಳು. ಅವಳನ್ನು ಬಲವಂತವಾಗಿ ಆಸ್ಪತ್ರೆಗೆ

ಕರೆದುಕೊಂಡು ಬಂದಿದ್ದರು. ಬಲವಂತವಾಗಿ ರಾಜಿ ಮಾಡಿಸಲು ಬಯಸಿದ್ದರು ಬಲವಂತವಾಗಿ ಅವಳ ಮದುವೆ ಮಾಡಬಯಸಿದ್ದರು.

"ಆಮೇಲೆ"?

"ನನ್ನ ಡಾಕ್ಟರ್ ಸಹೋದ್ಯೋಗಿಯ ಕಡೆಯಿಂದ ಆಕೆಯೊಂದಿಗೆ ಮಾತನಾಡಲು ಅನುಮತಿ ಪಡೆದಿದ್ದೆ. ದಿನವೂ ಅವಳನ್ನು ಭೇಟಿಯಾಗುತ್ತಿದ್ದೆ. ಒಂದು ದಿನ ಅವಳಿಗೆ ಹೇಳಿದೆ. "ನೀನು ಹೇಳುತ್ತಿರುವುದು ಸರಿ. ಪೂರ್ಣ ಮೂರು ದಿನ ಅವನ ಆತ್ಮ ನಿನ್ನ ಆತ್ಮ ದೊಂದಿಗೆ ನಿನ್ನ ಆತ್ಮ ಅವನ ಆತ್ಮದೊಂದಿಗೆ ಇರುತ್ತೆ; ಆದರೆ ವರ್ಷದ ಬಾಕಿ ಮುನ್ನೂರಾ ಅರುವತ್ತೆರಡು ದಿನ ? ನೀನು ಆ ಮುನ್ನೂರಾ ಅರುವತ್ತೆರಡು ದಿನಗಳ ಸಲುವಾಗಿ ಮದುವೆ ಮಾಡಿಕೋ" ಬಹಳ ದಿಟ್ಟ ಹೃದಯದ ಹೆಣ್ಣಂತೂ ಅವಳು ಆಗೇ ಇದ್ದಳು. 'ಒಳ್ಳೆಯದು, ಹಾಗಾದರೆ... ಯಾರು ವರ್ಷದ ಮುನ್ನೂರಾ ಅರುವತ್ತೆರಡು ದಿನಕ್ಕೆ ನನ್ನನ್ನು ಮದುವೆಯಾಗ ಬಯಸುತ್ತಾನೋ ಅಂಥ ವ್ಯಕ್ತಿಯನ್ನು ನಾನು ಮದುವೆ ಯಾಗುತ್ತೀನಿ ಅಂತ ಹೇಳಿ ನಮ್ಮ ತಂದೆ ತಾಯಿಗಳನ್ನು ಒಪ್ಪಿಸಿ" ಎಂದು ಹೇಳಿದಳು... ಮತ್ತೆ ಆ ದಿನ, ಆ ಕ್ಷಣದಲ್ಲೇ ಅವಳ ಮೇಲೆ ನನಗೆ ಪ್ರೀತಿ ಉಂಟಾಗಿ ಬಿಟ್ಟಿತು...."

ನಡುಗುತ್ತಿರುವ ಕೈಯಿಂದ ಮಿತ್ರನ ಕೈಮುಟ್ಟಿ– " ಹಾಗಾದರೆ ಈಗ ಅವಳೇ.......ಅವಳೇ ನಿನ್ನ ಹೆಂಡತಿ"? ಆರುತ್ತಿರುವ ಸೌದೆ ಕಡ್ಡಿಗಳ ಮೇಲೆ ಇಟ್ಟಿದ್ದ ಹೊಸ ಸೌದೆ ಕಡ್ಡಿಯ ಜ್ವಾಲೆಯ ಹಾಗೆ ನನ್ನ ಮಿತ್ರ ನಗತೊಡಗಿದ.

"ಅವಳೇ ನನ್ನ ಹೆಂಡತಿ. ಜನವರಿ ತಿಂಗಳ ಇಪ್ಪತ್ತೈದು ಇಪ್ಪತ್ತಾರು. ಮತ್ತು ಇಪ್ಪತ್ತೇಳು ಈ ತಾರೀಕುಗಳನ್ನು ಬಿಟ್ಟು.........."

ಮಿತ್ರನ ಮುಂದೆಯೂ ನನ್ನ ತಲೆ ಬಾಗಿತು. ಆದರೆ ಈ ಹೊತ್ತಿನಲ್ಲಿ ಯಾವ ಕೊಠಡಿಯೊಳಗಿರುವ ಖಾಲಿ ಮಂಚದ ಮೇಲೆ ಒಬ್ಬ ಯುವತಿ ಚೆಂಡು ಹೂವಿಡುತ್ತಿದ್ದಾಳೋ ಆ ಕೊಠಡಿಯ ಹೊಸ್ತಿಲಿಗೆ ನಾನು ನಮಸ್ಕರಿಸುತ್ತಿದ್ದೇನೆನಿಸಿತು...

ಧನ್ನೋ

ಇದು ಬೆಳ್ಳಿ ರೂಪಾಯಿನ ಕಾಲದ ಸಂಗತಿ. ಪಂಜಾಬಿನ ಹಳ್ಳಿಗಳಲ್ಲಿ ಎಂಟಾಣೆಯನ್ನು 'ಧೇಲಿ' ಎಂದು ಹೇಳುತ್ತಿದ್ದರು. ಮತ್ತು ನಾಲ್ಕಣೆಯನ್ನು ಪೌಲಿ(ಪಾವಲಿ) ಎಂದು ಹೇಳುತ್ತಿದ್ದರು. "ಹೆಣ್ಣನ್ನಂತೂ ಆ ದೇವರು ಮೊದಲಿಂದಲೂ 'ಧೇಲಿ'ಯಾಗಿಯೇ ಸೃಷ್ಟಿಸಿರೋದು. ತಾನು ಇಷ್ಟಪಟ್ಟ ಗಂಡನ್ನು ಗಂಟುಹಾಕಿಕೊಂಡು ಡಬ್ಬಲ್ ರೂಪಾಯಿ ಯಾದವಳು ಯಾರೋ ಪುಣ್ಯ ಮಾಡಿದವಳು ಮಾತ್ರ.' ಆದರೆ ಅಂಥವಳನ್ನಂತೂ ಯಾರೂ ನೋಡಿಯೂ ಇಲ್ಲ, ಕೇಳಿಯೂ ಇಲ್ಲ. ಪ್ರತಿಯೊಬ್ಬರ ಮನೆಯಲ್ಲೂ ಬರೀ 'ಧೇಲಿ'ಯಾಗಳೇ. ಸರಿ ಇನ್ನೇನು ಎರಡು ಮೂರು 'ಪಾವಲಿ'ಗಳನ್ನು ಹೆತ್ತು ಪ್ರಪಂಚದಿಂದ ನಡೀತಿರುತ್ತಾರೆ........" ಅಂತ ಧನ್ನೋ ಚಿಕ್ಕಮ್ಮ ಹೇಳುತ್ತಿದ್ದಳು.

'ಅದೆಷ್ಟು ಹರಕುಬಾಯಿ ಈ ಧನ್ನೋಳದು!" ಅಂತ ಅವಳ ಹಿಂದೆ ಯಾರಾದರೂ ಯಾವಾಗಲಾದರೂ ಅಂದುಕೊಳ್ಳುತ್ತಿದ್ದರು. ಆದರೆ ಧನ್ನೋಳ ಎದುರುಗಡೆ ಮಾತ್ರ ಊರಿನ ಎಲ್ಲಾ ಹೆಂಗಸರೂ ಹಲ್ಲುಕಚ್ಚಿಕೊಂಡು ಇದ್ದು ಬಿಡುತ್ತಿದ್ದರು. ಒಂದು ಸಲ ಷಾಹ್‌ನ 'ಕೆಸರೋ' ಇದೇ ಮಾತನ್ನು ಧನ್ನೋಳ ಎದುರುಗಡೆ ಆಡಿದಾಗ ಧನ್ನೋ ಅವಳಿಗೆ ಯಾವ ಥರ ಗ್ರಹಚಾರ ಬಿಡಿಸಿದ್ದಳು ಅಂದರೆ, ದೇವರೇ ಕಾಪಾಡಬೇಕು! ಅದು ಎಲ್ಲರಿಗೂ ಚೆನ್ನಾಗಿ ಜ್ಞಾಪಕ ಇತ್ತು. "ನೀನು ಬಾಯಿ ಹೊಲಿದು ಕೊಂಡಿರೋಳು ಭಾರೀ ಸಭ್ಯಸ್ಥೆ, ನಾನು ಹರಕು ಬಾಯಿಯೋಳು ಹಾಳಾದೋಳಾ ? ಏನವ್ವಾ ಕೆಸರೋ ರಾತ್ರಿಗಂತೂ ನೀನು 'ಧೇಲಿ'. ನಿನ್ನದೂ ನನ್ನದರಷ್ಟೇ ಮುರಿಯುತ್ತೆ" ಆಮೇಲೆ ಧನ್ನೋ ಹಳ್ಳಿಯ ಪ್ರತಿಯೊಬ್ಬ ಹೆಣ್ಣಿನ 'ಕದ್ದು-ಮುಚ್ಚಿ' ಬದುಕನ್ನು ಜಾಲಾಡಿಬಿಟ್ಟಿದ್ದಳು. ಲಮಡೋರ 'ಇಶರೋ' ನನ್ನೆದುರುಗಡೆ ನೆಟ್ಟಗೇ ಬರುತ್ತಾಳೇ. ಅವಳ ಮುದಿಗಂಡ 'ಖಸಮ್'ನಿಂದ ಅವಳ 'ಧೇಲಿ' ಮುರೀದೇ ಇದ್ದಾಗ ಗೂಳಿಯಂಥ ಮೈದುನನಿಂದ ತನ್ನ 'ಧೇಲೀ'ನ ಮುರಿಸಿಕೊಳ್ತಾಳೆ! ಇನ್ನು ಆ ಚೀಮೀಗಳ 'ಬಲವಂತೋ'ನ ಯಾರು ತಾನೇ ಮರೆತಿದ್ದಾರೆ?

'ವಾಂತಿ' ಮಾಡಿಕೊಳ್ಳುತ್ತ ಡೋಲಿಯಿಂದ ಇಳಿದಿದ್ದಳು. ಏಳು ತಿಂಗಳೊಳಗೆ ಗಂಡು ಮಗೂನ ಹೆತ್ತು ಬಿಟ್ಟಳು ! ಇನ್ನು ವಡ್ಯೆಯಾ ಪೈಕಿಯ ಕರತಾರೋ ನಾಲ್ಕು ವರ್ಷಗಳಿಂದ ಗಂಡಸಿನ ಮುಖ ನೋಡಿರಲಿಲ್ಲ. ಮೆಂತ್ಯದ ಕಾಳನ್ನು ರುಬ್ಬಿಕೊಂಡು ಕುಡೀತಿದ್ದಳು..."

ಧನ್ನೋಳಿಗೆ ಊರಿನ ಹೆಂಗಸರು ಹಿಡಿಸುತ್ತಿರಲಿಲ್ಲ. ಅವಳು ಅವರ ಮದುವೆಯಾಗದ ಹೆಣ್ಣುಮಕ್ಕಳ ಹೆಸರು ಹಿಡಿದು ಹೇಳುತ್ತಿದ್ದಳು. "ನೀನು ಭಾರೀ ಜಾಣೆ. ನಿನ್ನ ಮಗಳು ಛಲ್ಲೋಳನ್ನು ನೆಟ್ಟಗೆ ನೋಡಿಕೋ, ಅವಳು ಸಂಧುವರ ಜಗತಾರೆ ಕಡೆಯಿಂದ 'ಧೇಲಿ' ಮುರಿಸಿಕೊಳ್ಳೋಕೆ ಹೊರಟಿದ್ದಾಳೆ. ಇನ್ನು ನೀನು ಭಾರಿ ಧರ್ಮಾತ್ಮಳು! ಎದೆ ಮಟ್ಟ ಬೆಳೆದು ನಿಂತಿರೋ 'ಬೀರೋಳ' ಮದುವೆಗ್ಯಾಕೆ ಏರ್ಪಾಟು ಮಾಡ್ತಿಲ್ಲ. ಅವಳು ಗುರುದ್ವಾರದ ಆ ಹುಡುಗನ ಹಿಂದೆ ಬಿದ್ದಿದ್ದಾಳೆ. ಇನ್ನು ನೀನು..........." ಹೀಗೆ

ಊರಿನ ಹೆಂಗಸರಂತೂ ಬಾಯಿ ಬಾಯಿ ಬಡಿದುಕೊಳ್ತಾ ಇದ್ದರು. ಆದರೆ ಯಾರೂ ಧನ್ನೋಳ ಎದುರುಗಡೆ ಬಾಯಿ ಬಿಡುತ್ತಿರಲಿಲ್ಲ. ಹಾಗೆ ನೋಡಿದರೆ ಅವರಿಗೆ ಧನ್ನೋಳ ದರದು ಇರುತ್ತಿತ್ತು. ಹೆಣ್ಣು ಮಕ್ಕಳಿಗೋ, ಗಂಡು ಮಕ್ಕಳಿಗೋ ಗದ್ದಕಟ್ಟು ಆಗಿಬಿಡುತ್ತಿತ್ತು. ಅವರು ಗಿಡಮೂಲಿಕೆ ಮತ್ತು ಬಡೇ ಸೋಪನ್ನು ಕುದಿಸಿ ಕುಡಿಸುತ್ತಿದ್ದರು. ಆದರೆ ತಿಂಗಳುಗಟ್ಟಲೆ ಮಕ್ಕಳ ಗಂಟಲು ಊದಿಕೊಂಡಿರುತ್ತಿತ್ತು. ಮಕ್ಕಳ ಗಂಟಲಿನಲ್ಲಿ ಆಹಾರ ಇಳಿಯುತ್ತಿರಲಿಲ್ಲ. ಮಕ್ಕಳಿಗೆ ನಡುಕ ಬಂದು, ಜ್ವರ ಏರಿಬಿಡುತ್ತಿತ್ತು. ಮಕ್ಕಳ ತಾಯಂದಿರು ಕೈ ಜೋಡಿಸಿಕೊಂಡು ಧನ್ನೋಳ ಮನೆ ಬಾಗಿಲ ಹತ್ತಿರ ಹೋಗುತ್ತಿದ್ದರು – 'ಅತ್ತೆಗೆ ನಿನ್ನ ಕುತ್ತಿಗೆ ತಿಕ್ಕುವುದಕ್ಕೆ ಹೇಳು' ಅಂತ ಮಕ್ಕಳಿಗೆ ಹೇಳುತ್ತಿದ್ದರು. ಧನ್ನೋ ಬಿಸಿ ತುಪ್ಪದಲ್ಲಿ ಒಂದು ಹೆಬ್ಬೆರಳು, ಇನ್ನೊಂದು ಬೆರಳು ಮುಳುಗಿಸಿ, ಯಾವ ಮಗುವಿನ ಗಂಟಲನ್ನು ತಿಕ್ಕುತ್ತಿದ್ದಳೋ, ಅದು ಮಾರನೇ ದಿನವೇ ಪೂರಾ ಗುಣವಾಗಿ ಬಿಡುತ್ತಿತ್ತು.

"ನಿನ್ನ ಗಂಟಲು ಸರಿ ಹೋಗಲಿ ಮದಾನಾ" ಎಂದು ಧನ್ನೋ ನಕ್ಕು ಹೇಳುತ್ತಿದ್ದರೆ ಜನರಿಗೆ, ಧನ್ನೋ ಖತ್ರಿ ಜನಾಂಗದ ಮದಾನೋ ಜಾತಿಯಲ್ಲಿ ಹುಟ್ಟಿ ಬೆಳೆದವಳೆಂಬುದು ಗೊತ್ತಾಗುತ್ತಿತ್ತು. ಹಾಗೆ ನೋಡಿದರೆ, ಯಾರೂ ಅವಳ ಅಪ್ಪ ಅಮ್ಮನನ್ನು ನೋಡಿರಲೂ ಇಲ್ಲ. ಮತ್ತೆ ಹತ್ತಿರದ ರಕ್ತ ಸಂಬಂಧಿಗಳು ಕೂಡಾ ಯಾರೂ ಇರಲಿಲ್ಲ.

ಧನ್ನೋ ಒಳ್ಳೆ ಸುಖ–ಸಮೃದ್ಧಿಯಿಂದ ಕೂಡಿದ ಮನೆತನದ ಹೆಣ್ಣುಮಗಳು ಎಂಬ ಪ್ರತೀತಿ ಹಬ್ಬಿತ್ತು. ನದಿಯ ಪ್ರವಾಹ ಏರಿದ ಹಾಗೆ ಅವಳಿಗೆ ಪ್ರಾಯ ಏರಿತು. ಮತ್ತು ಆ ಪ್ರಾಯದಲ್ಲಿ ಯಾರ ಮೇಲೋ ಅವಳಿಗೆ ಮನಸ್ಸಾಗಿತ್ತು. ಅವಳನ್ನು ತೌರು ಮನೆಯಿಂದ ಓಡಿಸಿಕೊಂಡು ಬಂದವನೊಬ್ಬ ವೈಲಿ ಪಂಗಡದ ದಷ್ಟ ಪುಷ್ಟ ಯುವಕ, ಹತ್ತು– ಹದಿನೈದು ದಿವಸ ಅವಳ ಜೊತೆಯಲ್ಲಿ ತಿಂದು ಕುಡಿದು ತಿರುಗಾಡಿ ಅವಳನ್ನು ಎಲ್ಲಿಗೋ ಮಾರಿ ಬಿಡುವ ಹಂಚಿಕೆ ಹಾಕಿದ್ದ. ಅಷ್ಟು ಹೊತ್ತಿಗೆ ಅದು ಧನ್ನೋಗೆ ಗೊತ್ತಾಗಿ ಅವನ ಮುಖಕ್ಕೆ ಹೊಡೆಯೋ ಹಾಗೆ – "ಮದುವೆ ಮಾಡಿಕೊಂಡ ಮೇಲೂ 'ಧೇಲಿ' ಮುರಿಸಿ ಕೊಂಡೇ ಅನ್ನ ಸಂಪಾದನೆ ಮಾಡಬೇಕು ಅನ್ನೋದಾದರೆ, ಹೋಗೋ ಹೊತ್ತಿನಲ್ಲಿ ನಿನ್ನ ಜೇಬನ್ನು ನಾನು ಯಾಕೆ ತುಂಬಿಸಲಿ...?" ಎಂದು ಹೇಳಿಬಿಟ್ಟಳು ಮತ್ತು ಛಾತಿವಂತ ಹೆಣ್ಣಾಗಿ

ಅವನನ್ನು ಕಾಲಿನ ಮುಳ್ಳನ್ನು ಕಿತ್ತೆಸೆಯುವ ಹಾಗೆ ಕಿತ್ತು ಹಾಕಿ ಬಂದಿದ್ದಳು. ಹಾಗಾಗಿ ಅವಳಿಗೆ ಗೊತ್ತಿರುವವರಾಗಲಿ, ಅವಳನ್ನು ಇಲ್ಲಿ ತಂದವರಾಗಲಿ ಅವಳವರಾಗಿರಲಿಲ್ಲ.

ಅಲ್ಲದೆ ಯಾವುದೋ ಊರಿನ ಜಮೀನುದಾರ ಅವಳ ಮೇಲೆ ಮೋಹಗೊಂಡು ಅವಳನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಇಟ್ಟುಕೊಂಡನೆಂದೂ, ಅವನ ಗಂಡು ಮಕ್ಕಳು ಮನೆಯಲ್ಲಿ ಗಲಾಟೆಮಾಡಿದ್ದರಿಂದ ಮಕ್ಕಳ ಕಣ್ಣು ತಪ್ಪಿಸಿ ದೂರದ ಊರಿನಲ್ಲಿ ಎರಡು ಎಕರೆ ಜಮೀನು ಖರೀದಿಸಿ ಅವಳ ಹೆಸರಿಗೆ ಮಾಡಿ ಅವಳಿಗೇ ಬೇರೆ ಒಂದು ಮನೆ ಮಾಡಿ ಅಲ್ಲಿ ಇರಿಸಿದನೆಂದೂ ಹೇಳುತ್ತಾರೆ. ಅವನು ಬದುಕಿರುವವರೆಗೂ ಅವಳನ್ನು ನೋಡಿಕೊಳ್ಳುತ್ತಿದ್ದನಂತೆ. ಆದರೆ ಈಗ ಅವನೂ ತೀರಿಕೊಂಡು ಬಹಳಷ್ಟು ಕಾಲ ಆಗಿತ್ತು. ಇನ್ನು ಧನ್ನೋಳಂತೂ ಧೈರ್ಯವಾಗಿ ತನ್ನ ಕಾಲ ಮೇಲೆ ತಾನು ನಿಂತು ಬದುಕು ಸಾಗಿಸಿದ್ದಳು.

ಅವಳು ಬಾಯಲ್ಲಂತೂ– "ಏನು ಚಿಂತೆ ಇದೆ ನನಗೆ. 'ಧೇಲಿ'ಯನ್ನಂತೂ ಸೆರಗಿಗೆ ಗಂಟು ಹಾಕಿಕೊಂಡಿದ್ದೀನಿ. ಏನಾದರೂ ಹೆಚ್ಚು ಕಮ್ಮಿ ಆಯಿತು ಅಂದರೆ ಅದನ್ನು ಮುರಿಸ್ತೀನಿ" ಎಂದು ಹೇಳುತ್ತಿದ್ದಳು. ಆಗತಾನೆ ಮೀಸೆ ಮೂಡುತ್ತಿದ್ದ ಹೈದನೊಬ್ಬ ಅವಳ ತೋಳಿನ ಮೇಲೆ ಲಟಿಕೆ ಮುರಿದು – ನಿನ್ನ 'ಧೇಲಿ' ತೋರಿಸು, ಅದೆಷ್ಟು ಸಾಚಾ ಅಂತ" ಎಂದು ಹೇಳಿದಾಗ ಧನ್ನೋ ಅವನ ಕುತ್ತಿಗೆ ಹಿಡಿದು' – "ನಡೀ ತೋರುಸ್ತೀನಿ ನಿಮ್ಮ ಅಮ್ಮನ ಲಂಗದಲ್ಲಿದೆ" ಎಂದು ಹೇಳಿದ್ದಳು.

ಆ ಘಟನೆಯ ನಂತರ ಊರಿನ ಯಾವ ಗಂಡಸಿಗೂ ಧನ್ನೋಳತ್ತ ತಲೆ ಎತ್ತಿ ನೋಡುವ ತಾಕತ್ತಿರಲಿಲ್ಲ.

ಸರಿ ಇನ್ನೇನೂ ಧನ್ನೋ ಒಳ್ಳೆ ಛಾತಿವಂತ ಹೆಣ್ಣಾಗಿ ಬದುಕು ಸಾಗಿಸಿದ್ದಳು.

ಈಗ ಅವಳಿಗೆ ವಯಸ್ಸಾಗ್ತಾ ಇತ್ತು. ಆದರೆ ಅವಳ ಮೂಗಿನ ಕಾಂತಿ ಅವಳ ಸ್ವಭಾವದಂತೆಯೇ ಹೊಳೆಯುತ್ತಿತ್ತು. ಎಲ್ಲರಿಗೂ ಕಾಣುವಂತೆ ಹೊಲ ಗದ್ದೆಗಳಲ್ಲಿ ನೇಗಿಲು ಚಲಾಯಿಸುತ್ತಿದ್ದಳು. ಖತ್ರೀ ಕುಲದವಳಾದರೂ ಜಾಟ್ ಕುಲದ ಹೆಂಗಸರ ಹಾಗೆ ಆಢ್ಯತೆಯಿಂದಿದ್ದಳು. ಒಂದು ಸಲ ಧನ್ನೋಗೆ ವಾಯಿದೇ ಜ್ವರ (ವಿಷಮಶೀತ ಜ್ವರ) ಬಂತು. ಇಪ್ಪತ್ತೊಂದನೆಯ ದಿನ ಜ್ವರ ಇಳಿದು ಹೋಗಿತ್ತು. ಆದರೆ ಧನ್ನೋಳಿಗೆ ತಾನಿನ್ನು ಹೆಚ್ಚು ದಿನ ಬದುಕುತ್ತೇನೆಂಬ ಭರವಸೆ ಉಳಿಯಲಿಲ್ಲ. ಒಂದು ದಿನ ಅವಳು ತನ್ನ ಜಮೀನಿನ ಕಾಗದ ಪತ್ರಗಳೊಂದಿಗೆ ಸಮೀಪದ ಪಟ್ಟಣಕ್ಕೆ ಹೋದಳು. ಧನ್ನೋ ತನ್ನ ಆಸ್ತಿಯ ಉಯಿಲು ಬರೆಸಿದ್ದಾಳೆಂಬ ಸುದ್ದಿ ಹಬ್ಬಿತು.

"ಅರೇ, ಯಾರ ಹೆಸರಿಗೆ ಬರೆಸಿದ್ದಾಳಂತೆ?" ಅಂತ ಊರಿನ ಹೆಂಗಸರು ತಮ್ಮ ತಮ್ಮಲ್ಲೇ ಗುಸಪಿಸ ಮಾತಾಡಿಕೊಂಡರೇ ಹೊರತು ಧನ್ನೋಳನ್ನು ಕೇಳುವ ಧೈರ್ಯ ಯಾರಿಗೂ ಇರಲಿಲ್ಲ.

ಒಂದು ದಿನ ಊರಿನ 'ಸೆಮೋ' ಎಂಬ ಹುಡುಗಿ ಸ್ವಲ್ಪ ಧೈರ್ಯಮಾಡಿದಳು. ಅದಕ್ಕೆ ಕೆಲವು ದಿನಗಳ ಹಿಂದೆ ಒಂದು ಸಾಯಂಕಾಲದ ಹೊತ್ತು ಸೆಮೋ ಹೊಲದಿಂದ ಮನೆಗೆ ಹಿಂತಿರುಗುತ್ತಿದ್ದಳು. ಆಗ ಕುಡಿದ ಮತ್ತಿನಲ್ಲಿದ್ದ ಜಮೀನುದಾರನ ಮಗ ದಾರಿಯಲ್ಲಿ

ಅವಳನ್ನು ಅಡ್ಡಗಟ್ಟಿ ನಿಂತನು. ಧನ್ನೋ ಕೂಡ ಆ ಕಡೇನೇ ಎಲ್ಲೋ ಹೊರಟಿದ್ದಳು. ಅವಳನ್ನು ಜೋರಾಗಿ "ಧನ್ನೋ ಚಿಕ್ಕಮ್ಮಾ" ಎಂದು ಕೂಗಿಕರೆದಳು. ಧನ್ನೋ ಎದೆ ಸೆಟೆಸಿ ಅಲ್ಲಿಗೆ ಹೋಗಿ, ಹುಡುಗಿಯನ್ನು ಮುಟ್ಟುವುದಕ್ಕೆ ಆಸ್ಪದ ನೀಡದೆ ಅವಳನ್ನು ಅಕ್ಷತ ಕನ್ಯೆಯಾಗಿ ಅವಳ ಮನೆಗೆ ತಲುಪಿಸಿದ್ದಳು.

ಸೆಮೋ ಅದೇ ಒಂದು ಪರಿಚಯದ ಅಧಿಕಾರದ ಮೇಲೆ ಒಂದು ದಿನ ಧನ್ನೋಳನ್ನು ಕೇಳಿದಳು – "ಅರೆ ಚಿಕ್ಕಮ್ಮ ನಿನ್ನ ಜಮೀನನ್ನು ನೀನು ಯಾರದೋ ಹೆಸರಿಗೆ ಮಾಡಿಸಿದ್ದೀಯಂತೆ" ಧನ್ನೋಳಿಗೆ ಸಿಟ್ಟು ನೆತ್ತಿಗೇರಿತು. "ಅಯ್ಯೋ! ಮಗಳೇ, ನಿನಗೆ ಈ ಚಿಕ್ಕಮ್ಮನ ನೆನಪು ಬಂದು ಬಿಟ್ಟಿತಾ! ನಿಮ್ಮಮ್ಮ ನಾನು ಇಬ್ಬರೂ ಅವಳಿ ಜವಳಿ. ಅದಕ್ಕೆ ನಾನು ನಿನಗೆ ಚಿಕ್ಕಮ್ಮ ಅಲ್ಲವಾ" ಎಂದು ಕುಟುಕಿದಳು.

ಇನ್ನೇನು ಹೇಳಬೇಕಾದ್ದೇ ಇಲ್ಲ. ಸೆಮೋಳ ಬಾಯಿನ ಪಸೆ ಆರಿತು. ಅವಳು ತೊದಲುವಂತಾದಳು "ಸಿಟ್ಟು ಯಾಕೆ ಮಾಡಿಕೊಳ್ತೀಯಾ ಚಿಕ್ಕಮ್ಮ ; ನೀನು ಗುರುದ್ವಾರಕ್ಕೆ ನಿನ್ನ ಜಮೀನನ್ನು ದಾನವಾಗಿ ಕೊಟ್ಟು ಬಿಟ್ಟೆ ಅಂತ ಜನ ಹೇಳ್ತಾರೆ. ನಾನಂತೂ ಸುಮ್ಮನೆ ಹೀಗೇ ಕೇಳಿದೆ. ಹಾಗೆ ನೋಡಿದರೆ ನೀನು ತುಂಬ ಒಳ್ಳೇ ಕೆಲಸನೇ ಮಾಡಿದ್ದೀ ಬಿಡು" ಎಂದಳು.

ಧನ್ನೋ ಕನಲಿಕೆಂಡವಾದಳು. "ಗುರುದ್ವಾರದ ಆ ಧಡಿಯ ಈಗಾಗಲೇ ತುಂಬಾ ಹಲ್ವಾ ತಿನ್ನುತ್ತಾ ಇದ್ದಾನೆ. ಅವನ ಹಲ್ವಾ–ಪೂರಿಗೆ ಹೇಗೂ ನಿನ್ನ ಮಾಯೆ ಇದ್ದೇ ಇದೆಯಲ್ಲ ! ಆದರೆ ಈ ನಿನ್ನ ಚಿಕ್ಕಮ್ಮ ಇಂಥಾ ಪುಣ್ಯದ ಕೆಲಸ ಮಾಡಲ್ಲ."

ಸೆಮೋ ಕಿವಿಮುಚ್ಚಿಕೊಂಡು ಹೊರಟುಹೋದಳು. ಮತ್ತಿನ್ಯಾರಿಗೂ ಧನ್ನೋಳನ್ನು ಕೇಳುವ ಧೈರ್ಯವಾಗಲಿಲ್ಲ. ಧನ್ನೋಳಿಗೆ ತನ್ನ ಹಣೆಬರಹ ಗೊತ್ತಿದ್ದ ಹಾಗೇನೇ ಬಹುಶಃ ತನ್ನ ಆಯುಷ್ಯದ ಬಗ್ಗೇನೂ ಗೊತ್ತಿತ್ತೇನೋ! ಕೆಲವು ದಿನಗಳ ನಂತರ ಮತ್ತೆ ಅವಳಿಗೆ ವಾಯಿದೆ ಜ್ವರ ಬಂತು. ಈ ಸಲ ಇಡೀ ಊರಿಗೆ ಅವಳು ಉಳಿಯುತ್ತಾಳೆಂಬ ಭರವಸೆ ಇರಲಿಲ್ಲ.

ಒಂದು ದಿನ ಒಬ್ಬ ಪ್ರೌಢವಯಸ್ಸಿನ ಹೆಂಗಸು ಧೈರ್ಯ ಮಾಡಿದಳು. ಊರಿನ ಜನ ಈ ಹೆಂಗಸನ್ನು ಜೀವಿ ಭಗತಾನಿ ಎಂದು ಕರೆಯುತ್ತಿದ್ದರು. ಚಿಕ್ಕ ವಯಸ್ಸಿನಲ್ಲೇ ವಿಧವೆಯಾಗಿ ಬಿಟ್ಟಿದ್ದಳು. ಬಹಳ ಪ್ರಾಮಾಣಿಕವಾಗಿ ಸ್ವಚ್ಛವಾಗಿ ಬದುಕುತ್ತಿದ್ದಳು. ಇದವರೆತನಕ ಯಾರೂ ಅವಳ ಕಡೆ ಬೆರಳುಮಾಡಿರಲಿಲ್ಲ.

ಈ ಜೀವಿ ಭಗತಾನಿ, ಧನ್ನೋಳನ್ನು ವಿಚಾರಿಸಲು ಬಂದವಳು ಮೆಲ್ಲನೆ ಧನ್ನೋಳಿಗೆ "ಆದಾದ್ದಾಯಿತು ಧನ್ನೋ. ಈಗ ಕೊನೇ ಗಳಿಗೇಲಾದರೂ ಪಶ್ಚಾತಾಪ ಪಟ್ಟುಕೋ. ಅದರಿಂದ ನಿನ್ನದೇನೂ ಹಾಳಾಗಲ್ಲ. ರಾಮನ ಹೆಸರು ಹೇಳಲ್ಲ ಅಂತ ಹೇಳಿದ್ದವನ ಬಾಯಿಂದ ಬೇರೆಯವರು "ಮರಾ" ಅಂತ ಹೇಳಿಸಿ ದೇವರು ಅವನನ್ನು ಕ್ಷಮಿಸುವ ಹಾಗೆ ಮಾಡಿದರು........."

ಧನ್ನೋ ಸಾಯುತ್ತಾ ಬಿದ್ದಿದ್ದರೂ ಜೋರಾಗಿ ನಕ್ಕು ಬಿಟ್ಟಳು. "ಭಗತಾನಿ ನನ್ನ ಚಿಂತೆ ಯಾಕೆ ನಿನಗೆ ! ಯಮಧರ್ಮರಾಯನಿಗೆ ನಾನು ಲೆಕ್ಕ ಕೊಡಬೇಕು. ಕೊಡುತ್ತೀನಿ.

ಯಮಧರ್ಮರಾಯನಿಗೆ– "ನನ್ನ ಸೆರಗಿಗೆ ಗಂಟು ಬಿದ್ದಿರುವ ಈ 'ಧೇಲಿ'ಯನ್ನು ಮುರಿಸಿಕೊಂಡು ಲೆಕ್ಕ ಚುಕ್ತ ಮಾಡಿಕೋ ಅಂತ ಹೇಳ್ತೀನಿ" ಎಂದಳು.

ಜೀವಿ ಭಗತಾನಿಯಂತೂ ಕಿವಿಗಳಲ್ಲಿ ಬೆರಳಿಟ್ಟುಕೊಂಡು ಹೋಗಿಬಿಟ್ಟಳು.

ಆ ಹೊತ್ತು ಮಧ್ಯಾಹ್ನ ಧನ್ನೋ ತೀರಿಕೊಂಡಳು. ಧನ್ನೋಳ ನಾಲ್ಕನೆಯ ದಿನದ ತಿಥಿಯ ನಂತರ ಊರಿನ ಜನ ಅವಳ ಪೆಟ್ಟಿಗೆಯನ್ನು ತೆರೆದಾಗ, ಅವರಿಗೆ ಧನ್ನೋಳ ವಿಲ್ಲು ಪತ್ರ ಸಿಕ್ಕಿತು. ಧನ್ನೋ ತನ್ನ ಜಮೀನನ್ನು ಊರಿನ ಶಾಲೆಯ ಹೆಸರಿಗೆ ಮಾಡಿದ್ದಳು. ಮತ್ತು ಅದರಲ್ಲಿ ಬರೆಸಿದ್ದಳು – "ನನ್ನ ಒಂದೇ ಒಂದು ಆಸೆ ಏನೆಂದರೆ ಹುಡುಗಿಯರ ಕಿವಿಗೂ ನಾಲ್ಕಕ್ಷರ ಬಿದ್ದಿತು ಅಂದರೆ, ಅವರ ಬದುಕು ಹಾಳಾಗಲ್ಲ."

ಲೇಖಕರ ಇತರ ಕೃತಿಗಳು

1. ಚಿನ್ನದ ಕಳಶ (ಚೀಣಾದ ಜನಪದ ಕಥೆಗಳು) 1979
2. ಮಾಸ್ತಿ (ಬದುಕು–ಬರಹ), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಣೆ 1994
3. ಬರ್ಟೋಲ್ಡ್ ಬ್ರೆಕ್ಟ್ (ಇಂಗ್ಲಿಷ್‌ನಿಂದ ಅನುವಾದಿತ) ಕ್ರೈಸ್ಟ್ ಕಾಲೇಜ್ ಪ್ರಕಟಣೆ 1996
4. ಆಹ್ಲಾದ (ವಿಮರ್ಶಾತ್ಮಕ ಲೇಖನಗಳ ಸಂಗ್ರಹ), ಇಳಾ ಪ್ರಕಾಶನ 2001
5. ಕನ್ನಡ ವಕ್ರೋಕ್ತಿ ಜೀವಿತ, ಸಂವಹನ ಪ್ರಕಾಶನ, ಮೈಸೂರು
   ರಾಜ್ಯ ಸಾಹಿತ್ಯ ಅಕಾಡೆಮಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕೃತಿ
6. ಅನುರೂಪ (ಅನುವಾದಿತ ಕವನಗಳ ಸಂಕಲನ) 2006
7. ವಕ್ರೋಕ್ತಿ ಜೀವಿತ – ಒಂದು ಅಧ್ಯಯನ, ಭಾವಯಿತ್ರೀ ಪ್ರಕಾಶನ 2006
8. ವಾಙ್ಮಯ ವಿವೇಕ – (ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಗೆ
   ಸಂಬಂಧಿಸಿದ ಅನುವಾದಿತ ಲೇಖನಗಳ ಸಂಕಲನ) 2007
9. ಇನ್ನೊಬ್ಬ ದ್ರೋಣಾಚಾರ್ಯ (ಅನುವಾದಿತ ನಾಟಕ),
   ಅವಿರತ ಪುಸ್ತಕ ಪ್ರಕಾಶನ 2008

ಸಂಪಾದಿತ

1. ರುದ್ರಭಟ್ಟ (ಜಗನ್ನಾಥ ವಿಜಯ ಸಂಗ್ರಹ), ಕರ್ನಾಟಕ ಸಾಹಿತ್ಯ ಅಕಾಡೆಮಿ 1998
2. ಹೊಸಗನ್ನಡ ಕಾವ್ಯ (ಬೇರೆಯವರೊಂದಿಗೆ) 2005
3. ಎಂ.ವಿ.ಸೀ. ಸಮಗ್ರ ಸಾಹಿತ್ಯ, ಸಂಪುಟ–4, ಭಾಗ 1
4. ಸಂಪುಟ 4 – ಭಾಗ 2

ಅಮೃತಾ ಪ್ರೀತಂ ಅವರ
ಆಯ್ದ ಕಥೆಗಳು



ಪುಷ್ಕಳವಾಗಿ ಕೃತಿಗಳನ್ನು ಬರೆದು ಓದುಗರ ಮೆಚ್ಚುಗೆಯನ್ನು ಗಳಿಸಿದ ಮತ್ತು ಜ್ಞಾನಪೀಠ ಪುರಸ್ಕೃತರಾದ ಅಮೃತಾ ಪ್ರೀತಂ ಮೂಲತಃ ಒಬ್ಬ ಪಂಜಾಬಿ ಲೇಖಕಿ. ಜೀವನವನ್ನು ನಿಷ್ಠುರವಾಗಿ ಸ್ಪಷ್ಟತೆಯಿಂದ ಕಾಣುವ ಬರಹಗಾರ್ತಿಯಾದ ಆಕೆ ತನಗೆ ಬೇಕಾದಂತೆಯೇ ಬದುಕಿ ಸ್ವಂತಿಕೆಯನ್ನು ಉಳಿಸಿಕೊಂಡ ದಿಟ್ಟೆ. ಆಕೆಯ ಬರಹಗಳೂ ಅದೇ ರೀತಿ ಜೀವನವನ್ನು ಬಹಳ ದಿಟ್ಟತನದಿಂದ ನೋಡಿ ಅದನ್ನು ಅನುಭವಿಸಲು, ಚಿಂತನೆ ನಡೆಸಲು ಅಗತ್ಯವಾದ ಧಾತುಗಳನ್ನು ಒದಗಿಸುವಂಥವು.

'ವಕ್ರೋಕ್ತಿ ಜೀವಿತ'ವನ್ನು ಒಂದು ಸ್ವತಂತ್ರ, ಮೌಲಿಕ ರಚನೆಯೆಂಬಂತೆ ಅನುವಾದಿಸಿ ಕೊಟ್ಟು ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತರಾದ ಡಾ. ಆರ್. ಲಕ್ಷ್ಮೀನಾರಾಯಣ ಅವರು ಅಮೃತಾ ಪ್ರೀತಂ ಅವರ ಕತೆ ಕವನಗಳನ್ನು ನಿರಂತರವಾಗಿ ಕನ್ನಡ ಓದುಗರಿಗೆ ಪರಿಚಯಿಸುವ ಸತ್ಕಾರ್ಯವನ್ನು ಮಾಡುತ್ತ ಬಂದಿದ್ದಾರೆ. ಪ್ರೊ. ಲಕ್ಷ್ಮೀನಾರಾಯಣ ಅವರು ಅಮೃತಾರ ವಿವಿಧ ವಿಷಯಗಳ ಕತೆಗಳಲ್ಲಿ ಆಕೆಯ ವ್ಯಕ್ತಿತ್ವ ಚಿಂತನೆ ಮೂಡಿಬಂದಿರು ವಂಥವನ್ನು ಆಯ್ಕೆ ಮಾಡಿ ಇಲ್ಲಿ ಅನುವಾದಿಸಿದ್ದಾರೆ.

ಮೂಲ ಸಂಸ್ಕೃತಿಯ ಸಂವಹನ ಹಾಗೂ ಓದುಗನ ಸಂಸ್ಕೃತಿಯೊಡನೆ ಅದರ ಬೆಸುಗೆ ಒಡ ಮೂಡಬೇಕಾದರೆ ಅನುವಾದವು ಪುನಃ ಸೃಷ್ಟಿಯಾಗಿದ್ದು ಬಹಳ ಪ್ರಬುದ್ಧವಾಗಿರ ಬೇಕಾಗುತ್ತದೆ. ಜಂಗಲೀಬೂಟಿ (ಗಿಡಮೂಲಿಕೆ) ಕತೆಯಲ್ಲಿ ಬರುವ ಅಂಗೂರಿ ಹೇಳುವ "ನಾನು ಆಣೆ ಮಾಡಿ ಹೇಳ್ತೀನಿ; ಅವನಿಂದ ಎಂದೂ ಸಿಹಿ ತಿಂಡಿ ಇಸ್ಕೊಂಡಿರಲಿಲ್ಲ. ಅಡಕೆಲೆ ಕೂಡ ತಗೊಂಡಿರಲಿಲ್ಲ, ಕೇವಲ ಟೀ ಮಾತ್ರ... ಅವನು ಟೀನಲ್ಲೇ... ಗೊತ್ತಿಲ್ಲ ? "ಅವಳಿಗೆ ತನ್ನ ಮಾತನ್ನು ಪೂರ್ತಿ ಮಾಡಲಾಗಲಿಲ್ಲ' ಎಂದು ಮುಗಿಸುವ ಅಮೃತಾರ ಕತೆಯ ಅನುವಾದವು ಅನುವಾದವೆನಿಸದೆ ಕತೆಯಾಗಿ ಓದಿಸಿಕೊಂಡು ಹೋಗುತ್ತದೆ. ಅದೇ ಅದರ ಸಾರ್ಥಕತೆ. ಹಿಂದಿಗೆ ಸಂವಾದಿಯಾಗಿ ಕಾಲಂದಿಗೆ ಮಾಯಕದ ನಗೆ, ವೈಯಾರ, ನಾದಿದ ಹಿಟ್ಟು ಮುಂತಾದ ಬಳಕೆಯ ಮಾತುಗಳನ್ನು ಬಳಸಿರುವುದು ಅನುವಾದಕರ ಪ್ರೌಢಿಮೆಗೆ ಸಾಕ್ಷಿ.

ರಾಷ್ಟ್ರಮಟ್ಟದ ವೈಚಾರಿಕತೆಯನ್ನು ತೌಲನಿಕವಾಗಿ ತಿಳಿಯಲು ನಿಶ್ಚಿತವಾಗಿ ನೆರವಾಗುವ ಈ ಅನುವಾದಗಳು ಕನ್ನಡಿಗರನ್ನು ಮುಟ್ಟಬೇಕು.

ಪ್ರೊ. ಬಿ.ವೈ. ಲಲಿತಾಂಬ

ಭಾವಮಿತ್ರೀ
ಪ್ರಕಾಶನ